ಸಂಪುಟ ೭
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

೧೯೭೫

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

‘ಕರ್ನಾಟಕ ಭಾರತಿ’ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ‘ಕರ್ನಾಟಕ ಭಾರತಿ’, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋದಯ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)
ಬಿಡಿಸಂಚಿಕೆಯ ಬೆಲೆ : ರೂ. ೨-೫೦
(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪-೦೦ ಮಾತ್ರ)
ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003
ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೭ ಸಂಚಿಕೆ : ೨

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೭ ಸಂಚಿಕೆ : ೩

ಜನೆವರಿ ೧೯೭೫

ಸಂಕ್ರಮಣ ಸಂಚಿಕೆ

ಪ್ರಕಾಶಕರು :
ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಮುದ್ರಕರು :
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ-೩

ಪರಿವಿಡಿ

ಒಂದು ಹೊಸ ಕತೆ

ಸು. ರುದ್ರಮೂರ್ತಿಶಾಸ್ತ್ರಿ

ಹೊಸದಾಗಿ ಮದುವೆಯಾಗಿತ್ತು
ಇವನು ಹಳ್ಳಿಯ ಪೋರ
ಪಟ್ಟಣದಲ್ಲಿ ನೌಕರ;
ಅವಳೋ ಅದೇ ತಾನೆ ಅರಳಿ
ಲಕಲಕ ನಗುವ ಮಂದಾರ.
ಐದುಸಾವಿರ ನೋಟಿನ ಜತೆಬಂದ ಹೆಣ್ಣು
ಹತ್ತೂಕಡೆ ಸರಸರ ಸರಿವ
ಚೆಲುವನ್ನೇ ಸುರಿವ
ನೋಟದಲ್ಲೇ ಅಳೆವ ಕಾಡಿಗೆಯ ಕಣ್ಣು.
ಇವನೋ, ಬಿಟ್ಟು ಈ ನೆಲದ ಮಣ್ಣು
ಅಂತರಿಕ್ಷದಲ್ಲೆ ಓಡಾಟ
ಪಾಪ, ಹಾಗಿತ್ತು ಆ ವ್ಯೈಮಾಟ!
ಹೊಸ ಕೋರಾಬಟ್ಟೆ ಅಂಗಿ, ದೊಡ್ಡಂಚಿನ ಭಾರಿ ಸೀರೆ
ತೊಟ್ಟುಬಂದರು ಅಪ್ಪ ಅಮ್ಮ ಊರಿಂದ,
ಧಾರೆಗೆ ಕೈ ಒಡ್ಡಿ ಮತ್ತೆ ತೊಳೆದುಕೊಂಡು
ತೆರಳಿದರು ಜಟಕಾ ಹತ್ತಿ ಗೆಲುವಿಂದ.
ಯಾವ ಪಾಪಿ ಬಾಯಿ ಕೂಡಾ ಅನ್ನಲಿಲ್ಲ
‘ ಇರಿ ಒಂದೆರಡು ದಿನ ’
ಮಗರಾಯ ಮರೆತೇ ಬಿಟ್ಟಿದ್ದ; ಪಕ್ಕದ ಬಿಳಿದೊಗಲ ಬೊಂಬೆ
ಯೊಂದೇ ಅವನ ಆನಂದವನ.

* * *

ಮತ್ತೆ ಬಂದಾಗ ಅಪ್ಪ ಮಗನ ಮನೆಗೆ
ಸಾಲದ ಶೂಲ ಚುಚ್ಚಿ ಬಹಳ ನೊಂದಿದ್ದ
‘ನಿನ್ನ ಓದಿಗೆಂದೇ ಕೊಂಡದ್ದು ಸಾಲ
ಬಿಡಿಸಿಕೊಡು ಗದ್ದೆ’ ಎಂದು ಬಂದಿದ್ದ.

ತಿಂಗಳಿಗೆ ಐನೂರು ಎಣಿಸುತ್ತಾನೆ ಮಗ
ಮುದ್ದು ಮಡದಿಗೆ ಅದರ ಮೇಲೇ ನಿಗ.
ರಾತ್ರಿಯೆಲ್ಲಾ ಸಿದ್ಧವಾದವು ನೂರೆಂಟು ನೆಪ
'ಸ್ಕೂಟರು ತಂದೆ, ಅದು ತಂದೆ ಇದು ಕೊಂಡೆ
ಈಗಂತೂ ನನ್ನ ಬಳಿ ಬಿಡಿಗಾಸೂ ಇಲ್ಲಪ್ಪ'.
ಅಪ್ಪ ಬೆಪ್ಪಾಗಿ ಬಂದ ದಾರಿಯ ತುಳಿದ;
ಹೋಗಬಾರದ ಮನೆಯ ಹೊಸಿಲಲ್ಲೆಲ್ಲ ಸುಳಿದ.
ನರಿ ಕೂಗು ಮುಟ್ಟಲೇ ಇಲ್ಲ ಗಿರಿ
ಮಗ ನಗುತ್ತಿದ್ದ ಸದ್ಯ ತೊಲಗಿತಲ್ಲಾ ಕಿರಿಕಿರಿ.
ಕಾದಿದ್ದ ಹದ್ದು ಕಬಳಿಸೇ ಬಿಟ್ಟಿತು
ಹಾಸಿಗೆ ಹಿಡಿಯಿತು ಮುದುಕ
ನೂರು ಕಾಗದ ಮಗನ ಮನೆಯಲ್ಲಿ ಸಮಾಧಿ
ಗಡೀಪಾರಾಗಿತ್ತು ಮರುಕ.
ನೂರು ಗುಳಿಬಿದ್ದ ಮನೆಯ ಕೆನ್ನೆಯ ನಡುವೆ
ಒಂದು ನಡುರಾತ್ರಿ ಆ ಬೊಚ್ಚು ಬಾಯಿಯ ಮುದುಕ ಸತ್ತ
ಬಿರುಗಾಳಿಯಂತೆ ಹಾರಿಬಂದ ಮಗ
ಪಾಪ, ಅಂಥ ಒಳ್ಳೆ ಗದ್ದೆ ಹೋಯಿತೇ ಎಂದು ಅತ್ತ.

ತುಳು ಲಿಪಿ

ತೆಕ್ಕುಂಜ ಗೋಪಾಲಕೃಷ್ಣ ಭಟ್ಟ

ಪಾಶ್ಚಾತ್ಯ ಲಿಪಿವಿಜ್ಞಾನಿಗಳು ಹೇಳುತ್ತಿದ್ದಂತೆ, ಭರತಖಂಡಕ್ಕೆ ಲಿಪಿ ಬಂದುದೇ ವಿದೇಶದಿಂದ; ಕ್ರಿ. ಪೂ. ೩ನೆಯ ಶತಮಾನದಲ್ಲಿ. ಆ ಲಿಪಿಗೆ ಬ್ರಾಹ್ಮೀ ಲಿಪಿಯೆಂಬ ಹೆಸರಾಯಿತು, ಇಲ್ಲಿ. ಅದರಿಂದ ಭಾರತೀಯ ಲಿಪಿಗಳೆಲ್ಲ ರೂಪು- ಗೊಂಡುವು; ಕ್ರಮೇಣ ವಿಕಾಸಗೊಂಡು ವಿವಿಧ ಲಿಪಿಗಳಾದುವು—ಎಂದು ಅವರೆಲ್ಲ ಪ್ರತಿಪಾದಿಸಿದ್ದಾರೆ. ಮೊಹೆಂಜೊದಾರೊ, ಹರಪ್ಪಗಳ ಉತ್ಖನನದ ಅನಂತರ, ಅಶೋಕಸ್ತಂಭದ ಬ್ರಾಹ್ಮೀಲಿಪಿಗಳಿಗಿಂತಲೂ ಮೊದಲೇ ಭಾರತದಲ್ಲಿ ವಿಶಿಷ್ಟ ರೀತಿಯ ಲಿಪಿಗಳು ಬಳಕೆಯಲ್ಲಿದ್ದುವು ಎಂದು ಈಗ ಸಿದ್ಧವಾಗಿದೆ. ಆದರೆ ಆ ಲಿಪಿಯನ್ನು ಸರಿಯಾಗಿ ಓದಲು ಇನ್ನೂ ಸಾಧ್ಯವಾಗಿಲ್ಲವೆಂಬುದನ್ನು ಮರೆಯ- ಬಾರದು.

ದಕ್ಷಿಣಭಾರತದ ಲಿಪಿವಿಜ್ಞಾನವನ್ನು ಪರಿಶೀಲಿಸಿದ ಎ. ಸಿ. ಬರ್ನೆಲ್ಲರು ತೋರಿಸಿಕೊಡುವಂತೆ, ಅಶೋಕನ ಕಾಲದ ಬ್ರಾಹ್ಮೀಲಿಪಿಯಿಂದ ದಕ್ಷಿಣಭಾರತ ದಲ್ಲಿ ಗುಹಾಲಿಪಿಯೂ ಉತ್ತರದಲ್ಲಿ ಗುಪ್ತರ ಲಿಪಿಯೂ ಹುಟ್ಟಿಕೊಂಡುವು. ಈ ಗುಹಾಲಿಪಿಯಿಂದ ಚೇರ, ಚಾಲುಕ್ಯ ಮತ್ತು ವೆಂಗಿಲಿಪಿಗಳು ರೂಪುಗೊಂಡು ಮುಂದೆ ಚೇರಲಿಪಿಯಿಂದ ಗ್ರಂಥಲಿಪಿ ಹುಟ್ಟಿ ಇದರಿಂದಲೇ ತುಳು, ಮಲೆಯಾಳ ಲಿಪಿಗಳು ಜನ್ಮಪಡೆದುವು. ಎಂದರೆ ಗ್ರಂಥಲಿಪಿ, ತುಳುಲಿಪಿ ಮತ್ತು ಮಲೆಯಾಳ ಲಿಪಿ ಒಂದೇ ಮೂಲದವುಗಳು. ಇಂದು ತುಳುಲಿಪಿಗೂ ಮಲೆಯಾಳಲಿಪಿಗೂ ಹೆಚ್ಚಿನ ಸಾಮ್ಯವಿದೆ. ಬರ್ನೆಲ್ಲರು "ತುಳು–ಮಲೆಯಾಳ ವರ್ಣಮಾಲೆ, ಗ್ರಂಥದ ಒಂದು ಭೇದ ಮತ್ತು ಅದರಂತೆ (ಗ್ರಂಥದಂತೆ) ಮೂಲದಲ್ಲಿ ಅದು ಸಂಸ್ಕೃತ ವನ್ನು ಬರೆಯಲು ಮಾತ್ರ ಬಳಕೆಗೊಳ್ಳುತ್ತಿತ್ತು" ಎನ್ನುತ್ತಾರೆ.

ಈ ತುಳುಲಿಪಿಯನ್ನು ಮಲಬಾರಿನಲ್ಲಿ "ಆರ್ಯ ಎಳುತ್ತು" ಎನ್ನುತ್ತಿದ್ದರೆಂದೂ ೧೭ನೆಯ ಶತಮಾನದ ಉತ್ತರಾರ್ಧದ ವರೆಗೂ ಸಂಸ್ಕೃತ ಗ್ರಂಥಗಳನ್ನು ಬರೆಯಲು

೨೯–೯–೭೪ ರಂದು ತುಳುಕೂಟದ ೪ನೆಯ ವಾರ್ಷಿಕೋತ್ಸವದಂದು 'ತುಳು ಲಿಪಿ' ಎಂಬುದರ ಕುರಿತು ನಡೆದ ವಿಚಾರಸಂಕಿರಣದಲ್ಲಿ ಓದಿದ ಪ್ರಬಂಧ.

ಮಾತ್ರ ಬಳಸಲಾಗುತ್ತಿತ್ತೆಂದೂ ಆಗ ಮಲೆಯಾಳವನ್ನು ಬರೆಯುವದಕ್ಕೂ ಇದರ ಬಳಕೆಯಾಯಿತೆಂದೂ ಹೇಳಿ, ತುಳುನಾಡಿನಲ್ಲಿ ಎಂದಿಗೂ ದೇಶಭಾಷೆಯನ್ನು ಬರೆಯಲು ಬಳಸಲ್ಪಟ್ಟಿಲ್ಲವೆಂದೂ ಬರ್ನೆಲ್ಲರು ಹೇಳಿದ್ದಾರೆ.

ಕ್ರಿ. ಶ. ೧೨ನೆಯ ಶತಮಾನದ ಶ್ರೀಮನ್ಮಧ್ವಾಚಾರ್ಯರು ತಮ್ಮ ಮತ-ಗ್ರಂಥಗಳನ್ನು ಈ ಲಿಪಿಯಲ್ಲಿ ಬರೆದರೆಂದೂ (ಬರೆಯಿಸಿದರೆಂದೂ) ಇವು ಉಡುಪಿಯಲ್ಲಿವೆಯೆಂದೂ ಹೇಳಿಕೆಯಿದೆ. ಉಡುಪಿಯ ಯತಿಗಳು ಇಂದಿಗೂ ಈ ಲಿಪಿಯಲ್ಲೇ ತಮ್ಮ ಹಸ್ತಾಕ್ಷರವನ್ನು ಹಾಕುತ್ತಾರಂತೆ. ಶ್ರೀಮದಾಚಾರ್ಯರು ಬರೆದ ಗ್ರಂಥಗಳನ್ನು ಓದಬೇಕಾದರೆ ಈ ಲಿಪಿ ಗೊತ್ತಿರಬೇಕಾದುದರಿಂದ, ಯತಿಗಳೆಲ್ಲ ಈ ಲಿಪಿಯನ್ನು ಕಲಿಯುವುದು ಸಹಜವೇ ಆಗಿದೆ.

ಇದೇ ಲಿಪಿಯನ್ನು ಬಲ್ಲವರು ತುಳುವಿನ ಸಂಪರ್ಕವೇ ಇಲ್ಲದ ಉತ್ತರ ಕನ್ನಡದ ಸಿರ್ಸಿ ಮುಂತಾದ ಕಡೆಗಳಲ್ಲಿ ಅನೇಕರಿದ್ದಾರಂತೆ. ಅಲ್ಲಿ ಇದಕ್ಕೆ ತಿಗಳಾರಿ ಎನ್ನುತ್ತಾರಂತೆ. ಇದರಿಂದ ತುಳುಲಿಪಿ, ಉತ್ತರಕನ್ನಡದಲ್ಲಿ ತಿಗಳಾರಿಯೆಂದೂ ಕೇರಳದಲ್ಲಿ ಮಲೆಯಾಳಲಿಪಿಯೆಂದೂ ಹೆಸರು ಪಡೆಯಿತೆಂದು ವಾದಿಸುವುದು ಸುಲಭ. ಆದರೆ ನಿಜವಾಗಿಯೂ ಇದು ತುಳುಭಾಷೆಗೆ ಸಂಬಂಧಪಟ್ಟ ಲಿಪಿಯೋ ಎಂಬುದನ್ನು ವಿಚಾರಿಸಬೇಕು.

ಒಂದು ಲಿಪಿ ಒಂದು ಭಾಷೆಗೆ ಸಂಬಂಧಿಸಿದುದೆಂದಾಗ ಆ ಲಿಪಿಯಲ್ಲಿ ಆ ಭಾಷೆಯ ಎಲ್ಲ ವರ್ಣಗಳನ್ನೂ ಗುರುತಿಸಬಹುದಾದ ಸಂಜ್ಞೆ ಇರಬೇಕು. ಕೆಲವು ವಿದ್ವಾಂಸರ ಅಭಿಪ್ರಾಯದಂತೆ, ನಾಗರೀಲಿಪಿಯನ್ನು ಸಂಸ್ಕೃತಭಾಷೆಯ ಎಲ್ಲ ವರ್ಣಗಳನ್ನೂ ಗುರುತಿಸಬಹುದಾದ ರೀತಿಯಲ್ಲಿ ಮೂಲಲಿಪಿಯಿಂದ ಬೇಕಾದಂತೆ ಮಾರ್ಪಡಿಸಿ ರೂಪಿಸಲಾಗಿದೆಯಂತೆ. ಕನ್ನಡಲಿಪಿ, ಕನ್ನಡಭಾಷೆಯ ಹೆಚ್ಚಿನ ಎಲ್ಲ ವರ್ಣಗಳನ್ನೂ ಗುರುತಿಸುವುದಕ್ಕೆ ಅನುಕೂಲವಾಗಿರುವುದನ್ನು ಕಾಣುತ್ತೇವೆ. ಇದೇ ರೀತಿ ತುಳುಲಿಪಿ ಎಂಬುದು ತುಳುಭಾಷೆಗೆ ಸಂಬಂಧಪಟ್ಟುದೆನ್ನಬೇಕಾದರೆ, ಈ ಭಾಷೆಯಲ್ಲಿರುವ ಎಲ್ಲ ವರ್ಣಗಳನ್ನೂ ಗುರುತಿಸುವಂತೆ, ಲಿಪಿಯಿದೆಯೆ ಎಂಬುದನ್ನು ಪರಿಶೀಲಿಸಬೇಕು. ತುಳುವಿನಲ್ಲಿ ಎರಡು ಬಗೆಯ ಉಕಾರಗಳೂ ಎರಡು ಬಗೆಯ ಎಕಾರಗಳೂ ಇವೆ. ಇವುಗಳನ್ನು ಈ ತುಳುಲಿಪಿಯಲ್ಲಿ ಗುರುತಿಸಿ ಹೇಳಲು ಸಾಧ್ಯವಾದೀತೆ? ಇಲ್ಲದಿದ್ದರೆ ಈ ಲಿಪಿ ಈ ಭಾಷೆಗೆ ಸಂಬಂಧಪಟ್ಟುದೆಂದು ಹೇಳುವುದಾದರೂ ಹೇಗೆ ?

ಇನ್ನೂ ಒಂದು ವಿಷಯವನ್ನು ಗಮನಿಸುವುದು ಅವಶ್ಯ. ಈಗ ತುಳುಲಿಪಿ ಎಂದು ಹೇಳುವ ಲಿಪಿಯಲ್ಲಿ ಒಂದಾದರೂ ತುಳುಭಾಷೆಯ ಕೃತಿ, ಶಾಸನ ಇದೆಯೆ? ತುಳುವರು ತಮ್ಮ ಭಾಷೆಗೆ ಒಂದು ಪ್ರತ್ಯೇಕ ಲಿಪಿಯಿದೆ,

ಅವರಲ್ಲಿ ಏನನ್ನೂ ಬರೆದಿಟ್ಟಿಲ್ಲವೆನ್ನುವಾಗ ಅವರನ್ನೆಲ್ಲ ಅಭಿಮಾನಶೂನ್ಯರು ಎನ್ನಲಾದೀತೆ? ತುಂಡರಸರು ಮಾತ್ರ ಇದ್ದುದರಿಂದ ಈ ಭಾಷೆಯ ಸಾಹಿತ್ಯಕ್ಕೆ ಪ್ರೋತ್ಸಾಹವಿಲ್ಲದೆ ಲಿಪಿಯೂ ಮೂಲೆಪಾಲಾಯಿತು ಎಂದು ಹೇಳುವಂತೆಯೂ ಇಲ್ಲ. ಯಾಕೆಂದರೆ ದ್ರಾವಿಡಭಾಷಾವರ್ಗದಲ್ಲಿ ತುಳು ಅತ್ಯಂತ ಪ್ರಭುದ್ಧವಾದ ಭಾಷೆಯಾಗಿ ಇಂದಿಗೂ ಪ್ರಚಲಿತವಾಗಿರುವಾಗ, ಈ ಭಾಷೆಗೆ ಸಂಬಂಧಿಸಿದ ತುಳುಲಿಪಿಯನ್ನು ಜನತೆ ಅವಗಣಿಸುತ್ತಿತ್ತೆ? ಸರ್ವಥಾ ಇರಲಾರದು.

ತುಳುಲಿಪಿಯೆಂದು ಕರೆಯಲ್ಪಡುವ ಈ ಲಿಪಿಯಲ್ಲಿ, ಈ ಭಾಷೆಗೆ ಸಂಬಂಧ ಪಡದ ವರ್ಣಗಳೂ ಹಲವಿವೆ. ಸ್ವತಂತ್ರ ದ್ರಾವಿಡಭಾಷೆಗಳಲ್ಲಿ ಯಾವುದರಲ್ಲಿಯೂ ಮಹಾಪ್ರಾಣಾಕ್ಷರಗಳಿಲ್ಲ. ಹಾಗೆಯೇ ಋ ಮತ್ತು ಇ ಎಂಬ ವರ್ಣಗಳೂ ಇಲ್ಲ. ಬರ್ನೆಲ್ಲರು ಕೊಟ್ಟಿರುವ ತುಳುಲಿಪಿಯ ಚಿತ್ರದಲ್ಲಿ ಸಂಸ್ಕೃತದ ವರ್ಣಮಾಲೆಯ ಅಕ್ಷರಗಳೇ ಇವೆ. ಇದೇಕೆ ಹೀಗೆ? ಎಂದರೆ ತುಳುಲಿಪಿ ಎಂಬುದು ಸಂಸ್ಕೃತದ ಮಂತ್ರ-ತಂತ್ರ, ವೈದ್ಯ, ಜ್ಯೋತಿಷ್ಯ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಕೃತಿಗಳನ್ನು ಬರೆಯಲು ಮಾತ್ರ ಉಪಯೋಗವಾಗುತ್ತಿದ್ದುದು ಎಂಬುದು ಸ್ಪಷ್ಟವಾಗುತ್ತದೆ.

ತುಳುಲಿಪಿಯೆಂಬ ಹೆಸರು ಇದಕ್ಕೆ ಹೇಗೆ ಬಂತು, ಎಂದು ಬರ್ನೆಲ್ಲರು ಹೇಳಿಲ್ಲ. ಅವರಿಗಿಂತ ಹಿಂದಿನವರು ತುಳುಲಿಪಿ ಎಂಬ ಹೆಸರನ್ನು ಯಾವ ಗ್ರಂಥದಲ್ಲಿಯೂ ಪ್ರಸ್ತಾಪಿಸಿದಂತಿಲ್ಲ. ಆದರೆ ಮೊದಲಿನಿಂದಲೂ ಇದಕ್ಕೆ ತುಳು ಲಿಪಿಯೆಂಬ ಹೆಸರಿತ್ತೆಂದು ಅವರೇ ಪ್ರಸ್ತಾಪಿಸಿದ್ದಾರೆನ್ನುವುದಕ್ಕೆ ಅವರ ಪುಸ್ತಕದಲ್ಲಿ ಆಧಾರವಿದೆ. ಶ್ರೀಮನ್ಮಧ್ವಾಚಾರ್ಯರು ತಮ್ಮ ಕೃತಿಗಳನ್ನು ಇದೇ ಲಿಪಿಯಲ್ಲಿ ಬರೆದಿದ್ದಾರೆಂದು ಮಾಧ್ವಬ್ರಾಹ್ಮಣರೊಬ್ಬರು ಹೇಳಿದ್ದಾರೆಂದು ತಿಳಿಸಿದ್ದಾರೆ. ಹಾಗಾದರೆ ಇದಕ್ಕೆ ತುಳುಲಿಪಿ ಎಂಬ ಹೆಸರು ಹೇಗೆ ಬಂತು? ಸುಲಭವಾಗಿ ಇತ್ಯರ್ಥಮಾಡಬಹುದಾದ ವಿಷಯವಿದಲ್ಲವಾದರೂ ಕೆಲವು ಊಹೆಗಳನ್ನು ತಮ್ಮ ಮುಂದಿಡಬಹುದು.

ಹಿಂದೆ ತುಳುನಾಡಿನಿಂದ ಕೇರಳಕ್ಕೆ ಜನರು ಮಂತ್ರ-ತಂತ್ರ, ಆಯುರ್ವೇದಗಳನ್ನೂ ಕಲಿಯಲು ಹೋಗುವ ರೂಢಿಯಿತ್ತು. ಅಲ್ಲಿ ಸಂಸ್ಕೃತ ಗ್ರಂಥಗಳನ್ನು ಬರೆಯುತ್ತಿದ್ದ ಲಿಪಿ, ಗ್ರಂಥಲಿಪಿ. ಇದರಿಂದ ಸಂಸ್ಕಾರಗೊಂಡು ರೂಪುಗೊಂಡ ಲಿಪಿ, ಈ ತುಳು-ಮಲೆಯಾಳ ಲಿಪಿ. ತುಳುನಾಡಿನವರು ಬಳಸುತ್ತಿದ್ದ ಗ್ರಂಥಲಿಪಿ ಆರ್ಯಎಳುತ್ತು ಎಂದು ಹೆಸರುಗೊಂಡಿತ್ತು. ಯಾಕೆಂದರೆ ಮಲಬಾರಿನಲ್ಲಿ ಬಳಕೆಗೊಳ್ಳುತ್ತಿದ್ದ ಗ್ರಂಥಲಿಪಿ, ಇಷ್ಟು ಪರಿಷ್ಕೃತವಾಗಿರಲಿಲ್ಲ. ಇದರಿಂದ ತುಳುನಾಡಿನವರು ಬಳಸುತ್ತಿದ್ದ ಲಿಪಿಯನ್ನು, ಮಲಬಾರಿನವರು

ತುಳುಲಿಪಿಯೆಂದು ಕರೆದರೋ ಏನೋ! ಎಷ್ಟೋ ಸಂದರ್ಭಗಳಲ್ಲಿ ಭಾಷೆಗೋ ದೇಶಕ್ಕೋ ಲಿಪಿಗೋ ಹೆಸರು ಕೊಡುವುದು ಬೇರೆಯವರು, ಹುಟ್ಟಿದ ಮಕ್ಕಳಿಗೆ ಹೆತ್ತವರು ಹೆಸರಿಡುವಂತೆ. ಕೆಲವೊಮ್ಮೆ ಅವರವರೇ ಅವರವರ ಭಾಷೆಗೂ ಲಿಪಿಗೂ ಹೆಸರು ಕೊಡಬಹುದು, ಅನೇಕರು ತಮ್ಮ ಹೆಸರನ್ನು ಬದಲಿಸಿಕೊಳ್ಳು-ವಂತೆ. ಮಲಬಾರಿನವರು ಕೊಟ್ಟ ತುಳುಲಿಪಿ ಎಂಬ ಹೆಸರನ್ನು ತುಳು ನಾಡಿನವರು ಅಭಿಮಾನದಿಂದ ಅಂಗೀಕರಿಸುವುದು ಅಸಹಜವೇನೂ ಅಲ್ಲ. ಈ ಆರ್ಯ ಲಿಪಿಯನ್ನೇ ತುಂಜತ್ತ ಎಳುತ್ತಚ್ಚನ್ ಎಂಬವನು ಮಲೆಯಾಳಭಾಷೆಯ ಕೃತಿಗಳನ್ನು ಬರೆಯಲು ಬಳಸಿದನೆಂದೂ ಆಗ ಆ ಭಾಷೆಗೆ ಬೇಕಾದ ಱ, ೞ ಮತ್ತು ಳ ಗಳನ್ನು ವಟ್ಟೆಳುತ್ತು ಎಂಬ ಲಿಪಿಯಿಂದ ಆರಿಸಿಕೊಂಡನೆಂದೂ ತಿಳಿದುಬರುತ್ತದೆ. ಹೀಗೆ ಮೊತ್ತಮೊದಲಿಗೆ ಸ್ವೀಕರಿಸುವಾಗ ಈ ನಾಡಿನ ಜನ ಬಳಸುತ್ತಿದ್ದ ಈ ಲಿಪಿಯನ್ನು, ಅವರು ತುಳುಲಿಪಿ ಎಂದಿರಬಹುದು.

ಇನ್ನೊಂದು ಊಹೆ ಹೀಗಿದೆ: ಮಲಬಾರಿಗೆ ಹೋಗಿ ಅಲ್ಲಿಂದ ತಂದ ಗ್ರಂಥಗಳೆಲ್ಲ, ಗ್ರಂಥಲಿಪಿಯಿಂದ ರೂಪಾಂತರಗೊಂಡು ತುಳುನಾಡಿಗೆ ಬಂದುವು. ಈ ಮಂತ್ರ-ತಂತ್ರಾದಿ ಗ್ರಂಥಗಳು ಗೌಪ್ಯವೆಂದಿದ್ದುದರಿಂದ ಈ ತುಳುನಾಡಿನಲ್ಲಿ ಎಲ್ಲರಿಗೂ ಗೊತ್ತಿದ್ದ ಕನ್ನಡಲಿಪಿಯಲ್ಲಿ ಬರೆಯದೆ ಆ ಲಿಪಿಯಲ್ಲೇ ಬರೆಯು ತ್ತಿದ್ದರು. ಮಲಬಾರಿನಿಂದ ಬಂದರೂ ತುಳುನಾಡಿನಲ್ಲಿ ಬಳಕೆಯಲ್ಲಿದ್ದ ಲಿಪಿ ಯಾದುದರಿಂದ ಇದಕ್ಕೆ ತುಳುಲಿಪಿ ಎಂಬ ಹೆಸರು ಬಂದಿರಬಹುದು. ತುಳು ನಾಡು ಕನ್ನಡನಾಡಿನಲ್ಲಿಯೇ ಅಂತರ್ಗತವಾಗಿದ್ದು, ಕನ್ನಡಕ್ಕೆ ಪ್ರತ್ಯೇಕವಾದ ಕನ್ನಡಲಿಪಿಯೆಂಬುದಿರುವಾಗ ತುಳುನಾಡಿನವರಾದ ತಮಗೂ ಒಂದು ಪ್ರತೇಕ ಲಿಪಿಯಿದೆಯೆಂದು ಈ ಲಿಪಿಗೆ ತುಳುಲಿಪಿ ಎಂಬ ಹೆಸರನ್ನು ಇಟ್ಟುಕೊಂಡಿದ್ದಿರ ಬಹುದು; ತಮ್ಮ ದೇಶಾಭಿಮಾನವನ್ನೂ ಭಾಷಾಭಿಮಾನವನ್ನೂ ಈ ರೀತಿ ಪ್ರಕಟಿ ಸಿರಬಹುದು.

ದ್ರಾವಿಡಭಾಷಾವರ್ಗದಲ್ಲಿ ಬೆರಳೆಣಿಕೆಯೊಳಗೆಯೇ ಬರುವ ತುಳುವಿನಂತಹ ಅತ್ಯಂತ ಪ್ರಬುದ್ಧ ಭಾಷೆಗೆ ಅವರದೇ ಆದ ಲಿಪಿಯಿಲ್ಲವೆಂವರೆ ನಾಚಿಕೆಗೇಡೆಂದು ನೂರಕ್ಕೆ ೯೯ ಮಂದಿ ತುಳುವರೂ ಭಾವಿಸಬಹುದು. ಆದರೆ ಇದು ದುರಭಿಮಾನ ವಾಗುವ ವರೆಗೆ ಮುಂದುವರಿಯಬಾರದು. ಬಹಳ ಮುಂದುವರಿದ ಪ್ರಚಂಡ ಭಾಷೆಯೆನಿಸಿದ ಇಂಗ್ಲೀಷಿಗೆ ತನ್ನದೇ ಆದ ಲಿಪಿಯಿಲ್ಲವೆಂದೂ ಆ ಲಿಪಿ ಫೀನಿಷ್ ಲಿಪಿಯಿಂದ ಹುಟ್ಟಿ, ಹಳೆಯ ರೋಮನ್ ಲಿಪಿಯ ಮುಖಾಂತರ ಇಂದಿನ ರೂಪ ವನ್ನು ಪಡೆದಿದೆಯೆಂದೂ ವಿದ್ವಾಂಸರು ಹೇಳುತ್ತಾರೆ. ಹಾಗೆಯೇ ಬಹಳ ಮೇಲ್ಮೆಯನ್ನು ಪಡೆದು ಎಲ್ಲ ದೇಶೀಯ ಭಾಷೆಗಳ ಮೇಲೂ ಹೆಚ್ಚಿನ ಪ್ರಮಾಣದಲ್ಲಿ ತನ್ನ ಪ್ರಭಾವವನ್ನು ಕೂಡ ಬೀರಿದ ಸಂಸ್ಕೃತ ಭಾಷೆಯನ್ನು ನಾಗರೀಲಿಪಿಯಲ್ಲಿ

ಬರೆಯಲಾಗುತ್ತದೆ. ನಾಗರೀಲಿಪಿ ಹಿಂದೀ, ಮರಾಠೀ ಮುಂತಾದ ಭಾಷೆಗಳಿಗೂ ಬಳಸಲ್ಪಡುತ್ತದೆ. ಕೊಂಕಣಿಭಾಷೆಯನ್ನು ಇಲ್ಲಿ ಕನ್ನಡ ಲಿಪಿಯಲ್ಲಿ, ಉತ್ತರದ ಗೋವೆಯಲ್ಲಿ ದೇವನಾಗರಿಯಲ್ಲಿ, ದಕ್ಷಿಣದ ಮಲಬಾರಿನಲ್ಲಿ ಮಲಯಾಳದಲ್ಲಿ ಬರೆಯಲಾಗುತ್ತದೆ. ಇದರಿಂದ ಭಾಷೆ ಮತ್ತು ಲಿಪಿಗೆ ಸಂಬಂಧವಿರಲೇಬೇಕೆಂಬ ನಿಯಮವಿಲ್ಲವೆಂದೂ ಲಿಪಿ ಯಾವುದಿದ್ದರೂ ಭಾಷಾಭಿವೃದ್ಧಿಗೆ ತೊಡಕಿಲ್ಲವೆಂದೂ ನಿರ್ಧರಿಸಬಹುದು.

ಮುಂದಾದರೂ ತುಳುವಿಗೆ ಈ ಲಿಪಿಯನ್ನೇ ಬಳಸಬಹುದಲ್ಲ, ಎಂದರೆ ಅದು ದುಸ್ಸಾಧ್ಯವೆಂದೇ ತೋರುತ್ತದೆ. ತುಳುನಾಡು ಕನ್ನಡನಾಡಿನಲ್ಲೇ ಅಂತರ್ಗತವಾದುದರಿಂದ ಕನ್ನಡನಾಡಿನಲ್ಲಿ ಕನ್ನಡಲಿಪಿಯನ್ನು ಬಿಡುವುದು ಸಾಧುವಲ್ಲ ಹಾಗೂ ಸಾಧ್ಯವಲ್ಲವಾದುದರಿಂದ, ಕನ್ನಡಲಿಪಿಯನ್ನು ಕಲಿಯಲೇಬೇಕಾದುದರಿಂದ ತುಳುವನ್ನೂ ಕನ್ನಡದಲ್ಲಿಯೇ ಬರೆಯಬಹುದು. ಹೊಸತೊಂದು ಲಿಪಿಯನ್ನು ಕಲಿತು ಅದರಿಂದ ತುಳುಭಾಷೆ ಅಭಿವೃದ್ಧಿಗೊಳ್ಳುವುದೆಂದು ಹೇಳಬರುವುದಿಲ್ಲ. ಈಗೀಗ ಯಾವ ಭಾಷೆಯನ್ನು ಕಲಿಯಬೇಕಾದರೂ ರೋಮನ್ ಲಿಪಿಯನ್ನೇ ವಿಶಿಷ್ಟ ವರ್ಣಗಳಿಗೆ ವಿಶಿಷ್ಟ ಅಕ್ಷರವೆಂದು ಇಟ್ಟುಕೊಂಡು ಭಾಷೆಯನ್ನು ಕಲಿಯಬಹುದು. ಅನ್ಯಭಾಷಾವಿದರಿಗೆ ಈ ರೋಮನ್ ಲಿಪಿಯ ಸಹಾಯದಿಂದ ತುಳುವನ್ನೂ ಕಲಿಸಬಹುದು. ಆದುದರಿಂದ ತುಳುಲಿಪಿಯೆಂಬ ಹೆಸರಿನ ಮೋಹಕ್ಕೆ ಒಳಗಾಗದೆ ಪ್ರಯೋಗಾನುಗುಣವಾದ ರೀತಿಯಲ್ಲಿ ವ್ಯವಹರಿಸಿ ತುಳುವನ್ನು, ಅದರಿಂದ ತುಳುಸಂಸ್ಕೃತಿಯನ್ನು ಬೆಳೆಸಲು ಮುಂದಾಗುವುದು ಲೇಸಲ್ಲವೆ?

ದೀಪೋತ್ಸವ
(ಗೀತರೂಪಕ)

ಚೆನ್ನವೀರ ಕಣವಿ

ಮೇಳ

ಹನಿ ಹನಿ ಹರಳಿನ ಬೆಳಕೆ
ಗಗನಾಂಗಣದಲಿ ಹೊಳೆಯಾಗಿಹ ಸವಿ ತುಳುಕೆ || ಪಲ್ಲವಿ ||
ಹಗಲಿಗೆ ಹೊಸ ಹೊಸ ಕನಸು
ಸೊಗಯಿಸಿ ತಣಿಸಿದೆ ಇರುಳಿನ ಒಳ ಮನಸು || ಅನುಪಲ್ಲವಿ ||

ಕತ್ತಲೆ-ಬೆಳಕಿನ ತುಮುಲಕೆ ಮಾನವನೆದೆ ಬೆದೆ ಹದವಾಗೆ
ಚಿತ್ತದಿ ಹೊಮ್ಮುವ ಉತ್ತಮದಾಸೆಯು ಮತ್ತೆಮತ್ತೆ
ಕುಡಿಯೊಡೆಯೆ

ಜೀವಕೆ ಜೀವವ ಮಿಡಿದು
ಭಾವದ ಸೆರಗನು ಹಿಡಿದು
ನೆಲವನು ಮುಗಿಲಿಗೆ ತಾಗಿಸಿ ನಿಲ್ಲುವ ಚೆಲುವೇ
ಒಲವೇ
ನಲವೇ
|| ಹನಿ ಹನಿ ಹರಳಿನ ಬೆಳಕೆ-

ನೀಲ ಗೋಪುರದಾಚೆಗೇ – ತಿಳಿ
ನೀಲಿಗಣ್ಣನು ತೆರೆದುಕೊಂಡಿಹೆ ತಣ್ಣಗೆ.
ತಮದ ಎದೆಯೊಳು ತುಮು ತುಮೆನ್ನುವ
ಸುಮದ ಒಳಗಡೆ ಸೌರಭದವೊಲು
ವರುಷಗಳನೇ ದಿನವನಾಗಿಸಿ
ಹರುಷಗಡಲೊಳು ತೇಲಿಸಿರುವ –

ಹನಿಹನಿ ಹರಳಿನ ಬೆಳಕೆ
ಗಗನಾಂಗಣದಲಿ ತುಳುಕೆ
ಮುಗಿಲಿನ ಕಾಂತಿಯು ಹೀರುತ ಹಿಗ್ಗುತ
ನೆಲವನು ಚೆಲುವಿಗೆ ಬಾಗಿಸು ಮಾಗಿಸು
|| ಹನಿಹನಿ ಹರಳಿನ ಬೆಳಕೆ-

ಸಖ

(ಸಖಿಯನ್ನು ಕುರಿತು)

ಮಳೆಮಾರಿನ ದಿನ ಕಳೆದವು, ತಿಳಿದವು
ಹೊಳೆ ಕೆರೆ ಕಾಲುವೆ ನೀರು;
ಥಳ ಥಳ ನೀಲಿಯ ಬಾನಂಗಣದಲಿ
ಶಾರದ ನೀರದ ತೇರು.
ಬಿಸಿಲಿಗೆ ಬೆಳ್ಳಗೆ ಮಿನುಗಿವೆ ಹೂಗಳು;
ಹಾರಿವೆ ಬಾನಿಗೆ ಮೇಲೆ
ಬೆಳ್ಳಕ್ಕಿಯು ಗಿಳಿ ಗೊರವಂಕದ ರವ
ಹರುಷವನುಕ್ಕಿಸಿ ತೇಲಿ.
|| ಮಳೆಮಾರಿನ ದಿನ ಕಳೆದವು–

ಅಡಿಕೆಯು, ಗೊರಟಿಗೆ, ಹೊನ್ನವರೆಯು, ತಿಳಿ
ಹಳದಿಯು, ಜಾಂಬಳಿ, ನೀಲಿ –
ಗಾಳಿಗೆ ತೇಲಿವೆ ಬಣ್ಣದ ಚಿಟ್ಟೆಯು
ದೀಪಾರತಿಯನೆ ಹೋಲಿ.
ಬೆಳಕಿನ ಕುಡಿಗಳ ಚಾಚುತ, ಕತ್ತಲೆ
ಬಾಚುತ ಬಂದಿತು ದೀವಳಿಗೆ–
ನಕ್ಷತ್ರದ ಬೆಳ್ಗೊಡೆಯನು ಏರಿಸಿ
ಇಳಿದಿದೆ ಮನೆ-ಮನದಂಗಳಕೆ.
|| ಮಳೆಮಾರಿನ ದಿನ ಕಳೆದವು –

ಸಖಿ

ಈ ಕಾರ್ತೀಕದ ಚೆಲುವೆನಿತು ಸಖ! ಶರದೃತುವು ಸೃಷ್ಟಿಯನ್ನು ಕಣ್ಣಿಗೆ ಮಂಗಳವಾಗಿ ಹೊಳೆಯಿಸುತ್ತಿದೆ. ಮನೆ ಮನೆಯ ಕತ್ತಲಿಗೆ ಕಣ್ಣು ಮೂಡಿಸುವ ಈ ಸಂಧ್ಯಾದೀಪ ಪರಮಾತ್ಮಸ್ವರೂಪ.

ಸಖ

ವರುಷವರುಷವೂ ದೀಪಳಿಗೆಯ ದಿನ ಈ ಜೀವ ಬೆಳಕನ್ನು ಪೂಜಿಸುತ್ತದೆ ತಾನೂ ಬೆಳಕಾಗಬೇಕೆಂಬ ಆಶೆಯಿಂದ. ಕತ್ತಲೆ-ಬೆಳಕು ಎರಡೂ ರೂಪದಲ್ಲಿ ಸೃಷ್ಟಿಶಕ್ತಿ ಮೆರೆಯುತ್ತಿದೆ. ಕತ್ತಲೆ ಇಳಿಯುತ್ತಿರುವಂತೆಯೇ ದೀಪ ತನ್ನ ಅಸ್ತಿತ್ವವನ್ನು ಮಿನುಗಿಸುತ್ತದೆ.

ಇಬ್ಬರೂ

ದೀಪೋಜ್ಯೋತಿ ಪರಂಜ್ಯೋತಿ
ದೀಪ ಮಧ್ಯೆ ಜನಾರ್ದನ
ದೀಪೇನ ಹರತೆ ಪಾಪಂ
ಸಂಧ್ಯಾದೀಪ ನಮೋಸ್ತುತೇ

ಸಖಿ

ಈ ಬೆಳಕಿನ ಹಬ್ಬ ನರಕ ಚತುರ್ದಶಿಯಿಂದಲೇ ಮೊದಲಾಗುತ್ತಿದೆ. ಮಹಾವಿಷ್ಣುವು ನರಕಾಸುರನನ್ನು ಸಂಹರಿಸಿದ ಆ ದಿನದ ನೆನಪಿಗೆ ನಾವು ತೆರಳೋಣವೆ ?

ಸಖ

ಆಗಬಹುದು. ರಜೋಗುಣ, ತಮೋಗುಣಗಳಳಿದು ಸತ್ತ್ವಗುಣದ ಪ್ರಕಾಶ ಪಡೆಯಬೇಕೆಂಬುದು ಪುರಾಣ-ಸಂಪ್ರದಾಯಗಳಲ್ಲಿ ಬರುವ ಈ ಕಥೆಗಳು ಧ್ವನಿಸುವ ಅರ್ಥವಾಗಿದೆ.

ವೃಂದ

ನರಕಾಸುರನಿಗೆ ತಮದ ಕುರೂಪಿಗೆ ಪೃಥಿವಿ ಆಯಿತು ಆಹುತಿ–
ಮೊರೆಯಿತು ಆರ್ತಧ್ವನಿ ಪರಮಾತ್ಮಗೆ: ಅರ್ಥ ಭಾವ ಪದ
ಸೂಕ್ಷ್ಮಮತಿ.
ವರಾಹ ರೂಪವು ಹೂಂಕರಿಸಿತು ಆ ಲೋಕಕಂಟಕನ ಸಂಹರಿಸಿ
ಕೋರೆದಾಡೆಯಲಿ ಧರಿಸಿ ಧರಾತಳ ಕರುಣೆ ಕರಣದಲಿ ಕಂಗೊಳಿಸಿ

ವ್ಯಕ್ತಿ ೧

ಸ್ವರ್ಗ–ನರಕ–ಭೂಲೋಕಪಾಕ
ನಮ್ಮಂತರಂಗದಲಿ ನೆಲೆಸಿಹುದು;
ಉನ್ನತೋನ್ನತಿಗೆ ದೈನಂದಿನ ಗತಿ
ಇತಿಮಿತಿಯಿಲ್ಲದೆ ಒಲಿಸಿಹುದು.

ವ್ಯಕ್ತಿ ೨

ಅಂತಃಕರಣದ ಸಂತತ ಕೂಗಿಗೆ
ಅಂತು ಇಂತು ಆ ಪರಶಕ್ತಿ
ತಂತಿ ಮೀಟಿ, ಆತಂಕ ದಾಟಿ ಭವ–
ಭವಾಂತರದ ನಿಧಿ ಮೇಲೆತ್ತಿ

ವೃಂದ

ತನ್ನ ಅರಿವ ತನಗಾಗಿಸಿ ಆತ್ಮನ ನೈಜಸ್ಥಿತಿಯಲಿ ನೆಲೆಗೊಳಿಸಿ
ದಿಸೆದಿಸೆಗೂ ದೀಪೋತ್ಸವ ಸಂದಿದೆ ಸೃಷ್ಟಿಲೀಲೆಯಲಿ ಸಂಗಮಿಸಿ.

ಸಖಿ

ನರಕಾಸುರನನ್ನು ನೆನೆದು ದೀಪವನ್ನು ಹಚ್ಚುವ ಸಮಯದಲ್ಲಿಯೇ ಬಲಿಚಕ್ರವರ್ತಿಯ ದಾನವೀರ ಗುಣವೂ ಮರುಕಳಿಸುತ್ತಿದೆ.

ಸಖ

ಶಿಕ್ಷೆಯಲ್ಲಿಯೇ ರಕ್ಷೆಯನ್ನೂ ಹುದುಗಿಸಿರುವ ಭಗವಂತನ ಭಕ್ತವಾತ್ಸಲ್ಯದ ಸಂಕೇತ ಬಲಿಪಾಡ್ಯಮಿ.

ವೃಂದ

ತಾನು ಕೊಡುವವ, ತಾನು ಕೊಟ್ಟವ
ಬಲಿಯ ಬಲಿಯದ ಬುದ್ಧಿಗೆ–
ದೇವ ವಾಮನನಾಗಿ ಅರುಹಿದ
ಮೂರು ಹೆಜ್ಜೆಯ ಸಿದ್ಧಿಗೆ

ವಾಮನ

ಬಡವ ನಾನು ನಿರ್ವಾಸಿತ ದೊರೆಯೆ
ಗೇಣು ನೆಲವ ಕೊಡೆ ಬದುಕುವೆನು

ಬಲಿ

ದೇಹಿ ಎಂದು ಬಂದವರನೆಂದು ಬರಿಗೈಲಿ ಕಳಿಸಲಾರೆ
ಸಾಕು ಸಾಕು ಎನೆ ತೆಗೆದುಕೊಳ್ಳೊ ನೀ ಏಕೆ ಅದಕೆ ಮೇರೆ?

ವಾಮನ

ನನಗೆ ಸಾಕು ಸಾಕಯ್ಯ ಮೂರು
ಪಾದಗಳು ಅಳೆವ ಭೂಮಿ

ಬಲಿ

ಅಹ ಕೊಟ್ಟೆನಿದೊ ಕೊಟ್ಟ ಮಾತಿನೊಲು ಬೊಟ್ಟನಿಡುವ ಹಾಗೆ
ಬರಿಯ ಮೂರು ಪಾದಗಳೆ ಸಾಕೆ? ಮೇದಿನಿಯೆ ನನ್ನ ಬಳಗೆ.

ವೃಂದ

ವಿಷ್ಣು ತನ್ನ ಬಲಗಾಲ ಹೆಜ್ಜೆಯಲಿ ಭೂಮಂಡಲವನೆ ಕೊಂಡ
ಸ್ವರ್ಗಲೋಕ ಮತ್ತೊಂದು ಹೆಜ್ಜೆ, ಬಲಿ ಅಷ್ಟಕೆ ದಿಗ್ಭ್ರಮೆಗೊಂಡ.
ಮೂರನೆ ಪಾದವು ಬಲಿಯು ತಲೆಗೆ, ಓ ಕೃಪಾವೃಷ್ಟಿ ಕರೆದು
ಬಲಿ ಜೀವಿತ ಸತ್ಕಾರ್ಯ ಪ್ರಮೋದಿತ ಅಹಂಕಾರ ತುಳಿದು.
ತಾನು ಕೊಡುವವ ತಾನು ಕೊಟ್ಟವ
ಬಲಿಯು ಬಲಿಯದ ಬುದ್ಧಿಗೆ
ಶಿಕ್ಷಿಸಿದರೂ ರಕ್ಷಿಸಿದ ಹರಿ
ಭಕ್ತಿ ಪ್ರೀತಿ ಸಮೃದ್ಧಿಗೆ

ಸಖಿ

ಸಖಿ, ಕಲ್ಪನಾವಿಹಾರಿಗಳಾಗಿ ಎಷ್ಟು ಬೇಗ ನಾವು ಪುರಾಣ ಲೋಕದಿಂದ ಭೂಲೋಕದ ಅಂಗಳಕ್ಕೆ ಬಂದು ಬಿಟ್ಟೆವು! ಮನೆಮನೆಯ ಮುಂದೆ ಬೆಳಕಿನ ಹಣ್ಣಿನಂತೆ ತೋರುತ್ತಿರುವ ಶಿವನ ಬುಟ್ಟಿ, ಕುಣಿಯಾಡಿಸುತ್ತಿರುವ ಹಣತೆಗಳ ದೀಪಮಾಲೆ—ಮನದಲ್ಲಿಯೂ ಎಂಥ ದೀಪೋತ್ಸವ!

ಹೆಂಗಳೆಯರು

[ಮನೆಯ ಮುಂದೆ ಹಣತೆಗಳನ್ನು ಹಚ್ಚುತ್ತಾ ಹಾಡುತ್ತಾರೆ]

ದೀಪ ಹತ್ತಿಸಿ ಮೆಲ್ಲಗೆ
ಬೆಳಕ ಬೀರುವ ಹಾಡ ಸೊಲ್ಲಿಗೆ || ಪಲ್ಲವಿ ||
ಒಲವಿನ ಕುಡಿ
ಚೆಲುವಿನ ಮಿಡಿ
ಇಂದು ಮನೆಯಂಗಳವೆ ಮಂಗಳ ಗುಡಿ || ಅನುಪಲ್ಲವಿ

ಇನ್ನೊಂದು ತಂಡ

ಹೇಗೆ ಅರಳಿತು ಹಣತೆಯು – ಅದು
ಹೇಗೆ ಹೊರಳಿತು ನೂರು ನೆರಳಿನ ಭಣಿತೆಯು.
ಮೇಲೆ ತಾರಾಪಥವ ತಂದಿತೊ
ಗೋಲ ಗೋಲಗಳಿಂದ ಬಂದಿತೊ
ದೀಪ ಹತ್ತಿಸಿ ಮೆಲ್ಲಗೆ
ಬೆಳಕ ಬೀರುವ ಹಾಡ ಸೊಲ್ಲಿಗೆ

ಮೊದಲನೆಯ ತಂಡ

ಹರನ ಭಸ್ಮದ ಕಾಂತಿಯೊ – ಇದು
ಹರಿಯ ಸುಸ್ಮಿತ ಶಾಂತಿಯೊ
ಬಾನದೇವತೆ ಎರೆಯುತಿಹ ಸಂಪ್ರೀತಿಯೊ
ನೆಲದ ಮಕ್ಕಳು ದಿವವನೆಳೆದೀ ಭವದ ಸುಖ ಸಂಕ್ರಾಂತಿಯೊ.
ದೀಪ ಹತ್ತಿಸಿ ಮೆಲ್ಲಗೆ
ಬೆಳಕ ಬೀರುವ ಹಾಡಸೊಲ್ಲಿಗೆ

ಎರಡನೆಯ ತಂಡ

ಸುತ್ತಲೂ ಸಂತೋಷ ಹರಡುತ ಮಿರುಗುವೀ ಹಣತೆ
ಇದು ಯಾವ ನಿರ್ಮಲ ಮನದ ಆಳದಿ ಚಿಮ್ಮುತಿಹ ಒರತೆ

ಮೊದಲನೆಯ ತಂಡ

ನೆಲದ ಬದುಕು ಚೆಲ್ವೆಳಕಿಗೆ ಬಾಗಿದೆ

ಎರಡನೆಯ ತಂಡ

ಎಲ್ಲರ ಅಂತಃಕರಣಕು ತಾಗಿದೆ

ಎಲ್ಲರೂ

ದೀಪ ಹತ್ತಿಸಿ ಮೆಲ್ಲಗೆ
ಬೆಳಕು ಬೀರುವ ಹಾಡ ಸೊಲ್ಲಿಗೆ
ಒಲವಿನ ಕುಡಿ
ಚೆಲುವಿನ ಮಿಡಿ
ಇಂದು ಮನೆಯಂಗಳವೆ ಮಂಗಳ ಗುಡಿ

ಸಖ

ಜ್ಯೋತಿ ಒಂದೇ ಆದರೂ ಈ ದೀಪಗಳಲ್ಲಿ ಎಷ್ಟೊಂದು ಬಗೆ!

ಸಖಿ

ಕಲ್ಪನೆಗಳನ್ನು ತಣಿಸುವ ಅವುಗಳ ಕಲಾತ್ಮಕ ರೂಪ ಎಷ್ಟೊಂದು ವಿಧ!

ಸಖ

ಮಣ್ಣ ಹಣತೆಯಲಿ ಸ್ನೇಹದೆಣ್ಣೆ ಚಿರಸೇವೆಗೆ ಸಂದಿಹ ಬತ್ತಿ
ಸಾಲುಸಾಲು ಕೈಮುಗಿದು ನಮಿಸುತಿವೆ ಬಾನಿಗೆ ಮೊಗವೆತ್ತಿ

ಸಖಿ

ದೇಗುಲದೆದುರಿಗೆ ದೀಪಸ್ತಂಭವು ದೇವರೆದುರು ನೀಲಾಂಜನವು
ತೂಗು ದೀಪಗಳ ತುಂಬಿದ ಕುಡಿಗಳು ಬೆಳಕಿನ ಬಗೆಬಗೆ ಲೀಲೆಗಳು

ಸಖ

ದೇವಮಂಟಪದ ಎಡಬಲ ನಿಂತಿಹ ದೀಪಲಕ್ಷ್ಮಿ ಆರತಿ ಬೇಗಿ
ನಿಂತಲ್ಲಿಯೆ ನಿರ್ಲಿಪ್ತತೆ ನೆಲಸಿದೆ: ಚಿರಂತನವು ಬುವಿಗವತರಿಸಿ

ಸಖಿ

ಪಕ್ಷಿದೇಹದಲಿ ಮಾನವ ಮುಖಕಿದೆ ಕಿನ್ನರಿ ದೀಪದ ಜೊನ್ನಸರಿ
ಹಂಸದಾಕೃತಿಯ ಪೀಠದಿ ಹಣತೆಯು: ಜೀವಹಂಸವೇ ಬಿಚ್ಚುಗರಿ

ಸಖ

ಸಖಿ, ನಗರದ ದೀಪೋತ್ಸವದಲ್ಲಿ ಪಾಲುಗೊಂಡುದಾಯ್ತು. ಹಳ್ಳಿಗಳಲ್ಲಿ ನಮ್ಮ ರೈತರ ಬದುಕಿಗೆ ಹೊಸ ಉತ್ಸಾಹವನ್ನು ತುಂಬುತ್ತ ಭೂಮಿಯಲ್ಲಿ ನಂದ ನದ ಸಿರಿಯನ್ನು ತೆರೆಯುವ ಅವರ ಆನಂದವನ್ನು ಅನುಭವಿಸುವುದಕ್ಕಾಗಿ ನನ್ನ ಹೃದಯ ಹಾತೊರೆಯುತ್ತಿದೆ.

ಸಖಿ

ನನಗೂ ಹಾಗೆಯೇ. ಹುಟ್ಟಿದೂರಿನ ಒಕ್ಕಲು ಮಕ್ಕಳ ಹಟ್ಟಿಹಬ್ಬದ ಸಂಭ್ರಮದಲ್ಲಿ ಒಂದಾಗಿ, ಅವರ ಬದುಕಿನ ಸಹಜಾನಂದದಲ್ಲಿ ವ್ಯಮರೆತಾಗ ಅದೆಂಥ ಸುಖಾನುಭವ!

ಹಳ್ಳಿಯ ಹೆಣ್ಣು-ಗಂಡುಗಳು ಕೂಡಿ

ದೀವಳಿಗಿ ಹಬ್ಬ ದೇವೇಂದ್ರನೈಭೋಗ
ಬೆಳೆದು ಬೀಗ್ಯಾಳೊ ಭೂಮಿತಾಯಿ–ತಾನಂದನೊ
ಬೆಳೆದು ಬೀಗ್ಯಾಳೊ ಭೂಮಿತಾಯಿ.

ಗಂಡು

ಹೊಳಿಯಾಗ ನೀರ್ ತುಂಬಿ ಹೊಲದಾಗ ಬೆಳಿ ತುಂಬಿ
ಊರೂರಿನ ಗುಡಿ ಮನೆ ತುಂಬಿ | ಜನ ತುಂಬಿ
ದೀವಳಿಗೆ ಬರಲಿ ದಿನ ಬರಲಿ

ಹೆಣ್ಣು

ಗಂಗಿ ಗೌರೀ ಹಬ್ಬ, ಮುಂದೆ ಮಾರ್ನೌಮಿ ಹಬ್ಬ
ಎಂದೀಗೆ ಬಂದೀತೊ ದೀವಳಿಗೆ | ನಾಡಿನ ಮೇಲಿ
ಆಡಾಡಿ ಬರಲಿ ದೀವಳಿಗೆ

ಗಂಡು

ನಮ್ಮೂರ ಹೊಳಿಯಾಗ ಇನ್ನೇನು ಗದ್ದಲ
ಜಾಲಬಸವಯ್ಯ ಹೊಳಿಸ್ನಾನ
ಜಾಲಬಸವಯ್ಯ ಹೊಳಿಮಿಂದು ಬರುವಾಗ
ಸಾಲು ಸರಗಂಟೆ ನುಡಿದಾವು ||

ಹೆಣ್ಣು

ಆರತಿ ಬೆಳಗಿ ಆರು ಬೆರಳು ನೊಂದೊ
ಧೂಪವ ಬೀಸಿ ಭುಜ ನೊಂದೊ | ಬಸವಯ್ಯ
ಚಿತ್ತೈಸಿ ನಮ್ಮ ಮನೆಯೊಳಗ

ಸಖ

ಅಲ್ಲಿ ನೋಡಿದೆಯಾ ಸಖಿ, ಊರಿನ ಗೋಪಾಲರ ಮೇಳವನ್ನು? ಸಂಜೆ ಊರ ದೇವಸ್ಥಾನದಲ್ಲಿ ಕಲೆತು, ದೇವರಿಗ ಮಂಗಳಾರತಿ ಮಾಡಿಸಿ ಜ್ಯೋತಿಯನ್ನು ಹೊತ್ತಿಸಿಕೊಂಡು ಗುಂಪುಗುಂಪಾಗಿ ಮನೆಮನೆಗೆ ಹಾಡು ಹೇಳುತ್ತ ಹೊರಟಿದ್ದಾರೆ.

ಸಖಿ

ಹೌದು, ಜೋಳದ ದಂಟು-ಗರಿಗಳಿಂದ ಅಂದವಾದ ಗೂಡುಕಟ್ಟಿ ಅದರಲ್ಲಿ ದೀಪವನ್ನು ಇಟ್ಟುಕೊಂಡು ಒಕ್ಕಲಿಗರ ಮನೆಯ ಮುಂದೆ ನಿಂತು ದನಗಳ ಕ್ಷೇಮವನ್ನು ಹಾರಯಿಸಿ, ಜ್ಯೋತಿಗೆ ಎಣ್ಣೆಯನ್ನೂ, ಉಡುಗೊರೆ-ಕಾಣಿಕೆಗಳನ್ನೂ ಪಡೆದುಕೊಳ್ಳುತ್ತಾರೆ.

ಗೋಪಾಲರ ನೋಳ

ಅಂದದ ಕಟ್ಟೆಯ ಮೇಲೆ | ಅಂದದ ಒಂದರಳೀಮರ
ಅಂದಚಂದದರ ಎಲಿ ಚಂದ
ಅಂದಚಂದದ ಮರ ಎಲಿ ಚಂದದ ತಾಣದಲಿ
ಚಂದದಿಂದುರಿಯೆ ಜಗಜ್ಯೋತಿ

ಅರಗದಿಂದ ಬಂದಾವೆ | ಆರು ಸಾವಿರ ಹಣತಿ
ಎಣ್ಣೆ ಸಾಲವಕೆ ನೆನೆಸಾಲು
ಎಣ್ಣೆ ಸಾಲವಕೆ ನೆನೆಸಾಲು ಜ್ಯೋತೆಮ್ಮ
ಸತ್ಯದಿಂದುರಿಯೆ ಜಗಜ್ಯೋತಿ

ಆಯುಳ್ಳ ಸಿರಿಬಂದು | ಅಂಗಳದಾಗೆ ನಿಂತಾವೆ
ಹತ್ತವ್ವ ಸಿರಿಯೆ ಜಗಲೀಗೆ
ಭಾಗ್ಯುಳ್ಳ ಸಿರಿಬಂದು | ಬಾಗಿಲಿಗೆ ನಿಂದಾವೆ
ಜ್ಯೋತಿಮಂಡಲಕೆ ಹೊಳಲಾದು

ಬಾಗಿಲು ತೆಗಿರಮ್ಮ | ಭಾಗ್ಯುಳ್ಳ ಲಕ್ಷ್ಮಮ್ಮ
ಜ್ಯೋತಿಗೆ ಎಣ್ಣೆ ಎರೆಬನ್ನಿ
ಎಣ್ಣೆ ಎರೆದಾರೆ ಪುಣ್ಯವು ನಿಮಗಾದೊ
ಮುಂದೆ ಶಿವನಲ್ಲಿ ಫಲವಾದೊ ||

ಸಖಿ

ಇಷ್ಟೆಲ್ಲ ದೀಪೋತ್ಸವದ ಸಡಗರವನ್ನು ಕಂಡ ಮೇಲೂ ದೀಪದ ಬುಡದ ಕತ್ತಲೆಯಂತೆ ಮನಸ್ಸಿನಲ್ಲಿ ಒಂದು ಕೊರಗು ಇದ್ದೇ ಇದೆ. ವರುವರುಷವೂ ಬರುವ ದೀಪಾವಳಿ ಸಾಮಾನ್ಯ ಜನದ ಬದುಕಿನಲ್ಲಿ ನಿಜಕ್ಕೂ ಹರುಷವನ್ನು ತರುತ್ತಿದೆಯೆ? ಅವರ ಬಾಳೇ ದಿವಾಳಿಯಾಗಿರುವಾಗ ಒಂದು ದಿನ ಮಿರುಗಿ ಮಾಯವಾಗುವ ಈ ಹಬ್ಬದಿಂದ ಇಡೀ ವರುಷದ ಕತ್ತಲೆ ಇರುಳಿನ ಗತಿಯೇನು?

ಸಖ

ನಿನ್ನ ಪ್ರಶ್ನೆ ವಾಸ್ತವವಾದದ್ದೆ. ಪರಸ್ಪರ ಸ್ನೇಹ, ಅನುಕಂಪ, ಸಮಾನತಾ ಭಾವ ಬೆಳೆದಾಗ ಮಾನವತೆ ಕಣ್ತೆರೆಯುತ್ತದೆ. ದೀಪದಿಂದ ದೀಪ ಹೊತ್ತುವಂತೆ ದಯೆ ದಯೆಯನ್ನುದ್ದೀಪಿಸುತ್ತದೆ. ಮಾನವನೆದೆಯಲ್ಲಿಯ ಆಸೆಯ ದೀಪವನ್ನು

ಅದು ಆರದಂತೆ ರಕ್ಷಿಸುತ್ತವೆ. ಮೃತ್ಯುವಿನೊಳಗಿರುವ ಅಮೃತದ ಸೆಲೆಯೇ ಈ ದೀಪ. ಅದೋ ನೆಲದ ಮಕ್ಕಳ ಆಶೆ ಆಕಾಂಕ್ಷೆಗಳು ಗಾನಲಹರಿಯಾಗಿ ಹರಿದು ಬರುತ್ತಿವೆ. ನಾವೂ ಅವರಲ್ಲಿ ಒಂದಾಗೋಣ.

ಗಂಡಸರು

ದೀಪಾವಳಿ, ದೀಪಾವಳಿ ನಿಜರೂಪವ ತೋರಿಸು
        ಅಪರೂಪಕೆ ಬಂದಿಹೆ
        ಅಪಾರ ಪ್ರೀತಿ ತಂದಿಹೆ
ಶಪಿತ ಬಾಳ ಹಣತೆಯೊಳಗೆ ಹೊಸಬತ್ತಿಯ ಕುದುರಿಸು
ದೀಪಾವಳಿ, ದೀಪಾವಳಿ ನಿಜರೂಪವ ತೋರಿಸು

        ದಿನದಿನದೀ ಬದುಕೆ ಭಾರ
        ಯಾರಿಗಿದೆ ಪರೋಪಕಾರ?
ನೀರು ಗಾಳಿಯಂತೆ ಅನ್ನ ಎಲ್ಲರ ಎಡೆಯಾಗಿಸು
ದೀಪಾವಳಿ ದೀಪಾವಳಿ ನಿಜರೂಪವ ತೋರಿಸು
        ದೀಪದ ಬುಡ ಕತ್ತಲೆಗೂ ಬೆಳಕಿನ ತೆರೆ ಹಾಯಿಸು

ಹೆಂಗಳೆಯರು

ಎದೆಯಾಳದಿ ಪುಟಿದೇಳುವ
        ಕರುಣೆಯೆ ನಿನಗಾರತಿ;
ಸದುವಿನಯದ ಸೌಭಾಗ್ಯವೆ
        ಬೆಳಗುವೆ ನಿನಗಾರತಿ.

ಕಷ್ಟಗಳಿಗೆ ಕರಗದಿರುವ
        ದೃಢ ಚಿತ್ತಕೆ ಆರತಿ;
ಸೃಷ್ಟಿಯೊಡನೆ ಸೊಗಸಿ ನಲಿವ
        ಸಮಷ್ಟಿ ಭಾವಕಾರತಿ.
ಕೆರೆ–ಕಾಲುವೆ ತೊರೆ–ಕಡಲಿನ
        ಜಲದೇವತೆಗಾರತಿ.
ಹೂಹಣ್ಣಿನ ಸವಿಯೊಡಲಿನ
        ಭೂಮಾತೆಗೆ ಆರತಿ

ಗಂಡು

ತಿಳಿವಿನೆಣ್ಣೆ ಎರೆಯಿರಣ್ಣ ಯುಗಯುಗದೀ ದೀಪಕೆ
ಕತ್ತಲೆ ನಕ್ಷತ್ರ ಹಡೆದು ಪಡೆದಿಹ ಉಶ್ಯಾಪಕೆ

ಹೆಣ್ಣು

ಒಲವಿಗೆ ಬಲ ನೀಡಿ ಚೆಲುವ ಚಿರವಾಗಿಸಲೆಂದೆನೆ
ನೆಲ ಬಾನ್ಗಳ ಪುದುವಾಳಿನ ಮಾಂಗಲ್ಯಕೆ ವಂದನೆ

ಎಲ್ಲರೂ

ತಿಳಿವಿನೆಣ್ಣೆ ಎರೆಯಿರಣ್ಣ ಯುಗಯುಗದೀ ದೀಪಕೆ
ಜಗವನೆಲ್ಲ ಒಳಗೊಳ್ಳುವ ಹೊಸ ಬೆಳಕಿನ ಉದಯಕೆ
ಒಲವಿನ ಪ್ರತಿರೂಪಕೆ
ಮಮತೆಯ ಚಿನ್ಮಾತ್ರಕೆ
ಯುಗಯುಗದೀ ದೀಪಕೆ.

* ಧಾರವಾಡ ಆಕಾಶವಾಣಿಯ ಕೃಪೆಯಿಂದ.

ತೊರವೆ, ತೊರವೆಯ ನರಹರಿ : ಎಷ್ಟು ಪ್ರಾಚೀನ?

ಎಚ್. ಸೀತಾರಾಮಾಚಾರ್ಯ

ಕನ್ನಡಸಾಹಿತ್ಯದಲ್ಲಿ ಗದುಗಿನ ವೀರನಾರಾಯಣನಂತೆ ತೊರವೆಯ ನರಹರಿಯೂ ಪ್ರಸಿದ್ಧನಾಗಿದ್ದಾನೆ. ತನ್ನ ಭಾರತಕ್ಕೆ ವೀರನಾರಾಯಣನೇ ನಾಯಕನೆಂದು ಕುಮಾರವ್ಯಾಸನು ತಿಳಿದಿದ್ದರೆ, ಕುಮಾರವಾಲ್ಮೀಕಿಯು ತನ್ನ ರಾಮಾಯಣಕ್ಕೆ ನರಹರಿಯೇ ಅಧಿಪತಿ ಎಂದು ನುಡಿದವನು. ತೊರವೆ, ವಿಜಾಪುರದಿಂದ ಮೂರು ಮೈಲು ದೂರದಲ್ಲಿ ಅಥಣಿ ರಸ್ತೆಯ ಪಕ್ಕದಲ್ಲಿದೆ. ಈ ಕ್ಷೇತ್ರದ ಪ್ರಾಚೀನತೆಯ ಆಧಾರದ ಮೇಲೆ ತೊರವೆರಾಮಾಯಣವನ್ನು, ಕುಮಾರವಾಲ್ಮೀಕಿಯು ರಚಿಸಿದ ಕಾಲವನ್ನು ನಿರ್ಣಯಿಸುವ ಪ್ರಯತ್ನ ನಡೆದಿದೆ. 'ತೊರವೆ'ಯು ಎಷ್ಟು ಪ್ರಾಚೀನವಾದುದು? ತೊರವೆಯ ನರಹರಿ ದೇವಾಲಯವು ಪ್ರಸಿದ್ಧವಾಗಿದ್ದುದರ ಬಗ್ಗೆ ನಮಗೆ ಲಭ್ಯವಿರುವ ಪ್ರಾಚೀನತೆಯ ಉಲ್ಲೇಖ ಯಾವುದು?—ಈ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನವೇ ಈ ಲೇಖನದ ಉದ್ದೇಶ.

'ತೊರವೆರಾಮಾಯಣ'ದ ದ್ವಿತೀಯ ಸಂಪುಟದ ಸಂಪಾದಕರಾದ ಬಿ. ಎಸ್. ಸಣ್ಣಯ್ಯನವರು ಈ ಕುರಿತು ವಿಚಾರಿಸುತ್ತ "ಕ್ರಿ. ಶ. ೧೫೩೫ರಿಂದ ೧೫೫೮ ರ ವರೆಗೆ ಆಳಿದ ಸಣ್ಣ ಇಬ್ರಾಹಿಮ್ ಆದಿಲ್‌ಶಹನು (೧ನೆಯ ಆದಿಲ್‌ಶಹನು) ಈಗಿನ 'ತೊರವೆ'ಯ ಪ್ರದೇಶದಿಂದ ನೀರನ್ನೊಯ್ಯುವ ವ್ಯವಸ್ಥೆ ಮಾಡಿದ್ದರಿಂದ ಈ ಊರಿಗೆ ತೊರೆಬಾಯ್ > ತೊರೆವಾಯ್ > ತೊರವಿ > ತೊರವೆ ಎಂದು ಆಗಿರಬಹುದು" ಎಂದು ಊಹಿಸುತ್ತಾರೆ.[1] ಹೀಗೆ ಊಹಿಸುವ ಸಂದರ್ಭದಲ್ಲಿ, ಒಬ್ಬ ವ್ಯಕ್ತಿಯ ಕಾಲದಲ್ಲಾದ ನೀರಿನ ಪೂರೈಕೆಯ ವ್ಯವಸ್ಥೆಯಿಂದಾಗಿ ಒಂದು ಊರಿಗೆ 'ತೊರವೆ' ಎಂಬ ಹೆಸರು ಹೊಸದಾಗಿ ಬಂದಿದ್ದರೆ, ಆ ಊರಿಗೆ ಆ ಮೊದಲು ಯಾವ ಹೆಸರಿತ್ತು? ಎನ್ನುವ ಪ್ರಶ್ನೆಗೆ ಶ್ರೀಯುತರು ಉತ್ತರ ಹುಡುಕುವ ಕಡೆಗೆ ಗಮನಹರಿಸಿದಂತೆ ತೋರುವುದಿಲ್ಲ.

ಅಲ್ಲದೆ ಪ್ರಕೃತ ತೊರವೆಯಲ್ಲಿರುವ ನರಸಿಂಹನ ಗುಡಿಯನ್ನು ಇಟ್ಟಂಗಿಗಳಿಂದ ಕಟ್ಟಲಾಗಿದೆ—ಎಂಬ ಮುಂಬೈ ಗೆಜೆಟಿಯರಿನ ಹೇಳಿಕೆ[2]ಯ ಆಧಾರದ

೧. ಬಿ. ಎಸ್. ಸಣ್ಣಯ್ಯ—ತೊರವೆ ರಾಮಾಯಣ. ಸಂಪುಟ. ೨ ಪೀಠಿಕೆ. ಪುಟ. ೧೩.
೨. ಮುಂಬೈ ಗೆಜೆಟಿಯರ್—೧೮೮೩. ಪುಟ ೫೫೭.

ಮೇಲೆ ನರಸಿಂಹಗುಡಿಯು 'ಇಟ್ಟಂಗಿಗಳಿಂದ ರಚಿತವಾಗಿರುವುದರಿಂದ' ಅದು ಇತ್ತೀಚಿನ ರಚನೆಯಾಗಿರಬೇಕು ಎಂದೂ ಸಣ್ಣಯ್ಯನವರು ತರ್ಕಿಸುತ್ತಾರೆ.[೩]

ಆದರೆ ಈ ಲೇಖಕನೇ ಸ್ವತಃ ತೊರವೆಗೆ ಹೋಗಿ ನರಸಿಂಹ ದೇವಾಲಯವನ್ನು ಕಂಡುಬಂದವನಿದ್ದಾನೆ. ಈ ದೇವಾಲಯದ ಪ್ರಕೃತ ಕಮಾನುಗಳಿರುವ ಮುಂದಿನ ಭಾಗದ ಛಾವಣಿಯ ಮೇಲ್ಭಾಗ ಮಾತ್ರ ಇಟ್ಟಂಗಿಗಳಿಂದ ಪುನಾರಚಿತವಾದುದು ಸ್ಪಷ್ಟವಾಗುತ್ತದೆ. ಇದೀಗ ಭೂಗತವಾಗಿರುವ ನರಹರಿಯ ದೇವಾಲಯವು ವಿವಿಧ ಕಾಲಗಳಲ್ಲಿ ಸ್ಥಳಾಂತರ, ರೂಪಾಂತರ ಮತ್ತು ಪುನಾರಚನೆಗಳಿಗೆ ಒಳಗಾಗಿರಬೇಕೆಂಬುದು ಆ ಕ್ಷೇತ್ರದ ಪರಿಶೀಲನೆಯಿಂದಲೂ ಕ್ಷೇತ್ರ ಮಹಿಮೆಯನ್ನು ತಿಳಿಸುವ ಪುಸ್ತಿಕೆಯಿಂದಲೂ[೪] ನರಸಿಂಹದೇವರ ಪ್ರಾಚೀನತೆಯನ್ನು ಸಾರಿಹೇಳುವ ಇತರ ಪ್ರಮಾಣಗಳಿಂದಲೂ ಖಚಿತವಾಗುತ್ತದೆ.

ತೊರವೆಯ ಪ್ರಾಚೀನ ಉಲ್ಲೇಖ :

'ತೊರವೆ' ಎಂಬ ಹೆಸರು ೭ನೇ ಶತಮಾನದಲ್ಲೇ ರೂಢಿಯಲ್ಲಿತ್ತೆಂದು ಬಾದಾಮಿ ಚಾಲುಕ್ಯ ವಿಕ್ರಮಾದಿತ್ಯನ ಕಾಲದ ಶಾಸನವೊಂದರಿಂದ ತಿಳಿದು ಬರುತ್ತದೆ. ಆ ಶಾಸನದ ಭಾಗವನ್ನು ಕೆಳಗೆ ಕೊಟ್ಟಿದೆ :

೨೧ ....ವಿನಯಾದಿತ್ಯ ಸತ್ಯಾಶ್ರಯ ಶ್ರೀಪೃಥಿ-

೨೨ ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟ್ಟಾರಕಸ್ಸರ್ವಾನೇವಮಾಜ್ಞಾಪಯತಿ ವಿ-

೨೩ ದಿತಮಸ್ತು ವಿಸ್ಮಾಭಿಃ ದ್ವಾದಶೋತ್ತರ ಷಟ್ಟ(ಶ)ತೇಷು, ಅತೀತೇಷು ಪ್ರವ-

೨೪ ರ್ದಮಾನ ವಿಜಯರಾಜ್ಯಸಂವತ್ಸರೇ ದಶಮೇ ವರ್ತಮಾನೇ ಮಂಜೋಹಾಗ್ರಾಮಮಧಿವಸತಿ ವಿಜ-

೨೫ ಯಸ್ಕಂಧಾವಾರೇ ವೈಶಾಖಪೌರ್ಣಮಾಸ್ಯಾಂ ಮಹಾದೇವೀವಿಜ್ಞಾಪನಯಾ ಕಸ್ಯಾಘವರ್ಾರ್ಥೇ-

---

೩. ಬಿ. ಎಸ್. ಸಣ್ಣಯ್ಯ—ತೊ. ರಾ. ಪೀಠಿಕೆ. ಪು. ೮೨.

೪. ತ್ವರಿತಾಲಯ(ತೊರವಿ) ಕ್ಷೇತ್ರ ಮಹಿಮೆ. ಪು. ೫.

೨೬ ಕಾಶ್ಯಪಗೋತ್ರಸ್ಯ(ತ್ರಾಭ್ಯಾಂ) ಮಗ್ಗ(ರ್ಗ)ಶರ್ಮ ರವಿಶರ್ಮಾಭ್ಯಾಂ ರಾಜ ಮಾನೇನ **ತೊರವೆ** ಗ್ರಾಮೇ ಪಂಚಾಶ-

೨೭ न्निवर्तन ನ್ನಿವರ್ತನ ಪರಿಮಾಣಾಂ ಪಶ್ಚಿಮದಿಗ್ಭಾಗೇ ಸರ್ವಭೋಗಾ(ಗ)ಪರಿಹಾರೀ ದತ್ತಃ... ...[೫]

ಈ ಶಾಸನದಲ್ಲಿ (೨೬ನೇ ಸಾಲಿನಲ್ಲಿ) ಉಕ್ತವಾಗಿರುವ 'ತೊರವೆ'ಯು ಇಂದಿನ ವಿಜಾಪುರ(ಜಿಲ್ಲೆಯ)ದ ತೊರವಿಯೇ ಆಗಿದೆ.[೬] ಇದರಿಂದ ಆದಿಲ್ ಷಾಹಿಯ ಆಳ್ವಿಕೆಗೂ 'ತೊರವಿ' ಎಂಬ ಹೆಸರಿನ ಉತ್ಪತ್ತಿಗೂ ಸಂಬಂಧವಿಲ್ಲ ಎಂದು ನಿರ್ಣಯಿಸಬಹುದು.

ಇತಿಹಾಸಪ್ರಸಿದ್ಧವಾದ ನರಸಿಂಹ ಕ್ಷೇತ್ರ :

ದೇವಗಿರಿಯ ಸೇವುಣ(ಯಾದವ) ರಾಜರಲ್ಲೊಬ್ಬನಾದ ಜೈತುಗಿಯ (೧೧೯೬-೧೨೦೦) ಕಾಲದಲ್ಲಿ ಆ ಭಾಗದಲ್ಲಿ ನರಸಿಂಹ ದೇವಾಲಯಗಳು ಪ್ರಸಿದ್ಧವಾಗಿದ್ದುವು, ರಾಜಾಶ್ರಯ ಹೊಂದಿದ್ದುವು.[೭] ಜೈತುಗಿಯ ಮಗನಾದ ಸಿಂಘಣನು (೧೨೦೦-೧೨೪೭) ಸಿಂಹಣನೆಂದೂ ಕರೆಯಲ್ಪಡುತ್ತಿದ್ದ, ಅವನು ದೇವಿ 'ನಾರಸಿಂಹಿ'ಯ ವರಪ್ರಸಾದದಿಂದ ಜನಿಸಿದುದಾಗಿಯೂ ಹೇಳಲಾಗಿದೆ.[೮] ಈ ಸಿಂಘಣನು ನರಸಿಂಹ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳಿಗೆ ದತ್ತಿಗಳನ್ನು ಬಿಟ್ಟಿದ್ದನು.[೯] ಸೇವುಣರ ಕಾಲದ ಶಾಸನಗಳಲ್ಲಿ, ಶ್ರೀ ನಾರಸಿಂಹ ಪಾದೋದಕ

---

೫ Epigraphia India. Vol. XXV. ಪುಟ ೨೯೧. ಕ್ರಿ.ಶ. ೬೯೦.

೬ ... the village of 'Torve' presumably the same as the modern village 'Torvi' in the Bijapur District. Epigraphia India Vol. XXV pp. 28, ff. ಈ ಶಾಸನವನ್ನು ನನಗೆ ಒದಗಿಸಿ ಸಹಕರಿಸಿದವರು Dr. G. S. Gai. Ph. D. Chief Epigrafist, Govt of India. ಇವರಿಗೆ ನನ್ನ ವಂದನೆಗಳು. ಈ ಶಾಸನದ ೨೪ನೇ ಸಾಲಿನಲ್ಲಿ ಬರುವ 'ಮಂಚೋಹಾ' ಎನ್ನುವುದು ತೊರವಿಯಿಂದ ೨೦ ಮೈಲು ದೂರದಲ್ಲಿರುವ 'ಮಿಂಚನಾಳ' (ಇಂಡಿ ತಾಲೂಕ) ಆಗಿರಬೇಕು ಎಂದು ಡಾ. ಗಾಯಿಯವರ ಅಭಿಮತ.

೭ A. V. Narasimhamurthy-The Sevunas of Devagiri-P. 81.

೮ Epigraphia India Vol. XXVII-P. 208.

೯ A. V. Narasimhamurthy—The Sevunas of Devagiri—P. 102.

ಸಂಪೂತ,[೧೦] ನೃಹರಿ ಚರಣ ಭಕ್ತ[೧೧] ಎಂಬ ವಿಶೇಷಣಗಳು ದೊರೆಯುತ್ತವೆ. ಹೀಗೆ ದೇವಗಿರಿಯ ರಾಜರ ಇಷ್ಟದೇವತೆಯಾಗಿ ಮೆರೆಯುತ್ತಿದ್ದ ನರಸಿಂಹನು ಬೇರಾರೂ ಆಗಿರದೆ ವಿಜಾಪುರದ ನರಸಿಂಹನೇ ಆಗಿದ್ದನು.[೧೨]

ಇಂದಿನ ವಿಜಾಪುರದಲ್ಲಿ ಇನ್ನಾವ ನರಸಿಂಹ ದೇವಾಲಯ ಪ್ರಾಚೀನವೂ, ಪ್ರಸಿದ್ಧವೂ ಆಗಿರದೆ ತೊರವೆಯ ನರಸಿಂಹ ದೇವಾಲಯವೇ ದೇವಗಿರಿಯ ಸೇವುಣರಾಜರ ಕಾಲದಿಂದಲೂ ಜಾಗೃತಸ್ಥಾನವಾಗಿ ಶೋಭಿಸುತ್ತಿದೆ ಎನ್ನಬೇಕಾಗುತ್ತದೆ. ಹಿಂದೆ ವಿಜಾಪುರ ಮತ್ತು ಇಂದಿನ ತೊರವಿಗಳು ಒಂದೇ ನಗರದ ಭಾಗಗಳಾಗಿದ್ದವೆಂದು ಇತಿಹಾಸ ಮತ್ತು ಸ್ಥಳ ಪರಿಶೀಲನೆಗಳಿಂದ ತಿಳಿದುಬರುತ್ತದೆ. ಇದರಿಂದ ಸೇವುಣರಾಜರಿಂದ ದತ್ತಿಪಡೆದ ನರಸಿಂಹನೆಂದರೆ ಪ್ರಕೃತದ ತೊರವೆಯ ನರಸಿಂಹನೇ ಆಗಿರಬೇಕು.[೧೩]

ತೊರವೆರಾಮಾಯಣದ ಉಲ್ಲೇಖ :

ದೇವಗಿರಿಯ ಸೇವುಣರಾಜರಿಂದ ದತ್ತಿಪಡೆದುದರಿಂದಲೇ, ನರಹರಿಯ ಭಕ್ತನಾದ ಕುಮಾರವಾಲ್ಮೀಕಿಯು ತನ್ನ 'ರಾಮಾಯಣ'ದಲ್ಲಿ ನಾಲ್ಕಾರುಕಡೆ ಸೇವುಣ, ಸಿಂಘಣರನ್ನು ತನ್ನ ಶ್ರೀರಾಮಕಥೆಗೆ ಯಾವುದೇ ಸಂಬಂಧವಿಲ್ಲವಾದರೂ ಉಲ್ಲೇಖಿದ್ದಾನೆ[೧೪]—ಎಂದು ಊಹಿಸುವುದಕ್ಕೆ ಅವಕಾಶವಿದೆ.

ನರಸಿಂಹಕ್ಷೇತ್ರದ ಪ್ರಾಚೀನತೆ, ಪ್ರಸಿದ್ಧಿಗಳಿಗೆ ಪೂರಕವಾಗಿ ಇನ್ನೂ ಕೆಲವು ಶಾಸನಾಧಾರಗಳನ್ನು ಕೊಡಬಹುದು.

---

೧೦ Karnataka Inscriptions-Serico. ಸಂ. ೪೨ಸೇ ಕ್ರಿ. ಶ. ೧೨೩೯. ಸಾಲು ೨೮

೧೧ ,, ಸಾಲು ೩೧

೧೨ ಎಚ್. ಪದ್ಮರಾಜ್- ವಿಜಾಪುರದ ವೈಭವದರ್ಶನ ಪುಟ ೧೪. ಮತ್ತು
A. V. N-The Sevunas of Devagiri-P. 182.

೧೩ ಇಂದಿನ ತೊರವಿಯ ನರಸಿಂಹ ದೇವಾಲಯಕ್ಕೆ ಕೆಲವು ಜಮೀನುಗಳು ಇವೆ-ರಾಜಕೀಯ ಸ್ಥಿತ್ಯಂತರ, ಕಾಲಗತಿಗಳ ಕಾರಣದಿಂದ-ದತ್ತಿಗಳ ಬಗೆಗೆ ದೇವಾಲಯದಲ್ಲಿ ನಿಶ್ಚಿತ ದಾಖಲೆಗಳು ಲಭ್ಯವಿಲ್ಲ. ಆದರೂ ದೇವಾಲಯಕ್ಕೆ ಸಂಬಂಧಿಸಿದ ಕೆಲವು ಜಮೀನು, ಹಿಂದಿನ 'ಕುರಂದವಾಡ' ಸಂಸ್ಥಾನಿಕರಿಂದ ದತ್ತಿ ಬಂದಂತೆ ಕಾಣುವುದು-ಎಂದು ತೊರವಿ ದೇವಸ್ಥಾನದ ವ್ಯವಸ್ಥಾಪಕರು ನನಗೆ ತಿಳಿಸಿರುತ್ತಾರೆ. ಇದರಿಂದ ದೇವಾಲಯವು ರಾಜಾಶ್ರಯ ಹೊಂದಿದ ಸುಳಿವು ಸೂಚಿತವಾಗುತ್ತದೆ.

೧೪ ತೊರವೆರಾಮಾಯಣ—IV. 10-4 (ಸೇವುಣ).
ತೊರವೆರಾಮಾಯಣ—I. 12-.0, IV. 10-5. VI. 28-66 (ಸಿಂಘಣ).

೧. ದಕ್ಷಿಣ ವಾರಣಾಸಿಯೆಂದು ಕೀರ್ತಿತವಾದ ವಿಜಯಪುರದ ನರಸಿಂಹನಿಗೆ ಮಹಾಪಸಾಯಿತ ಸಂಮುಖಾಧಿಕಾರಿ ಪಿಂಚುವಡಿವರಸನು, ಮೂರುನಾಡುಗಳಿಗೆ ತಿಕ್ಕರಸನು ಸರ್ವಾಧಿಕಾರಿಯಾಗಿದ್ದ ಕಾಲದಲ್ಲಿ, ಬಿಟ್ಟವತ್ತಿ. ಶಕ ೧೧೫೬ (ಜಯ ವೈಶಾಖ ಶುದ್ಧ ಪುಣ್ಣಿಮೆ-ವಡ್ಡವಾರ).[೧೫]

೨. ಸರ್ವಾಧಿಕಾರಿ ದೇವಯ್ಯನಾಯಕನು ನರಸಿಂಹದೇವರಿಗೆ ಬಿಟ್ಟದತ್ತಿ. ಶಕ ೧೨೦೫.[೧೬]

೩. ಪೆರ್ಗಡೆ ಮಲ್ಲಿದೇವ ಮತ್ತು ಹಿರಿಯ ಕರ್ಣರು ರಾಜಧಾನಿ ವಿಜಯಪುರದ ಜಲಮಂಟಪದ ನರಸಿಂಹದೇವರಿಗೆ ದತ್ತಿಬಿಟ್ಟುದು. (ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲಿದೇವನು ಕಲ್ಯಾಣದಲ್ಲಿ ಆಳತೊಡಗಿದ ಮೂರನೇ ವರ್ಷ ಪ್ರಜಾಪತಿ, ಭಾದ್ರಪದ ಪುಣ್ಣಮಿ ಸೋಮವಾರ ಚಂದ್ರಗ್ರಹಣದಂದು).[೧೭]

೪. ಶಕ ೧೧೧೫ರಲ್ಲಿ ನರಸಿಂಹದೇವನಿಗೆ ಕೊಟ್ಟ ದತ್ತಿ.[೧೮]

೫. ಶಕ ೯೫೮ (ಇದು ತಪ್ಪಾಗಿದೆ ಎಂದು ಟಿಪ್ಪಣಿಸಲಾಗಿದೆ)ರ ಜಲಮಂಟಪದ ನರಸಿಂಹನಿಗೆ ಬಿಟ್ಟದತ್ತಿ.[೧೯]

೬. ಪಶ್ಚಿಮಚಾಲುಕ್ಯ ಚಕ್ರವರ್ತಿ ತ್ರಿಭುವನದೇವಮಲ್ಲನ ಆಳ್ವಿಕೆಯ ೩ನೇ ವರ್ಷದಲ್ಲಿ ನರಸಿಂಹನಿಗೆ ಬಿಟ್ಟ ದತ್ತಿ.[೨೦]

೭. ಶಕ ೧೨೨೫ರ ಕ್ರೋಧಿ ಚೈತ್ರ ಶು. ೧೧ ಬುಧವಾರ ರಾಜಧಾನಿ ವಿಜಯಪುರದ ನರಸಿಂಹದೇವನಿಗೆ ಸಂಗೀತ ಮತ್ತು ನೈವೇದ್ಯಗಳಿಗಾಗಿ ಊರೊಡೆಯರು ಮತ್ತು ಮಹಾಜನಗಳು ಬಿಟ್ಟ ದತ್ತಿ.[೨೧]

---

೧೫ No. 122 : Annual Report on South India Epigraphy for the year 1933-34.

೧೬ No. 123—Annual Report on South Indian Epigraphy for the year 1933-34.

೧೭ No. 124 ,,

೧೮ No. 125 ,,

೧೯ No. 126 ,,

೨೦ No. 127 ,,

೨೧ No. 129 ,,

೮. ಚಾಲುಕ್ಯಚಕ್ರವರ್ತಿ ತ್ರೈಲೋಕ್ಯಮಲ್ಲದೇವನ ಕಾಲದಲ್ಲಿ ವಿಜಯಪುರದ ನರಸಿಂಹನಿಗೆ ನೀಡಿದ ದತ್ತಿ.[೨೨]

೯. ಯಾದವ ಜೈತಪಾಲದೇವನ ಆಳ್ವಿಕೆಯ ೬ನೇ ವರ್ಷದಲ್ಲಿ ವಿಜಯಪುರದ ನರಸಿಂಹನಿಗೆ ಬಿಟ್ಟದತ್ತಿ.[೨೩]

೧೦. ಶಕ ೧೧೬೨ರ ವಿಜಯಪುರದ ನರಸಿಂಹದೇವನಿಗೆ ನೀಡಿದ ದತ್ತಿ.[೨೪]

ಇಂದಿನ ತೊರವೆಯ ನರಹರಿಯು ಹಿಂದಿನ ವಿಜಯಪುರದ ಜಲಮಂಟಪ ನರಸಿಂಹನಾಗಿದ್ದಿರಬಹುದು :

ಈ ಹಿಂದೆ ಉಲ್ಲೇಖಿಸಿದ ಶಾಸನ ಸಂಖ್ಯೆ ೧೨೪ ಮತ್ತು ೧೨೬ರಲ್ಲಿ ಹೇಳಲಾದ ಜಲಮಂಟಪ ನರಸಿಂಹನೆಂಬ ವಿಶೇಷಣವೂ ತೊರವೆಯ ನರಹರಿಗೆ ಅನ್ವಯಿಸುತ್ತದೆ ಎಂಬ ತರ್ಕಕ್ಕೆ ಅವಕಾಶವಿದೆ. ‘ಇಂದಿನ ತೊರವೆ ಗ್ರಾಮವು ಹಿಂದೆ ರಾಜಧಾನಿ (ವಿಜಯಪುರ) ಯಾಗಿದ್ದ ಕುರುಹುಗಳು ಈಗಲಾದರೂ ಕಂಡುಬರುವುವು. ಮುಸಲ್ಮಾನರ ಆಳ್ವಿಕೆಯ ಕಾಲದಲ್ಲಿ ಈ ಗ್ರಾಮಕ್ಕೆ ನೌಲಾಖಪುರ ಎಂದು ಕರೆಯುತ್ತಿದ್ದರೆಂದೂ ಅದು ಒಂಬತ್ತುಲಕ್ಷ ಮನೆಗಳಿಂದ ಯುಕ್ತವಾದ ದೊಡ್ಡ ಪಟ್ಟಣವಾಗಿತ್ತೆಂದೂ ಹೇಳುವರು’.[೨೫]

“ಇಂದಿನ ತೊರವೆಯ ಶ್ರೀ ನರಸಿಂಹದೇವರ ದೇವಸ್ಥಾನದಲ್ಲಿಯ ಗುಹೆ ಹಾಗೂ ಗರ್ಭಗುಡಿಗಳ ರಚನೆಯ ಮೇಲಿನಿಂದ ಈ ದೇವಸ್ಥಾನವು ಈ ಭಾಗದ ಮುಸಲ್ಮಾನರ ಆಳಿಕೆಗಿಂತಲೂ ಪೂರ್ವದಲ್ಲಿ ಇದ್ದುದೆಂದು ಅನಿಸುವುದು. ಏಕೆಂದರೆ ಈಗಿದ್ದ ಗುಹೆಯಲ್ಲಿ ಮತ್ತೊಂದು ಗುಹಾಮಾರ್ಗವಿದ್ದಂತೆ ಒಂದು ಕುರುಹು ಕಾಣುವುದು. ಅದು ಶ್ರೀ ನರಸಿಂಹ ತೀರ್ಥಕ್ಕೆ ಸಂಬಂಧಿಸಿದ್ದಿರಬಹುದೆಂಬ ತರ್ಕವಿದೆ.”[೨೬]

ಇದರಿಂದ ಶಾಸನಗಳಲ್ಲಿ ಉಲ್ಲೇಖಿತನಾದ ಜಲಮಂಟಪದ ನರಸಿಂಹನೆಂದರೆ, ಬಹುಶಃ ಹಿಂದೆ ಶ್ರೀ ನರಸಿಂಹತೀರ್ಥದ ಜಲಮಂಟಪದಲ್ಲಿ ಆವಾಸವಾಗಿದ್ದಿರಬಹುದಾದ ನರಸಿಂಹನೇ ಇರಬೇಕು, ಕಾಲಾಂತರದಲ್ಲಿ ಮೂರ್ತಿಭಂಜ

---

೨೨ No. 130 Annual Report on South Indian Epigraphy. for the year 1933-34.

೨೩ No. 131 ,,

೨೪ No. 132 ,,

೨೫ ತೊರವಿಕ್ಷೇತ್ರಮಹಿಮೆ–ಪುಟ. ೫.

೨೬ ಅದೇ ಪುಟ. ೫.

ಕರ ಭಯದಿಂದ ಜಲಮಂಟಪದ ನರಸಿಂಹ ಮೂರ್ತಿಯನ್ನು ಗುಹಾಮಾರ್ಗವಾಗಿ ಸ್ಥಳಾಂತರಗೊಳಿಸಿ, ಗುಹಾವಾಸಿಯನ್ನಾಗಿ ಮಾಡಿರಬೇಕು. ಇಂದಿನ ನರಸಿಂಹ ದೇವಸ್ಥಾನಕ್ಕೆ ಶಿಖರವಿಲ್ಲ. ಬಹುಶಃ ಹೊರಗಿನವರ (ಮೂರ್ತಿ ಭಂಜಕರ) ಕಣ್ಣಿಗೆ ದೇವಾಲಯದ ಅಸ್ತಿತ್ವವನ್ನೇ ಮರೆಮಾಡುವ ಉದ್ದೇಶದಿಂದ ಹೀಗೆ ಮಾಡಿರಬೇಕು.

ಅಲ್ಲದೆ ಇಂದಿನ ತೊರವೆಯಲ್ಲಿ ತೊರೆಯೊಂದು ಹರಿಯುತ್ತಿರುವುದಕ್ಕೂ ಇಲ್ಲಿನ ದೇವರಿಗೆ ಜಲಮಂಟಪದ ನರಸಿಂಹ, ತೊರವೆಯ ನರಸಿಂಹ ಎಂಬ ಖ್ಯಾತಿ ಇರುವುದಕ್ಕೂ ಏನಾದರೂ ಸಂಬಂಧವಿರಬಹುದೆ? ಎಂಬ ತರ್ಕಕ್ಕೆ ಅವಕಾಶವಿದೆ.

ಪ್ರಸಿದ್ಧಿಯ ಇತರ ಉಲ್ಲೇಖಗಳು :

೧) 'ಪರಮ ಹಂಪ ಪರೇಶಪಾವನ ಚರಿತ ವಿದ್ಯಾಶಂಕರೋತ್ತಮ'ನನ್ನು ನಮಿಸಿ[೨೭], 'ಮೈರಾವಣ ಕಾಳಗ'ವನ್ನು ರಚಿಸಿದ ಕವಿ ನರಹರಿಯು[೨೮], ತನ್ನ ಕೃತಿಯಲ್ಲಿ 'ತೊರವೆಯಧಿಪತಿ'[೨೯], 'ತೊರವೆಯ ರಘುನಾಥ'[೩೦], ಎಂದಿರುತ್ತಾನೆ. ವಿದ್ಯಾಶಂಕರರ ಕಾಲವು ಕ್ರಿ. ಶ. ೧೨೨೮–೧೩೩೩[೩೧] ಎನ್ನುವುದನ್ನು ಗಮನಿಸಿದರೆ, ಆ ಕಾಲಕ್ಕೇ 'ತೊರವೆ'ಯು ದಿವ್ಯ ಕ್ಷೇತ್ರವಾಗಿ ಪ್ರಸಿದ್ಧವಾಗಿತ್ತು ಎಂದು ಗೊತ್ತಾಗುತ್ತದೆ.

೨) ಪುರಂದರದಾಸರ ಕಾಲಕ್ಕಾಗಲೇ ೧೬ನೆಯ ಶತಮಾನದಲ್ಲಿ ತೊರವೆಯ ನರಹರಿಯ ಪ್ರಸಿದ್ಧಿಯು ಬಹಳ ವ್ಯಾಪಕವಾಗಿತ್ತೆನ್ನುವುದಕ್ಕೆ ಪುರಂದರದಾಸರ ಕೀರ್ತನೆಗಳೇ ಸಾಕ್ಷಿ.

ಅ) ದಾನವನ ಕೊಂದದ್ದಲ್ಲ ಕಾಣಿರೋ
ಗಾನವಿನೋದಿ ನಮ್ಮ **ತೊರವೆಯ** ನರಸಿಂಹ……

೨೭ ನರಹರಿ–ಮೈರಾವಣ ಕಾಳಗ ೧–೬

೨೮ ಈ ನರಹರಿಯೇ 'ತೊರವೆರಾಮಾಯಣ'ವನ್ನು ಬರೆದ 'ಕುಮಾರವಾಲ್ಮೀಕಿ'ಯಲ್ಲ ಎನ್ನುವುದು ನಮ್ಮ ಅಭಿಮತ.

೨೯ ನರಹರಿ–ಮೈರಾವಣ ಕಾಳಗ ೪–೧೧೨

೩೦ ,, ೪–೧೧೯

೩೧ ಕೆ. ಆರ್. ವೆಂಕಟರಾಮನ್ – The Throne of Transcendental Wisdom - p. 21. ಮತ್ತು ನಾ. ಶ್ರೀ. ರಾಜಪುರೋಹಿತ – ಶ್ರೀಮತ್ ಸುರೇಶ್ವರಾಚಾರ್ಯರ ಚರಿತ್ರೆ – ಪುಟ. ೬೮.

ಆ) ಮುದ್ದು ತಾರೋ ರಂಗ....ಎದ್ದು ಬಾರೋ
... ...
... ...
ತೊರವೆಯ ನಾರಸಿಂಹ ವರದ ಪುರಂದರವಿಠಲ
ಹರವಿಹಾಲನೆಲ್ಲ ಕುಡಿದ ಸೊರೆಹಾಲಿನ ಬಾಯೊಳೊಪ್ಪೆ

ಇ) ಇದು ಏನಂಗ ಮೋಹನಾಂಗ
ಮದನಜನಕ ನಮ್ಮ '**ತೊರವೆ**'ಯ ನರಸಿಂಗ[೩೨]

ಪುರಂದರದಾಸರು ತೊರವಿಗೆ ಹೋಗಿ ನರಸಿಂಹನ ದರ್ಶನ ಪಡೆದೇ ಮೇಲಿನ ಕೀರ್ತನೆಗಳನ್ನು ಹಾಡಿರಬೇಕೆಂದು ತೋರುತ್ತದೆ.

ಸಾಲಿಗ್ರಾಮ ಶಿಲೆಯಿಂದ ರಚಿತವಾದ ತೊರವೆಯ ನರಸಿಂಹ ಮೂರ್ತಿಯು ೩ ಅಡಿ ಎತ್ತರ, ೨ ಅಡಿ ಅಗಲವಿರುತ್ತವೆ. ನರಹರಿಯು ಗರುಡನ ಮೇಲೆ ತನ್ನ ಎಡಗಾಲು ಮಡಚಿ, ಬಲಗಾಲು ಕೆಳಗೆ ಬಿಟ್ಟು ಕುಳಿತಿದ್ದಾನೆ. ತೊಡೆಯ ಮೇಲೆ ಹಿರಣ್ಯಕಶಿಪುವನ್ನು ಮಲಗಿಸಿ, ಅವನ ಹೊಟ್ಟೆ ಸೀಳಿ ಎರಡೂ ಕೈಗಳಿಂದ ಕರುಳನ್ನು ಮೇಲಕ್ಕೆ ಎಳೆಯುವ ರಚನೆ ಇದೆ. ಕುಮಾರವಾಲ್ಮೀಕಿಯು ವಿಭೀಷಣನ ಬಾಯಲ್ಲಿ ರಾಮನ (ನರಹರಿಯ) ಔದಾರ್ಯವನ್ನು ಕುರಿತು

ತೊಡೆಯೊಳಗಿರಿಸಿಕೊಳ್ಳನೆ ಹಿರಣ್ಯಕನ ?[೩೩]

ಎಂದು ವರ್ಣಿಸಿದ್ದೂ ಪುರಂದರದಾಸರ

ಸಿರಿಯಿಪ್ಪ ತೊಡೆಯೊಳು ಅರಿಯನಿಟ್ಟಿರುವುದು
ಇದು ಏನಂಗ ಮೋಹನಾಂಗ
ಮದನಜನಕ **ತೊರವೆಯ** ನರಸಿಂಗ[೩೪]

ಎಂದು ಕೀರ್ತಿಸಿದ್ದೂ ಇಂದಿನ ತೊರವೆಯ ನರಹರಿಮೂರ್ತಿಯನ್ನು ಕಂಡೇ ಸ್ಫೂರ್ತಿ ಪಡೆದದ್ದಾಗಿದೆ. ಇದರಿಂದ ಇವರಿಬ್ಬರ ಕಾಲಕ್ಕೇ ಈ ನರಹರಿ ವಿಗ್ರಹವು ಪೂಜಿತವಾಗಿತ್ತೆಂದು ನಿರ್ಣಯಿಸಬಹುದು.

೩೨ ಶ್ರೀ ಪುರಂದರದಾಸರ ಕೃತಿಗಳು I. 46, 79.
೩೩ ಕುಮಾರವಾಲ್ಮೀಕಿ – ತೊರವೆರಾಮಾಯಣ VI. 8-53
೩೪ ಶ್ರೀ ಪುರಂದರದಾಸರ ಕೃತಿಗಳು I-79

ಇಷ್ಟಲ್ಲವೆ ಕುಮಾರವಾಲ್ಮೀಕಿಯು ತನ್ನ ಕಾವ್ಯದಲ್ಲಿ ಅಯೋಧ್ಯೆಯನ್ನು ವರ್ಣಿಸುತ್ತಾ 'ಹಿರಣ್ಯಕ ಭಂಗನಂತರ್ಗೃಹದವೊಲು ಲಕ್ಷ್ಮೀವಿಲಾಸಮಯ' ಎಂದು ಉಪಮಿಸಿದ್ದಾನೆ. ಇದು ತೊರವೆಯ ಕ್ಷೇತ್ರದ ವೈಭವ, ಸಮೃದ್ಧಿಗಳನ್ನೇ ಪರ್ಯಾಯವಾಗಿ ಧ್ವನಿಸುತ್ತದೆ.

ಕ್ರಿ. ಶ. ೧೬೫೦ರಲ್ಲಿದ್ದ ಸೋಮನಾಥ ಎಂಬ ಕವಿಯು ತನ್ನ 'ರುಕ್ಮಾಂಗದ ಚರಿತೆ' ಎನ್ನುವ ಸಾಂಗತ್ಯ ಕೃತಿಯಲ್ಲಿ ತೊರವೆಯ ನರಸಿಂಹನನ್ನು ಸ್ತುತಿಸಿದ್ದಾನೆ. ಇವರಿಂದಲೂ ತೊರವೆಯ ನರಹರಿಯ ದೂರವ್ಯಾಪೀ ಪ್ರಸಿದ್ಧಿಯ ಪರಿಚಯವಾಗುತ್ತದೆ.

ಹೀಗೆ 'ತೊರವೆ' ಎಂಬ ಹೆಸರು ಕ್ರಿ. ಶ ೭ನೆಯ ಶತಮಾನದಲ್ಲಾಗಲೇ ರೂಢಿಯಲ್ಲಿತ್ತು. ಅಲ್ಲಿನ ನರಹರಿ ಕ್ಷೇತ್ರವು ಸೇವುಣ ರಾಜರ ದತ್ತಿಗಳನ್ನು ಪಡೆದು, ೧೪ನೆಯ ಶತಮಾನದಲ್ಲಿ ಮೈರಾವಣ ಕಾಳಗದ ಕವಿ ನರಹರಿಯಿಂದ ಉಲ್ಲೇಖಿತವಾಗಿ ಪುರಂದರದಾಸ, ಸೋಮನಾಥರ ಕಾಲದಲ್ಲಿ ಸುಪ್ರಸಿದ್ಧವಾಗಿತ್ತು ಎಂದು ಹೇಳಬಹುದು.

ಕೆಲವು ಚಿಕ್ಕಪದ್ಯಗಳು

ಹೊ. ಮ. ಪಂಡಿತಾರಾಧ್ಯ

೧. ಉಪಯೋಗ

ಎಂದಾದರೂ
ಒಂದಾದರೂ
ಉಪಯೋಗಕ್ಕೆ
ಬರಬಹುದೆಂಬ ಆಸೆಯಿಂದ
ಕಂಡ ವಸ್ತುಗಳನ್ನೆಲ್ಲಾ
ಆರಿಸಿಕೊಂಡು
ಕಿಸೆಯೊಳಗೆ ಹಾಕಿಕೊಂಡೆ
ಒಂದೊಂದನ್ನೇ
ಶೇಖರಿಸುತ್ತಾ ಹೋದಂತೆ
ಕೊನೆಗೆ ಕಿಸೆ ಹರಿದು
ಬಿತ್ತು ತೂತು.

೨. ಷೋಡಶಿ

ಮುಟ್ಟಿ ಕೊಟ್ಟರೂ
ಇವಳು
ಒಣಗಿರುವ ಹುಲ್ಲು
ತಿನ್ನುವರೆಲ್ಲರೂ
ಅದನು
ಸುರಿಸುತ್ತ ಜೊಲ್ಲು.

೩. ಸುಖ

ಕಾಡಕತ್ತಲಿನಲಿ
ಬ್ಯಾಟರಿಯು ಬೆಳಕು
ಎಷ್ಟಿದ್ದರೂ
ಮತ್ತಷ್ಟು ಬೇಕು.

೪. ಬುತ್ತಿ

ನಗಬೇಡ ಎಲೆ ಮೊಗ್ಗೆ
ಅರಳಿದ ಹೂ ಕೀಳುವಾಗ್ಗೆ
ನಾಳೆ ಅಥವಾ ನಾಡಿದ್ದು
ನಿನಗೂ ಇದು ಕಟ್ಟಿಟ್ಟದ್ದು.

ಚಿಕ್ಕಮಲ್ಲಣ್ಣ ಕವಿ :
(ಒಂದು ಸಂಶೋಧನೆ)

ಬಿ. ಬಿ. ಮಹೀಶವಾಡಿ

ಆರ್. ನರಸಿಂಹಾಚಾರ್ಯರ ಕರ್ಣಾಟಕ ಕವಿಚರಿತೆಯ ಮೂರೂ ಸಂಪುಟಗಳಲ್ಲಿ ಚಿಕ್ಕಮಲ್ಲಣ್ಣ ಕವಿಯ ಉಲ್ಲೇಖವಿಲ್ಲ. ಚಿಕ್ಕಮಲ್ಲಣ್ಣ ಕವಿಯು ಒಂದು ಕಾವ್ಯವನ್ನು ಬರೆದಿದ್ದು, ಅದರ ಹೆಸರು 'ಸಮ್ಯಕ್ತ್ವಕೌಮುದಿ'. ಇದೇ ಹೆಸರಿನ ಒಂದೊಂದು ಕೃತಿಯನ್ನು ಹಿರಿಯ ಮಂಗರಸನೂ[೧] ಪಾಯಣ್ಣ ವ್ರತಿಯೂ[೨] ಬರೆದಿರುವರು. ಹಿರಿಯ ಮಂಗರಸನ ಕೃತಿ ಷಟ್ಪದಿಯಲ್ಲಿದ್ದು, ೧೯೨೩ರಲ್ಲಿ ಬೆಳಗಾವಿಯ ಮಹಾವೀರ ಮುದ್ರಣಾಲಯದಲ್ಲಿ ಅಚ್ಚು ಆಗಿದೆ. ಪಾಯಣ್ಣವ್ರತಿಯ ಕೃತಿ ಸಾಂಗತ್ಯದಲ್ಲಿದೆ. ಹಿರಿಯ ಮಂಗರಸನು ೧೫೦೮ರಲ್ಲಿ, ಪಾಯಣ್ಣವ್ರತಿ ಸು. ೧೬೦೦ರಲ್ಲಿ, ಚಿಕ್ಕಮಲ್ಲಣ್ಣನು ೧೪೯೨ರಲ್ಲಿ ಕೃತಿಗಳನ್ನು ರಚಿಸಿರುವುದರಿಂದ ಇವರಲ್ಲಿ ಚಿಕ್ಕಮಲ್ಲಣ್ಣನೇ ಪ್ರಾಚೀನ ಕವಿಯಾಗುತ್ತಾನೆ. ಅವನ ಕೃತಿ 'ಸಮ್ಯಕ್ತ್ವಕೌಮುದಿ', ಈ ವಿಷಯದ ಪ್ರಥಮ ಗ್ರಂಥವಾಗುತ್ತದೆ. ಈ ಮೂರೂ ಕೃತಿಗಳ ಹೆಸರು ಒಂದೇ ಇದ್ದಂತೆ, ವಿಷಯವೂ ಒಂದೇ ಇದೆ. ಸಮ್ಯಕ್ತ್ವ ಎಂದರೆ ತತ್ವಾನುರಕ್ತಿ, ತತ್ವಪ್ರೀತಿ. ವಿವಿಧ ವ್ಯಕ್ತಿಗಳಿಗೆ ತತ್ವದಲ್ಲಿ ಶ್ರದ್ಧೆ ಹುಟ್ಟಿದ ಪ್ರಸಂಗಗಳನ್ನು ಕಥೆಗಳ ರೂಪದಲ್ಲಿ ಹೇಳಲಾಗಿದೆ. ಇವುಗಳನ್ನು ಧಾರ್ಮಿಕ ಕಥಾಸಂಗ್ರಹಗಳೆಂದು ಕರೆಯಬಹುದು.

ಇಂದಿನವರೆಗೂ ಯಾರ ಕಣ್ಣಿಗೂ ಬೀಳದ ಅಜ್ಞಾತಕವಿಯಾದ ಹುಬ್ಬಳ್ಳಿಯ ಈ ಚಿಕ್ಕಮಲ್ಲಣ್ಣನು ಬರೆದ 'ಸಮ್ಯಕ್ತ್ವಕೌಮುದಿ' ಎಂಬ ಗ್ರಂಥ ನನಗೆ ದೊರೆತಿದೆ. ಈಚೆಗೆ ನಾನು ಮಂಗರಸನ ಅಭ್ಯಾಸದ ಪ್ರಸಂಗದಲ್ಲಿ ಅವನ 'ಸಮ್ಯಕ್ತ್ವಕೌಮುದಿ' ಹಸ್ತಪ್ರತಿಗಳನ್ನು ನೋಡುತ್ತಿರುವಾಗ ತೀರ ಆಕಸ್ಮಿಕವಾಗಿ ಚಿಕ್ಕಮಲ್ಲಣ್ಣನ ಸಮ್ಯಕ್ತ್ವ ಕೌಮುದಿ ಗ್ರಂಥದ ಹಸ್ತಪ್ರತಿ ನನ್ನ

---

೧. ಆರ್. ನರಸಿಂಹಾಚಾರ್ಯ : ಕರ್ನಾಟಕ ಕವಿಚರಿತೆ (ದ್ವಿತೀಯ ಸಂಪುಟ ೧೯೬೩) ಪು. ೧೨೩.

೨. ಅದೇ ಪು. ೨೮೩.

ಕೈಗೆ ಬಂತು. ಕುತೂಹಲದಿಂದ ಓದಿ ನೋಡಿವೆ. ಕವಿ ಮತ್ತು ಕೃತಿಯ ಬಗ್ಗೆ ಕೆಲವು ಖಚಿತ ವಿಷಯಗಳು ನನಗೆ ತಿಳಿದುಬಂದುದರಿಂದ ವಿದ್ವಾಂಸರ ಎದುರಿಗೆ ಅವುಗಳನ್ನು ಇಲ್ಲಿ ಇಡುತ್ತಿದ್ದೇನೆ.

ಇನ್ನೊಂದು ಮಹತ್ವದ ಸಂಗತಿ : ಅಣ್ಣಾವರದಲ್ಲಿ ಚಿಕ್ಕಮಲ್ಲಣ್ಣನೆಂಬವನು ಸಲ್ಲೇಖನಮರಣ ಹೊಂದಿದ ಸ್ಮಾರಕ ಶಿಲಾಶಾಸನವಿದೆ. ಸೌಥ್ ಇಂಡಿಯನ್ ಇನ್‌ಸ್ಕ್ರಿಪ್‌ಶನ್ಸ XVರಲ್ಲಿ (Annual Report on South Indian Epigraphy for 1926) ಈ ಶಿಲಾಲೇಖನದ ಉಲ್ಲೇಖವಿದೆ.[೭] ಅದರ ವಾಚನ ಸಮಾಧಾನಕರವಾಗಿಲ್ಲ. ಡಾ. ಆರ್. ಎನ್. ಗುರವ ಅವರು ಕೆಲವು ವರ್ಷಗಳ ಹಿಂದೆಯೇ ಆ ಶಿಲಾಲೇಖನದ ಅಚ್ಚನ್ನು ತಂದು ಅರ್ಥ ಮಾಡುವಾಗ ಕೆಲವು ಅಸ್ಪಷ್ಟತೆಗಳನ್ನು ಕಂಡು, ಅವುಗಳನ್ನು ಹೆಚ್ಚಿನ ತಿಳುವಳಿಕೆಗಳಿಂದ ನಿವಾರಿಸಲು ಯತ್ನಿಸುತ್ತಿದ್ದರು. ಜೈನ ಧಾರ್ಮಿಕ ಪಾರಿಭಾಷೆಯ ಹಿನ್ನೆಲೆಯಲ್ಲಿ ಏನಾದರೂ ಹೊಸ ಬೆಳಕು ಬೀಳಬಹುದೆಂಬ ಸದಿಚ್ಛೆಯಿಂದ ಆ ಶಾಸನದ ವಿಷಯವನ್ನು ನನ್ನ ಗಮನಕ್ಕೆ ತಂದರು. ಇಬ್ಬರೂ ಕೂಡಿ ಆ ಶಾಸನವನ್ನು ಪ್ರಯತ್ನಪಟ್ಟು ಓದುತ್ತಿರುವಾಗ ನನಗೆ ಥಟ್ಟನೆ ಚಿಕ್ಕಮಲ್ಲಣ್ಣನ ಕೃತಿ ನೆನಪಿಗೆ ಬಂತು. ಆ ವಿಷಯವನ್ನು ಅವರಿಗೆ ತಿಳಿಸಿದಾಗ ಬಹಳ ಕುತೂಹಲ ಉಂಟಾಗಿ ಸಂಶೋಧನೆಯ ಕಾರ್ಯ ಚುರುಕುಗೊಂಡಿತು.

ಆ ಮೇಲೆ ನಾನು ಮತ್ತು ಡಾ. ಆರ್. ಎನ್. ಗುರವ ಅವರು ಕೂಡಿಕೊಂಡು ಶಾಸನದ ಪಾಠವನ್ನೂ ಗ್ರಂಥದ ಹಸ್ತಪ್ರತಿಯನ್ನೂ ಹೋಲಿಸಿ ನೋಡಿದೆವು. ಆಗ 'ಸಮ್ಯಕ್ತ್ವಕೌಮುದಿ'ಯ ಕರ್ತೃವಾದ ಚಿಕ್ಕಮಲ್ಲಣ್ಣ ಕವಿಯೇ ಶಾಸನದಲ್ಲಿ ವರ್ಣಿತನಾದ ಚಿಕ್ಕಮಲ್ಲಣ್ಣಸೆಟ್ಟಿ ಎಂಬ ವಿಷಯ ಇಬ್ಬರಿಗೂ ಖಚಿತವಾಯಿತು. ಅವರ ಸಂಶಯಗಳೆಲ್ಲ ನಿವಾರಣೆಯಾದವು. ಶಾಸನದ ಪೂರ್ತಿಪಾಠವನ್ನು ಕೊಟ್ಟು ತಮಗೆ ತಿಳಿದ ಸಂಗತಿಯನ್ನು ಅವರು ಬರೆದು ಪ್ರಕಟಿಸಲಿದ್ದಾರೆ. ಕವಿ-ಕಾವ್ಯ-ಶಾಸನ ಅಧ್ಯಯನದ ಹಿನ್ನೆಲೆಯಲ್ಲಿ ನನ್ನ ಅನುಭವಗಳನ್ನು ಸಹೃದಯರ ಗಮನಕ್ಕೆ ಇದೀಗ ತರುತ್ತಿದ್ದೇನೆ:

ಕವಿಯ ಹೆಸರು ಶಾಸನದಲ್ಲಿ : (೧) ೭-೮ನೆಯ ಸಾಲುಗಳಲ್ಲಿ 'ಹುಬ್ಬಳ್ಳಿಯ ಚಿಕ್ಕಮಲ್ಲಿಸೆಟ್ಟಿಯರು ಸ್ವರ್ಗಸ್ಥರಾದರು'—ಎಂದೂ, (೨) ೧೫ನೆಯ ಸಾಲಿನಲ್ಲಿ '(ಶ್ರೀ)ಯಂ ಕೈವಿಡಿಗೆ ಚಿಕ್ಕಮಲ್ಲಣಗೆ ಮಾಳ್ಕೆಷ್ಟಾರ್ಥ ಸಂಸಿದ್ಧಿಯಂ'— ಎಂದೂ, (೩) ೨೧-೨೨ನೆಯ ಸಾಲುಗಳಲ್ಲಿ 'ಹುಬ್ಬಳ್ಳಿ ಸಿದ್ಧೇಂದ್ರ ತನು-

೭. S. I. I. Vol. XV (AR. No. 468 of 1926) No. 693.

ಸಂಜಾತ ಸುರಸಕೋವಿದ ಚಿಕ್ಕಮಲ್ಲಣನತಿ ಖ್ಯಾತಾ'—ಎಂದೂ, (೪) ೨೫-೨೬-೨೭ನೆಯ ಸಾಲುಗಳಲ್ಲಿ—'ದಾನಶೀಲನೀ ಕಡುಗಲಿ ಸಿದ್ಧಣಾಂಕನ ತನೂಭವನೀತ ನೆನುತ್ತ ಮೂಜಗಂ ಸಡಗರದಿಂ ಬಣ್ಣಿಪುದು ಬಲ್ಲರ ಬಲ್ಲಹ ಚಿಕ್ಕಮಲ್ಲನಂ'—ಎಂದೂ, ಒಟ್ಟು ನಾಲ್ಕು ಸಾರೆ ಚಿಕ್ಕಮಲ್ಲಣನ ಹೆಸರು ಬಂದಿದೆ. ಹುಬ್ಬಳ್ಳಿ ಊರಿನ ಹೆಸರು ಎರಡು ಸಲ ಬಂದಿದೆ. ಚಿಕ್ಕಮಲ್ಲಣನ ತಂದೆಯ ಹೆಸರು 'ಸಿದ್ಧಣಾಂಕ' 'ಸಿದ್ಧೇಂದ್ರ' ಎಂದು ಎರಡು ಶಬ್ದಪ್ರಯೋಗಗಳಲ್ಲಿ ಬಂದಿದೆ.

ಕವಿಯ ಹೆಸರು ಕಾವ್ಯದಲ್ಲಿ : ಪ್ರತಿ ಸಂಧಿಯ ಕೊನೆಯಲ್ಲಿ ಹೀಗಿದೆ; ಸಂಧಿಯ ಅಂಕಿ ಮಾತ್ರ ಬದಲಾಗುತ್ತ ಹೋಗಿದೆ.

ಅಕ್ಕರಿಂ ಜನರು ಕೇಳಿದ ಹುಬ್ಬಳ್ಳಿಯ | ಚಿಕ್ಕಮಲ್ಲಣ ವಿರಚಿಸಿದಾ |
ತಕ್ಕ ಕೌಮುದಿಯೊಳೊಂದನೆಯ ಸಂಧಿಯು | ಲೆಕ್ಕದಿಂದ ತೋರಿದುದು ||

ಕೊನೆಯ ಸಂಧಿಯ ಕೊನೆಯ ಭಾಗದಲ್ಲಿ ಹೀಗಿದೆ :

ವಿನುತ ಜಿಡಪರಾಧಾರ ಸಿದ್ಧೇಂದ್ರನ | ತನಯ ಮಲ್ಲಿಕಾರ್ಜುನನಾ |
ಅನುಜ ಚಿಕ್ಕಮಲ್ಲಣ್ಣ ಕೌಮುದಿಯನು | ಜನಹಿತವಾಗಿ ಪೇಳಿದೆನು ||

ಕವಿಯ ಹೆಸರು, ಊರು, ತಂದೆಯ ಹೆಸರು ಶಾಸನದಲ್ಲಿ ಇದ್ದಂತೆಯೇ ಕಾವ್ಯದಲ್ಲಿಯೂ ಬಂದಿದೆ. ಕವಿಗೆ ಮಲ್ಲಿಕಾರ್ಜುನನೆಂಬ ಅಣ್ಣನೊಬ್ಬನಿದ್ದನೆಂದು ಹೆಚ್ಚಿನ ಸಂಗತಿ ಕಾವ್ಯದಿಂದ ತಿಳಿಯುತ್ತದೆ.

ಶಾಸನದ ಒಟ್ಟು ಸಾರಾಂಶ : 'ಶಕವರ್ಷ ಸಾವಿರದ ನಾನೂರಿಪ್ಪತ್ತೆಂಟನೆಯ ಕ್ರೋಧನ ಸಂವತ್ಸರದ ಆಶ್ವಿಜ ಬಹುಳ ಚತುರ್ದಶಿಯಂದು, ಅನ್ನ-ನೀರು ಬಿಟ್ಟ ೨೧ನೆಯ ದಿನ, ಸಲ್ಲೇಖನ ವಿಧಿಯಿಂದ ಸೂರ್ಯೋದಯ ಒಂದು ಜಾವದಲ್ಲಿ ಹುಬ್ಬಳ್ಳಿಯ ಚಿಕ್ಕಮಲ್ಲಿಸೆಟ್ಟಿಯವರು ಸ್ವರ್ಗಸ್ಥರಾದರು. ಅವರನ್ನು ಹೊಳೆಯ ದಂಡೆಯಲ್ಲಿ ದಹನ ಮಾಡಿದರು.

ದೇವ-ನರ-ನಾಗ ನರೇಶರ ಬಾಗಿದ ಕಿರೀಟಗಳ ರತ್ನಮಣಿಗಳಲ್ಲಿ ಪ್ರತಿಬಿಂಬಗೊಂಡ ಪಾದ ಉಳ್ಳವನೂ, ಮುಕ್ತಿಕನ್ನೆಯ ಪತಿಯಾದವನೂ, ಕಾಮವೆಂಬ ಕತ್ತಲೆಯನ್ನು ಹೊಡೆದೋಡಿಸುವ ಸೂರ್ಯನಂತಿರುವವನೂ ಆದ ಮೂರ್ತಿಯ ಪಾರಿಶ್ವೇಶ್ವರನು ಪೂರ್ಣ ಶ್ರೇಯಸ್ಸನ್ನುಂಟು ಮಾಡಲಿ, ಚಿಕ್ಕಮಲ್ಲಣನ ಇಷ್ಟಾರ್ಥಗಳು ಸಿದ್ಧಿಸಲಿ.

ಜಿನಚರಣಕಮಲಭೃಂಗವು ಚಿತ್ತರಿಸುವ ಪಂಚಪದ ಪೂರಿತ ಹೃದಯನೂ, ಗುರುಪದಾಂಬುಜಪರಾಗ ಸ್ವರಂಜಿತ ಭಾಳ ಉಳ್ಳವನೂ, ಭರತ ಕಾವ್ಯ ಪ್ರಮುಖ

ನಾನಾ ಕಲಾಜಾಲ ಉಳ್ಳವನೂ, ವಸುಧಾಂತರಾಳ ವಿಶ್ರುತ ವಿವಿಧ ಸುಚಾರಿತ್ರ ಉಳ್ಳವನೂ, ಜಿನಗಂಧೋದಕದಲ್ಲಿ ಅರಳಿ ಪವಿತ್ರವಾದ ಶರೀರ ಉಳ್ಳವನೂ, ಹುಬ್ಬಳ್ಳಿಯ ಸಿದ್ಧೇಂದ್ರನ ತನುಸಂಜಾತನೂ, ಸುರಸ ಕೋವಿದನೂ ಆದ ಚಿಕ್ಕಮಲ್ಲಣನು ಅತಿ ಖ್ಯಾತನು.

ಬುಧವರ ಬೇಲಿ ಭಾಸುರ ಗುಣಾಗ್ರಣಿ ಭಾವಜರೂಪಗುತ್ತಮನು, ಪೊಡವಿಯಲ್ಲಿ ಅತ್ಯಧಿಕವಾದ ಜಿನಧರ್ಮ ಪರಾಯಣನು, ದಾನಶೀಲನು ಈ ಕಡುಗಲಿ ಸಿದ್ಧಣಾಂಕನ ತನುಭವನೀತನು,—ಎನ್ನುತ್ತ ಬುಧಜನವು ಸಡಗರದಿಂದ ಬಲ್ಲರ ಬಲ್ಲಹ ಚಿಕ್ಕಮಲ್ಲಣ್ಣನನ್ನು ಬಣ್ಣಿಸುವುದು!'

೨೮ ಸಾಲುಗಳುಳ್ಳ ಶಿಲಾಲೇಖನದ ಸರಳಾನುವಾದವಿದು. ಈ ಶಿಲಾಶಾಸನ ಅಳ್ನಾವರ (ಪುಣೆ-ಬೆಂಗಳೂರು ರೈಲು ದಾರಿಯಲ್ಲಿ ಧಾರವಾಡ ಹತ್ತರ)ದಲ್ಲಿ ಇಂದಿಗೂ ಸುರಕ್ಷಿತವಾಗಿದೆ. (S. I. I. XV) ದಕ್ಷಿಣ ಭಾರತ ಶಾಸನ ಸಂಪುಟ ೧೫ರಲ್ಲಿ ಇದರ ವಾಚನ ಚನ್ನಾಗಿ ಬಂದಿಲ್ಲ. 'ಪಾರಿಶ್ವೇಶ್ವರ' ಶಬ್ದ ತಿಳಿಯದೆ 'ಪಾಶ್ವೇಶ್ವರ' ಎನ್ನಲಾಗಿದೆ. 'ಮತ್ತಿ' ಎಂಬುದು 'ಮುಕ್ತಿ' ಎಂದು ತಿಳಿಯಲಾಗಿದೆ. ಇದರಂತೆ ಇನ್ನೂ ಕೆಲವು ದೋಷಗಳುಂಟು.

ಅಳ್ನಾವರದ ಬಳಿಯಲ್ಲಿ ಒಂದು ದೊಡ್ಡ ಮತ್ತಿಯ ಮರದ ಕೆಳಗೆ ಈ ದೇವಾಲಯವಿದ್ದುದರಿಂದ ಜನರು 'ಮತ್ತಿಯ ಪಾರ್ಶ್ವನಾಥ' ಎಂದು ಕರೆದಿರಬಹುದು. ಕಾವ್ಯದಲ್ಲಿಯೂ ಈ ಮಾತಿಗೆ ಪುರಸ್ಕಾರವಿದೆ.

ಪೊಡೆಗಾಲನೊಡೆಯನ ಪಿಡೆಯುಡುಕುರೆ ಬೆ| ಳ್ಗೊಡೆನುಡಿಗಡಲ್ಗಡೆಗಂಡಾ |
ಎಡವಿಡದೆಡಸಿದೆಡರ ಪರಿಹರಿಪನೆ | ನ್ನೊಡೆಯ ಮತ್ತಿಯ ಜಿನಚಂದ್ರಾ ||

ಎಂಬ ಪದ್ಯವನ್ನು ಆಶ್ವಾಸಗಳ ಕೊನೆಯಲ್ಲಿ ತಿರುತಿರುಗಿ ಹೇಳಲಾಗಿದೆ. ಮತ್ತಿಯ ಪಾರ್ಶ್ವನಾಥಜಿನಚಂದ್ರನು ಕವಿಯ ಆರಾಧ್ಯ ದೇವನಾಗಿರುವಂತೆ ತೋರುತ್ತದೆ.

ಹುಬ್ಬಳ್ಳಿಯ ಸಿದ್ಧೇಂದ್ರನ ಮಗನೂ, ಮಲ್ಲಿಕಾರ್ಜುನನ ತಮ್ಮನೂ ಆದ ಚಿಕ್ಕಮಲ್ಲಣ್ಣ ಸೆಟ್ಟಿ ಜೈನ ಧರ್ಮದಲ್ಲಿ ಅತಿ ನಿಷ್ಠೆಯುಳ್ಳವನಾಗಿದ್ದುದರಿಂದ ತನ್ನ ಆರಾಧ್ಯ ದೇವನಾದ ಪಾರ್ಶ್ವನಾಥನ ಬಳಿಗೆ ಬಂದು ಕೊನೆಗಾಲವನ್ನು ಕಳೆದಿರುವನು. ವಿಧಿಪೂರ್ವಕವಾಗಿ ನಡೆಯುವ ಸಲ್ಲೇಖನ ವ್ರತದಿಂದ ಪ್ರಾಣತ್ಯಾಗ ಮಾಡಲು ಮತ್ತಿಯ ಜಿನಚಂದ್ರನ ಸನ್ನಿಧಿಯನ್ನು ಆಯ್ದುಕೊಂಡಿರುವನು. ಶ್ರಾವಕ ಧರ್ಮದಲ್ಲಿ ಇದ್ದುಕೊಂಡು ಮುನಿಗಳಿಗೆ ಸಹಜವಾದ ಸಲ್ಲೇಖನವನ್ನು ಸಾಧಿಸಿರುವುದು ಚಿಕ್ಕಮಲ್ಲಣ್ಣನ ಮಹಾ ಯೋಗ್ಯತೆಯನ್ನು ಸಾರುತ್ತದೆ.

ನಿಷ್ಠೆಯುಳ್ಳ ಜೈನ ಶ್ರಾವಕರು ಕ್ವಚಿತ್ತಾಗಿ ಇಂದಿಗೂ ಸಲ್ಲೇಖನದಿಂದ ಮರಣ ಹೊಂದುವ ನಿದರ್ಶನಗಳುಂಟು. ದೇವಲಾಪುರದಲ್ಲಿ, ಉಗಾರದಲ್ಲಿ ಈಚೆಗೆ ಇಂಥ ಮರಣವನ್ನು ಸಾಧಿಸಿದ ಘಟನೆಗಳು ನಡೆದವು. ಆಚಾರ್ಯ ಶಾಂತಿಸಾಗರ ಮಹಾರಾಜರು (ದಿಗಂಬರ ಮುನಿ) ಪಂಢರಪುರದ ಸಮೀಪದಲ್ಲಿ ಕುಂಥಲಗಿರಿ ಎಂಬ ಪ್ರಸಿದ್ಧ ಜೈನ ತೀರ್ಥ ಕ್ಷೇತ್ರದಲ್ಲಿ ಕ್ರಿ. ಶ. ೧೯೫೫ ಸಪ್ಟೆಂಬರ ೧೮ನೆಯ ತಾರೀಖಿನಂದು ಸಲ್ಲೇಖನಪೂರ್ವಕ ಸಮಾಧಿಮರಣವನ್ನು ಸಾಧಿಸಿದ ವಿಷಯ ಸರ್ವವಿದಿತವಾಗಿದೆ.

ಶಕವರ್ಷ ಸಾವಿರದ ನಾನೂರಿಪ್ಪತ್ತೆಂಟನೆಯ ಕ್ರೋಧನ ಸಂವತ್ಸರ ಆಶ್ವಿಜ ಬಹುಳ ಚತುರ್ದಶಿಯಂದು, ಆಹಾರ-ನೀರು ವರ್ಜ ಮಾಡಿದ ೨೧ನೆಯ ದಿನ, ಸೂರ್ಯೋದಯದ ಒಂದು ಜಾವದಲ್ಲಿ ಸಲ್ಲೇಖನದಿಂದ ಚಿಕ್ಕಮಲ್ಲಣನು ಮರಣ ಹೊಂದಿದನೆಂದು ಶಾಸನ ಹೇಳುತ್ತದೆ, ಅಂದರೆ,-೧೫೦೬ರಲ್ಲಿ ಕವಿ ತೀರಿಕೊಂಡಿರುವನೆಂಬುವುದು ಸ್ಪಷ್ಟವಾಗುತ್ತದೆ. ಆಶ್ವೀಜ ಬಹುಳ ಚತುರ್ದಶಿ ವರ್ಧಮಾನ ಮಹಾವೀರನು ಮೋಕ್ಷಕ್ಕೆ ಹೋದ ದಿನ. ಆ ಸುದಿನವನ್ನೇ ಉದ್ದೇಶಪೂರ್ವಕವಾಗಿ ಆಯ್ದುಕೊಂಡು ತನ್ನ ಇಚ್ಛೆಯಂತೆ ಅದೇ ದಿನ ಸಲ್ಲೇಖನದಿಂದ ಸಮಾಧಿ ಮರಣವನ್ನು ಸಾಧಿಸಿದ ಚಿಕ್ಕಮಲ್ಲಣನ ಧಾರ್ಮಿಕ ಜೀವನದ ಪರಿಪಕ್ವತೆ ಪ್ರಶಂಸಾರ್ಹವಾದುದು.

ಕವಿ ಸಮ್ಯಕ್ತ್ವಕೌಮುದಿಯನ್ನು ಬರೆದು ಮುಗಿಸಿದ್ದು ಶಕೆ ೧೪೧೪ ಚೈತ್ರ ಶುದ್ಧ ಪಂಚಮಿ. ಅಂದರೆ ಕ್ರಿ. ಶ. ೧೪೯೨ರಲ್ಲಿ. ಪರಿಧಾವಿ ಸಂವತ್ಸರದಲ್ಲಿ ಕಾವ್ಯ ಬರೆದು ಕ್ರೋಧಿಸಂವತ್ಸರದಲ್ಲಿ ಮರಣಹೊಂದಿದ್ದನ್ನು ಗಮನಿಸಿದರೆ, ಕಾವ್ಯ ಬರೆದು ೧೪ ವರ್ಷದ ಮೇಲೆ ಕವಿ ತೀರಿಕೊಂಡಂತಾಗುತ್ತದೆ.

ಚಿಕ್ಕಮಲ್ಲಣನ ಸಮ್ಯಕ್ತ್ವಕೌಮುದಿ ಸಾಂಗತ್ಯದಲ್ಲಿದ್ದು ೨೪ ಸಂಧಿಗಳಲ್ಲಿ ೨೨೦೫ ಪದ್ಯಗಳುಳ್ಳ ಮಧ್ಯಮ ಗಾತ್ರದ ಧಾರ್ಮಿಕ ಕಥಾಸಂಗ್ರಹ ಸ್ವರೂಪದ್ದಾಗಿದೆ. ಭಾಷಾಶೈಲಿ ಸುಸಂಸ್ಕೃತವಾದುದಾಗಿದ್ದು ಕಥಾಸರಣಿ ಮೆಚ್ಚುವಂತಿದೆ.

ಡಾ. ಆರ್. ಎಸ್. ಗುರವ ಅವರ ಸಹಕಾರಕ್ಕೆ ಹಾಗೂ ಸಹೃದಯತೆಗೆ ನನ್ನ ಕೃತಜ್ಞತೆಗಳು.

ಜನಪದಸಾಹಿತ್ಯದಲ್ಲಿ ಎತ್ತಿನ ಚಿತ್ರಣ

ಬಿ. ಎಂ. ತೆಳಗಡಿ
ಕೆ. ಎಚ್. ಬಿಜಾಪೂರ

ಸಂಪದ್ಭರಿತವಾದ ಕನ್ನಡಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಜನಪದ ಸಾಹಿತ್ಯವೂ ಪ್ರಮುಖಸ್ಥಾನ ಪಡೆದಿದೆ. ಕನ್ನಡಸಾಹಿತ್ಯ ಹುಟ್ಟುವ ಪೂರ್ವದಲ್ಲಿಯೇ ಜನತೆಯ ನಾಲಿಗೆಯ ಮೇಲೆ ನಲಿದು, ಕನ್ನಡ ಸಂಸ್ಕೃತಿಯ ಸತ್ವವನ್ನು, ನುಡಿಯ ಬೆಡಗನ್ನು ಮೈಗೂಡಿಸಿಕೊಂಡು ಅಚ್ಚಗನ್ನಡ ಛಂದಸ್ಸಿನ ವಿವಿಧ ಪ್ರಕಾರಗಳಲ್ಲಿ ಅದು ವೈವಿಧ್ಯಮಯವಾಗಿ ಮೂಡಿನಿಂತದೆ. ಆದರೆ ತ್ರಿಪದಿಯೇ ವಿಶೇಷವಾಗಿ ಈ ಸಾಹಿತ್ಯದ ಪ್ರಮುಖಮಾಧ್ಯಮವಾಗಿರುವುದನ್ನು ಮರೆಯುವಂತಿಲ್ಲ. ಬಾಯಿಂದ ಬಾಯಿಗೆ ಸಾಗಿಬಂದ ಈ ಸಜೀವ ಸಾಹಿತ್ಯ, ಸುಮಾರು ೬ನೆಯ ಶತಮಾನಕ್ಕಾಗಲೇ ಬರಹದ ಸ್ವರೂಪ ತಾಳಿತ್ತೆಂಬುದಕ್ಕೆ ತ್ರಿಪದಿಯಲ್ಲಿ ರಚಿತವಾದ ಬಾದಾಮಿಯ ಶಿಲಾಶಾಸನವೇ ಸಾಕ್ಷಿ. ಕವಿರಾಜಮಾರ್ಗಕಾರ "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿ"ಗಳಾದ ಹಳ್ಳಿಯ ಅವಿದ್ಯಾವಂತ ಜನಪದಕವಿಗಳನ್ನು ತುಂಬುಹೃದಯದಿಂದ ಹೊಗಳಿದ್ದಾನೆ. ಸಹಜಕವಿಗಳ ಸ್ವಾನುಭವದಿಂದ ಹೊಮ್ಮಿದ ಜನಪದ ಸಾಹಿತ್ಯ ಹಳ್ಳಿಗರ ಕಾಮಧೇನು, ಕಲ್ಪವೃಕ್ಷವಾಗಿಯೇ ಬೆಳೆಯಿತು. ಹಳ್ಳಿಯ ಗಂಡಸರು ಮತ್ತು ಹೆಂಗಸರು ತಮ್ಮ ಬಾಳಿನಲ್ಲಿ ಆನಂದ ಉಕ್ಕಿದಾಗ, ದುಃಖ ಉಮ್ಮಳಿಸಿದಾಗ, ಅನುಕಂಪ ಅಂಕುರಿಸಿದಾಗ, ಭಕ್ತಿಭಾವ ಆವಿರ್ಭವಿಸಿದಾಗ—ಹೀಗೆ ದೈನಂದಿನ ಜೀವನದ ಅನಂತ ಸನ್ನಿವೇಶಗಳಲ್ಲಿ ಸಹಜಸ್ಫೂರ್ತಿಯಿಂದ, ಆಳವಾದ ಜೀವನಾನುಭವದಿಂದ ಅವರು ರಚಿಸಿದ ಜನಪದಸಾಹಿತ್ಯ ಅಪಾರವಾಗಿದೆ; ಅಮೂಲ್ಯವಾಗಿದೆ. ಸರಳ ಭಾಷೆ, ಸರಳ ಶೈಲಿಯ ಸಮರಸವಾದ ಈ ಸಾಹಿತ್ಯ ಕಲ್ಪನೆಗಿಂತಲೂ ಹಳ್ಳಿಗರ ಆಶೆ-ಆಶೋತ್ತರಗಳ, ಸರಸ-ವಿರಸಗಳ ವಾಸ್ತವಿಕ ಜೀವನಚಿತ್ರವನ್ನು ತೇಜೋಹಾರಿಯಾಗಿ ಪ್ರತಿಬಿಂಬಿಸಿದೆ. ಇಂಥ ಅನರ್ಘ್ಯಸಾಹಿತ್ಯದ ಸಂಗ್ರಹ ಹಾಗೂ ಪ್ರಕಟನೆಯ ಕಾರ್ಯ, ಹಲಸಂಗಿಯ ಸ್ನೇಹಿತರಿಂದ ಮೊದಲ್ಗೊಂಡು ಇತ್ತೀಚಿನ ದಿವಸಗಳಲ್ಲಿ ಗಣನೀಯವಾಗಿ ನಡೆದಿದೆ. ಆದರೆ ಅಪ್ರಕಟಿತವಾಗಿ ಉಳಿದಿರುವ ಸಾಹಿತ್ಯ ಅಪರಿಮಿತವಾಗಿದೆ. ಹೀಗೆ ಬೆಳಕುಕಾಣದಿರುವ ಹಾಗೂ ಬೆಳಕುಕಂಡ ಕೆಲವು ಜನಪದಹಾಡುಗಳಲ್ಲಿ, ಒಕ್ಕಲಿಗನ 'ಬಾಳಸಂಗಾತಿ'

ಯಾವ ಎತ್ತಿನ ಚಿತ್ರಣ ಚಿತ್ತಾಕರ್ಷಕವಾಗಿ ಮೂಡಿನಿಂತಿರುವುದನ್ನು ಎತ್ತಿ ತೋರಿಸುವುದೇ ಈ ಲೇಖನದ ಉದ್ದೇಶ.

ಹಳ್ಳಿಯ ಒಕ್ಕಲಿಗನು ಭೂಮಿಯನ್ನು ಉತ್ತುವಾಗ, ಬಿತ್ತುವಾಗ, ಗಾಡಿ ಹೂಡಿದಾಗ, ಮಟ್ಟಿ ಹೊಡೆಯುವಾಗ, ಹಂತಿ ಕಟ್ಟಿದಾಗ, ರಾಶಿ ಮಾಡುವಾಗ—ಹೀಗೆ ತನ್ನ ದಿನನಿತ್ಯದ ಸಕಲ ಕಾರ್ಯಗಳಲ್ಲೂ ಸಹಜಸ್ಫೂರ್ತಿಯಿಂದ ಜನಪದ ಹಾಡುಗಳನ್ನು ಸೃಜಿಸಿ ಆನಂದಿಸುತ್ತಾನೆ. ತನ್ನ ಬೇಸಾಯದ ಎಲ್ಲ ಕೆಲಸಗಳಲ್ಲೂ ಎತ್ತಿನ ಅವಶ್ಯಕತೆ ಅನಿವಾರ್ಯವಾಗಿರುವುದನ್ನು ಮನಗಂಡು, ಅದನ್ನು ಹಾಡುಗಳಲ್ಲಿ ಬಗೆಬಗೆಯಾಗಿ ಬಣ್ಣಿಸಿದ್ದಾನೆ. ಶಿವನ ವಾಹನವಾದ ನಂದಿಯೇ ಲೋಕದ ಹಸಿವನ್ನು ಹಿಂಗಿಸುವುದಕ್ಕಾಗಿ ಭುವಿಗೆ ಬಂದಿದೆಯೆಂದು ಆತ ಭಾವಿಸಿದ್ದಾನೆ. ರೈತನು ಆ ಎತ್ತನ್ನು ಭಕ್ತಿಯಿಂದ ಬಸವನೆಂದೇ ಕರೆಯುತ್ತಾನೆ. ‘ಬಸವನ ಕಟ್ಟಿದವರಿಗೆ ಬೊಗಸೇಲಿ ಹೊನ್ನುಂಟು’, ‘ಎತ್ತು ಇಲ್ಲದ ಮನೆಗೆ ಎದೆಯಿಲ್ಲ’—ಎನ್ನುವ ರೈತನ ಅನುಭವವಾಣಿಯಲ್ಲಿ ಎತ್ತು ಒಕ್ಕಲಿಗನ ಸೊತ್ತು, ಸತ್ವ ಎಂಬ ಅಂಶ ಅಡಕವಾಗಿರುವುದನ್ನು ಗುರುತಿಸಬಹುದು. ನಿಜಕ್ಕೂ ಎತ್ತು ಇಲ್ಲದ ರೈತನಿಗೆ ಗೊತ್ತುಗುರಿಯೇ ಇಲ್ಲದಂತಾಗುತ್ತದೆ. ಈ ಕಾರಣಕ್ಕಾಗಿಯೇ ಮಣ್ಣಿನಮಕ್ಕಳಾದ ಒಕ್ಕಲಿಗರಿಗೆ ಬೇಸಾಯದ ಬೆನ್ನೆಲುಬಾದ ಬಸವಣ್ಣನ ಮೇಲೆ ಅಪಾರ ಭಕ್ತಿ; ಅನುಪಮ ಪ್ರೀತಿ. ತಂದೆ-ತಾಯಿ, ಮಡದಿ-ಮಕ್ಕಳಿಗಿಂತಲೂ ಹೆಚ್ಚಿನ ಮಮತೆಯಿಂದ ಬಸವಣ್ಣನನ್ನು ಸಲಹುತ್ತಾರೆ. ನಿಷ್ಕಾಮ ಯೋಗಿಯಂತೆ ಪ್ರತಿಫಲಾಪೇಕ್ಷೆಯಿಲ್ಲದೆ ಹಗಲಿರುಳೂ ತಮ್ಮ ಜೊತೆಗೆ ದುಡಿಯುವ ಎತ್ತನ್ನು ಕುರಿತು ಅವರು ಹಾಡಿದ ಹಾಡುಗಳು ಅಸಂಖ್ಯಾತವಾಗಿ ದೊರೆಯುತ್ತವೆ. ದುಡಿಮೆಯ ದಣಿವನ್ನು ಹಿಂಗಿಸಿಕೊಂಡು ಹಿಗ್ಗಿನಿಂದಿರಲು ರೈತ ತನ್ನ ಸುಖ ಸಮೃದ್ಧಿಗೆ ಕಾರಣವಾದ, ತನ್ನ ಪ್ರಾಣದ ದೇವರಾದ ಬಸವನನ್ನು ಅನನ್ಯ ಭಕ್ತಿಯಿಂದ; ಅಪೂರ್ವ ವಾತ್ಸಲ್ಯದಿಂದ ಹಾಡುಗಳಲ್ಲಿ ಕೊಂಡಾಡಿದ್ದಾನೆ.

ರೈತನ ಪಶುಸಂಪತ್ತಿನಲ್ಲಿಯೇ ಹೆಚ್ಚಿನವನಾದ, ಮೆಚ್ಚಿನವನಾದ ಬಂಟ ಬಸವಣ್ಣ ಜನಿಸಿದ ಕತೆಯನ್ನು ಜನಪದಕವಿ ಅತ್ಯಂತ ಮನೋಜ್ಞವಾಗಿ ವರ್ಣಿಸುತ್ತಾನೆ :

ಆಕಳ ಈಯಾಗ ಆಕಾಶ ನಡಗ್ಯಾವ
ಭೂಮಂಡಳ ಬಾಯಿ ಬಿಡತಾವ | ಗೋಪೆವ್ವ
ಚನ್ನಬಸವನ ಹಡದಾಳ ||
ಎಂಟ್ಹೋರಿ ಹೊಡಕೊಂಡು ಕಂಟ್ಯಾಗ ಬರುವಾಗ
ಗಂಟಬಿದ್ದಾಳ ಗೋಪೆವ್ವ | ಹೊಟ್ಟೀಲಿ
ಬಂಟ ಹುಟ್ಯಾನ ಬಸವಣ್ಣ ||

ಬಸವಣ್ಣ ಹುಟ್ಟುವಾಗ ನಡೆದ ಆಕಾಶ ನಡುಗುವ, ಭೂಮಿ ಬಿರಿಯುವ ಅಲೌಕಿಕ ಘಟನೆಗಳ ಹಿನ್ನೆಲೆಯಲ್ಲಿ ಬಸವಣ್ಣನ ಶಕ್ತಿ–ಸಾಮರ್ಥ್ಯಗಳ ಅಪೂರ್ವತೆಯನ್ನು, ಆತ ಲೋಕೋದ್ಧಾರಕ್ಕಾಗಿ ಅವತರಿಸಿದ ದೈವೀಶಕ್ತಿಯೆಂಬುದನ್ನು ಮನಗಾಣಿಸುವುದರ ಜೊತೆಗೆ ಇಲ್ಲಿ ತಾಯಿಗಾದ ಪ್ರಸವ ವೇದನೆಯ ಚಿತ್ರವನ್ನು ಜನಪದ ಕವಿ ಮಾರ್ಮಿಕವಾಗಿ ಮೂಡಿಸಿದ್ದಾನೆ. ತನ್ನ ಬಾಳಿನ ಭಾಗ್ಯವಾದ ಬಂಟ ಬಸವನನ್ನು ಹೆತ್ತ ತಾಯಿ ಗೋಮಾತೆಯನ್ನು, ಎಷ್ಟು ಬಣ್ಣಿಸಿದರೂ ಅವನಿಗೆ ತೃಪ್ತಿಯಿಲ್ಲ.

ಬಸವಣ್ಣನಮೈ ಗುಜರಾಥ ಬಾಳಿಹಣ್ಣ
ಮೈ ನಲನಲದ ಬರತಾನ | ನಮ ಬಸವ
ಎಂಥ ಶ್ರೀಗೌರಿ ಹಡದಾಳ ||

ಬಸವಣ್ಣನ ಮೈಯ ನಯವನ್ನು, ನಡಿಗೆಯನ್ನು ನೋಡಿ ಒಕ್ಕಲಿಗನ ಅಂತರಂಗದಲ್ಲಿ ಕಕ್ಕುಲತೆ ಉಕ್ಕುತ್ತದೆ. ಇಂಥ ಅಪೂರ್ವ ಸ್ವತ್ತನ್ನು ಹೆತ್ತುಕೊಟ್ಟ ಗೋದೇವ್ವನ ಉಪಕಾರವನ್ನು ಆತನು ಗೌರವದಿಂದ ಸ್ಮರಿಸುತ್ತಾನೆ. ಎತ್ತಿನ ಬಾಲ್ಯದ ವರ್ಣನೆಯನ್ನೂ ಯಥಾರ್ಥವಾಗಿಯೇ ಮಾಡುತ್ತಾನೆ :

ಹಲ್ಗಿ ಹಲ್ಪುಡಿ ಚಂದ ಹಣೆಗೆ ಕುಂಕುಮ ಚಂದ
ಮಡದಿಪ್ರ ಚಂದ ಮನಿಯಾಗ | ಬಸವಣ್ಣ
ಬೆಳ್ಗಿದ್ರ ಚಂದ ಹೊಲದಾಗ ||

ಬಸವಣ್ಣನಿಂದಲೇ ತನ್ನ ಬಾಳು ಬಂಗಾರವಾಗುವುದೆಂದು ಬಗೆದ ರೈತ, ಅತ್ಯಂತ ಪ್ರೀತಿ–ವಿಶ್ವಾಸದಿಂದಲೇ ಅದರ ಯೋಗಕ್ಷೇಮ ನೋಡಿಕೊಳ್ಳುತ್ತಾನೆ. ಮೈಯೆಲ್ಲ ಕಣ್ಣಾಗಿ ಮಗನಂತೆ ಅದನ್ನು ಸಲಹುತ್ತಾನೆ. ಒಂದುವೇಳೆ ಅದು ಮೇವು ತಿನ್ನದೇ ನೀರು ಕುಡಿಯದೇ ನಿಂತರೆ ರೈತನಿಗೆ ಕಸಿವಿಸಿಯಾಗುತ್ತದೆ. ಅದಕ್ಕೆ ಕಾರಣ ಕಂಡುಹಿಡಿಯಲು ಯೋಚಿಸುತ್ತಾನೆ :

ಹುಲಗೆಜ್ಜಿ ಕಟ್ಟಿದ್ದಾಕ ಹುಲ್ಲಾಗ ಬಿಟ್ಟಿದ್ದಾಕ
ಯಾಕ ನಂಬಸವ ಮೇವಲ್ಲ | ಹೊಲದಾಗ
ಹಿರಿಹೊಳಿ ನೀರ ಕುಡಿವಲ್ಲ ||

ಹಸಿರುಹುಲ್ಲಿನಲ್ಲಿ ಎತ್ತು ಮೇಯಲು ಬಿಟ್ಟಿದ್ದಾನೆ. ಹುಲ್ಲಿನಲ್ಲಿ ಹುದುಗಿದ ಹುಳು–ಹುಪ್ಪಡಿ ಕಚ್ಚಬಾರದೆಂದು ಎಚ್ಚರಿಕೆ ವಹಿಸಿ; ಎತ್ತಿಗೆ ಗೆಜ್ಜೆ ಕಟ್ಟಿದ್ದಾನೆ. ಇಷ್ಟಾದರೂ ಮೇವು ತಿನ್ನದ ಎತ್ತು ನೋಡಿ ಅದರ ಹೊಟ್ಟೆ ನೋಯುತ್ತಿರಬಹುದೆ? ಅಥವಾ ಮಾಟವಾದ ಮೈಕಟ್ಟನ್ನು ನೋಡಿ ಯಾರಾದರೂ ಕಾಕದೃಷ್ಟಿ

ಬೇರಿರಬಹುದೆ? ಎಂದು ಬಗೆಬಗೆಯಾಗಿ ಚಿಂತಿಸಿ, ದೃಷ್ಟಿದೋಷ ತೆಗೆದು ಸಮಾಧಾನಪಡುತ್ತಾನೆ :

ಬೆಳ್ಳನ್ನ ಬಿಳಿಹೋರಿ ಎಲ್ಹೋಗಿದ್ದಿ ಮಗನ
ಎಲ್ಲಾರ ಕಣ್ಣ ನಿನ್ಮ್ಯಾಲಿ | ಬಸವಣ್ಣ
ನೆಲ್ಲಕ್ಕಿ ನೆದರ ತಗದೇನ ||

ಮಗನನ್ನು ಕಳೆದುಕೊಂಡ ತಾಯಿ ಮಾತೃವಾತ್ಸಲ್ಯದಿಂದ ಕಂಗಾಲಾಗಿ ಹುಡುಕುವಂತೆ, ಎತ್ತು ಕಳೆದುಕೊಂಡ ರೈತರೂ ಹಾದಿ-ಬೀದಿಯಲ್ಲಿ ಕಂಡಕಂಡವರನ್ನೆಲ್ಲ ವಿಚಾರಿಸುತ್ತ, ಹೌಹಾರಿ ಹುಡುಕುತ್ತ ಎತ್ತಿನ ಗುರುತು ಹೇಳಿ; ಕೇಳುತ್ತಾನೆ:

ಎತ್ತ ಕಾಯುವ ಜಾಣ ಎತ್ತ ನೋಡಿದಿಯೇನ
ಮುತ್ತಿನ ಹಗ್ಗ ಮುಗದಾಣಿ | ನಮ್ಮೆತ್ತ
ತಪ್ಪಿಸಿಕೊಂಡಾವ ಹೊಲದಾಗ ||

ಒಕ್ಕಲಿಗನು ಬೇಸಾಯದ ಕೆಲಸಗಳಲ್ಲಿ ಮೈಮರೆತಾಗ, ದುಡಿದು ದಣಿದು ಬಂದ ಬಸವಣ್ಣ ಹಸಿವೆಯ ಬಾಧೆಯನ್ನು ತಾಳಲಾರದೆ, ಹಸಿರುಬೆಳೆ ಕಂಡು ಹಾತೊರೆಯುವುದು ತೀರ ಸಹಜ. ಹಸಿದ ಎತ್ತು ಕಟ್ಟಿದ ಹಗ್ಗವನ್ನೇ ಹರಿದು, ಒಟ್ಟಿದ ಬಣವಿಗೆ ಓಡುತ್ತದೆ. ಒಣಕಣಿಕೆಯಿಂದ ಹಸಿವು ಹಿಂಗದಿರಲು, ಹೊಟ್ಟಿನಕುಟ್ಟರಿಗೆ ಧಾವಿಸುತ್ತದೆ. ಅಲ್ಲಿಯೂ ತೃಪ್ತಿಯಾಗದಿದ್ದಾಗ, ಬೆಳೆದು ನಿಂತ ಹಸಿರುಬೆಳೆಯನ್ನೇ ತಿಂದುತೇಗುತ್ತದೆ :

ಕಾಲನ ಕೆದರೂತ ಬಾಲನ ಬೀಸೂತ
ಬಂದಾನ ಬಸವ ಬಣಮೀಗಿ | ತಾ ಹಸ್ತು
ಹೊಟ್ಟೀನ ಕುಟರಿ ಹತ್ತ್ಯಾನ |
ಹಸ್ತಾನ ಬಸವಣ್ಣ ಹಾತೊರ್ದ ಬಸವಣ್ಣ
ಜೋಡಿಸಿಡಿ ಹಗ್ಗ ಹರದಾನ | ಬಸವಣ್ಣ
ಹೊಡಿದಂಟ ತಿಂದು ಕೆಡಿವ್ಯಾನ ||

ಎಷ್ಟು ಸಹಜ ಸುಂದರವಾದ ಚಿತ್ರವಿದು ! ಎತ್ತಿನ ಚಟುವಟಿಕೆಗಳನ್ನು ನಿತ್ಯವೂ ನೋಡುತ್ತಿದ್ದ ಕವಿಹೃದಯಿ ಒಕ್ಕಲಿಗನು ಅದನ್ನು ಕಾವ್ಯಮಯವಾಗಿ ನಿರೂಪಿಸಿದ ರೀತಿ ತೀರ ಕುತೂಹಲಕಾರಿಯಾಗಿದೆ. ಹಸಿರು ಕಂಡು ಕಾಲು ಕೆದರಿ, ಬಾಲ ಬೀಸಿ, ಕಟ್ಟಿದ ಹಗ್ಗವನ್ನೇ ಹರಿದು, ಹಸಿವೆಯಿಂದ ಓಡುವ ಎತ್ತಿನಚಿತ್ರಣ ಸಹೃದಯನ ಚಿತ್ತಫಲಕದ ಮೇಲೆ ಮೂಡಿನಿಲ್ಲುತ್ತದೆ. ಶ್ರದ್ಧಾವಂತನಾದ ಒಕ್ಕಲಿಗನು ತಾನು ಉಪವಾಸವಿದ್ದರೂ ಚಿಂತಿಸುವುದಿಲ್ಲ. ತನ್ನ ಎತ್ತುಗಳು ಉಪವಾಸವಿದ್ದರೆ ಮಾತ್ರ ಸಹಿಸಲಾರ. ತನ್ನ ಬಾಳಿನ ಏಳ್ಗೆಗಾಗಿ ಅವಿಶ್ರಾಂತ

ದುಡಿಯುವ ಎತ್ತುಗಳಿಗೆ ಹಿಂಡಿ, ಹೊಟ್ಟು, ಹಸಿಮೇವು ಹಾಕಿ ಮೇಯಿಸು ತ್ತಾನೆ. ತಿಂದುತಿಂದು ಮೈ ಕೈ ತುಂಬಿಕೊಂಡು ದಾಟವಾದ ತನ್ನ ಎತ್ತು ನೋಡಿ, ಅವುಗಳ ಚಲ್ಲಾಟವನ್ನು ಕಂಡು ಆನಂದಪಡುತ್ತಾನೆ. ಅನ್ಯರಿಗೂ ಅಭಿಮಾನದಿಂದ ತೋರಿಸುತ್ತಾನೆ :

ಮುತ್ತೈದಿ ಬಾಲ್ಯಾರ ಮೂಗುತಿ ಜ್ವಾಕೆವ್ವ
ಚಕ್ಕಂದಕೆದ್ದೆತ್ತ ಜಿಗಿದಾವು | ತಂಗ್ದೇರ
ನತ್ತಾನ ಮುತ್ತು ಉದ್ರ್ಯಾವು ||
ಹಾದಿಯುಹೊಲ ನೋಡ ಗೋದಿಯುತೆನಿ ನೋಡ
ಹಾದುಹೋಗವನ ನಗಿ ನೋಡ | ಎಲೆ ಹುಡುಗ
ಹೋರಿ ಮೇಸೀನಿ ಇಣಿ ನೋಡ ||

ತನ್ನ ಹಸನಾದ ಹೊಲ, ಹುಲುಸಾದ ಬೆಳೆ, ಹುರುಪಿನ ಹೋರಿಯ ಬಗೆಗೆ ರೈತ ನಿಗೆ ಅಪಾರ ಹೆಮ್ಮೆ ಇರುವಂತೆ, ಅನ್ಯರ ಎತ್ತುಗಳನ್ನು ಅಷ್ಟೇ ಗೌರವಾದರ ಗಳಿಂದ ಕಾಣುವ ವಿಶಾಲ ಹೃದಯವಿದೆ :

ಹುಂಡೇಕಾರನ ಎತ್ತು ಹಿಂಡಿಯ ಮೇದಾವು
ಗುಂಡದ ನೀರ ಕುಡಿದಾವು | ಆ ಎತ್ತು
ಕಂಡಲ್ಲಿ ಡರಿಯ ಒಗದಾವು ||

ಮಳೆರಾಜನ ಅನುಗ್ರಹಕ್ಕಾಗಿ ರೈತ, ಹಗಲಿರುಳೂ ಹಂಬಲಿಸುತ್ತಾನೆ. ಉತ್ತರಕರ್ನಾಟಕದಲ್ಲಿ ಮಳೆಯನ್ನೇ ಅವಲಂಬಿಸಿರುವ ರೈತರ ಸಂಖ್ಯೆ ಹೆಚ್ಚು. ಸಮಯಕ್ಕೆ ಸರಿಯಾಗಿ ಮಳೆ ಬಾರದೇ ಹೋದರೆ, ಬೆಳೆ ಹಾಳಾಗುವುದರ ಜೊತೆಗೆ ತನ್ನನ್ನೇ ಆಶ್ರಯಿಸಿದ ದನಕರುಗಳು ತಿನ್ನಲು ಮೇವಿಲ್ಲದೆ ತೊಂದರೆಗೀಡಾಗುವು ದನ್ನು ಕಂಡು ಕಂಗಾಲಾಗುತ್ತಾನೆ:

ಗುಡ್ಡದಂಥ ಭೂಮಿತಾಯಿ ತಡದಾನೊ ಮಳೆರಾಜ
ಬಡದಾಡತಾವ ದನಕರ | ಒಕ್ಕಲಿಗ
ಮಳೆಯ ಬೇಡ್ಯಾನೊ ಮರ್ತ್ಯಕ ||
ಬಸವನ ಪತ್ತೂರಿ ಬಿಸಲೀಗಿ ಬಾಡ್ಯಾವ
ದುಃಶಮ್ಮನಗೇಡಿ ಮಳೆರಾಜ | ತಡದರ
ಬಸವ ನಿನ್ಹ್ಯಾಂಗ ಸಲುಹಲಿ ||

ಕುಡಿಯಲು ನೀರಿಲ್ಲದೆ, ತಿನ್ನಲು ಮೇವಿಲ್ಲದೆ ದನಕರುಗಳು ವಿಲಿವಿಲಿ ಒದ್ದಾಡುವು ದನ್ನು ಕಂಡು ರೈತ, ಮಳೆರಾಜನ ಮೊರೆಹೊಗುತ್ತಾನೆ. ಮಳೆ ಇಲ್ಲದೆ ಬೆಳೆ ಬಾರದೆ ಬಸವನನ್ನು ಹೇಗೆ ಸಲುಹಲಿ ? ಎಂದು ಚಿಂತಾಕ್ರಾಂತನಾಗು

ತ್ತಾನೆ. ಬೆಳೆಯಿಂದಲೇ ತನ್ನ ಬಾಳು ಹಚ್ಚಹಸುರಾಗುವುದೆಂದು ಭಾವಿಸಿ, ಆತ್ಮೀಯತೆಯಿಂದ ಮಳೆರಾಜನನ್ನು ಆಹ್ವಾನಿಸುತ್ತಾನೆ :

ಬಾರಪ್ಪ ಮಳೆರಾಜ ಬಾರದೆಲ್ಲಿ ಹೋಗಿದ್ದಿ
ಭಾರಕ ಬಂದಾವ ಹೊಡಿತೆನಿ | ಮನಿಯಾಗ
ಹೂಡಾಕ ಬಂದಾವ ಎರಡ್ಹೋರಿ ||

ತನ್ನ ಅಂತರಂಗದ ಕರೆಗೆ ಓಗೊಟ್ಟು ಬಂದನೋ ಎಂಬಂತೆ ಧೋಧೋ ಸುರಿಯುವ ಮಳೆಯನ್ನು ಕಂಡಾಗ ರೈತನಿಗಾಗುವ ಆನಂದ, ಆಶ್ಚರ್ಯ ಅಪರಿಮಿತ:

ಹತ್ತಿಬಿತ್ತಾಕ್ಹೋಗಿ ಹತ್ಯಾನ ಮಳೆರಾಜ
ಜತ್ತೀಗಿತೊಯ್ದು ಮಿಣಿತೊಯ್ದು | ಹೋದಾಗ
ಹನ್ನೆರಡೆತ್ತಿನ ಹಣಿತೊಯ್ದು ||

ಹದಗಾಲದಲ್ಲಿ ಹೀಗೆ ಮಳೆಬಂದು, ಬಸವಣ್ಣನ ದಯೆಯೊಂದಿದ್ದರೆ ಸಾಕು, ಸಾಲಿಗೆ ಸಾವಿರ ಬೆಳೆವೇನೆನ್ನುವ ಆತ್ಮವಿಶ್ವಾಸ ಮಣ್ಣಿನಮಗನಲ್ಲಿ ಮೂಡುತ್ತದೆ:

ಮಳೆಬಂದ ಮರುದಿಸ್ಸ ಹೊಲಕ್ಹೋಗಿ ಬರಬೇಕ
ಸಾಲಸಾಲೆಲ್ಲ ತಿಳಿನೀರ | ಬಸವಣ್ಣ
ಸಾಲೀಗಿ ಸಾವಿರ ಬೆಳದೇನ ||

ಸುಗ್ಗಿಕಾಲ ರೈತನಿಗೆ ಹಿಗ್ಗಿನ ಕಾಲ. ಅನುದಿನವೂ ಭೂಮಿಸೇವೆ ಮಾಡಿದ ರೈತ ತನ್ನ ಬೆವರಿನ ಬೆಲೆಯನ್ನು, ಫಲವನ್ನು ಪಡೆಯುವ ಸಂಧಿಕಾಲ. ಆಗ ಸಮೃದ್ಧ ಕಾಳು ತುಂಬಿದ ತೆನೆಗಳ ಭಾರದಿಂದ ಬಳಕುವ ಪೈರು ಕಂಡು, ಪರಮಾನಂದಭರಿತನಾಗುತ್ತಾನೆ. ಹುಲುಸಾಗಿ ಬೆಳೆದ ಬೆಳೆಯನ್ನು ಕೊಯ್ದು, ತೆನೆಮುರಿದು, ಶುಭಮುಹೂರ್ತದಲ್ಲಿ ಕಣಮಾಡಿ ಹಂತಿಕಟ್ಟುತ್ತಾನೆ. ಹಂತಿಗಾಗಿ ತನ್ನ ಎತ್ತುಗಳೊಂದಿಗೆ ನೆರೆಹೊರೆಯುವರ ಎತ್ತುಗಳನ್ನೂ ತಂದು ಹೂಡುತ್ತಾನೆ. ಹಂತಿಯು ಕಣದಲ್ಲಿ ಕಾಲಿಡುವ, ಕಾಳು ಬಿಚ್ಚುವಂತೆ ತೆನೆಗಳನ್ನು ತುಳಿವ ಬಸವಣ್ಣನ ಉತ್ಸಾಹವನ್ನು, ಕುಣಿತವನ್ನು ಕಂಡು ಹರ್ಷಪುಳಕಿತನಾಗುತ್ತಾನೆ. ಆಗಿನ ಆತನ ಸಂಭ್ರಮ ಹಲವಾರು ಜನಪದಹಾಡುಗಳಲ್ಲಿ ಹೊಮ್ಮಿದೆ:

ಥೈ ಥೈ ಕುಣೀಯುತ ತಾಳಮಜಲದಾಗ
ಬಂದಾನ ಬಸವ ಕಣದಾಗ | ಎನ್ನಂದ
ಮುಂಗಾಲ್ಗೆ ಮುತ್ತ ಬಿಗಿಸೇನ ||

ಹೊಸಮಂಗ ಬಸವಗ ಕುತನಿಜೂಲವ ಹಾಕಿ
ಬೀಸಿ ಬಾಲದ ಮನಮನದು | ಬಸವಣ್ಣ
ಕುಣಿಕುಣಿದು ಹಂತಿ ತುಳಿದಾನ ||

ಒಂಬತ್ತು ತಿಂಗಳವರೆಗೆ ಮುದ್ದಾಸೆಕಟ್ಟಿ ತುಳಿಸಿದರೂ ನುರಿಯದ ಹಂತಿ ಬಸವಣ್ಣನ ಪಾದಸ್ಪರ್ಶದಿಂದ ಪುಡಿಪುಡಿಯಾಗುವುವಂತೆ! ಅನೇಗಿಂತಲೂ ಹೆಚ್ಚಿನ ಶಕ್ತಿ-ದೈವೀ ಶಕ್ತಿ-ತನ್ನ ಎತ್ತಿನಲ್ಲಿರುವುದೆಂದು ಭಾವಿಸಿದ ರೈತಭಕ್ತಿ, ಭಾವ-ಸಿದ್ಧಿ ಮಾರ್ಮಿಕವಾಗಿದೆ:

ಹಂತಿಯು ಹೊಡಹೊಡ್ದು ತಿಂಗಳ ಮೇಲಾತು
ಆನಿ ಕಟ್ಟಿದರ ನುರಿವಲ್ದು |ಬಸವನ
ಪಾದ ಮುಟ್ಟಿದರ ಪುಡಿಪುಡಿ ||

ಹಂತಿಗಾಗಿ ಅನ್ಯ ರೈತರ ಎತ್ತುಗಳನ್ನು ತಂದು ದುಡಿಸಿಕೊಂಡ ರೈತ, ಬೇರೆ-ಯುವರಿಗೂ ತನ್ನ ಎತ್ತುಗಳನ್ನು ಕೊಟ್ಟು ಸಹಕರಿಸುತ್ತಾನೆ. ಬಿಡುವಿಲ್ಲದೆ ಬೇರೆ ಬೇರೆಯುವರ ಹೊಲದಲ್ಲಿ ಹಂತಿಸುತ್ತಿ ಬಂದ ತನ್ನ ಎತ್ತು ಆಯಾಸದಿಂದ ಮಲಗಿರುವುದನ್ನು ಮಾನವೀಯ ದೃಷ್ಟಿಯಿಂದ ಗಮನಿಸುತ್ತಾನೆ:

ಆಸೆತ್ತು ಈಸೆತ್ತು ಬೀಸಕೋಡಿನ ಎತ್ತು
ಏಸೊಂದು ಹಂತಿ ತಿರ್ಗ್ಯಾವ | ನಮ್ಮೆತ್ತು
ಬ್ಯಾಸತ್ತು ಬಂದು ಮಲ್ಗ್ಯಾವ ||

ಎತ್ತು ಮಲಗಿದಾಗ ಅವರ ಸುಂದರ ನಿಲುವನ್ನು, ನೋಟವನ್ನು ಕಂಡ ರೈತನಿಗೆ ಸಂತಸದೊಂದಿಗೆ ಸ್ಫೂರ್ತಿಯೂ ಸಹಜವಾಗಿಯೇ ಉಕ್ಕುತ್ತದೆ. ಆಗ ಆ ಎತ್ತಿನ ಸೈಜ ಚಿತ್ರವನ್ನು ಹಾಡುಗಳಲ್ಲಿ ಸೆರೆಹಿಡಿದ ಅವನ ಪ್ರತಿಭೆ ಮೆಚ್ಚುವಂತಹದು:

ಕೊಂಬಕೊಳಗ ನೋಡ ಇಂಬ ಇಣಿನೋಡ
ಅಂಬೆಗಾಲೂರಿ ಮಲಗ್ಯಾನ | ಬಸವಣ್ಣ
ಮಂಗಳಾರೂತಿ ಬೆಳಗೇನ ||

ಗ್ವಾದಲಿಗೆ ಕಟ್ಟಿದ ಎತ್ತುಗಳು ಒಂದೇ ಮುಗ್ಗುಲಾಗಿ ಮಲಗಿದ ದೃಶ್ಯ, ರೈತನ ಕಣ್ಣಿಗೆ ಬಿದ್ದರೆ ಅದು ಶುಭಸೂಚನೆಯೆಂದರಿತು ಕೊಂಬು, ಹಣೆ ತೊಳೆದು, ವಿಭೂತಿ-ಕುಂಕುಮ ಹಚ್ಚಿ, ಭಕ್ತಿಭಾವದಿಂದ ಪೂಜಿಸುವ ಸಂಪ್ರದಾಯ ಅನೂ-ಚಾನವಾಗಿ ನಡೆದು ಬಂದಿದೆ. ರೈತನ ಹೆಗಲಿಗೆ ಹೆಗಲು ಕೊಟ್ಟು, ಸದಾ ಬೇಸರಿಲ್ಲದೆ ಭೂಮಿಯಲ್ಲಿ ದುಡಿಯುವ ಬಸವಣ್ಣನಿಗೆ ಒಂದು ದಿನವಾದರೂ ಬಿಡುವು ಬೇಡವೆ? ಇದನ್ನರಿತೇ ರೈತ ಸೋಮವಾರವನ್ನು ಬಸವಣ್ಣನಿಗೆ ಮೀಸಲಾಗಿಟ್ಟಿದ್ದಾನೆ. ವಾರಿಗೆಯ ಸ್ನೇಹಿತರನ್ನು ಆ ಶುಭದಿನದ ಆಚರಣೆಗಾಗಿ ಆಹ್ವಾನಿ-ಸುತ್ತಾನೆ:

ವಾರಿಗಿ ಗೆಳೆಯರ ವಾರಮಾಡುನ ಬಾರ
ವಾರದಾಗ ವಾರ ಸೋಮವಾರ | ಮಾಡಿದ್ರ
ಸಿಂಗಾರಾಗ್ಯಾನ ಬಸವಣ್ಣ ||
ಮೈಯಲ್ಲ ಹಸನಾಗಿ ಮನಸೆಲ್ಲ ಹಗುರಾಗಿ
ಸೋಮವಾರ ಬಸವ ಮದಿಮಗ | ಆದರ
ಬಂದ ಬ್ಯಾಸರವು ಬಯಲಾಗಿ ||

ರೈತ ಸೋಮವಾರ ಬಸವನ ಹೆಗಲ ಮೇಲೆ ನೊಗ ಹೇರಲಾರ. ಅಂದು ಹಸನಾಗಿ ಅದರ ಮೈತೊಳೆದು, ಹಿಡಿ ಹಿಡಿ ಮೇವು ಹಾಕಿ ಮೇಯಿಸುತ್ತಾನೆ. ಮೈ ತಿಕ್ಕಿ ಅದರ ಮನಸ್ಸಿನ ಬೇಸರವನ್ನು ಹೋಗಲಾಡಿಸುತ್ತಾನೆ. ತಾನೂ ಅಂದು ಉಲ್ಲಾಸದಿಂದಲೇ ಕಾಲಕಳೆಯುತ್ತಾನೆ. ಸೋಮವಾರವೂ ಯಾರಾದರೂ ಬಸವಣ್ಣನನ್ನು ದುಡಿಸಿಕೊಳ್ಳುತ್ತಿದುದನ್ನು ಕಂಡರೆ, ಸಿಡಿಮಿಡಿಗೊಂಡು ಅಂಥವರಿಗೆ ಬುದ್ಧಿ ಹೇಳಲೂ ಹಿಂಜರಿಯುವುದಿಲ್ಲ.

ಹಸಿದಂಟ ಕಿತ್ಯಾಡ ಬಿಸಿದಂಟ ಬಿಡ್ಯಾಡ
ಬಸವನ ಹೂಡಿ ಬಡಿಬ್ಯಾಡ | ಸೋಮವಾರ
ಮದಿಮಗನಾಗಿ ತಿರುಗಲಿ ||

ರೈತನು ತನ್ನ ಬಾಳಿನ ಭಾಗ್ಯವಿಧಾತನಾದ ಬಸವಣ್ಣನ ಮೇಲಿಟ್ಟ ಭಕ್ತಿಯ ಚಿತ್ರ, ಕೆಲವು ಜಾನಪದ ಹಾಡುಗಳಲ್ಲಿ ಅನ್ಯಾದೃಶವಾಗಿ ಮೂಡಿನಿಂತಿವೆ. ಬೇಸಾಯದ ಎಲ್ಲ ಕೆಲಸಗಳಲ್ಲೂ ಪಾಲುಗೊಂಡು ಸಹಕರಿಸುವ ಎತ್ತು ತನ್ನ ಪಾಲಿನ ದೇವರೆಂದೇ ಭಾವಿಸಿ, ರೈತ ಅದನ್ನು ಭಕ್ತಿಯಿಂದ ಪೂಜಿಸುತ್ತಾನೆ. ಮೂಕ ಪ್ರಾಣಿಯಾದ ಎತ್ತಿನೊಂದಿಗೆ ಸರಸ ಸಂಭಾಷಣೆ ನಡೆಸಿ, ಅದರ ಬಗೆಗೆ ತನ್ನ ಅಂತರಂಗದಲ್ಲಿ ಮೂಡುವ ಭಕ್ತಿಯ ಅನಂತ ಭಾವನೆಗಳನ್ನು ಸಂತೋಷದಿಂದ ವ್ಯಕ್ತಪಡಿಸುತ್ತಾನೆ:

ಬಸವನ ಪಾದವ ಹಸನಾಗಿ ತೊಳದೇನ
ಬಾಗಿ ಬಲಗಾಲ ಹಿಡಿದೇನ | ಬಸವಣ್ಣ
ಭಾಗ್ಯಕೊಡು ನಮಗ ಅನುಗಾಲ ||
ನಿದ್ದಿಗಣ್ಣಿನೊಳಗ ಸದ್ಗುರುವಿನ ಪಾದ
ಎದ್ದುನೋಡಿದರ ನಿರ್ಬಯಲ | ಬಸವಣ್ಣ
ಉದ್ಧಾರಾಗೀನಿ ನಿನ್ನಿಂದ ||

ತನಗೆ ಸಿರಿ-ಸಮೃದ್ಧಿಗಳನ್ನು ಅನುಗ್ರಹಿಸುವ ಆರಾಧ್ಯಮೂರ್ತಿಯೇ ಬಸವ ನೆಂದು ಭಾವಿಸಿ, ಅನುಗಾಲ ಎತ್ತಿನ ಕರುಣೆಗಾಗಿ ಹಂಬಲಿಸುವ ರೈತನ ಭಾವನೆ ಗಳ ಹಿನ್ನೆಲೆಯಲ್ಲಿರುವ ಭಕ್ತಿಯ ಎತ್ತರ, ಬಿತ್ತರಗಳನ್ನು ಗುರುತಿಸಬೇಕು. ಬಸವಣ್ಣನೇ ರೈತನಿಗೆ ಗುರುವಾಗಿದ್ದಾನೆ; ವರವಾಗಿದ್ದಾನೆ. ನಿದ್ದೆಯಲ್ಲಿಯೂ ಈ ಸದ್ಗುರುವಿನ ದಿವ್ಯ ಮೂರ್ತಿಯನ್ನು ಕಾಣುವ ರೈತನ ಕಾಣ್ಕೆ ಉದಾತ್ತ ವಾಗಿದೆ; ಉಜ್ವಲವಾಗಿದೆ. ತನ್ನ ಉದ್ಧಾರಕ್ಕಾಗಿಯೇ ಬಸವಣ್ಣ ಅವತರಿಸಿದ್ದಾ ನೆಂದು ರೈತ ದೃಢವಾಗಿ ನಂಬಿದ್ದಾನೆ.

> ಯಾರನ್ನ ನೆನೆದರ ದ್ವಾರತ ನಮಗಿಲ್ಲ
> ಬಾಯಿಲ್ಲದವನ ಬಸವನ | ನೆನೆದರ
> ಸಾರ್ಥಕ ಹೊಂದೇವ ಶಿವನಲ್ಲಿ ||

ಉಳಿದೆಲ್ಲ ದೇವತೆಗಳಿಗಿಂತಲೂ, ತಾನು ಎತ್ತಿನ ಮೇಲಿಟ್ಟ ಭಕ್ತಿಯ ಅನುಸಂಧಾನ ದಿಂದಲೇ ಮುಕ್ತಿಯನ್ನು ಹೊಂದುವೆನೆಂದು ಆತ್ಮವಿಶ್ವಾಸದಿಂದ ಹೇಳುವಲ್ಲಿ ರೈತನ ಭಕ್ತಿ ಮುಗಿಲು ಮುಟ್ಟಿದೆ!

ಸದಾಕಾಲ ಸೃಷ್ಟಿಸೌಂದರ್ಯದ ಸಾನಿಧ್ಯದಲ್ಲಿಯೇ ಎತ್ತಿನ ಭಕ್ತನಾಗಿ, ಬಂಧುವಾಗಿ 'ಕಾಯಕವೇ ಕೈಲಾಸ'ವೆಂದರಿತು ಕಾಲಕಳೆಯುವ ಕವಿ ಹೃದಯದ ರೈತರು ಅನುಪಮವಾದ, ಅಪಾರವಾದ ಜನಪದ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ತಮ್ಮ ಬೇಸಾಯದ ಬೆನ್ನೆಲುಬಾದ ಎತ್ತನ್ನು ಬಗೆ ಬಗೆಯಾಗಿ ಬಣ್ಣಿಸಿ, ಸ್ತುತಿಸಿ ಆನಂದಿಸಿದ್ದಾರೆ. ನೇಗಿಲಯೋಗಿಗಳು ಸೃಜಿಸಿದ ಈ ಜನಪದ ಸಾಹಿತ್ಯದಲ್ಲಿ ಹೃದಯವನ್ನು ತಟ್ಟಿ, ತಣಿಸುವ ಶಕ್ತಿಯಿದೆ. ಆಡುಮಾತಿನ ಮೋಡಿಯೊಂದಿಗೆ ಜೀವನದ ವಾಸ್ತವತೆ ಹಾಗೂ ಸಾಹಿತ್ಯದ ಸೊಗಸು ಇಲ್ಲಿ ಸಮರಸಗೊಂಡಿವೆ.

ಪಾಠ

ಎನ್. ಪ್ರಕಾಶ

ಇಲ್ಲಿಗೆ ಬಂದಲಾಗಾಯ್ತು
ಒಂದೇ ಸಮನೆ
ಎಲ್ಲೆಂದರಲ್ಲಿ
ಹರಿವ ಹಾವುಗಳ
ಕಾಯುವ ನಾಯಿಯನ್ನೆ
ಕುಕ್ಕಿ ತಿನ್ನುವ
ಹದ್ದುಗಳ
ಕೋಟೆ ಬಾಗಿಲು
ಮೀರಿಸುವ ಕನ್ನ
ಕೊರೆವ ಹೆಗ್ಗಣಗಳ
ಹಡಗವನ್ನೇ ನುಂಗುವ
ತಿಮಿಂಗಿಲಗಳ—
ಕಥೆ
ಕೇಳುತ್ತಿದ್ದೇನೆ;
ಅವುಗಳ
ನೋಡುತ್ತಿದ್ದೇನೆ
ಈಗ ನನಗೂ
ನೊಣ ತಿನ್ನುವ ಮನಸು.

ಅಲ್ಲಮಪ್ರಭುವಿನ ಜೀವನವನ್ನು ಅರ್ಥಯಿಸಿಕೊಳ್ಳುವ ಒಂದು ಪ್ರಯತ್ನ

ಎಂ. ಚಿದಾನಂದಮೂರ್ತಿ

ಜನ್ಮತಃ ಶೂದ್ರವರ್ಗಕ್ಕೆ ಸೇರಿದ್ದು, ಶ್ರೇಷ್ಠ ವಚನಕಾರನಾಗಿ, ಜಾತಿ ವರ್ಗಗಳ ವಿರುದ್ಧ ನಡೆದ ಸಾಮಾಜಿಕ ಆಂದೋಲನವೊಂದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ವ್ಯಕ್ತಿಯಾಗಿ, ಸಿದ್ಧಪುರುಷನಾಗಿ, ವೀರಶೈವ ಧಾರ್ಮಿಕ ನಾಯಕನಾಗಿ ಅಲ್ಲಮಪ್ರಭು, ಕರ್ನಾಟಕದ ಇತಿಹಾಸ ಕಂಡಿರುವ ಅತ್ಯಂತ ಪ್ರಮುಖ ವ್ಯಕ್ತಿಗಳಲ್ಲೊಬ್ಬನಾಗಿದ್ದಾನೆ. ಅವನ ವಚನಗಳು ಆಧುನಿಕರೂ ಅಧ್ಯಯನ ಮಾಡಲು ಯೋಗ್ಯವಾಗಿವೆ. ಆ ಮಹಾಪುರುಷನ ಜೀವನವನ್ನು ಸರಿಯಾದ ರೀತಿಯಲ್ಲಿ ತಿಳಿಯುವ ಮತ್ತು ವ್ಯಾಖ್ಯಾನಿಸುವ ಅಗತ್ಯವಿದೆ. ಆ ದಿಸೆಯಲ್ಲಿ ಇದೊಂದು ಪ್ರಯತ್ನ, ಬಹುಶಃ ಮೊದಲ ಪ್ರಯತ್ನ.*

ಅಲ್ಲಮನ ಜೀವನದ ಅವಧಿಯನ್ನು ಮೂರು ಭಾಗಗಳಾಗಿ ವಿಂಗಡಿಸಿ ಗ್ರಹಿಸಬಹುದು. ಅವುಗಳನ್ನು ಕೇವಲ ಅನುಕೂಲದ ದೃಷ್ಟಿಯಿಂದ ಪೂರ್ವ, ಮಧ್ಯ, ಉತ್ತರರಂಗಗಳೆಂದು ಹೆಸರಿಸುತ್ತೇನೆ. ಪೂರ್ವರಂಗ—ಅವನ ಹುಟ್ಟಿನಿಂದ ಹಿಡಿದು ಗುಹೆಯಲ್ಲಿ ಲಿಂಗ ದೊರಕುವ ವರೆಗೆ, ಮಧ್ಯರಂಗ–ಲಿಂಗವನ್ನು ಹಿಡಿದು ಹೊರಟ ಅವನು ಸಾಧಕನಾಗಿ ಅಲೆದಾಡಿ ಜ್ಞಾನಿಯಾಗುವ ವರೆಗೆ, ಉತ್ತರರಂಗ–ಜ್ಞಾನಿಯಾದ ಅವನು ದೇಶಾದ್ಯಂತ ಸಂಚರಿಸಿ ಅನೇಕರಿಗೆ ಬೋಧನೆ ಮಾಡಿ, ವಚನಗಳನ್ನು ಬರೆದು, 'ಶೂನ್ಯಸಿಂಹಾಸನ'ವನ್ನು ಏರಿ ಐಕ್ಯನಾಗುವ ವರೆಗೆ. ಎಲ್ಲ

---

* ಇದು 'ಸಂಶೋಧನ ಪ್ರಬಂಧ'ವೆಂದು ನಾನು ಭಾವಿಸಿಲ್ಲವಾದ್ದರಿಂದ ಒಂದೊಂದಕ್ಕೂ ಆಧಾರಗಳನ್ನು ಕೊಟ್ಟು ಚರ್ಚಿಸುವ ಗೋಜಿಗೆ ಹೋಗಿಲ್ಲ. ಅಲ್ಲಮನ ಬಗ್ಗೆ ನಾನು ಮಾಡಿರುವ ಸಂಶೋಧನೆಗಳ, ಆಲೋಚನೆಯ ಸಾರವನ್ನು ಇಲ್ಲಿ ಕೊಟ್ಟಿದ್ದೇನೆ. ಆಧಾರಸಮೇತವಾದ ಚರ್ಚೆಯನ್ನು ನೋಡಬಯಸುವವರು ನನ್ನ ಮೂರು ಲೇಖನಗಳನ್ನು ನೋಡಬಹುದು—(1) ಗೋಗೇಶ್ವರ (ಗೊಗ್ಗೇಶ್ವರ)—ಅಲ್ಲಮನ ಅಂಕಿತ (2) ಅಲ್ಲಮನ ಸಾಧಕಜೀವನ—ಒಂದು ಪುನರ್ರಚನೆ; (3) 'ನಾಗವಾಸ ಎಂದರೇನು? (ಅಲ್ಲಮನ ಮನೆತನದ ಬಗ್ಗೆ ಒಂದು ಸ್ಪಷ್ಟೀಕರಣ)' ಮೊದಲ ಎರಡು ಲೇಖನಗಳು ಸಂಶೋಧನತರಂಗ II ರಲ್ಲಿ ಪ್ರಕಟವಾಗಿವೆ. ಕೊನೆಯದು ಪ್ರಬುದ್ಧಕರ್ನಾಟಕ (55.1) ದಲ್ಲಿ ಪ್ರಕಟವಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಕೆಲವು ಗಟ್ಟಿ ಸಂಗತಿಗಳಿವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಮಾಡಿರುವ ವ್ಯಾಖ್ಯಾನವೂ ಇದೆ.

ರಂತೆ ಲೌಕಿಕನಾಗಿದ್ದ ಅಲ್ಲಮ, ಕ್ರಮೇಣ ಬೆಳೆಯುತ್ತ ಬಂದು 'ಪ್ರಭುದೇವ'ನಾದ ವಿಕಾಸಕ್ರಮದ ಮೂರು ಘಟ್ಟಗಳೇ ಆದಿ, ಮಧ್ಯ, ಉತ್ತರರಂಗಗಳು. ಸಾಮಾನ್ಯ ಕುಲದಲ್ಲಿ ಹುಟ್ಟಿ, ತನಗೆ ಏಟುಕದ ಹೆಣ್ಣನ್ನು ಪ್ರೀತಿಸಿ, ಸಮಾಜದ ಬಹಿಷ್ಕಾರಕ್ಕೆ ಒಳಗಾಗಿ, ಕಹಿಅನುಭವಗಳನ್ನುಂಡು, ತಾನು ಒಲಿದ ಹೆಣ್ಣು ಮಡಿದಾಗ ತೀವ್ರವಾದ ನಿರಾಸೆಗೆ ಒಳಗಾಗಿದ್ದು ಮೊದಲ ಘಟ್ಟ. ಈ ನಿರಾಸೆಯಲ್ಲಿ ಅವನಿಗೆ ಸಾಧಕಜೀವನದತ್ತ ತೋರ್ಬೆರಳಾಗಿ ಪರಿಣಮಿಸಿದ ಲಿಂಗವು ದೊರಕಿದ್ದು ಒಂದು ಮಹತ್ವದ ಘಟನೆ. ಲಿಂಗವನ್ನು ಹಿಡಿದು ಹೊರಟ ಅವನು ಸಾಧಕನಾಗಿ ಎಲ್ಲೆಲ್ಲೋ ಅಲೆದಾಡಬೇಕಾಯಿತು. ಇದು ಮಾನಸಿಕ ತುಮುಲದ ಕಾಲ–ಇದು ಎರಡನೆಯ ಘಟ್ಟ. ಈ ಸಾಧನೆಯ ತುದಿಯಲ್ಲಿ ಅವನಿಗೆ ಜ್ಞಾನದ ಅನುಭವ ದೊರಕಿತು. ಸಂತನಾದ ಅವನು ಅಜ್ಞಾನ, ದಾರಿದ್ರ್ಯ, ನೋವು ತುಂಬಿದ್ದ ಈ ಪ್ರಪಂಚದಲ್ಲಿ ಬೆಳಕಿನ ಕಂಬದಂತೆ ಓಡಾಡಿ ಅನೇಕರನ್ನು ಉದ್ಧರಿಸಿದ್ದು ಮೂರನೆಯ ಘಟ್ಟ.

ಪೂರ್ವರಂಗ–ಕಾಮಲತೆ :

ಅಲ್ಲಮ ಹುಟ್ಟಿದ ತೇದಿಯಾಗಲಿ, ಐಕ್ಯನಾದ ತೇದಿಯಾಗಲಿ ನಮಗೆ ತಿಳಿದಿಲ್ಲ. ಅವನು ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಹುಟ್ಟಿ ಅದೇ ಶತಮಾನದ ಉತ್ತರಾರ್ಧದಲ್ಲಿ ಐಕ್ಯನಾದನೆಂಬ ಬಗ್ಗೆ ಅನುಮಾನವಿಲ್ಲ. ಅವನ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವೆ. ಬಳ್ಳಿಗಾವೆ ಈಗ ಸುಂದರ ಹಾಳುದೇವಾಲಯಗಳಿಂದ ತುಂಬಿರುವ ಹಳ್ಳಿ. ಅದು ಆ ಕಾಲಕ್ಕೆ ಕರ್ನಾಟಕದ ಸುಪ್ರಸಿದ್ಧ, ಸಂಪದ್ಭರಿತ ಸಾಂಸ್ಕೃತಿಕಕೇಂದ್ರವೂ ವ್ಯಾಪಾರ ಕೇಂದ್ರವೂ ಆಗಿದ್ದಿತು. ಅಲ್ಲಿಯ ದೇವಾಲಯಗಳು ಶಿಲ್ಪಕಲೆಯ ತವರುಮನೆಗಳಾಗಿದ್ದುವು. ಜೈನ, ವೈಷ್ಣವ, ಬೌದ್ಧ ಶೈವಗಳೆಂಬ 'ಚತುಸ್ಸಮಯ'ದವರು ಅಲ್ಲಿಯ ಅನೇಕ ಕೇಂದ್ರಗಳಲ್ಲಿ ವಿದ್ಯೆ, ಕಲೆ, ಮತಪ್ರಸಾರ, ಸಾಮಾಜಿಕ ಸೇವಾ ಕಾರ್ಯ ಮುಂತಾದ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಬಸವಣ್ಣ ಉದ್ಯೋಗದಲ್ಲಿದ್ದ ಕಲ್ಯಾಣದ ಚಾಲುಕ್ಯ ದೊರೆಗಳ, ಕಲಚುರಿ ದೊರೆಗಳ ದಕ್ಷಿಣದ ಪ್ರಬಲ ರಾಜಕೀಯ ಕೇಂದ್ರವೂ ಆಗಿದ್ದಿತು, ಬಳ್ಳಿಗಾವೆ. ಅಂದಿನ ಕರ್ನಾಟಕದ ಎಚ್ಚತ್ತ ಪ್ರದೇಶವಾಗಿದ್ದ ಬಳ್ಳಿಗಾವೆ ಅಲ್ಲಮನ ಜನ್ಮಸ್ಥಳ ಎಂಬುದು ಗಮನಾರ್ಹ ಸಂಗತಿ. ಅವನ ತಂದೆ ಆ ಪಟ್ಟಣದಲ್ಲಿದ್ದ ಗೊಗ್ಗೇಶ್ವರ ಎಂಬ ದೇವಾಲಯದ 'ನಾಗವಾಸ'ಕ್ಕೆ ಮುಖ್ಯಸ್ಥನಾಗಿದ್ದ. ಹಿಂದೆ ದೇವಸ್ಥಾನಗಳಲ್ಲಿ ದೇವರ ಮುಂದೆ ಸಂಗೀತ, ನರ್ತನಾದಿಗಳ ಕೈಂಕರ್ಯವನ್ನು ಮಾಡುವುದಕ್ಕೆ ದೇವದಾಸಿಯರನ್ನು ನೇಮಿಸುತ್ತಿದ್ದರು. 'ನಾಗವಾಸ' ಎಂಬುದು ಅಂತಹ ದೇವದಾಸಿಯರ ಸಿಬ್ಬಂದಿ ವರ್ಗ

ವನ್ನು ಸೂಚಿಸುತ್ತದೆ. ಕಲಾವಿದೆಯರಾಗಿದ್ದ ಈ ದೇವದಾಸಿಯರ ಮೇಲ್ವಿಚಾರಣೆಗಾಗಿ ಸಾಮಾನ್ಯವಾಗಿ ಕಲಾವಿದರಾಗಿರುತ್ತಿದ್ದ ನಟ್ಟುವ ಜಾತಿಯ ಅಧಿಕಾರಿಯನ್ನು ನೇಮಿಸುತ್ತಿದ್ದರು. ಅಲ್ಲಮನ ತಂದೆ ಇಂತಹ ಒಬ್ಬ ಅಧಿಕಾರಿ.

ಅಲ್ಲಮನ ತಾಯ್ತಂದೆಯರ ಹೆಸರು ನಮಗೆ ತಿಳಿಯದು. ಅವರು ನಟ್ಟುವರು ಎಂದು ಮಾತ್ರ ಹೇಳಬಹುದು. ನಟ್ಟುವರು ಸಾಮಾಜಿಕವಾಗಿ ಕೆಳವರ್ಗಕ್ಕೆ ಸೇರಿದ ಶೂದ್ರವರ್ಗದ ಜನ (ಅನುಬಂಧ I ನೋಡಿ). ಆ ನಟ್ಟುವ ತಾಯ್ತಂದೆಯರು ತಮ್ಮ ಮಗನಿಗೆ 'ಅಲ್ಲಮ' ಎಂದು ನಾಮಕರಣ ಮಾಡಿದ್ದರಲ್ಲಿ, ಕೆಲವರು ಭಾವಿಸಿರುವಂತೆ, ಯಾವುದೇ ವಿಶೇಷವೂ ಇಲ್ಲ. ಅದು ಆ ಕಾಲದಲ್ಲಿ ಪ್ರಚುರವಾಗಿದ್ದ, ಎಲ್ಲ ವರ್ಗದ ಜನರೂ ಇಟ್ಟುಕೊಳ್ಳುತ್ತಿದ್ದ ಸಾಮಾನ್ಯ ಹೆಸರು. 'ಅಲ್ಲ–' ಎಂದರೆ ಏನೋ ತಿಳಿಯದು. '–ಮ' ಎಂಬುದು 'ಅಮ್ಮನ್' (=ಅಪ್ಪ) ಎಂಬುದರ ಸಂಕ್ಷಿಪ್ತರೂಪ. ಅಲ್ಲಮ ಎಂಬುದು ಅಲ್ಲಪ್ಪ ಎಂಬ ಹೆಸರಿಗೆ ಸಮಾನವಾದುದು. ಇಷ್ಟು ಹೇಳಲು ಕಾರಣವೇನೆಂದರೆ, ಅಲ್ಲಮ ಒಬ್ಬ ಆಧ್ಯಾತ್ಮಿಕ ಪುರುಷನಾಗಿರುವುದರಿಂದ, ಆ ಹೆಸರಿನಲ್ಲಿಯೂ ಏನೋ ಒಂದು ವಿಶೇಷ ಇದೆ ಎಂದು ಅನೇಕರು ಭ್ರಮಿಸಿದ್ದಾರೆ. ಅಲ್ಲಮ ಎನ್ನುವ ವ್ಯಕ್ತಿಗಳ ಹೆಸರುಗಳು ಅಲ್ಲಮನಿಗಿಂತ ಹಿಂದಿನ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅಲ್ಲಮನಿಗೆ ಆ ಹೆಸರನ್ನು ಅವನ ತಾಯ್ತಂದೆಯರು ಏಕೆ ಇಟ್ಟರು ಎನ್ನುವ ಪ್ರಶ್ನೆಗೆ ಉತ್ತರ ಸುಲಭ—ಅದು ಆ ಕಾಲದಲ್ಲಿ ಪ್ರಚಲಿತವಾಗಿದ್ದ ಹೆಸರಾಗಿದ್ದಿತು.

ಅಲ್ಲಮ ಕಲಾವಿದರ ವಂಶದಲ್ಲಿ ಹುಟ್ಟಿ ಬೆಳೆದವನಾದ್ದರಿಂದ ಅವನು ಮೃದಂಗವಾದನದಲ್ಲಿ ಹೆಚ್ಚಿನ ನೈಪುಣ್ಯವನ್ನು ಸಹಜವಾಗಿಯೇ ಪಡೆದ. ಮೃದಂಗದಲ್ಲಿ ಅವನಿಗೆ ಆಸಕ್ತಿಮೂಡಲು ಅವನ ತಂದೆಯೂ ಕಾರಣ. ದೇವದಾಸಿಯರಿಗೆ ಮುಖ್ಯಸ್ಥನಾಗಿದ್ದ ಅವನ ತಂದೆ, ಅವರ ನರ್ತನ, ಗಾಯನಾದಿಗಳ ವೇಳೆಯಲ್ಲಿ ಪಕ್ಕವಾದ್ಯದವನಾಗಿ ಕುಳಿತು ಮೃದಂಗವನ್ನು ನುಡಿಸುತ್ತಿದ್ದಿರಬೇಕು.

ಅಲ್ಲಮ ತನ್ನ ತಂದೆಯ ವೃತ್ತಿಯನ್ನೇ ಮುಂದುವರಿಸಿದ. ದೇವಾಲಯದಲ್ಲಿ ಮೃದಂಗವನ್ನು ನುಡಿಸುವುದು ಅವನ ಮನೆತನದ ವೃತ್ತಿ. ಯುವಕನೂ, ಸ್ಫುರದ್ರೂಪಿಯೂ, ಸಂಗೀತ ಕಲಾವಿದನೂ ಆಗಿದ್ದ ಅವನು, ಒಂದು ದಿನ ಗೊಗ್ಗೇಶ್ವರ ದೇವಾಲಯದಲ್ಲಿ ಮೃದಂಗವಾದನ ಮಾಡುತ್ತಿರುವಾಗ ಅಲ್ಲಿಗೆ ಬಂದ ಆ ಊರಿನ ಧನವತ್ತನ ಮಗಳು ಕಾಮಲತೆಗೂ ಅವನಿಗೂ ಪ್ರಥಮ ದರ್ಶನದಲ್ಲೇ ಪ್ರಣಯದ ಅಂಕುರವಾಯ್ತು. ಅವರಿಬ್ಬರಿಗೂ ಮದುವೆ ಮಾಡಿಕೊಂಡು ಎಲ್ಲರಂತೆ ಗೃಹಸ್ಥರಾಗಿ ಬಾಳುವ ಆಸೆ; ಅವರ ವಿವಾಹಕ್ಕೆ ಸಮಾಜ

ಅವಕಾಶಕೊಡಲಿಲ್ಲ. ಇದಕ್ಕೆ ಕಾರಣ ಹೀಗಿರುವಂತೆ ಕಾಣುತ್ತದೆ: ಹಿಂದೂ ಸಮಾಜ ಅನುಲೋಮ ವಿವಾಹಗಳಿಗೆ (ಮೇಲುಜಾತಿಯ ಗಂಡು, ಕೆಳಜಾತಿಯ ಹೆಣ್ಣುಗಳ ಮಧ್ಯೆ ವಿವಾಹ) ಒಪ್ಪಿಗೆ ಕೊಟ್ಟೀತು! ಆದರೆ ಪ್ರತಿಲೋಮ ವಿವಾಹಗಳ ಬಗ್ಗೆ (ಕೆಳಜಾತಿಯ ಗಂಡು, ಮೇಲುಜಾತಿಯ ಹೆಣ್ಣುಗಳ ಮಧ್ಯೆ ವಿವಾಹ) ಯಾವಾಗಲೂ ಪ್ರತಿರೋಧವಿದ್ದೇ ಇದೆ. (ವಿವಾಹದ ನಿಯಮಗಳನ್ನು ಹಾಕಿದವರು ಮೇಲುವರ್ಗದ ಗಂಡಸರೇ ಆದ್ದರಿಂದ ಅವರು ಇತರ ಜಾತಿಯ ಹೆಣ್ಣನ್ನು ತಾವು ಅನುಭೋಗಿಸಲು ಅವಕಾಶ ಮಾಡಿಕೊಂಡರು. ಕೆಳಜಾತಿಯವರು ತಮ್ಮ ಹೆಣ್ಣುಗಳಿಗೆ ಕೈಹಾಕದಂತೆ ಎಚ್ಚರಿಕೆ ವಹಿಸಿದರು. ಹೋಗಲಿ: ಆ ಮಾತು ಬೇರೆ). ಕಾಮಲತೆ ವೈಶ್ಯನ ಮಗಳು; ಅಲ್ಲಮ ಶೂದ್ರ. ಅವರದು ವಾಸ್ತವವಾಗಿ ಪ್ರತಿಲೋಮ ವಿವಾಹ. ಹೀಗಿರುವಾಗ ಅವರ ವಿವಾಹಕ್ಕೆ ಸಮಾಜ, ಅದರಲ್ಲೂ ಮೇಲುವರ್ಗದ ಸಮಾಜಗಳು ಒಪ್ಪಿಗೆಕೊಡುವ ಸಂಭವವೇ ಇಲ್ಲ. ಶೂದ್ರರೂ ಮೇಲುವರ್ಗದ ಜನರ ಭೀತಿಯಿಂದಾಗಿ ಆ ವಿವಾಹಕ್ಕೆ ತಾವೂ ಒಪ್ಪಿಗೆ ಕೊಟ್ಟಿರಲಾರರು. ದೇವದಾಸಿಯರ ವಾತಾವರಣದ ಪರಿಚಯದಿಂದಾಗಿ ಅಲ್ಲಮನಿಗೆ ವಿವಾಹದ ಕಟ್ಟುಪಾಡುಗಳ ಬಗ್ಗೆ ಅಂತಹ ನಿಷ್ಠುರ (Rigid) ಅಭಿಪ್ರಾಯಗಳೂ ಇದ್ದಿರಲಾರವು. ಇಂತಹ ಸಂದರ್ಭದಲ್ಲಿ ಅವನು ಇತರರ ವಿರೋಧವನ್ನು ಅಲಕ್ಷಿಸಿ ಕಾಮಲತೆಯೊಡನೆ ಪ್ರಣಯವಿವಾಹ ಮಾಡಿಕೊಂಡು ಸಂಸಾರ ಹೂಡಿದ (ಆದರೆ ವಿಧಿವತ್ತಾದ ವಿವಾಹ ನಡೆಯಲಿಲ್ಲ. ಈ ಬಗ್ಗೆ ಅನುಬಂಧ ೩ ನೋಡಿ).

ಜಾತಿಯ ನಿಯಮಗಳನ್ನು ಗಾಳಿಗೆ ತೂರಿ ಪ್ರೇಮವೊಂದನ್ನೇ ನಂಬಿ ಮದುವೆಯಾದ ಇವರದು, ನಮಗೆ ತಿಳಿದಂತೆ ಕರ್ನಾಟಕದ ಪ್ರಪ್ರಥಮ ಗಮನಾರ್ಹ ಪ್ರೇಮವಿವಾಹ (ಇದಕ್ಕಿಂತ ಹಿಂದೆ ಪ್ರೇಮವಿವಾಹಗಳು ನಡೆದಿರಲಿಲ್ಲವೆಂದು ಅರ್ಥವಲ್ಲ). ಈ ದಿನವೂ ಇಂತಹ ವಿವಾಹಗಳಿಗೆ ಜನ ತಡೆಯೊಡ್ಡುತ್ತಾರೆ. ಎಂಟುನೂರು ವರ್ಷಗಳ ಹಿಂದೆ ವಿವಾಹದ ನಿಯಮೋಲ್ಲಂಘನೆಗಾಗಿ ಸಮಾಜ ವಿಧಿಸುತ್ತಿದ್ದ ಜಾತಿಬಹಿಷ್ಕಾರಕ್ಕೆ ಜನ ಹೆದರುತ್ತಿದ್ದರು. ಅಲ್ಲಮ ಅಂತಹ ಬಹಿಷ್ಕಾರಕ್ಕೂ ಹೆದರಲಿಲ್ಲ. ಅವನಿಗೆ ಇಡೀ ಪ್ರಪಂಚ ಕಾಮಲತೆ; ಕಾಮಲತೆಗೆ ಇಡೀ ಪ್ರಪಂಚದಲ್ಲಿ ಏಕೈಕ ಅವಲಂಬನ, ಅಲ್ಲಮ. ಅವನಿಗೆ ಅವಳು, ಅವಳಿಗೆ ಅವನು ಧೈರ್ಯ. ಹೀಗಿರುತ್ತಿರುವಾಗ ಆ ಸುಖದ(?) ಮಧ್ಯೆ ಕಾಮಲತೆಗೆ 'ಮಹಾಜ್ವರ' ಬಂದು ಮಡಿದು ಹೋದಳು. (ಸಮಾಜದ ಪ್ರತಿ-ರೋಧವನ್ನು ಎದುರಿಸಿ ಬಹುಕಾಲ ಬಾಳುವ ಶಕ್ತಿ ಆ ಹೆಣ್ಣಿಗೆ ಇದ್ದಿರಲಾರದು). ಆಗ ಅಲ್ಲಮನಿಗೆ ಇಡೀ ಪ್ರಪಂಚ ಶೂನ್ಯವಾಯಿತು. ಅವನಿಗೆ ಏತಕ್ಕಾಗಿ, ಯಾರಿಗಾಗಿ ತಾನು ಬಾಳಬೇಕು ಎಂಬುದು ದೊಡ್ಡ ಪ್ರಶ್ನೆಯಾಯಿತು. ಆ ನಿರಾಸೆಯಲ್ಲಿ ಅವನು ಊರುಬಿಟ್ಟು ಹೊರಗೆ ಹೋಗಿ ತೋಟವೊಂದರಲ್ಲಿ ಮಂಕು ಕವಿ

ವಂತೆ ಕುಳಿತು ನೆಲವನ್ನು ಕೆರೆಯುತ್ತಿರುವಾಗ ಯಾವುದೋ ಕಾಲದಲ್ಲಿ ಭೂಗತ ವಾಗಿದ್ದ ದೇವಾಲಯದ ಶಿಖರದ ತುದಿ ಕಾಣಿಸಿತು. ದೇವಾಲಯವನ್ನು ಬಿಡಿಸಿ ನೋಡಿದಾಗ ಬಾಗಿಲು ಮುಚ್ಚಿದ್ದು ಕಾಣಿಸಿತು. ಒಳಗೆ ಹೋಗಲು ಯಾರಿಗೂ ಧೈರ್ಯವಿಲ್ಲ. ಆದರೆ ಅಲ್ಲಮನ ಸ್ಥಿತಿ ಬೇರೆ. 'ಕಾಮಲತೆ ಇಲ್ಲ, ಇನ್ನು ಬದುಕಿ ಏನು ಪ್ರಯೋಜನ' ಎಂದು ಒಳಗೆ ನುಗ್ಗಿದಾಗ, ಕಂಡದ್ದೇನು?—ಎಂದೋ ಜೀವ ಸಮಾಧಿ ಪಡೆದ ಯೋಗಿಯೊಬ್ಬನ ಎಲುಬಿನ ಪಂಜರ. ದೇಹ ಕುಳಿತಂತೆ ಹಾಗೇ ಇದೆ—ಕೈಯಲ್ಲಿ ಶಿವಲಿಂಗವಿದೆ. ಆ ಎಲುಬಿನ ಮೂರ್ತಿ ತನಗೆ ಕಾದು ಕುಳಿತಂತಿತ್ತು. ಅಲ್ಲಮ ಅದನ್ನು ಮುಟ್ಟಿದೊಡನೆ ಆ ಮೂರ್ತಿ ಪುಡಿ ಪುಡಿಯಾಯ್ತು—ಕೈಗೆ ಶಿವಲಿಂಗ ಬಂದಿತು. ಅವನ ಜೀವನದಲ್ಲಿ ಅದು ಒಂದು ಅತ್ಯಂತ ಮಹತ್ವದ ಘಟನೆಯಾಯ್ತು. ಬಾಳಿನಲ್ಲಿ ಏನು ಮಾಡಬೇಕು, ಏನಾಗಬೇಕು ಎಂಬುದನ್ನು ಆ ಮೂರ್ತಿ ತೋರಿಸಿತು. ಸಾಧಕ ಜೀವನದ ಕಡೆಗೆ ಕ್ರಮವಾಗಿ ಪರಿಣಮಿಸಿತು ಇಡೀ ಘಟನೆ. ಶಿವಲಿಂಗವನ್ನು ಹಿಡಿದು ಆತ್ಮ ವಿಶ್ವಾಸದೊಡನೆ ಹೊರಬಂದ ಅಲ್ಲಮನನ್ನು ನೋಡಿದ ಜನ 'ಕಾಮಲತೆಗೆ ಇವನು ಒಲಿದದ್ದು ಸುಳ್ಳು' ಎನ್ನುವಂತಾಯ್ತು. ಆ ಲಿಂಗ ಎತ್ತ ಕರೆದೊಯ್ದಿತೋ ಅತ್ತ ಅವನು ನಡೆದ.

ಭೂಗತವಾಗಿದ್ದ ದೇವಾಲಯ ಅಲ್ಲಮನಿಗೆ ಕಾಣಿಸಿದ್ದು ಐತಿಹಾಸಿಕವಾಗಿ ಅಸಂಗತವಾದುದು ಎಂದೇನೂ ಭಾವಿಸಬೇಕಾಗಿಲ್ಲ. ಅಂತಹ ದೇವಾಲಯಗಳಿರು ವುದು, ಅವು ಗೋಚರವಾಗುತ್ತಿರುವುದು ಇಂದಿಗೂ ನಡೆದೇ ಇದೆ. (ಅನುಬಂಧ ೨ ನೋಡಿ). ಅನೇಕ ಸಾಧಕರು ದೇಹದಲ್ಲಿ ಉಸಿರಿರುವಂತೆಯೇ ಸಮಾಧಿ ಯನ್ನು ಪ್ರವೇಶಿಸುವ ಪದ್ಧತಿ ಹಿಂದೆ ಇತ್ತು. ಅಲ್ಲಮನಿಗಿಂತ ಮೊದಲು ಇಷ್ಟಲಿಂಗವನ್ನು ಪೂಜಿಸುವ ಪದ್ಧತಿಯುಳ್ಳ ಶೈವಧರ್ಮವು ಇತ್ತೆಂದು ಹೇಳಲು ಆಧಾರಗಳಿರುವುದರಿಂದ, ಅಲ್ಲಮನ ಜೀವನದಲ್ಲಿ ಅಂತಹ ಘಟನೆ ನಡೆದಿರುವುದು ಕಪೋಲಕಲ್ಪಿತವೆಂದು ತಳ್ಳಿಹಾಕುವುದು ಅನಗತ್ಯ. ಭೂಗತ ದೇವಾಲಯದ ದರ್ಶನ ಒಂದು ಅದ್ಭುತ ಪ್ರತಿಮೆಯೂ ಆಗಬಲ್ಲುದು. ಅಲ್ಲಮನ ಮನಸ್ಸಿನಲ್ಲಿ ತುಂಬಿ ಕೊಂಡಿದ್ದ ಆಳವಾದ ನೋವು, ಕತ್ತಲೆ ಎರಡೂ ಅಗಾಧ. ಕಾಮಲತೆಯನ್ನು ಕಳೆದುಕೊಂಡು ಅವನು ತತ್ತರಿಸಿದ್ದಾನೆ. ಇಂತಹ ಸಂದರ್ಭದಲ್ಲಿ ದೇವಾಲಯ, ಅನಿಮಿಷಯೋಗಿ, ಇಷ್ಟಲಿಂಗ ಇವು ಗತಕಾಲದ ಮಣ್ಣಿನ ಗರ್ಭದಿಂದ ಈಜಿಕೊಂಡು ಅವನ ಬಳಿಗೆ ಬಂದಿವೆ. ಆ ಕತ್ತಲಲ್ಲಿ ಅವನಿಗೆ ಜೀವನದ ಮಾರ್ಗ ವನ್ನು ತೋರಿಸಿವೆ. ಅಲ್ಲಮನಿಂದ ತಾವೂ ಬೆಳಕನ್ನು ಕಂಡು ಅವನಿಗೂ ಬೆಳ ಕನ್ನು ತೋರಿಸಿವೆ. ಅವನ ಮನಸ್ಸಿನ ಕತ್ತಲೆ, ಅಲ್ಲಿ ಕಾಣಿಸಿದ ಗುರಿ, ಮೂಡಿದ ಸಂಕಲ್ಪಗಳಿಗೆ ಬಹಳ ಒಳ್ಳೆಯ ಪ್ರತಿಮೆ ಭೂಗರ್ಭದ ಕತ್ತಲು, ಅಲ್ಲಿದ್ದ

ದೇವಾಲಯ ನಿಧಾನವಾಗಿ ಗೋಚರವಾದದ್ದು, ಬಾಗಿಲ ತೆರೆದು ಇಷ್ಟಲಿಂಗ ಕೈಗೆ ಬಂದದ್ದು—ಇದೆಲ್ಲ ಅರ್ಥಪೂರ್ಣವಾಗಿದೆ. ಶಿವಸಾಕ್ಷಾತ್ಕಾರವನ್ನು ಪಡೆಯಲು ಅನಿಮಿಷಯೋಗಿ ಎಂದೋ ದೇಹವನ್ನೇ ತ್ಯಜಿಸಿದ್ದ. ಹೀಗಿರುವಾಗ ತಾನು ಕ್ಷುಲ್ಲಕ ಕಾರಣಕ್ಕಾಗಿ ಎಲ್ಲವನ್ನೂ ಕಳೆದುಕೊಂಡವನಂತೆ ಗೋಳಾಡುವುದು ಎಷ್ಟು ಅರ್ಥಹೀನ ಎಂದು ಅವನಿಗೆ ಅನ್ನಿಸಿತು. ಅವನಿಗೆ ಹೊಸ ಜೀವನಕ್ಕೆ ಪ್ರಚೋದನೆ ನೀಡಿದ್ದು ವಾಸ್ತವವಾಗಿ ಇಷ್ಟಲಿಂಗವಲ್ಲ, ಇಷ್ಟಲಿಂಗಕ್ಕಾಗಿ ದೇಹ ತ್ಯಾಗ ಮಾಡಿದ ಅನಿಮಿಷಯೋಗಿ. ಇಷ್ಟಲಿಂಗ ಕೈಗೆ ಬಂದದ್ದು ಅವನ ಮನಸ್ಸಿನಲ್ಲಿ ಮೂಡಿದ ಹೊಸ ಸಂಕಲ್ಪಕ್ಕೆ ಸಂಕೇತವೂ ಆಗುತ್ತದೆ.

ಮಧ್ಯರಂಗ–ಇಷ್ಟಲಿಂಗ :

ಇಷ್ಟಲಿಂಗ ಅವನಿಗೆ ದಾರಿಯನ್ನು ತೋರಿಸಿತು. ಅವನನ್ನು ಜ್ಞಾನಿಯನ್ನಾಗಿ ಮಾಡಲಿಲ್ಲ. ಜ್ಞಾನವೆನ್ನುವುದು ವ್ಯಕ್ತಿಯ ಸಾಧನೆಯ ಫಲ. ಅಂತಹ ಸಾಧನೆಯತ್ತ ಅಲ್ಲಮನ ಮನಸ್ಸು ಹರಿಯಲು ಇಷ್ಟಲಿಂಗ ಒಂದು ನಿಮಿತ್ತವಾಯಿತು, ಮತ್ತು ಮಾಧ್ಯಮವಾಯಿತು.

ಆಧ್ಯಾತ್ಮಿಕ ಸಾಧನೆಯನ್ನು ಉಗ್ರ ಹಠದಿಂದ ಕೈಗೊಳ್ಳಲು ಸಾಕಷ್ಟು ಕಾರಣವಿದೆ. ಒಂದರಲ್ಲಿ ತನಗಾದ ನಷ್ಟವನ್ನು ಇನ್ನೊಂದರಲ್ಲಿ ಬಡ್ಡಿ ಸಮೇತ ತುಂಬಿಸಿಕೊಳ್ಳಲು ಪ್ರಯತ್ನಿಸುವುದು ಮನುಷ್ಯನ ಸ್ವಭಾವದಲ್ಲೇ ಇದೆ. ಕಾಮಲತೆಯ ಬಗ್ಗೆ ಅವನಿಗಿದ್ದ ಆಳವಾದ ಪ್ರೇಮ, ಅವಳ ಸಾವಿನಿಂದ ಅವನಿಗಾದ ಆಘಾತ ಅವನನ್ನು ನಿರಾಸೆಯ ಪ್ರಪಾತಕ್ಕೆ ತಳ್ಳಿದ್ದುವು. ಅಲ್ಲಿಂದ ಇನ್ನೊಂದು ಮಗ್ಗುಲಿಗೆ—ಸಾಧನೆಯ ಕ್ಷೇತ್ರಕ್ಕೆ ಹೊರಳಿದಾಗ ಆ ಕ್ಷೇತ್ರದಲ್ಲಿ ಅಷ್ಟೇ ದೂರ ಮುಂದುವರೆದ. ಸಾಧನೆ ಅವನಿಗೆ ಒಂದು ರೀತಿಯಲ್ಲಿ ಸುಲಭವೂ ಆಯಿತು—ಕಾಮಲತೆಯ ಮೇಲಿನ ವ್ಯಾಮೋಹವನ್ನು ಭಗವಂತನ ಭಕ್ತಿಯಾಗಿ ಪರಿವರ್ತಿಸಲು ಪ್ರಯತ್ನಿಸಿದ. (ಹರಿಹರ ಕವಿ ಮಲುಹಣನ ರಗಳೆಯಲ್ಲಿ ಇಂತಹುದೇ ಚಿತ್ರವನ್ನು ಕೊಟ್ಟಿದ್ದಾನೆ). ಪ್ರಿಯೆಯ ವಿರಹ 'ಗೋಗೇಶ್ವರನ ವಿರಹ' (ಇದು ಅಲ್ಲಮನ ವಚನಗಳಲ್ಲಿ ಬರುವ ಮಾತು) ವಾಯಿತು. ಮರ್ತ್ಯ ಪ್ರೇಮ ಅಮರ್ತ್ಯ ಪ್ರೇಮವಾಯಿತು. ತಾನು ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು ಎಂಬುವ ಛಲ ಅವನಲ್ಲಿ ಮೂಡಿದ್ದು ತೀರ ಸ್ವಾಭಾವಿಕವಾಗಿದೆ.

ಸಾಧನೆ ಸುಲಭವಾಯಿತು ಎಂಬ ಮಾತು ಸೀಮಿತ ಅರ್ಥದಲ್ಲಿ ನಿಜ. ಆದರೆ ಸಾಧನೆ ವಾಸ್ತವವಾಗಿ ಸುಲಭವಲ್ಲ. ಆಧ್ಯಾತ್ಮಿಕ ಪ್ರವೃತ್ತಿ ಜಾಗೃತವಾಗಲು ಒಮ್ಮೊಮ್ಮೆ ಅಗತ್ಯವಾಗಿ ಬೇಕಾಗುವ ಮಾನಸಿಕ ಆಘಾತ, ತತ್ಪರಿಣಾಮ

ವಾದ ವೈರಾಗ್ಯಗಳು ಅಲ್ಲಮನಲ್ಲಿ ಉಂಟಾಗಿವೆ. ಲೋಕದ ಬಗ್ಗೆ ಇದ್ದ ಸಂಪರ್ಕ ಕಡಿದಿದೆ; ಅನುರಕ್ತಿ ಅಳಿದಿದೆ. ಆದರೆ ಲೋಕಾನುರಕ್ತಿ ಅಷ್ಟು ಸುಲಭವಾಗಿ ಅಳಿಯತಕ್ಕದ್ದೂ ಅಲ್ಲ ತಾನೇ! ಅಲ್ಲಮನೇನೋ ಭಗವಂತನ ಹುಚ್ಚನ್ನು ಹಚ್ಚಿಕೊಂಡು ಬೆಟ್ಟ, ಗುಡ್ಡ, ಕಾಡು, ಮೇಡು ಎಲ್ಲೆಂದರಲ್ಲಿ ಅಲೆದ. ಅನೇಕ ಸಾಧಕರನ್ನು ಭೇಟಿಮಾಡಿ, ತಂತ್ರ ಶಾಸ್ತ್ರ ಯೋಗಗಳಲ್ಲಿ ನಿಷ್ಣಾತನಾದ. ತಾಂತ್ರಿಕ ಸಾಧನೆಗಳನ್ನೂ ಕೈಕೊಂಡ. ಧ್ಯಾನಕ್ಕೆ ಕುಳಿತು ಮನಸ್ಸನ್ನು ಏಕಾಗ್ರತೆಗೆ ಪ್ರಯತ್ನಿಸಿದಾಗ ಕಾಮಲತೆ ಜ್ಞಾಪಕಕ್ಕೆ ಬರುತ್ತಿದ್ದಳು. ಅವಳೊಡನೆ ಕಳೆದ ಆ ದಿನಗಳು ಮತ್ತೆ ಮತ್ತೆ ಅವನನ್ನು ಕಾಡಿದವು. ಒಬ್ಬ ಸಾಧಕ ಅನುಭವಿಸ ಬಹುದಾದ ಯಾತನೆ, ಅಂತರಂಗದ ಹೋರಾಟ, ನಿರಾಸೆ, ಹತಾಶೆ, ಸೋಲು ಗೆಲುವು ಇವೆಲ್ಲವನ್ನೂ ಅವನು ಅನುಭವಿಸಿದ. ಈ ಅನುಭವಗಳನ್ನು ಅವನು ತನ್ನ ವಚನಗಳಲ್ಲಿ ಸೂಕ್ಷ್ಮವಾಗಿ, ಒಂದೆರಡು ಕಡೆ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಅಲ್ಲಮ, ಈಚಿನ ಚಾಮರಸಾದಿ ಕೆಲವು ಕವಿಗಳು ಭಾವಿಸಿದಂತೆ ಖಂಡಿತವಾಗಿಯೂ ಆಜನ್ಮಸಿದ್ಧ ಅಲ್ಲ. ಅಥವಾ ಪ್ರಾಚೀನನಾದ ಹರಿಹರ ಭಾವಿಸಿದಂತೆ, ಅವನ ಕೈಗೆ ಇಷ್ಟಲಿಂಗ ದೊರೆತ ಕ್ಷಣ ಸಿದ್ಧ ಪುರುಷನಾಗಲಿಲ್ಲ. ಅವನ ಸಾಧನೆ ಅನೇಕ ವರ್ಷಗಳ ವರೆಗೆ ನಡೆಯಿತು. ತನ್ನ ಸಾಧಕ ಜೀವನದಲ್ಲಿ ಅನುಭವಿಸಿದ ಕಷ್ಟಗಳನ್ನು ತನ್ನ ವಚನಗಳಲ್ಲಿ ಹೇಳಿಕೊಂಡಿದ್ದಾನೆ. ಬಾಯಾರಿದಾಗ ಉಗುಳು ನುಂಗಿ, ನಿದ್ದೆ ಬಂದಾಗ ದಿಬ್ಬವನ್ನು ತಬ್ಬಿ ಮಲಗಿದ್ದು ಎಷ್ಟೋ ಸಾರಿ! ಕಾಮನನ್ನು ಗೆಲ್ಲಬೇಕೆಂದು ಹಟತೊಟ್ಟು ಆ ಪ್ರಯತ್ನದಲ್ಲಿ ವಿಫಲನಾ-ದಂತಹ, ಸಂಪೂರ್ಣ ಸೋತೆನೋ ಏನೋ ಎಂಬ ಅಧೈರ್ಯವನ್ನು ತಾಳುವಂತಹ ಗಳಿಗೆಗಳೂ ಅವನ ಬಾಳಿನಲ್ಲಿ ಕಾಣಿಸಿಕೊಂಡವು. ಅವನ ಕಠೋರ ಸಾಧನೆಯ ಕುರುಹುಗಳು ಉಳಿದುಕೊಂಡು ಬಂದಿರುವ ಆ ಕೆಲವು ವಚನಗಳಾದರೂ ಅವನ ಜೀವನ ಚರಿತ್ರೆಯ ದೃಷ್ಟಿಯಿಂದ ಬಹಳ ಅಮೂಲ್ಯವಾದವು.

ಉತ್ತರರಂಗ–ಲೋಕ :

ಅಲ್ಲಮನು ಕೈಗೊಂಡ ಸಾಧನೆಯ ವಿವರಗಳು ನಮಗೆ ದೊರಕುವುದಿಲ್ಲವಾದರೂ, ಮೇಲೆ ಸೂಚಿಸಿದಂತೆ ಆ ಸಾಧನೆ ಅನೇಕ ವರ್ಷಗಳ ವರೆಗೆ ನಡೆಯಿತೆಂಬುದರಲ್ಲಿ ಅನುಮಾನವಿಲ್ಲ. ಕೊನೆಯಲ್ಲಿ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದ. ಬೆಳಕನ್ನು ಕಂಡು ಮನಸ್ಸು ತೃಪ್ತವಾಯಿತು. ಅಲ್ಲಮನು 'ಅಲ್ಲಮಪ್ರಭು'ವಾದ ಈ ಕತೆ ನಿಜವಾಗಿಯೂ ರೋಮಾಂಚಕಾರಿ. ಪ್ರಬುದ್ಧ ಚೇತನನಾದ ಅವನು ನಂತರ ನಿಜವಾದ 'ಜಂಗಮ'ನಾಗಿ ದೇಶಾದ್ಯಂತ ಚಲಿಸಿ ಅನೇಕರಿಗೆ ಮಾರ್ಗ-ದರ್ಶನ ಮಾಡಿದ. ಅವನು ಯಾವ ಯಾವ ವ್ಯಕ್ತಿಗಳನ್ನು ಎಂತೆಂತಹ ಸನ್ನಿವೇಶ

ಗಳಲ್ಲಿ ಕಂಡ, ಅವರ ಸಮಸ್ಯೆಗಳೇನು, ಅವುಗಳನ್ನು ಅರ್ಥಮಾಡಿಕೊಂಡು ಅವರಿಗೆ ಹೇಗೆ ಮಾರ್ಗದರ್ಶನ ಮಾಡಿದ ಎಂಬುದರ ವಿವರಗಳು ನಮಗೆ ತಕ್ಕಮಟ್ಟಿಗೆ ದೊರಕುತ್ತವೆ. ಹಠಯೋಗ ಸಾಧನೆಯಲ್ಲಿ ತಾನೇ ನಿಷ್ಣಾತನಾಗಿ, ಆ ಸಾಧನೆಯ ವಿಫಲತೆಯನ್ನರಿತಿದ್ದ ಅವನು ಹಠಯೋಗಿ ಗೋರಕ್ಷನಿಗೆ ನಿಜವಾದ ಸಾಧನ ಮಾರ್ಗವನ್ನು ತೋರಿಸಿಕೊಡುತ್ತಾನೆ. ಆತ್ಮೀಯರ ಸಾವು ಎಷ್ಟು ಕ್ರೂರವಾಗಿರುತ್ತದೆಯೆಂಬುದನ್ನು ಬಲ್ಲವನಾಗಿದ್ದ ಅವನು ಅಣ್ಣನನ್ನು ಕಳೆದು-ಕೊಂಡು ದುಃಖಿಸುತ್ತಿದ್ದ ಮುಕ್ತಾಯಕ್ಕನನ್ನು ಸಮಾಧಾನಪಡಿಸಿ ಅವಳ ಮನಸ್ಸನ್ನು ಆಧ್ಯಾತ್ಮದತ್ತ ತಿರುಗಿಸುತ್ತಾನೆ. ಗಂಡನನ್ನು ತ್ಯಜಿಸಿ ದೇವರೇ ತನ್ನ ಗಂಡನೆಂದು ಹೇಳಿಕೊಳ್ಳುತ್ತಿದ್ದ ಅಕ್ಕಮಹಾದೇವಿ ಇತರರಿಗೆ ತಪ್ಪಿತಸ್ಥಳೆಂದು ಕಂಡಿರಬಹುದು. ಆದರೆ ಅವಳನ್ನು ತುಂಬಿದ ಸಭೆಯಲ್ಲಿ ಪರೀಕ್ಷೆಗೆ ಗುರಿಪಡಿಸುವ ನೆಪ ಹೂಡಿ ಅವಳು ನಿಜವಾದ 'ಶರಣೆ' ಎಂಬುದನ್ನು ಲೋಕಕ್ಕೆ ಮೊದಲು ಪ್ರಕಟಪಡಿಸಿದವ ಅಲ್ಲಮನೇ. ಪ್ರೇಮಕ್ಕಾಗಿ ಜಾತಿಯ, ವಿವಾಹದ ನಿಯಮಗಳನ್ನು ಮುರಿದುಹಾಕಿ, ಕೊನೆಗೆ ದೇವರಿಗಾಗಿ ತನ್ನ ಪ್ರೇಯಸಿಯನ್ನು ಮರೆಯಲು ಸಿದ್ಧನಾದ ಅವನಿಗೆ ಭಕ್ತಿಗಾಗಿ ವಿವಾಹದ ನಿಯಮಗಳನ್ನು ಮುರಿದ ಅಕ್ಕಮಹಾದೇವಿಯನ್ನು ಅರ್ಥಮಾಡಿಕೊಳ್ಳುವುದು ಸುಲಭವಾಯಿತು. ಗೊಗ್ಗಯ್ಯ, ಸಿದ್ಧರಾಮ, ಬಸವ ಮುಂತಾದವರಿಗೆ ಮಾರ್ಗದರ್ಶನ ಮಾಡಿದ. ಆ ಕಾಲದ ಶಿವಶರಣರಲ್ಲೆಲ್ಲ ಗೌರೀಶಂಕರಸಮ ವ್ಯಕ್ತಿತ್ವವುಳ್ಳ ಅಲ್ಲಮಪ್ರಭುವಿನ ಮುಂದೆ ಉಳಿದವರು ಚಿಕ್ಕವರಾಗಿ ಕಾಣುತ್ತಾರೆ. ಅವನು 'ಶೂನ್ಯಸಿಂಹಾಸನ'ವನ್ನು ಏರಿದನೆಂಬುದನ್ನು ಅವನ ಆಧ್ಯಾತ್ಮಿಕ ಔನ್ನತ್ಯದ ಸಂಕೇತವೆಂದು ಭಾವಿಸಬೇಕು.

ಅಲ್ಲಮ–ಬಸವ :

ಅಲ್ಲಮಪ್ರಭು ಬಸವಣ್ಣನವರ ಜೊತೆ ಸೇರಿ ಕೆಲಸ ಮಾಡಿದನೆಂಬುದು ಗಮನಾರ್ಹ ಸಂಗತಿ. ಅವರಿಬ್ಬರನ್ನು ಹೋಲಿಸುವುದರಿಂದ, ಇಬ್ಬರಿಗೂ ಇರುವ ಸಾಮ್ಯ, ವೈಷಮ್ಯಗಳನ್ನು ತಿಳಿಯುವುದರಿಂದ ಇಬ್ಬರನ್ನೂ ಅರ್ಥಮಾಡಿಕೊಳ್ಳುವುದು ಹೆಚ್ಚು ಸುಲಭವಾಗಬಹುದು.

ಅಲ್ಲಮನನ್ನು ಬಸವ ಪೂಜ್ಯಭಾವದಿಂದ ನೋಡುತ್ತಿದ್ದರೂ ನಾವು ಗಮನಿಸಬೇಕಾದ ಸಂಗತಿಯೆಂದರೆ—ಅವನನ್ನು ಹುಡುಕಿಕೊಂಡು ಬಸವ ಬರಲಿಲ್ಲ, ಬಸವನನ್ನು ಹುಡುಕಿಕೊಂಡು ಅಲ್ಲಮನೇ ಬಂದ. ಬಸವ ತನ್ನ ವೃತ್ತಿಜೀವನದ ಆರಂಭದಲ್ಲಿ (ಈಗಿನ ಸೊಲ್ಲಾಪುರ ಜಿಲ್ಲೆಯ) ಮಂಗಳವೇಡೆಗೆ ಹೋಗಿ 'ಮಾಂಡಳಿಕ'ನಾಗಿದ್ದ ಬಿಜ್ಜಳನ ಹತ್ತಿರ ಭಂಡಾರಿಯಾಗಿದ್ದಾಗಲೇ

ಅಲ್ಲಮ ಬಂದು ಬಸವಣ್ಣನನ್ನು ಭೇಟಿಮಾಡಿ ಹೋದಂತೆ ಹೇಳಲು ಅವಕಾಶ ಗಳಿವೆ. ಬಸವ ಆ ಮೇಲೆ ಕಲ್ಯಾಣಕ್ಕೆ ಹೋಗಿ 'ಚಕ್ರವರ್ತಿ' ಬಿಜ್ಜಳನ ಹತ್ತಿರ ಅದೇ ವೃತ್ತಿಯನ್ನು ಮುಂದುವರಿಸುತ್ತಿರುವಾಗಲೂ ಅಲ್ಲಮ ಕಲ್ಯಾಣಕ್ಕೆ ಬರುತ್ತಾನೆ. ಕಲ್ಯಾಣದಲ್ಲಿ ಅವನು ಕೆಲವು ಕಾಲ ಇದ್ದರೂ ಕಲ್ಯಾಣ ಅವನ ನೆಲೆಮನೆಯಾಗಲಿಲ್ಲ. ಅಲ್ಲಮ ಒಂದು ಕಡೆ ನಿಲ್ಲದೆ ಸದಾ ಸಂಚರಿಸುವ ವ್ಯಕ್ತಿ. ಬಸವನಾದರೋ ಮೊದಲು ಮಂಗಳವಾಡದಲ್ಲಿ, ಆ ಮೇಲೆ ಕಲ್ಯಾಣದಲ್ಲಿ ನೆಲೆ-ನಿಂತ ವ್ಯಕ್ತಿ. ಇದು ನಮಗೆ ಅನೇಕ ಸಂಗತಿಗಳನ್ನು ತಿಳಿಸುತ್ತದೆ. ಅಲ್ಲಮ ಒಬ್ಬ 'ಜಂಗಮ' (Wanderer)—ಹುಟ್ಟಿನಿಂದ ಅಲ್ಲ, ತನ್ನ ನಡತೆ ಮತ್ತು ಸ್ವಭಾವಗಳಿಂದ. ಅವನ ಪ್ರಧಾನ ಗುಣ ಚಲನೆ; ಅವನದು ಯಾವುದಕ್ಕೂ ಅಂಟಿಕೊಂಡು ನಿಲ್ಲದ ಸ್ವಭಾವ. ಬಸವ ಒಂದು ಕಡೆ ನಿಂತವನು—ಸಾಮಾಜಿಕ ಆಂದೋಲನವೊಂದರ ಜೊತೆ ತನ್ನನ್ನು ಸಮರಸಗೊಳಿಸಿಕೊಂಡು ಅದರ ನಾಯಕ ನಾಗಿ ನಿಂತು ಸಂಸ್ಥೆಯನ್ನು (Institution) ಕಟ್ಟಿದವನು. ಅಲ್ಲಮ ಯಾವುದೇ ಸಂಸ್ಥೆಯನ್ನೂ ಕಟ್ಟಲಿಲ್ಲ; ಕಟ್ಟಲು ಅವನಿಂದ ಸಾಧ್ಯವೂ ಇರಲಿಲ್ಲ. ತನಗೆ ಇಷ್ಟವಿರದ ಸಂಗತಿಗಳ ಜೊತೆಗೆ ಕೆಲಸಂದರ್ಭಗಳಲ್ಲಿಯಾದರೂ ರಾಜಿ ಮಾಡಿ-ಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳದೆ ಸದಾ ನಿಷ್ಠುರವಾಗಿಯೇ ಇರುವ ವ್ಯಕ್ತಿ ಎಂದಿಗೂ ಸಂಸ್ಥೆ ಕಟ್ಟಲಾರ. ಅಲ್ಲಮನ ಶೂದ್ರಜನ್ಮ, ಶೂದ್ರಸಹಜ ಸ್ವಾಭಿಮಾನ, ಯೌವನದ ಅನುಭವಗಳು ಅವನನ್ನು ಕಠಿಣನನ್ನಾಗಿ ಮಾಡಿದುವು. ಬಸವಣ್ಣನ 'ಬ್ರಾಹ್ಮಣ' ಜನ್ಮ ಅವನಿಗೆ ಚಾಕಚಕ್ಯತೆ, ಜಾಣತನ (Tact), ನಯ ನಾಜೂಕನ್ನು ತಂದುಕೊಟ್ಟಿದ್ದಿತು. ಬಸವ ಕಠಿಣನೂ ಹೌದು; ಅಗತ್ಯದ ಪ್ರಶ್ನೆ ಬಂದಾಗ ರಾಜಿಗೂ ಸಿದ್ಧ. ಪರಮತಗಳ ಬಗ್ಗೆ, ತನ್ನ ಕಡೆಯ ಕೆಲವರಲ್ಲಿರುವ ಸಣ್ಣತನದ ಬಗ್ಗೆ ಅತ ಕಠಿಣ, ನಿಜ. ಆದರೆ ಕೊರಳಲ್ಲಿ ಲಿಂಗ ವಿದ್ದರೆ ಸಾಕು ನಂಬುತ್ತೇನೆ ಎನ್ನುವ ರಾಜೀ ಮನೋಭಾವವೂ ಅವನಲ್ಲಿ ಉಂಟು.

ಈ ರೀತಿಯ ವ್ಯವಹಾರ ಕೌಶಲ, ಜಾಣತನಗಳಿಲ್ಲದ ವ್ಯಕ್ತಿ ತಾನೇ ಒಂದು ದೊಡ್ಡ ಸಂಸ್ಥೆಯಾಗಿ ಬೆಳೆಯಬಹುದು, ಆದರೆ ಸಂಸ್ಥೆಯನ್ನು ಸ್ಥಾಪಿಸಲಾರ, ನಡೆಸಲಾರ. ಅಲ್ಲಮ ಸರ್ವಜ್ಞ ಕವಿಯಂತೆ ಒಂದು ವೈಯಕ್ತಿಕ ಶಕ್ತಿಯಾಗಿ ಉಳಿದ. ಬಸವ ಸಾಂಘಿಕ ಶಕ್ತಿಯ ಮೂಲಕ ತನ್ನ ಉದಾತ್ತ ಗುರಿಗಳನ್ನು ಸಾಧಿಸಿದ. ಅಲ್ಲಮನ ಬಗ್ಗೆ ಮಾತನಾಡುವಾಗ ಒಬ್ಬ ವ್ಯಕ್ತಿಯನ್ನು ಮಾತ್ರ ನೆನಪಿನಲ್ಲಿಟ್ಟುಕೊಳ್ಳುತ್ತೇವೆ. ಬಸವನ ಬಗ್ಗೆ ಮಾತನಾಡುವಾಗ ಒಂದು ಸಮಾಜ, ಸಾಮಾಜಿಕ ಆಂದೋಲನ ಜ್ಞಾಪಕಕ್ಕೆ ಬರುತ್ತದೆ.

ಇಲ್ಲಿ ನಾನು ಅಲ್ಲಮ ಬಸವರ ಬಗ್ಗೆ ಖಂಡಿತವಾಗಿಯೂ ಮೌಲ್ಯನಿರ್ಧಾರ ವನ್ನು ಮಾಡುತ್ತಿಲ್ಲ. ಅವರಲ್ಲಿ ಯಾರು ಹೆಚ್ಚು ಯಾರು ಕಡಿಮೆ—ಎಂಬ

ಪ್ರಶ್ನೆಯೇ ದಡ್ಡತನದ್ದು. ಅವರವರ ಕಾರ್ಯಕ್ಷೇತ್ರವೇನು, ಅಲ್ಲಿ ಅವರು ಸಾಧಿಸಿದ್ದೇನು, ಜೊತೆಗೆ ಅವರ ಮಿತಿಗಳೇನು ಎಂಬುದನ್ನು ನೆನಪಿಸಿಕೊಳ್ಳು ವುದು ಮೇಲಿನ ಮಾತುಗಳ ಉದ್ದೇಶ. ಅಲ್ಲಮ, ಬಸವರಿಬ್ಬರೂ ಒಂದು ರೀತಿ ಯಲ್ಲಿ ಪರಸ್ಪರ ಪೂರಕ—ಒಬ್ಬ ಮಾಡಲಾಗದ ಕೆಲಸವನ್ನು ಇನ್ನೊಬ್ಬ ಮಾಡಿದ. ಒಬ್ಬ ಮುಖ್ಯವಾಗಿ ಅನುಭಾವಿ, ಚಿಂತಕ; ಇನ್ನೊಬ್ಬ ಕಾರ್ಯಕರ್ತ. ಇದರಿಂದ ಅಲ್ಲಮನಿಗೂ ಆ ಕಾಲದ ಸಾಮಾಜಿಕ ಆಂದೋಲನಕ್ಕೂ ಅರ್ಥಪೂರ್ಣ ಸಂಬಂಧ ವಿರಲಿಲ್ಲವೆಂದು ಭಾವಿಸುವುದು ತಪ್ಪು. ಆ ಸಾಮಾಜಿಕ ಆಂದೋಲನದ ನಾಯಕ ನಿಸ್ಸಂಶಯವಾಗಿ ಬಸವನೇ. ಅವನನ್ನು ನಾಯಕನನ್ನಾಗಿ ಒಪ್ಪಿಕೊಂಡ ಇತರರು ಅವನನ್ನು ತಿದ್ದುವ, ಅವನಿಂದ ಮಾರ್ಗದರ್ಶನ ಪಡೆದು ಅವನನ್ನು ಎಚ್ಚರದಲ್ಲಿ ಡುವ ಹೊಣೆಯನ್ನೂ ಹೊತ್ತಿದ್ದರು—ಬೆಳಕು ಕೊಡುವ ದೀಪವನು ನಾವು ಸುಸ್ಥಿತಿಯಲ್ಲಿಟ್ಟಂತೆ. ಬಸವನಲ್ಲಿ ಯಾವುದೇ ಕೊರತೆ ಉದ್ಭವಿಸಿದರೂ ಅದು ಇಡೀ ಸಮೂಹದ ಮೇಲೆ ಪರಿಣಾಮ ಉಂಟುಮಾಡುವಂತಹುದು. ಆದ್ದರಿಂದಲೇ ಅಲ್ಲಮ ಮುಂತಾದವರು ಬಸವನನ್ನು ತಿದ್ದಿದ್ದಾರೆ; ಅವನಲ್ಲಿ ಅಹಂಕಾರ, ಮರವೆಗಳು ಬಂದಾಗ ಎಚ್ಚರಿಸಿದ್ದಾರೆ. ಅದರಲ್ಲೂ ಅಲ್ಲಮನಿಂದ ಬಸವನಿಗೆ ದೊರೆತ ನೈತಿಕ ಬೆಂಬಲ ಅಪಾರ.

ಹಾಗೆ ನೋಡಿದರೆ ಹುಟ್ಟಿನಿಂದ ಶೂದ್ರನಾದ ಅಲ್ಲಮ ಆಧ್ಯಾತ್ಮಿಕವಾಗಿ ಮೇಲೇರಿ ಆ ಯುಗದ ಅನಭಿಷಿಕ್ತ ಆಧ್ಯಾತ್ಮಿಕ ಚಕ್ರವರ್ತಿಯಾದದ್ದು ಅತ್ಯಂತ ಆಶ್ಚರ್ಯದ ಸಂಗತಿ. ಅವನ ಹುಟ್ಟು ಗೊತ್ತಿದ್ದೂ ಅವನನ್ನು 'ಶೂನ್ಯ ಸಿಂಹಾಸನ'ದ ಮೇಲೆ ಕುಳ್ಳಿರಿಸಿದ್ದು ಬಸವ ಮತ್ತು ಇತರರ ಕ್ರಾಂತಿಕಾರೀ ಮನೋಭಾವನೆಗೆ ದ್ಯೋತಕವಾಗಿದೆ. ವ್ಯಕ್ತಿಯ ಜಾತಿ ಅವನ ಬೆಳವಣಿಗೆಗೆ ಅಡ್ಡಿಯೂ ಆಗುವುದಿಲ್ಲ; ಅವನ ಹಿರಿಮೆಯ ಅಳತೆಗೋಲೂ ಆಗುವುದಿಲ್ಲ ಎಂಬು ದಕ್ಕೆ ಇದೊಂದು ಉಜ್ವಲ ನಿದರ್ಶನ.

ಈ ವಿವೇಚನೆ 'ವಚನಕಾರ' ಅಲ್ಲಮನನ್ನೂ ಅರ್ಥಮಾಡಿಕೊಳ್ಳಲು ಸಹಾಯಕವಾಗಬಹುದು.

ಅನುಬಂಧ ೧—(ನಟ್ಟುವರು)

ದೇವದಾಸಿ ಪದ್ಧತಿ ಕರ್ನಾಟಕದಲ್ಲಿ ಸಾಕಷ್ಟು ಹಿಂದಿನಿಂದ ಇದೆಯೆಂಬು ದಕ್ಕೆ ನೂರಾರು ಶಾಸನಗಳು ಇವೆ. ಆದರೆ ಶಾಸನಗಳು ಅವರ ಸಾಮಾಜಿಕ ಸ್ಥಾನಮಾನಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಒದಗಿಸುವುದಿಲ್ಲ. ದೇವದಾಸಿಯ ರನ್ನು ನಟ್ಟುವರೆಂದೂ ಕರೆಯುತ್ತಿದ್ದರು. (ಅಲ್ಲಮ ನಟುವ ಜಾತಿಯ ರೀತಿ–ನೀತಿಗಳನ್ನು ಅಭಿನಯಿಸುತ್ತಿದ್ದನೆಂದು ಪ್ರಭುಲಿಂಗಲೀಲೆಯಲ್ಲಿ ಹೇಳಿದೆ).

ನಾನು ಕೋಲಾರ ಜಿಲ್ಲೆಯ ನರಸಾಪುರ ಎಂಬ ಊರಲ್ಲಿ ನಟ್ಟುವರ ಬಗ್ಗೆ ಸಂಗ್ರಹಿಸಿದ ಕೆಲವು ವಿವರಗಳು ಹೀಗಿವೆ: ಅಲ್ಲಿಯ ಲಕ್ಷ್ಮೀನಾರಾಯಣ ದೇವಾಲಯಕ್ಕೆ ಸಂಬಂಧಿಸಿದಂತೆ ಹಿಂದೆ ಅನೇಕ ದೇವದಾಸಿಯರಿದ್ದರು. ಅವರು ದೇವಾಲಯಕ್ಕೆ ಪ್ರತಿದಿನ ಸಂಜೆ ಬಂದು ಪೂಜೆ ಆಗಿ, ಮಹಾಮಂಗಳಾರತಿಯಾಗುವ ಮೊದಲು ನವರಂಗದಲ್ಲಿ ಗಾಯನ ಮತ್ತು ನರ್ತನದ ಸೇವೆ ಮಾಡುತ್ತಿದ್ದರು. ಅಂತಹ ನರ್ತನಗಳನ್ನು ಪ್ರತ್ಯಕ್ಷವಾಗಿ ನೋಡಿದ್ದ ಹಿರಿಯರ ಪ್ರಕಾರ ಯುವತಿಯರು ನರ್ತನ ಮಾಡುತ್ತಿದ್ದರೆ ವಯಸ್ಸಾದ ದೇವದಾಸಿಯರು ತಾಳ ಹಿಡಿದು ಹಾಡುತ್ತಿದ್ದರು. ಅವರ ಪೈಕಿಯೇ ಗಂಡಸರು ಪಿಟೀಲು, ಮೃದಂಗ ನುಡಿಸುತ್ತಿದ್ದರು. ನರ್ತನ ಮಾಡುವಾಗ ದೇವದಾಸಿ ದೇವರ ಭಾವದಲ್ಲಿ ಸಂಪೂರ್ಣ ಐಕ್ಯಳಾಗುತ್ತಿದ್ದಳು. ಅವರ ನರ್ತನ ಮುಗಿದು ದೇವರಿಗೆ ಅವರು ನವರಂಗದಿಂದಲೇ ತಟ್ಟೆಆರತಿ ಮಾಡಿದ ಮೇಲೆ ಮಹಾಮಂಗಳಾರತಿ ನಡೆಯುತ್ತಿತ್ತು. ದೇವದಾಸಿಯರ ಬಗ್ಗೆ ಜನರಿಗೆ ತಿರಸ್ಕಾರ, ಕೀಳುಭಾವನೆ ಇರಲಿಲ್ಲ, ಈಗಲೂ ಇಲ್ಲ.

ದೇವದಾಸಿಯರ ಜೀವನೋಪಾಯಕ್ಕಾಗಿ ಹೊಲವನ್ನು ಬಿಟ್ಟುಕೊಟ್ಟಿದ್ದು, ಅದು ಈಗಲೂ 'ತಾಫೆ ಇನಾಮು' ಎಂದು ಕರೆಯಿಸಿಕೊಳ್ಳುತ್ತಿದೆ. (ತು ಆ ಇಫ್ ಎಂದರೆ ಹಿಂದೂಸ್ತಾನಿಯಲ್ಲಿ ನರ್ತಕಿ, ವೇಶ್ಯೆ ಎಂದರ್ಥ). ಬೇರೆ ಊರುಗಳಲ್ಲಿ ಅಂಥದನ್ನು 'ನಟ್ಟುವನ ಹೊಲ' ಎಂದು ಕರೆಯುತ್ತಾರೆ. ಅವರ ನರ್ತನಗಳು ಆಕರ್ಷಕವಾಗಿರುತ್ತಿದ್ದವು. ಅವರು ದೇವರ ಉತ್ಸವವಾದಾಗ ದೇವರಮುಂದೆ ಊರಿನ ಬೀದಿಗಳಲ್ಲಿ ನರ್ತನ ಮಾಡುತ್ತಿದ್ದರು. ಮದುವೆಗಳಿಗೆ ಅವರನ್ನು ಆಹ್ವಾನಿಸಿ ನರ್ತನ ಮಾಡಿಸುತ್ತಿದ್ದುದೂ ಉಂಟು.

ದೇವದಾಸಿಯರನ್ನು ಪ್ರಮುಖ ಬ್ರಾಹ್ಮಣರೋ ಊರಿನ ಇತರ ಶ್ರೀಮಂತರೋ ಉಪಪತ್ನಿಯರನ್ನಾಗಿ ಮಾಡಿಕೊಳ್ಳುತ್ತಿದ್ದುದು ಆ ಕಾಲಕ್ಕೆ ಅಸಹಜವಾಗಿರಲಿಲ್ಲ. ಹರಿಜನರು, ಮುಸಲ್ಮಾನರು, ಕ್ರಿಶ್ಚಿಯನ್ನರನ್ನು ಬಿಟ್ಟು ಉಳಿದ ಪುರುಷರನ್ನು ಅವರು ಒಪ್ಪಿಕೊಳ್ಳುತ್ತಿದ್ದರು. ಎಷ್ಟೋಸಾರೆ ದೇವದಾಸಿಯರು ಕೈಹಿಡಿದ ಹೆಂಡತಿಯರಂತೆ ಪ್ರಾಮಾಣಿಕವಾಗಿ ತಮ್ಮ ಪ್ರಿಯರ ಸೇವೆ ಮಾಡಿದ ನಿದರ್ಶನಗಳನ್ನು ಜನ ಗೌರವದಿಂದ ಜ್ಞಾಪಿಸಿಕೊಳ್ಳುತ್ತಾರೆ.

ದೇವದಾಸಿಯರಿಗೆ ಹುಟ್ಟಿದ ಹೆಣ್ಣುಮಕ್ಕಳು ದೇವರಿಗೆ ತಾಳಿಕಟ್ಟಿ ತಮ್ಮ ತಾಯಂದಿರ ವೃತ್ತಿಯನ್ನು ಮುಂದುವರಿಸುತ್ತಿದ್ದರು. ಗಂಡುಮಕ್ಕಳು ಮದುವೆಯಾಗದೆ ಹಾಗೇ ಇದ್ದುಬಿಡುತ್ತಿದ್ದರೆಂದೂ, ಅವರು ತಮ್ಮ ಜಾತಿಯಲ್ಲೇ

ಮದುವೆಯಾಗಿ ಸಂಸಾರ ಮಾಡಿಕೊಂಡಿರುತ್ತಿದ್ದರೆಂದೂ ಬೇರೆ ಬೇರೆ ರೀತಿಯಲ್ಲಿ ಅವರ ಬಗ್ಗೆ ಮಾಹಿತಿ ದೊರೆಯಿತು. ಅವರು ಯಾವ ಜಾತಿಯ ಪುರುಷನಿಗೇ ಹುಟ್ಟಲಿ, ಅವರಲ್ಲಿ ಯಾವ ವ್ಯತ್ಯಾಸವೂ ಇಲ್ಲ—ಅವರೆಲ್ಲ ನಟ್ಟುವ ಜಾತಿಯವರೇ. ಅವರು ಶೂದ್ರರು—ಸಾಮಾಜಿಕವಾಗಿ ವೈಶ್ಯರಿಗಿಂತ ಕೆಳಗಿನವರು, ಅಸ್ಪೃಶ್ಯರಿಗಿಂತ ಮೇಲಿನವರು. ಈ ದಿನ ದೇವದಾಸಿಯರೂ ಇಲ್ಲ, ನರ್ತನವೂ ಇಲ್ಲ. ಇತರ ಜಾತಿಗಳವರಂತೆ ಇವರೂ ಮದುವೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ತಮ್ಮನ್ನು ಕ್ಷೇತ್ರಿಯ ಶೂದ್ರರೆಂದು ಕರೆದುಕೊಳ್ಳಲು ಬಯಸುತ್ತಾರೆ.

'ಶೂದ್ರ' ಎಂಬ ಮಾತು ವ್ಯಾಪ್ತಿಯಲ್ಲಿ ಸಡಿಲವಾದದ್ದು—ಹಿಂದೂ ಧರ್ಮದ ಪರಿಸರದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಅಸ್ಪೃಶ್ಯರಲ್ಲದವರೆಲ್ಲ 'ಶೂದ್ರ'ರಾಗುತ್ತಾರೆ. ಈ ದೃಷ್ಟಿಯಿಂದ ವೀರಶೈವರೂ—ಅವರು ಏನೇ ಹೇಳಿಕೊಳ್ಳಲಿ—ಶೂದ್ರರೇ ಎಂದು ಪರಿಗಣಿತರಾಗುತ್ತಾರೆ.

ಅನುಬಂಧ ೨—(ಅಲ್ಲಮನ ವಿವಾಹವೃತ್ತಾಂತ ಹರಿಹರನಲ್ಲಿ)

ಅಲ್ಲಮ, ಕಾಮಲತೆಯರದು ಪ್ರತಿಲೋಮ ಸಂಬಂಧವಾದುದರಿಂದ, ಅವರಿಗೆ ಸಾಂಪ್ರದಾಯಿಕ ವಿವಾಹವಾಗಲಿಲ್ಲವೆಂಬ ನನ್ನ ಅಭಿಪ್ರಾಯಕ್ಕೆ ಹರಿಹರನಲ್ಲಿ ಸಮರ್ಥನೆಯಿದೆಯೋ ಎಂದು ಕೆಲವು ಮಿತ್ರರು ಪ್ರಶ್ನಿಸಿದ್ದರಿಂದ ಈ ಅನುಬಂಧವನ್ನು ಬರೆಯಬೇಕಾಗಿದೆ.

ಹರಿಹರನಲ್ಲಿ ಅಲ್ಲಮನು 'ನಾಗವಾಸಾಧಿಪತಿ'ಯ ಮಗ ಎಂದಿರುವುದರಿಂದ ಅವನು ಶೂದ್ರನೆಂದೂ ಕಾಮಲತೆಯು 'ಧನದತ್ತ'ನೆಂಬವನ ಮಗಳೆಂದಿರುವುದರಿಂದ ಅವಳು ವೈಶ್ಯಳೆಂದೂ ನಾನು ತರ್ಕಿಸಿದ್ದೇನೆ. ಅವಳ ಜೊತೆಗೆ ದಾಸಿಯರೂ ಇದ್ದರೆಂಬ ಸಂಗತಿ, ಅವಳದು 'ಅರಮನೆ'ಯೆಂದು ಹೇಳಿರುವುದೂ, ಅವಳ ತಂದೆ ಶ್ರೀಮಂತ ಎಂಬುದನ್ನು ಸೂಚಿಸುತ್ತದೆ. ಅವರಿಬ್ಬರಿಗೂ ಅನುರಾಗ ಹುಟ್ಟಿದಾಗ ಆ ದಾಸಿಯರು ಅವರಿಬ್ಬರನ್ನೂ ನೇರವಾಗಿ ಕಾಮಲತೆಯ ಮನೆಗೆ ಕೊಂಡೊಯ್ದು ಒಟ್ಟಿಗೆ ಇರಿಸಿದರೆಂದು ಹರಿಹರ ಹೇಳುತ್ತಾನೆ. ಅವರಿಗೆ ಮದುವೆಯಾಯಿತೆಂದು ಹೇಳುವುದಿಲ್ಲ. ಅಲ್ಲಿ ಅನೇಕ ವರ್ಷಗಳನ್ನು ಸುಖವಾಗಿ ಕಳೆದರು. ಕಾಮಲತೆ ಸತ್ತಾಗ ಅವಳ ತಾಯಿ-ತಂದೆ-ಸಖಿಯರು ಗೋಳಿಟ್ಟರೆಂದೂ, ದುಃಖಿಸುತ್ತಿದ್ದ ಅಲ್ಲಮನನ್ನು ಇತರರು ಅವನ ತಾಯಿ-ತಂದೆಯರು ಇದ್ದ ಜಾಗಕ್ಕೆ ತಂದರೆಂದೂ ಕವಿ ಹೇಳುತ್ತಾನೆ.

ಅಲ್ಲಮ ತನ್ನ ತಂದೆಯ ಮನೆಯನ್ನು ಬಿಟ್ಟು ಕಾಮಲತೆಯ ಮನೆಯಲ್ಲೇ ಇದ್ದುಬಿಟ್ಟ ಎಂಬ ಕವಿಯ ಹೇಳಿಕೆಯನ್ನು ಎಷ್ಟರಮಟ್ಟಿಗೆ ಒಪ್ಪಬೇಕೋ ತಿಳಿಯದು. ಅವರಿಬ್ಬರಿಗೂ ವಿವಾಹವಾಗಲಿಲ್ಲವೆನ್ನುವ ಸಂಗತಿಯಿಂದ ಎರಡು ಅಂಶಗಳು ಸೂಚಿತವಾಗಬಹುದು— (೧) ಕಾಮಲತೆಯೂ ಒಬ್ಬ ದೇವದಾಸಿಯಿದ್ದಿರಬಹುದು; ಆಗ ವಿವಾಹದ ಪ್ರಶ್ನೆಯೇ ಏಳುವುದಿಲ್ಲ; (೨) ಅವರಿಬ್ಬರೂ ಪ್ರತ್ಯೇಕವಾಗಿ, ಎಲ್ಲರಿಂದ ದೂರವಾಗಿ ಬದುಕಿದರು. ಕಾಮಲತೆ ಒಬ್ಬ ದೇವಾಲಯದ ನರ್ತಕಿ ಎಂಬುದಕ್ಕೆ ಎಲ್ಲಿಯೂ ಸೂಚನೆಗಳಿಲ್ಲವಾದ್ದರಿಂದ ಮೊದಲ ಸೂಚನೆಯನ್ನು ಕೈಬಿಡಬಹುದು. ನನಗೇನೋ ಎರಡನೆಯ ಊಹೆಯೇ ನಿಜವೆನಿಸುತ್ತದೆ. ತಾಯ್ತಂದೆಯರಿಂದ ದೂರವಾಗಿ ಬದುಕುವುದು ಆ ಕಾಲಕ್ಕೆ ಹೊಂದದ ಸಂಗತಿಯಾದ್ದರಿಂದ ಕವಿ ಅವರಿಬ್ಬರೂ ಕಾಮಲತೆಯ ಮನೆಯಲ್ಲಿ ವಾಸಿಸಿದರು ಎಂದು ಕಲ್ಪಿಸಿರಬಹುದು ಅಥವಾ ಕವಿಗೆ ತಿಳಿದುಬಂದ ಕಥೆಯೇ ಹಾಗಿರಬಹುದು. ಅವರಿಗೆ ವಿವಾಹವಾಗಲು ಕೇವಲ ಜಾತಿ ಮಾತ್ರವಲ್ಲ, ಆರ್ಥಿಕ ಅಸಮಾನತೆಯೂ ಕಾರಣ. ಹೀಗಿರುವಾಗ, ಅವರ ವಿವಾಹಕ್ಕೆ ಮೇಲುಜಾತಿಯವರ ಒಪ್ಪಿಗೆ ದೊರಕಿದ್ದುದು ಅಸಂಭವ. ಅಲ್ಲಮ ಹೀನಜಾತಿಯವನೆಂಬುದನ್ನು ಕವಿಯೇ ಮರೆಸಲು ಪ್ರಯತ್ನಿಸಿರಬಹುದು; ಅಥವಾ ಅವನ ವರೆಗೆ ಹರಿದುಬಂದ ಕತೆಯಲ್ಲೇ ಆ ಮಾರ್ಪಾಟು ಆಗಿರಬಹುದು. ಅಲ್ಲಮ ನಾಗವಾಸಕ್ಕೆ ಸಂಬಂಧಿಸಿದವನೆಂಬ ಅಂಶ ಹರಿಹರ ಮತ್ತು ಚಾಮರಸ ಇಬ್ಬರಲ್ಲೂ ಇರುವುದರಿಂದ ಅದು ಐತಿಹಾಸಿಕವಾದ ಒಂದು ಗಟ್ಟಿ ಸಂಗತಿ.

ಕಾಮಲತೆಯ ಮನೆಯಲ್ಲೇ ಅಲ್ಲಮ ಇದ್ದುದು ನಿಜವಾಗಿದ್ದರೆ, ಎರಡು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ—(೧) ಅಲ್ಲಮ ಅವಳನ್ನು ಕರೆತಂದು ತನ್ನ ಮನೆಯಲ್ಲೇ ಏಕೆ ಸಂಸಾರ ಹೂಡಲಿಲ್ಲ? ಕಾಮಲತೆ ಒಬ್ಬಳೇ ಮಗಳೆಂದು ಅವಳ ತಾಯ್ತಂದೆಯರು ಅಲ್ಲಮನನ್ನು ಮನೆಯಲ್ಲಿರಿಸಿಕೊಂಡಿದ್ದರೆಂದು ಅರ್ಥವೇ? (೨) ಹಾಗೆ ಇದ್ದುದು ನಿಜವಾದರೆ, ಕಾಮಲತೆ ಮಡಿದಾಗ ಅಲ್ಲಮನ ತಾಯ್ತಂದೆಯರು ಮಗನನ್ನು ಸಮಾಧಾನಪಡಿಸಲು ತಾವೇ ಏಕೆ ಬರಲಿಲ್ಲ? ಅವನನ್ನು ಜನ ಅವನ ತಂದೆ-ತಾಯಿಯ ಹತ್ತಿರ ಕರೆತಂದರು ಎನ್ನುವುದಕ್ಕೆ ಏನು ಸಮಾಧಾನ? ಆದ್ದರಿಂದ ಅವರಿಬ್ಬರೂ ಸಮಾಜದಲ್ಲಿ ಬಹಿಷ್ಕೃತರಂತೆ ಬದುಕಿದರು, ಒಬ್ಬರನ್ನು ಇನ್ನೊಬ್ಬರು ಬಲವಾಗಿ ಅವಲಂಬಿಸಿ ಬದುಕಿದರು ಎನ್ನುವುದೇ ಎಲ್ಲ ದೃಷ್ಟಿಯಿಂದಲೂ ತರ್ಕಸಮ್ಮತವಾಗಿದೆ.

ಮುಂದೆ ಅಲ್ಲಮನಿಗೆ ಇಷ್ಟಲಿಂಗವು ದೊರೆತು ದೇವಾಲಯದಿಂದ ಹೊರಬಂದಾಗ ಅವನನ್ನು ಕಂಡ ಪುರಜನಕ್ಕೆ ಆಶ್ಚರ್ಯವಾಯಿತು ಎಂದು ಹರಿಹರ

ಹೇಳುತ್ತಾನೆ. "ಕಾಮಲತೆ ಎಲ್ಲಿ, ಇವನೆಲ್ಲಿ—ಇವನಿಗೆ ಪುಣ್ಯಫಲ ಕೂಡಿ ಬಂದಿತು. ಎಲ್ಲಿಯ ಕಲಶ, ಎಲ್ಲಿಯ ಶಿವಾಲಯ, ಇವನಿಗೆ ದೊರೆತ ಶಿವಜ್ಞಾನ ಎಲ್ಲಿಯದು—ಒಂದಕ್ಕೊಂದು ಸಂಬಂಧವಿಲ್ಲ. ಪ್ರೇಮವೇ ಶಿವಲಿಂಗಪೂಜೆ— (ಪ್ರೇಮವದು ಶಿವಲಿಂಗಪೂಜೆಯೆ ದಿಟಂ ಕೇಳ). ಇಲ್ಲದಿದ್ದರೆ ಇವನಿಗೆ ಶಿವಲಿಂಗ ಪೂಜೆ ದೊರಕುತ್ತಿರಲಿಲ್ಲ. ಅವನು ಅಂಗೈಯಲ್ಲಿ ಅಮೃತಫಲವನ್ನು ಪಡೆದ ಅದೃಷ್ಟಶಾಲಿ"—ಎಂದು ಉದ್ಗಾರತೆಗೆದರಂತೆ. ಅವನಿಗೆ ಕಾಮಲತೆ ದೊರಕಿದ್ದು, ಕೈಗೆ ಇಷ್ಟಲಿಂಗ ದೊರೆತದ್ದು ಜನರ ಕಣ್ಣಲ್ಲಿ ಎರಡೂ ಆಶ್ಚರ್ಯಗಳಾಗಿ ಕಂಡುದು ಸಹಜವೇ, ಏಕೆಂದರೆ ಅವನದು ಹೀನಜಾತಿ.

ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಕಾಮಲತೆಯ ಜಾಗದಲ್ಲಿ ಮಾಯಾದೇವಿ—ರಾಜನ ಮಗಳು—ಬರುತ್ತಾಳೆ. (ಇಲ್ಲಿ ಅಲ್ಲಮ ಮಾಯಾದೇವಿಯ ಪ್ರಣಯವನ್ನು ನಿರಾಕರಿಸುತ್ತಾನೆ). ಮಾಯಾದೇವಿಗೆ ತಾನು ಕುಲದಲ್ಲಿ ತನಗೆ ಸಮನಲ್ಲದ ಮದ್ದಳೆಯ ಅಲ್ಲಮನನ್ನು (ಇಲ್ಲಿ ಅವನು ನಟ್ಟುವ) ಪ್ರೀತಿಸಿದ್ದಕ್ಕೆ ಮನಸ್ಸಿನಲ್ಲೇ ನಾಚಿಕೆಯೂ ಉಂಟು. ಇಲ್ಲಿಯೂ ಅಲ್ಲಮ ಕೆಳಜಾತಿಯವನೆಂದೂ, ಅವನ ಬಾಳನ್ನು ಪ್ರವೇಶಿಸಿದ ಹೆಣ್ಣು ಮೇಲುಜಾತಿಯವಳೆಂದೂ ಸೂಚಿತವಾಗುತ್ತದೆ. ಏಕೆಂದರೆ ಅವಳು ಕ್ಷತ್ರಿಯ ಜಾತಿಯವಳು. ಅಲ್ಲಮ ಖಂಡಿತ ವೈಶ್ಯನಂತೂ ಅಲ್ಲ. ಬಹುಶಃ ನಟ್ಟುವ ಜಾತಿಯವನು—ಆದ್ದರಿಂದ ಶೂದ್ರ. ಚಾಮರಸ ಅಲ್ಲಮನ ಜೀವನವನ್ನು ವೈಭವೀಕರಿಸಿರುವುದರಿಂದ ಅಲ್ಲಿ ಇತಿಹಾಸ—ಅದರಲ್ಲೂ ಪೂರ್ವರಂಗಕ್ಕೆ ಸಂಬಂಧಿಸಿದ್ದು—ಬಹಳ ಮಸುಳಿದೆ. ಆದರೂ ಇತಿಹಾಸ ಪೂರ್ತಿ ಅಳಿಸಿಹೋಗಿದೆ ಎನ್ನುವಂತಿಲ್ಲ. ಹರಿಹರನ ನಿರೂಪಣೆ ಶುದ್ಧ ಇತಿಹಾಸವಲ್ಲದಿದ್ದರೂ ಅದರಲ್ಲಿ ಗಟ್ಟಿಯಾದ ಹಲವು ಸಂಗತಿಗಳಿವೆ. ಒಂದೆರಡು ಕಡೆ ಹರಿಹರನ ನಿರೂಪಣೆಯಲ್ಲಿ, ಅನುಮಾನದ (Inference) ಬಲದ ಮೇಲೆ ಸಣ್ಣ ಮಾರ್ಪಾಟುಗಳನ್ನು ಮಾಡಿಕೊಳ್ಳುವ ಅಗತ್ಯವಿದೆ.

ಅನುಬಂಧ ೩ — (ಬಳ್ಳಿಗಾವೆಯಲ್ಲಿ ಅಲ್ಲಮನ ಜ್ಞಾಪಕತರುವ ಜಾಗಗಳು).

ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಹೊರವಲಯದಲ್ಲಿ 'ಗೊಗ್ಗಪ್ಪ' ಎಂದು ಜನ ಕರೆಯುವ ಶಿವಲಿಂಗವೂ ಅದರ ಸುತ್ತ ಪೂರ್ತಿ ಬಿದ್ದುಹೋಗಿರುವ ದೇವಾಲಯದ ಸ್ಮಾರಕಗಳೂ ಇವೆ. ಇವೇ ಅಲ್ಲಮನ ಆರಾಧ್ಯದೈವವಾಗಿದ್ದ ಗೊಗ್ಗೇಶ್ವರನ ದೇವಾಲಯವೆಂಬುದರ ಬಗ್ಗೆ ಅನುಮಾನವಿಲ್ಲ.

ಬಳ್ಳಿಗಾವೆಗೆ ಸುಮಾರು ಎರಡು ಮೈಲು ದೂರದಲ್ಲಿರುವ 'ಅನಿಮಿಷಯ್ಯನ ಕೊಪ್ಪಲಿ'ನಲ್ಲಿರುವ 'ಅನುಬಸಯ್ಯನ ಗುಡಿ'ಯ ಶಿವಲಿಂಗ, ನಂದಿ ವಿಗ್ರಹಗಳ ಮೇಲೆ ಹಾಕಿದ ನೀರೆಲ್ಲ ರಂಧ್ರದ ಮೂಲಕ ಭೂಮಿಯೊಳಕ್ಕೆ

ಹೋಗುತ್ತದೆ. ಇದರಿಂದ, ಆ ವಿಗ್ರಹಗಳ ಕೆಳಗೆ, ನೆಲಮಟ್ಟಕ್ಕಿಂತ ಕೆಳಗೆ ಗುಹೆಯೋ ದೇವಾಲಯವೋ ಇದೆಯೆಂದು ತರ್ಕಿಸಲವಕಾಶವಿದೆ. ಅಲ್ಲಮನು ಅನಿಮಿಷಯ್ಯನಿಂದ ಶಿವಲಿಂಗವನ್ನು ಪಡೆದ ಭೂಗತ ದೇವಾಲಯವು ಈಗಿನ ದೇವಾಲಯದ ಕೆಳಗೆ ಇದೆಯೆಂದೂ, ಅಲ್ಲಮನ ಕಾಲಕ್ಕೆ ಭೂಮಿಯಿಂದ ಬಿಡಿಸಲಾಗಿದ್ದ ಪುರಾತನ ದೇವಾಲಯವನ್ನು ಮುಂದಿನ ಜನ ಮುಚ್ಚಿಬಿಟ್ಟು ಅದರ ಮೇಲೆ ಈಗಿನ ದೇವಾಲಯವನ್ನು ನಿರ್ಮಿಸಿರುವರೆಂದೂ ನಾನು ಊಹಿಸಿದ್ದೇನೆ.

ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಖನಿಜತೈಲ ರಫ್ತುಮಾಡುವ ದೇಶಗಳ ಪಾತ್ರ

ಎನ್. ಪ್ರಭುಸ್ವಾಮಿ

ಖನಿಜತೈಲದ (ಪೆಟ್ರೋಲ್) ಅಭಾವ ಯಾವ ರೀತಿ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನು ಕಷ್ಟಕ್ಕೆ ಗುರಿಮಾಡಿದೆ ಎಂಬುದು ಈಗ ಎಲ್ಲರಿಗೂ ತಿಳಿದ ವಿಷಯವಾಗಿದೆ. ಇಂತಹ ಪರಿಸ್ಥಿತಿಗೆ ಕಾರಣರಾರು ಎಂದು ಪ್ರಶ್ನಿಸಿದಾಗ ಎರಡು ರೀತಿಯ ಉತ್ತರ ದೊರೆಯುತ್ತದೆ: (೧) ಖನಿಜತೈಲವನ್ನು ಶುದ್ಧೀಕರಣ ಮಾಡಿ ನಾನಾ ದೇಶಗಳಿಗೆ ಸರಬರಾಜು ಮಾಡುತ್ತಿರುವ ಅಂತರ ರಾಷ್ಟ್ರೀಯ ಕಂಪನಿಗಳವರೇ ಕಾರಣ ಎಂದು ಕೆಲವರ ವಾದ (ಬರ್ಮಾಷೆಲ್, ಎಸ್ಸೋ, ಕಾಲಟೆಕ್ಸ್ ಮುಂತಾದ ಕಂಪನಿಗಳು) (೨) ಆದರೆ ಮತ್ತೊಂದು ಗುಂಪಿನವರು ಖನಿಜ ತೈಲವನ್ನು ರಫ್ತುಮಾಡುವ ದೇಶಗಳೇ ಇದಕ್ಕೆ ಮುಖ್ಯ ಕಾರಣ ಎಂದು ಹೇಳುತ್ತಾರೆ.

ಈ ಲೇಖನದಲ್ಲಿ ಖನಿಜತೈಲದ ಅಭಾವಕ್ಕೆ ಖನಿಜತೈಲ ರಫ್ತು ಮಾಡುವ ದೇಶಗಳು ಎಷ್ಟರಮಟ್ಟಿನ ಜವಾಬ್ದಾರಿ ಹೊಂದಿವೆ ಎಂಬುದನ್ನು ಕುರಿತು ಚರ್ಚಿಸಲಾಗುತ್ತದೆ. ಖನಿಜತೈಲವು ಆಧುನಿಕ ಯುಗದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಶಕ್ತಿಯನ್ನು ಒದಗಿಸುವ ಮೂಲವಾಗಿದೆ. ಎಲ್ಲ ರೀತಿಯ ಸಾರಿಗೆ ವ್ಯವಸ್ಥೆಯು ಖನಿಜತೈಲವನ್ನ ಅವಲಂಬಿಸಿಕೊಂಡು ಬೆಳೆದುಬಂದಿವೆ. ಮನೆಗಳಲ್ಲಿ ಗೃಹಿಣಿಯರಿಗೆ ಅತ್ಯವಶ್ಯಕವಾದ ನೆರವನ್ನು ನೀಡುತ್ತದೆ. ಚಳಿಯಿಂದ ಆವೃತವಾದ ದೇಶಗಳಲ್ಲಿ ಮನೆಗಳನ್ನು ಶೀತೋಷ್ಣಗಳಿಂದ ಕಾಪಾಡಿಕೊಳ್ಳಲು ಖನಿಜತೈಲದಿಂದ ಬರುವ ಹವೆಯನ್ನು ಯಥೇಚ್ಛವಾಗಿ ಉಪಯೋಗಿಸುತ್ತಾರೆ. ಖನಿಜತೈಲವನ್ನು ವ್ಯವಸಾಯ, ಕೈಗಾರಿಕೆ ಮತ್ತು ವಿದ್ಯುತ್ ಉತ್ಪಾದನಾ ಕ್ಷೇತ್ರಗಳಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. ಯಂತ್ರಗಳು ಸವೆಯದಂತೆ ಮಾಡಲು ಉಪಯೋಗಿಸುವ ಗ್ರೀಸ್ ಮತ್ತು ಇತರ ಮಾದರಿಯ ಎಣ್ಣೆಗಳು ಖನಿಜತೈಲದಿಂದ ಉತ್ಪಾದಿಸಲ್ಪಡುತ್ತವೆ.

ಖನಿಜತೈಲದ ಸರಬರಾಜು ಅಂತರರಾಷ್ಟ್ರೀಯ ಏಕಸ್ವಾಮ್ಯ ಕಂಪನಿಗಳ ಹತೋಟಿಯಲ್ಲಿದೆ. ರಷ್ಯಾ ಮತ್ತು ಅದರ ಪ್ರಭಾವಕ್ಕೊಳಗಾಗಿರುವ ದೇಶಗಳಲ್ಲಿರುವ ಖನಿಜತೈಲವನ್ನು ಬಿಟ್ಟರೆ ಉಳಿದ ದೇಶಗಳಲ್ಲಿ ದೊರೆಯುವ ಖನಿಜತೈಲದ ಸರಬರಾಜು ಅಂತರರಾಷ್ಟ್ರೀಯ ಕಂಪನಿಗಳ ವಶದಲ್ಲಿದೆ ಎಂದು ಹೇಳಬಹುದು. ಎರಡನೆ ಮಹಾಯುದ್ಧಕ್ಕೆ ಮೊದಲು ಪ್ರಪಂಚದ ನಾನಾ ಕಡೆಗಳಿಗೆ ಸರಬರಾಜು ಆಗುತ್ತಿದ್ದ ಖನಿಜತೈಲದ ಬಹುಪಾಲು ಮಧ್ಯಅಮೇರಿಕಾ ಮತ್ತು ಕೆರೇಬಿಯನ್ ದ್ವೀಪ ಸ್ತೋಮಗಳಲ್ಲಿರುವ ದೇಶಗಳಿಂದ ದೊರೆಯುತ್ತಿತ್ತು. ಅರಬ್ ದೇಶಗಳಿಂದ ಸರಬರಾಜು ಆಗುತ್ತಿದ್ದ ತೈಲ ಬಹಳ ಕಡಿಮೆ ಪ್ರಮಾಣದಲ್ಲಿದ್ದಿತು ಎನ್ನಬಹುದು. ಆದುದರಿಂದ ತೈಲದ ಬೆಲೆ ನಿರ್ಧರಿಸುವಿಕೆ ವಿಷಯದಲ್ಲಿ ಅರಬ್ ರಾಷ್ಟ್ರಗಳ ಪ್ರಭಾವ ಇರಲಿಲ್ಲ. ಮಧ್ಯಅಮೆರಿಕಾ ದೇಶಗಳಲ್ಲಿ ದೊರೆಯುತ್ತಿದ್ದ ತೈಲಕ್ಕೆ ಯಾವ ಬೆಲೆಯನ್ನು ನಿಗದಿ ಮಾಡಲಾಗುತ್ತಿತ್ತೋ, ಅದೇ ಬೆಲೆಯನ್ನು ಅರಬ್ ರಾಷ್ಟ್ರಗಳಲ್ಲಿ ದೊರೆಯುತ್ತಿದ್ದ ತೈಲಕ್ಕೂ ನಿಗದಿ ಮಾಡಲಾಗುತ್ತಿತ್ತು. ಇದರಿಂದ ತೈಲದ ಉತ್ಪಾದನೆಯಲ್ಲಿ ತೊಡಗಿದ್ದ ಅಂತರರಾಷ್ಟ್ರೀಯ ಕಂಪನಿಗಳಿಗೆ ಅಧಿಕ ಲಾಭ ಉಂಟಾಗುತ್ತಿತ್ತು. ಅರಬ್ ರಾಷ್ಟ್ರಗಳಲ್ಲಿ ತೈಲ ಉತ್ಪಾದನೆ ಮಾಡಿ ಶುದ್ಧೀಕರಣ ಮಾಡಲು ತಗಲುತ್ತಿದ್ದ ಖರ್ಚು ಕಡಿಮೆಯಾಗಿತ್ತು. ಜೊತೆಗೆ ಸೂಯೆಜ್ ಕಾಲುವೆಯಿಂದ ಪೂರ್ವಕ್ಕಿದ್ದ ರಾಷ್ಟ್ರಗಳಿಗೆ ತೈಲ ಸರಬರಾಜು ಮಾಡುವಾಗ ಉದ್ಭವಿಸುತ್ತಿದ್ದ ಸಾಗಾಣಿಕೆಯ ವೆಚ್ಚವೂ ಕಡಿಮೆಯಾಗಿತ್ತು. ಈ ಕಾರಣಗಳಿಂದಾಗಿ ಅಂತರರಾಷ್ಟ್ರೀಯ ತೈಲ ಕಂಪನಿಗಳು ಅಧಿಕ ಲಾಭ ಪಡೆಯುತ್ತಿದ್ದವು. ತಾವು ಪಡೆದ ಲಾಭವನ್ನು ಬಂಡವಾಳ ರೂಪದಲ್ಲಿ ತೈಲ ಕಂಪನಿಗಳು ವಿನಿಯೋಗಿಸುತ್ತಿದ್ದುದರಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದ ಪ್ರಮುಖ ಯೂರೋಪಿನ ರಾಷ್ಟ್ರಗಳು ತೈಲದ ಬೆಲೆ ವಿಷಯವಾಗಿ ಪ್ರತಿಭಟಿಸುತ್ತಿರಲಿಲ್ಲ. ಹೊಸ ಎಣ್ಣೆಬಾವಿಗಳ ಸಂಶೋಧನೆಗಾಗಿ ಅಂತರರಾಷ್ಟ್ರೀಯ ತೈಲ ಕಂಪನಿಗಳು ತಮ್ಮ ಲಾಭವನ್ನು ವಿನಿಯೋಗಿಸುತ್ತಿದ್ದುದರಿಂದ ತೈಲ ಆಮದು ಮಾಡಿಕೊಳ್ಳುತ್ತಿದ್ದ ಅಭಿವೃದ್ಧಿಹೊಂದಿದ ದೇಶಗಳು ತೈಲದ ಬೆಲೆ ವಿಷಯದಲ್ಲಿ ಸಹನೆಯಿಂದ ಇದ್ದವು. ಜೊತೆಗೆ ತೈಲದ ಬೆಲೆ ಹೆಚ್ಚಾಗಿದ್ದುದರಿಂದ ಕೆಲವು ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯವಾಯಿತು. ಉದಾಹರಣೆಗೆ ಕಲ್ಲಿದ್ದಲು ಕೈಗಾರಿಕೆಯು ಅಭಿವೃದ್ಧಿಹೊಂದಲು ತೈಲದ ಬೆಲೆ ಏರಿಕೆಯು ಒಂದು ಕಾರಣವೆನ್ನಬಹುದು. ತೈಲದ ಬೆಲೆ ಮತ್ತು ಕಲ್ಲಿದ್ದಲಿನ ಬೆಲೆ ಒಂದೇ ಮಟ್ಟದಲ್ಲಿ ಇದ್ದಿದ್ದರೆ ಎಲ್ಲಾ ಕೈಗಾರಿಕೆಗಳು ಕಲ್ಲಿದ್ದಲಿಗೆ ಬದಲಾಗಿ ತೈಲವನ್ನೇ ಉಪಯೋಗಿಸಿಕೊಳ್ಳುತ್ತಿದ್ದವು. ಆದರೆ ತೈಲದ ಬೆಲೆ ಕಲ್ಲಿದ್ದಲಿನ ಬೆಲೆಗಿಂತ ಅಧಿಕವಾಗಿದ್ದುದರಿಂದ ಅನೇಕ ಯೂರೋಪಿನ ರಾಷ್ಟ್ರಗಳು ತೈಲದ ಉಪಯೋಗವನ್ನು ಆದಷ್ಟು ಕಡಿಮೆ

ಮಾಡಿಕೊಂಡು ಕಲ್ಲಿದ್ದಲಿನ ಬಳಕೆಗೆ ಪ್ರೋತ್ಸಾಹ ನೀಡಿದವು. ಇವರ ಪರಿಣಾಮವಾಗಿ ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಗಳಲ್ಲಿ ಕಲ್ಲಿದ್ದಲಿನ ಕೈಗಾರಿಕೆಗೆ ವಿಶೇಷ ಪ್ರೋತ್ಸಾಹ ದೊರೆಯಿತು.

ತೈಲದ ಬಾವಿಗಳನ್ನು ಹೊಂದಿದ್ದ ಅರಬ್ ರಾಷ್ಟ್ರಗಳೂ ಕೂಡ ತೈಲದ ಬೆಲೆ ವಿಷಯದಲ್ಲಿ ಸುಮ್ಮನಿದ್ದವು. ಏಕೆಂದರೆ ತಾವು ಆಗ ಪಡೆಯುತ್ತಿದ್ದ ರಾಜಧನದಿಂದ ತೃಪ್ತಿಹೊಂದಿದ್ದವು. ಇನ್ನು ಅಧಿಕಪ್ರಮಾಣದಲ್ಲಿ ರಾಜಧನ ಕೇಳಿದರೆ ಅಂತರರಾಷ್ಟ್ರೀಯ ತೈಲ ಕಂಪನಿಗಳು ತಮ್ಮ ದೇಶಗಳಲ್ಲಿ ಕೈಗೊಳ್ಳುತ್ತಿದ್ದ ತೈಲ ಕೈಗಾರಿಕಾಭಿವೃದ್ಧಿಯನ್ನೇ ಕಡೆಗಣಿಸಬಹುದೆಂಬ ಹೆದರಿಕೆ ಇತ್ತು. ಜೊತೆಗೆ ಆಗ ತೈಲಕ್ಕೆ ಇದ್ದ ಬೇಡಿಕೆಯು ಈಗಿನಷ್ಟು ಇರಲಿಲ್ಲ ಎಂಬುದನ್ನು ತಿಳಿದು-ಕೊಂಡಿದ್ದವು. ಅಂತರರಾಷ್ಟ್ರೀಯ ಕಂಪನಿಗಳು ಅರಬ್ ರಾಷ್ಟ್ರಗಳಿಂದ ಕೊಂಡೊಯ್ಯುತ್ತಿದ್ದ ತೈಲ ಪ್ರಮಾಣವನ್ನು ಕಡಿಮೆ ಮಾಡಿ ತಮಗೆ ಕೊಡುತ್ತಿದ್ದ ರಾಜ-ಧನವನ್ನು ಕಡಿಮೆ ಮಾಡಬಹುದೆಂಬ ಭೀತಿ ಇದ್ದಿತು.

೧೯೫೭ ಆದ ಮೇಲೆ ಪ್ರಪಂಚದ ಎಲ್ಲಾ ಕಡೆಯೂ ತೈಲಕ್ಕೆ ಅಧಿಕ ಬೇಡಿಕೆ ಉಂಟಾಯಿತು. ವಸಾಹತು ದೇಶಗಳೂ ಕೂಡ ಆರ್ಥಿಕಾಭಿವೃದ್ಧಿ ಕಡೆಗೆ ಗಮನ ಕೊಡಲು ಆರಂಭಿಸಿದ್ದರಿಂದ ತೈಲದ ಪ್ರಾಮುಖ್ಯತೆ ಹೆಚ್ಚಿತು. ಅಂತರರಾಷ್ಟ್ರೀಯ ತೈಲ ಕಂಪನಿಗಳು ತಮ್ಮ ವ್ಯಾಪಾರ ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ತೈಲದ ಬೆಲೆಯಲ್ಲಿ ಕಡಿತ ಉಂಟುಮಾಡಿ ಪೈಪೋಟಿ ಆರಂಭಿಸಿದವು. ಇದರಿಂದ ಅವುಗಳಿಗೆ ಬರುತ್ತಿದ್ದ ಲಾಭಾಂಶ ಕಡಿಮೆಯಾಯಿತು. ಲಾಭಾಂಶ ಕಡಿಮೆಯಾದರೂ ಪರವಾಯಿಲ್ಲ ತಮ್ಮ ವ್ಯಾಪಾರವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಬೆಲೆ ಕಡಿತವನ್ನು ಮುಂದುವರೆಸಿದವು. ಬೆಲೆ ಕಡಿಮೆ ಆದುದರಿಂದ ತೈಲ ಬಾವಿಗಳನ್ನು ಹೊಂದಿದ್ದ ಅರಬ್ ರಾಷ್ಟ್ರಗಳಿಗೆ ಬರುತ್ತಿದ್ದ ರಾಜಧನ ಕಡಿಮೆಯಾಯಿತು. ೧೯೫೪ ರಿಂದ ಈಚೆಗೆ ತೈಲ ಬೆಲೆಯ ಆಧಾರದ ಮೇಲೆ ರಾಜಧನ ಕೊಡಲು ತೈಲ ಕಂಪನಿಗಳು ಅರಬ್ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಂಡಿದ್ದವು. ಇದರ ಪರಿಣಾಮವಾಗಿ ಅರಬ್ ರಾಷ್ಟ್ರಗಳ ಬಾವಿಗಳಿಂದ ತೆಗೆಯಲ್ಪಟ್ಟ ಎಣ್ಣೆ ಪ್ರಮಾಣ ಅಧಿಕಗೊಂಡರೂ, ಅವುಗಳಿಗೆ ದೊರೆಯುತ್ತಿದ್ದ ರಾಜ-ಧನದ ಮೊತ್ತ ಅಧಿಕಗೊಳ್ಳಲಿಲ್ಲ. ಅನೇಕ ಸಂದರ್ಭಗಳಲ್ಲಿ ಅರಬ್ ರಾಷ್ಟ್ರಗಳಿಗೆ ದೊರೆಯುತ್ತಿದ್ದ ರಾಜಧನದಲ್ಲಿ ಶೇಕಡಾ ೫ ರಿಂದ ೭೧ರಯು ವರೆಗೆ ಖೋತಾ ಆಯಿತು. ಆಗ ಅರಬ್ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಒಕ್ಕೂಟ ರಚಿಸಿಕೊಳ್ಳಬೇಕಾಯಿತು. ಅಂತರರಾಷ್ಟ್ರೀಯ ತೈಲ ಕಂಪನಿಗಳು ಕಡಿಮೆ ಬೆಲೆಗೆ ತೈಲ ಮಾರಿದರೂ ಅವು ತೈಲ ಬಾವಿಗಳನ್ನು ಹೊಂದಿರುವ ರಾಷ್ಟ್ರಗಳಿಗೆ ಕೊಡುವ ರಾಜಧನವನ್ನು ಕಡಿಮೆ ಮಾಡಬಾರದು ಎಂಬ ನಿರ್ಧಾರ

ಕೈಗೊಂಡು ೧೯೬೦ ರಲ್ಲಿ ತೈಲ ರಫ್ತುಮಾಡುವ ಶಕ್ತಿ ಹೊಂದಿರುವ ೧೧ ರಾಷ್ಟ್ರಗಳು ಒಟ್ಟಾಗಿ ಒಂದು ಒಕ್ಕೂಟ ರಚಿಸಿಕೊಂಡವು. ಒಕ್ಕೂಟ ರಚಿಸಿಕೊಂಡ ಮೇಲೆ ತಮ್ಮ ದೇಶದಿಂದ ರಫ್ತಾಗುವ ಎಣ್ಣೆಯ ಪ್ರಮಾಣವನ್ನು ಗಣನೆಗೆ ತೆಗೆದು-ಕೊಂಡು ತಮಗೆ ಅಧಿಕ ಬೆಲೆ ಬೇಕೆಂದು ಕೇಳಲಾರಂಭಿಸಿದವು. ತಮ್ಮ ತೈಲಕ್ಕೆ ಅಧಿಕ ಬೆಲೆ ಕೊಡದಿದ್ದರೆ ತೈಲದ ರಫ್ತು ವ್ಯಾಪಾರವನ್ನು ಕಡಿತಗೊಳಿಸುವುದಾಗಿ ಬೆದರಿಕೆ ಹಾಕಿದವು. ಅಭಿವೃದ್ಧಿಹೊಂದಿರುವ ರಾಷ್ಟ್ರಗಳು ತೈಲದ ಆಮದನ್ನು ಕಡಿಮೆ ಮಾಡಿಕೊಂಡು ತಮ್ಮ ಆರ್ಥಿಕ ವ್ಯವಸ್ಥೆಯನ್ನು ಮಾಮೂಲಿನಂತೆ ನಡೆಸುವ ಶಕ್ತಿಹೊಂದಿರಲಿಲ್ಲ. ಅಭಿವೃದ್ಧಿಹೊಂದಿರುವ ರಾಷ್ಟ್ರಗಳು ಎಷ್ಟರ ಮಟ್ಟಿಗೆ ತೈಲ ಸರಬರಾಜಿಗಾಗಿ ಅರಬ್ ರಾಜ್ಯಗಳನ್ನೇ ಅವಲಂಬಿಸಿವೆ ಎಂಬುದು ಈ ಕೆಳಗಿನ ಕೋಷ್ಟಕದಿಂದ ಕಂಡುಬರುತ್ತದೆ.

೧೯೭೧ ರಲ್ಲಿ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದ ಪ್ರಮಾಣ
(ದಶಲಕ್ಷ ಮೆಟ್ರಿಕ್ ಟನ್ನುಗಳಲ್ಲಿ)

	ದೇಶ	ಒಟ್ಟು ಆಮದು	ಆಮದು ಅರಬ್ ರಾಜ್ಯಗಳಿಂದ	ಒಟ್ಟು ಆಮದು ವ್ಯಾಪಾರದಲ್ಲಿ ಅರಬ್ ರಾಜ್ಯಗಳಿಂದ ಬಂದ ಶೇಕಡಾ ಪ್ರಮಾಣ	ಅರಬ್ ರಾಜ್ಯಗಳಿಂದ ರಫ್ತು ಮಾಡಲ್ಪಟ್ಟ ಒಟ್ಟು ತೈಲದ ಶೇಕಡಾವಾರು
೧)	ಜಪಾನ್	೨೦೭	೧೫೭	೭೬	೨೫
೨)	ಉತ್ತರ ಅಮೇರಿಕ	೨೦೬	೧೬	೮	೩
೩)	ಜರ್ಮನಿ	೧೩೦	೩೬	೨೭	೬
೪)	ಬ್ರಿಟನ್	೧೨೦	೬೩	೫೩	೧೦
೫)	ಇಟಲಿ	೧೧೭	೬೪	೫೫	೧೦
೬)	ಫ್ರಾನ್ಸ್	೧೦೮	೪೬	೪೨	೭
೭)	ಹಾಲೆಂಡ್	೬೮	೩೭	೫೪	೬
೮)	ಉಳಿದ ಪಶ್ಚಿಮ ಯೂರೋಪಿನ ರಾಜ್ಯಗಳು	೧೦೦	೬೩	೬೩	೧೬
೯)	ಆಫ್ರಿಕಾ	೨೮	೨೧	೭೫	೩
೧೦)	ಪೂರ್ವ ದೇಶಗಳು	೯೩	೭೮	೮೪	೧೨
೧೧)	ದಕ್ಷಿಣ ಅಮೇರಿಕಾ	೪೩	೧೨	೨೮	೨
	Total—	೧೨೨೦	೫೯೩	೪೯	೧೦೦

ಆಧಾರ : ಸದರನ್ ಎಕಾನಮಿಸ್ಟ್ ಜೂನ ೧, ೧೯೭೩ ಪು. ೧೮.

ತೈಲವನ್ನು ಆಮದು ಮಾಡಿಕೊಳ್ಳುತ್ತಿರುವ ರಾಷ್ಟ್ರಗಳ ಪರಿಸ್ಥಿತಿಯನ್ನು ಅರಿತುಕೊಂಡು, ತೈಲ ರಫ್ತು ಮಾಡುವ ರಾಷ್ಟ್ರಗಳು ತಮ್ಮ ವರಮಾನ ಹೆಚ್ಚಿಸಿಕೊಳ್ಳುವ ಯತ್ನಮಾಡಿದವು. ಅಂತರರಾಷ್ಟ್ರೀಯ ತೈಲ ಕಂಪನಿಗಳು ವಿಧಿ ಇಲ್ಲದೆ ಅಧಿಕ ಪ್ರಮಾಣದಲ್ಲಿ ತೈಲಕ್ಕೆ ಬೆಲೆ ಕೊಟ್ಟು ಕೊಳ್ಳಲು ಒಪ್ಪಿಕೊಂಡವು. ತೈಲ ರಫ್ತು ಮಾಡುವ ರಾಷ್ಟ್ರಗಳ ಒಕ್ಕೂಟಕ್ಕೆ ಸೇರಿದ ರಾಜ್ಯಗಳು ಪ್ರಪಂಚದಲ್ಲಿ ಉತ್ಪತ್ತಿಯಾಗುವ ಒಟ್ಟು ತೈಲದ ಪೈಕಿ ಶೇಕಡಾ ೫೦ ಕ್ಕಿಂತಲೂ ಹೆಚ್ಚಾಗಿ ಉತ್ಪಾದಿಸುವ ಶಕ್ತಿ ಹೊಂದಿವೆ. ಜೊತೆಗೆ ಪ್ರಪಂಚದ ಬಹು ದೇಶಗಳಿಗೆ ಇವು ರಫ್ತು ಮಾಡುವ ಶಕ್ತಿ ಹೊಂದಿವೆ. ಆದುದರಿಂದ ಅಂತರರಾಷ್ಟ್ರೀಯ ತೈಲ ಕಂಪನಿಗಳು ಮೇಲ್ಕಂಡ ಒಕ್ಕೂಟ ರಾಷ್ಟ್ರಗಳು ಷರತ್ತುಗಳನ್ನು ಒಪ್ಪಿಕೊಳ್ಳಬೇಕಾಯಿತು. ಹೀಗೆ ೧೯೭೩ ರಿಂದ ಈಚೆಗೆ ಖನಿಜತೈಲದ ವ್ಯಾಪಾರದಲ್ಲಿ ಖನಿಜತೈಲ ರಫ್ತು ಮಾಡುವ ದೇಶಗಳ ಕೈ ಮೇಲಾಗಿದೆ ಎನ್ನಬಹುದು. ಅಂತರರಾಷ್ಟ್ರೀಯ ತೈಲ ಕಂಪನಿಗಳು ತಮ್ಮ ಮೊದಲಿನ ಸ್ಥಾನ ಕಳೆದುಕೊಂಡಿವೆ.

ಬದಲಾದ ಪರಿಸ್ಥಿತಿಯ ಪರಿಣಾಮವಾಗಿ ಅನೇಕ ರಾಷ್ಟ್ರಗಳ ಆರ್ಥಿಕ ಸ್ಥಿತಿಯಲ್ಲಿ ಏರುಪೇರು ಆಗಿದೆ. ಇಂಡಿಯಾದಂತಹ ರಾಷ್ಟ್ರಗಳು ಕಷ್ಟ ಸ್ಥಿತಿಗೆ ಒಳಗಾಗಿವೆ. ಸ್ವಲ್ಪ ಹೆಚ್ಚು ಕಡಿಮೆ ಇಂತಹ ರಾಷ್ಟ್ರಗಳು ಸಂಪೂರ್ಣವಾಗಿ ತೈಲ ಸರಬರಾಜಿಗಾಗಿ ಪರರಾಷ್ಟ್ರಗಳನ್ನು ಅವಲಂಬಿಸಿವೆ. ಯಾವ ಬೆಲೆಯನ್ನು ನಿಗದಿ ಮಾಡಿದರೂ ಒಪ್ಪಿಕೊಂಡು ತೈಲವನ್ನು ಕೊಳ್ಳಬೇಕಾಗಿದೆ. ಹೀಗಾಗಿ ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿವೆ.

ಖನಿಜತೈಲ ರಫ್ತು ಮಾಡುವ ದೇಶಗಳು ಹೇರಳವಾಗಿ ಹಣ ಸಂಪಾದಿಸಿವೆ. ಖನಿಜತೈಲದ ಬೆಲೆ ಕಳೆದ ಒಂದು ವರ್ಷದಲ್ಲಿ (೧೯೭೩-೭೪) ನಾಲ್ಕರಷ್ಟು ಹೆಚ್ಚಾದುದರಿಂದ ರಫ್ತು ಮಾಡುವ ದೇಶಗಳ ಒಕ್ಕೂಟಕ್ಕೆ ಸೇರಿದ ರಾಜ್ಯಗಳು ಕೋಟ್ಯಾಂತರ ಡಾಲರುಗಳನ್ನು ಸಂಪಾದಿಸಿವೆ. ಅಮೇರಿಕಾ ಸರ್ಕಾರದ ಬಾಂಡುಗಳನ್ನು ಕೊಳ್ಳುವುದರ ಮೂಲಕ ಅರಬ್ ರಾಜ್ಯಗಳು ತಾವು ಗಳಿಸಿದ ಹಣವನ್ನು ಬಂಡವಾಳ ರೂಪದಲ್ಲಿ ಹೂಡಿವೆ. ತಾವು ಗಳಿಸಿದ ಹಣವನ್ನು ತಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲದೆ ಇರುವುದರಿಂದ ಅರಬ್ ರಾಜ್ಯಗಳು ವಿದೇಶಗಳಲ್ಲಿ ಬಂಡವಾಳ ರೂಪದಲ್ಲಿ ತೊಡಗಿಸುವ ಕಾರ್ಯ ಕೈಗೊಂಡಿವೆ.

ಇರಾನ್ ದೇಶದ ಚಕ್ರವರ್ತಿ ಮಾತ್ರ ತೈಲ ವ್ಯಾಪಾರದಿಂದ ಗಳಿಸಿದ ಹಣವನ್ನು ತನ್ನ ದೇಶದ ಅಭಿವೃದ್ಧಿಗಾಗಿ ವಿನಿಯೋಗಿಸುವ ಆಸೆ ಇರಿಸಿಕೊಂಡಿದ್ದಾನೆ.

ಇನ್ನು ಹತ್ತು ವರ್ಷಗಳಲ್ಲಿ (೧೯೭೪-೧೯೮೪) ಪಶ್ಚಿಮಜರ್ಮನಿ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಮಟ್ಟಕ್ಕೆ ತನ್ನ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಮೇಲಕ್ಕೆ ಎತ್ತುವ ಯೋಜನೆ ಇರಾನಿನ ಚಕ್ರವರ್ತಿಗೆ ಇದೆ. ಈಗಾಗಲೇ ಇರಾನ್ ಈ ಕೆಳಗೆ ಕಂಡಂತೆ ವಿವಿಧ ದೇಶಗಳಿಗೆ ಸಾಲ ಒದಗಿಸಿದೆ:

೧) ಇಂಡಿಯಾ—೩೭೦ ದಶಲಕ್ಷ ಡಾಲರು; ೨) ಇಜಿಪ್ಟ್—೧೦೦೦ ದಶಲಕ್ಷ ಡಾಲರು; ೩) ಸಿರಿಯಾ—೧೫೦ ದಶಲಕ್ಷ; ೪) ಪಾಕಿಸ್ತಾನ—೫೮೦ ದಶಲಕ್ಷ; ೫) ಸೆನಗಲ್—೮.೫ ದಶಲಕ್ಷ; ೬) ಮೊರಾಕ್ಕೊ—೩೦ ದಶಲಕ್ಷ; ಮತ್ತು ೭) ಸೂಡಾನ್—೧೦೦ ದಶಲಕ್ಷ.

ಆದರೆ ಉಳಿದ ರಾಷ್ಟ್ರಗಳು ತಾವು ಗಳಿಸಿದ ಹಣವನ್ನು ವಿನಿಯೋಗಿಸಲಾರದೆ ಪುನಃ ಪಾಶ್ಚಾತ್ಯರಾಷ್ಟ್ರಗಳ ಬ್ಯಾಂಕುಗಳಲ್ಲಿ ಇರಿಸಿಕೊಂಡಿವೆ.

ಎರಡು ಮಿನಿಗವನಗಳು

ಪ್ರಭುರಾಜ ಅರಣಕಲ್

೧. ಹೋಗೊ ದಾಸಯ್ಯ

ಬಯಸುವುದರ
ಪೂರ್ವಕ್ಕೆ
ನೋಡು.
ಭಿತ್ತಿಗೆ ಬೃಹತ್ತಿಸಿದ
ಪೋಸ್ಟರಿನ ರಂಗು-ರಂಗಲ್ಲಿ
ವೃಥಾ ಭ್ರಮಿಸಿಕೊಂಡದ್ದು,
ನನ್ನ ಬದುಕುಚಿತ್ರದ ಅವಧಿ
ಪೂರ್ಣ ಕಾಣಸಿಕ್ಕದ್ದು.
ಅಂತೆ—
ಇಕ್ಕಲಾರದ ಕೈ ಎಂಜಲು.

೨. ಸ್ಪೃಶ್ಯಾಸ್ಪೃಶ್ಯ

ಶರಣ, ದಾಸರ
ತೀರ್ಪಿನಂತೆ ನಾನು
ಊರೊಳಗಿರುವ ಹೊಲೆಯ
ಅಂತೆ—
ಊರ ಹೊರಗಿನ
ಸ್ಪೃಶ್ಯರನ್ನೂ ಸ್ಪರ್ಶಿಸಲು
ಭಯವಾಗುತ್ತದೆ.
ಒಡನೆ—
ಈ ಹೊರಗು
ಒಳಗಿನದೆಲ್ಲ
ಲಯವಾಗುತ್ತದೆ.

ಬೀಳಿಗಿರಾಜ್ಯದಲ್ಲಿ ವೀರಶೈವಮತ

ಕೆ. ಜಿ. ವಸಂತಮಾಧವ

ಬೀಳಿಗಿ ಅರಸರು ಕರ್ಣಾಟಕದ ಮಲೆನಾಡಿನಲ್ಲಿ ಆಳಿದ ಪಾಳೆಯಗಾರರಲ್ಲಿ ಒಬ್ಬರಾಗಿದ್ದಾರೆ. ಇವರು ನಾಲ್ಕು ಶತಮಾನ (ಹದಿನಾಲ್ಕರಿಂದ ಹದಿನೆಂಟರ ವರೆಗೆ)ಗಳ ಕಾಲ ಬೀಳಿಗಿಯನ್ನು ಕೇಂದ್ರವನ್ನಾಗಿ ಮಾಡಿ ತಮ್ಮದೇ ರಾಜ್ಯ ಕಟ್ಟಿ ಆಳಿದರು.[೧] ಆಗಿನ ರಾಜಕೀಯದಲ್ಲಿ ಇವರು ಹೆಚ್ಚು ಪ್ರಬಲಶಕ್ತಿಯಾಗ ದಿದ್ದರೂ, ಕನ್ನಡನಾಡಿನ ಸಂಸ್ಕೃತಿಯನ್ನು ಬೆಳಗಿಸುವಲ್ಲಿ ಇವರು ಹೆಚ್ಚು ಯಶಸ್ವಿಯಾಗಿದ್ದರೆಂದು ಐತಿಹಾಸಿಕ ದಾಖಲೆಗಳು ರುಜುಪಡಿಸುತ್ತವೆ. ಇವರ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಧರ್ಮಕ್ಕೆ ನೀಡಿದ ಪ್ರೋತ್ಸಾಹ ಅಮೂಲ್ಯ ವಾದದ್ದು. ಜೈನ ಮತ್ತು ವೀರಶೈವ ಮತಗಳಿಗೆ ಇವರು ನೀಡಿದ ಪ್ರೋತ್ಸಾಹ ಇಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳನ್ನು ಬೆಳೆಸಲು ಸ್ಫೂರ್ತಿಯನ್ನಿತ್ತಿವೆ. ಐತಿ ಹಾಸಿಕ ದಾಖಲೆಗಳ ಆಧಾರದಿಂದ ಬೀಳಿಗಿ ರಾಜ್ಯದಲ್ಲಿ ವೀರಶೈವ ಮತದ ಆಗ ಮನ, ಅದರ ಬೆಳವಣಿಗೆ, ಅದರ ವೈಶಿಷ್ಟ್ಯ ಮತ್ತು ಇದು ಯಾವ ರೀತಿಯಲ್ಲಿ ಕನ್ನಡನಾಡಿನ ಸಂಸ್ಕೃತಿಯನ್ನು ಬೆಳೆಸಿತೆಂಬುದನ್ನು ಈ ಲೇಖನದಲ್ಲಿ ತಿಳಿಸ ಲಾಗುವುದು.

ಬೀಳಿಗಿ ಅರಸರು ಹದಿನಾರನೆಯ ಶತಮಾನದ ವರೆಗೆ ಜೈನ ಮತಾವ ಲಂಬಿಗಳು, ಈ ಕಾಲದಲ್ಲೇ ಬೀಳಿಗಿಯ ರತ್ನತ್ರಯ ಮತ್ತು ಇನ್ನಿತರ ಬಸದಿ ಗಳು ಕಟ್ಟಲ್ಪಟ್ಟವು. ಬೀಳಿಗಿ ಅರಸರು ಜೈನರಾಗಿದ್ದರೂ, ಶಿವದೇವಾಲಯಕ್ಕೂ ಪ್ರೋತ್ಸಾಹವನ್ನಿಡುತ್ತಿದ್ದರು. ಬೀಳಿಗಿಯ ರಂಗರಾಜ ಒಡೆಯರು ಶಿವಾಲಯ ವನ್ನು ಕಟ್ಟಿಸಿದನೆಂದು ಕ್ರಿ. ಶ. ೧೫೯೨ ಬೀಳಿಗಿ ರತ್ನತ್ರಯ ಬಸದಿಯಲ್ಲಿರುವ ಒಂದು ಶಾಸನ ತಿಳಿಸುತ್ತದೆ.[೨] ಕ್ರಿ. ಶ. ೧೫೭೦ರ (ಶಕ ೧೪೯೨) ಬೀಳಿಗಿ ವಿರೂಪಾಕ್ಷ ದೇವಾಲಯದಲ್ಲಿರುವ ಶಾಸನದಂತೆ ವೀರಪ್ಪ ಒಡೆಯರ ರಾಣಿ ವೀರಮ್ಮಳು 'ಅಕ್ಷಯ ಲಕ್ಷಣವಾದ' ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ, ತಮ್ಮ ಪತಿ ವೀರಪ್ಪ ಒಡೆಯರಿಗೆ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಬೇಕೆಂದೂ ಮತ್ತು ತಮಗೆ 'ಶಿವಸಾಹಾಯೋಜ್ಯವಾಗಬೇಕೆಂದು' ತಮ್ಮ ಕುವರ ನರಸಪ್ಪ ಒಡೆಯರ ಕೈಯಲ್ಲಿ ಈ ದೇವಸ್ಥಾನಕ್ಕೆ ಗ. ೮೭೧೧೨೭೧೧ ಭತ್ತ, ಖಂಡಿ ೧೧೦ನ್ನು

ದಾನಮಾಡಿದಳು.[೩] ಈ ಶಾಸನದಲ್ಲಿರುವ 'ತಮಗೆ ಶಿವಸಾಹಾಯೋಜ್ಯ'ವಾಗಬೇಕೆಂಬ ಶಬ್ದದಿಂದ ಶೈವಮತ ಪ್ರಭಾವ ತೋರಿಬಂದರೂ, ಬೀಳಗಿ ಅರಸರು ಜೈನರಾಗಿಯೇ ಇದ್ದರು. ಆದರೆ ಶೈವಮತವು ಈ ರಾಣಿಯರ ಮೇಲೆ ಪ್ರಭಾವ ಬೀರಿದೆಯೆಂದು ಈ ಶಾಸನ ತಿಳಿಸುವುದನ್ನು ನಾವು ಅಲ್ಲಗಳೆಯುವಂತಿಲ್ಲ. ಈ ಎರಡು ಶಾಸನಗಳಲ್ಲಿ ವೀರಶೈವ ಗುರುಗಳ ವಿಚಾರ ಉಲ್ಲೇಖವಿಲ್ಲದೆ ಇರುವುದರಿಂದಲೂ ಮತ್ತು ಇಲ್ಲಿ ಬಿಟ್ಟ ದಾನಗಳು ಬ್ರಾಹ್ಮಣರಿಗೆ ಆಗಿರುವುದರಿಂದ, ಈ ಅರಸರು ವೀರಶೈವರಲ್ಲವೆಂದು ಮತ್ತು ಈ ಶಾಸನಗಳು ಇವರ ಧಾರ್ಮಿಕ ಸಹಿಷ್ಣುತೆಯನ್ನು ತಿಳಿಸುತ್ತದೆಯೆಂದು ತಿಳಿಯಬೇಕಾಗುತ್ತದೆ.

ಬೀಳಗಿ ಅರಸರು ಯಾವ ಕಾಲದಲ್ಲಿ ಯಾರಿಂದ ಮತ್ತು ಹೇಗೆ ಜೈನ ಮತವನ್ನು ಬಿಟ್ಟು ಶೈವಮತಾವಲಂಬಿಗಳಾದರೆಂಬುದನ್ನು ತಿಳಿಯುವ ಅಗತ್ಯವಿದೆ. ಬಿ. ಶಿವಮೂರ್ತಿಶಾಸ್ತ್ರಿಗಳ ಅಭಿಪ್ರಾಯದಂತೆ 'ಕೆಳದಿ ಅರಸರು ಬೀಳಗಿಯ ಜೈನ ರಾಜರಲ್ಲಿ ಸಂಬಂಧವನ್ನು ಮಾಡುವಾಗ ಕೆಳದಿಯ ವೀರಭದ್ರನು ಜೈನರ ರಾಜರನ್ನು ವೀರಶೈವರನ್ನಾಗಿ ಮಾಡಿಸಿಯೇ ಲಗ್ನಸಂಬಂಧ ಬೆಳೆಸಿರುವನು.' ಆದರೆ ಇದು ಕೂಡಾ ಊಹೆಯೇ ಆಗಿದೆ. ಕೆಳದಿ ಅರಸರು ಬೀಳಗಿಯ ಅರಸರನ್ನು ವೀರಶೈವರನ್ನಾಗಿ ಮತಾಂತರಿಸಿದರೆನ್ನುವುದಕ್ಕೆ ಇಷ್ಟರವರೆಗೆ ಯಾವ ಪುರಾವೆಗಳೂ ಸಿಗಲಿಲ್ಲ. ಹದಿನಾರನೆಯ ಶತಮಾನದಲ್ಲಿ ಜೈನಮತ ವಿದ್ವಾಂಸರು ಬೀಳಗಿ ಅರಸರ ಮೇಲೆ ಹೆಚ್ಚಿನ ವರ್ಚಸ್ಸು ಬೀರಿ ಅವರಿಂದ ಜೈನಮತವನ್ನು ಬೆಳಗಿಸುವಂತೆ ಮಾಡಿದರು. ಆದರೆ ಹದಿನೇಳನೆಯ ಶತಮಾನದಲ್ಲಿನ ಬೀಳಗಿ ಶಾಸನಗಳಲ್ಲಿ ಜೈನ ವಿದ್ವಾಂಸರ ಪ್ರಾಬಲ್ಯ ಕಡಿಮೆಯಾದವನ್ನು ನಾವು ನೋಡುತ್ತೇವೆ. ಜೈನಮತದ ದೀವಟಿಗೆಗಳಂತಿದ್ದ ಈ ವಿದ್ವಾಂಸರ ಪ್ರಭಾವ ಕಡಿಮೆಯಾದೊಡನೆ ಅರಸರಿಗೆ ಜೈನಮತದಲ್ಲಿನ ಆಸಕ್ತಿ ಕಡಿಮೆಯಾಗುತ್ತ ಬಂದಿರಬೇಕು. ಅದೇ ಸಮಯದಲ್ಲಿ ರಾಣಿಯವರಿಗೆ ಶಿವನಲ್ಲಿ ಹೆಚ್ಚಿನ ಆಸಕ್ತಿ ಬೆಳೆಯುತ್ತ ಬಂದುದನ್ನು ಬೀಳಗಿ ಅರಸರ ಶಾಸನ ಮತ್ತು ಅವರ ಕುರಿತಾದ ಕಾವ್ಯಗಳು ಸಮರ್ಥಿಸುತ್ತವೆ.[೪] ಈ ಎರಡು ಕಾರಣಗಳು ಬೀಳಗಿ ರಾಜ್ಯದಲ್ಲಿ ವೀರಶೈವಮತವನ್ನು ಪ್ರಾಬಲ್ಯಕ್ಕೆ ತಂದವು. ಕ್ರಿ. ಶ. ೧೬೪೩ ರಲ್ಲಿ ಬೀಳಗಿ ಅರಸರು ವೀರಶೈವರಾಗಿದ್ದರೆಂಬುದು ಸತ್ಯ. ಇದನ್ನು ಈ ಕಾಲದಲ್ಲಿ ಸಿಕ್ಕಿದ ಘಂಟೇಂದ್ರ IVನ ಶಾಸನವು ಸಮರ್ಥಿಸುತ್ತದೆ. ಈ ಶಾಸನದಂತೆ "ಶಿವಭಕ್ತನಾದ ಘಂಟೇಂದ್ರನು ಕಾಡುಮಠದ ಶಾಂತ ಬಸವರಾಜದೇವರ ಶಿಷ್ಯರಾದ ಮಹಾಪ್ರಭು ಮಹತ್ತಿನ ಮಠದ ಪಂಚಮಹಾಸಿಗ ಬಸವಲಿಂಗದೇವರಿಗೆ ಅವರ ಕೇಳಿಕೆಯಂತೆ ಸಿದ್ಧಾಪುರದ ತಮ್ಮ ಮಠದಲ್ಲಿನ ಧರ್ಮಕಾರ್ಯ ನಡೆಸಲು ೧೦೪ ವರಹದ ಭೂಮಿಯನ್ನು ಶಿರಗಲಿ, ಚಿಕ್ಕಬೈಲಹಳ್ಳಿ ಮತ್ತು ಹೊರಕಾಡುಗಳಲ್ಲಿ

ಕೊಟ್ಟನು.” ಈ ಶಾಸನವು ಬೀಳಗಿ ಅರಸರು ವೀರಶೈವಮತವನ್ನು ಅವಲಂಬಿಸಿದ್ದರೆಂದು ತಿಳಿಸುವುದರೊಂದಿಗೆ, ಇಲ್ಲಿ ವೀರಶೈವ ಮಠಗಳು ಕ್ರಮಬದ್ಧ ಶ್ರೇಣಿಯುತವಾಗಿ (Hierarehical) ಸುಸಂಘಟಿತವಾಗಿದ್ದು ಮತ್ತು ನಿಷ್ಠಾವಂತರಾದ ಜಂಗಮಗುರುಗಳಿದ್ದರೆಂದು ತಿಳಿಸುವುದನ್ನು ನಾವು ಗಮನದಲ್ಲಿಡಬೇಕು. ಈ ನಿಷ್ಠಾವಂತ ಜಂಗಮಗುರುಗಳ ಪ್ರಭಾವ ಬೀಳಗಿ ಅರಸರ ಮೇಲಾಗಿ, ಅದು ಅವರನ್ನು ವೀರಶೈವರನ್ನಾಗಿ ಮಾಡಿದುದಲ್ಲದೇ, ಅವರು ಜಂಗಮಗುರುಗಳಿಗೆ ತಮ್ಮ ಮಠದಲ್ಲಿ ಧರ್ಮಕಾರ್ಯವನ್ನು ನಡೆಸಲು ಉಂಬಳಿ ಅಥವಾ ದಾನ ಕೊಡುವಂತೆ ಪ್ರೇರೇಪಿಸಿತೆಂದು ತಿಳಿಸಿದರೆ ತಪ್ಪಾಗಲಿಕ್ಕಿಲ್ಲ. ಬೀಳಗಿ ನಾಲ್ಕನೆಯ ಘಂಟೇಂದ್ರನು ಲಿಂಗಧಾರಣೆ ಮಾಡಿದ್ದುದರಿಂದ ಹುಚ್ಚು ಹಿಡಿದು ಸತ್ತನೆಂಬ ಕತೆ ಜೈನರಲ್ಲಿ ಪ್ರಚಾರ ಇದೆ.[೬]

ಘಂಟೇಂದ್ರ ಮತ್ತು ಅವನ ಉತ್ತರಾಧಿಕಾರಿಗಳು ವೀರಶೈವರಾಗಿ ಆ ಮತವನ್ನು ಬೆಳೆಸಿ ಪೋಷಿಸಿದರೆಂಬುದಕ್ಕೆ ಹಲವಾರು ಶಾಸನಗಳು ಆಧಾರವನ್ನೀಡುತ್ತವೆ. ಬೀಳಗಿ ಶಿವಪ್ಪ ನಾಯಕರು[೮] ದೊಡ್ಡ ದೇವಣ್ಣ ನಾಯಕರು ಸಿದ್ದಾಪುರದಲ್ಲಿ ಕಟ್ಟಿದ ಮಠದಲ್ಲಿ ನಡೆಯುವ ಧರ್ಮಕ್ಕೆ ಚಿಕ್ಕಬಯಲಹಳ್ಳಿ ಮತ್ತು ಹೊಸೂರು ಹಳ್ಳಿಗಳಲ್ಲಿರುವ ಸ್ಥಳಗಳನ್ನು ಉಂಬಳಿಯಾಗಿ ಕ್ರಿ. ಶ. ೧೬೬೫ (ಶಕ ೧೫೮೮)ರಲ್ಲಿ ಬಿಟ್ಟನು[೮a]. ಕ್ರಿ ಶ. ೧೬೬೭ರಲ್ಲಿ ಇವನು ಶಿವಾಚಾರಸಂಪನ್ನರಾದ ಸೋಮಣ್ಣ (ಸೋಮಪ್ಪ) ದೇವರಿಗೆ ಕೆಲವು ಗದ್ದೆ ತೋಟ ಮನೆಗಳಿರುವ ಕೊಂಡಹಳ್ಳಿಯಲ್ಲಿರುವ (ಸೊರಬ ತಾಲೂಕ) ಹೆಗ್ಗರಹಳ್ಳಿ ಸ್ಥಳವನ್ನು (೧೩೧ ವರಹ ಉತ್ಪತ್ತಿ) ತೆರಿಗೆ ರಹಿತವಾಗಿ ವಂಶಪಾರಂಪರ್ಯವಾಗಿ, ನಿರಂತರವಾಗಿ ಅನುಭವಿಸಬಹುದೆಂದು ನಿರೂಪಿಸಿ ಆ ಸ್ಥಳವನ್ನು ಕೊಟ್ಟನು[೯]. ಈ ಶಾಸನವು ವೀರಶೈವ ಗುರುಗಳಾದ ಸೋಮಪ್ಪದೇವರು ಶಿವಾಚಾರ ಸಂಪನ್ನರಾಗಿ ಬೀಳಗಿ ಶಿವಪ್ಪನಾಯಕನಿಂದ ದಾನ ಪಡೆದರೆಂದು ತಿಳಿಸುವುದಲ್ಲದೆ, ಇವರು ಇಲ್ಲಿ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದರೆಂದು ತಿಳಿಯಲು ಆಸ್ಪದವಿದೆ. ಈ ಸ್ವಾಮಿಯವರು “ಚತುಃಸೀಮೆಗೆ ಹಾಕಿದ ಲಿಂಗಮುದ್ರೆಕಲ್ಲಿಂದ ಒಳಗಾಗಿ ಸಲುವ ತೋಟ ಸ್ಥಳ ಗದ್ದೆ ಬಯಲು ಮಕ್ಕಿ ಹಕ್ಕಲು ಬೀಳು, ತಿಟ್ಟು, ಮಠ, ಮನೆ, ದಾಣ, ಅಂಗೋಡು ಮುಂತಾದ ಅಷ್ಟಭೋಗ ತೇಜ ಸಾಮ್ಯವುಳ್ಳ ಭೂಮಿ ಮನೆಗಳನ್ನು ಸಸಿ, ಬಳ್ಳಿ, ಬಾಳೆ, ನೆಡಿಸಿ ಗೈಸಿ ರೂಪಮಾಡಿಸಿ ಮುಲಿ ಒಕ್ಕಲುಗಳ ಕೈಯ ಕಾಲುಕಾಲಕ್ಕೆ ಪ್ರತಿಯಲು ತೆರಸಿಕೊಳ್ಳು”[೧೦]ವ ಹಕ್ಕನ್ನು ಪಡೆದರು. ಬೀಳಗಿ ಒಂದನೆಯ ಶಿವಪ್ಪನ ಕಾಲದಲ್ಲೇ ಶಿವಭಕ್ತಳೂ ಮುಮ್ಮಡಿ ಘಂಟೇಂದ್ರರ ಪುತ್ರಿಯೂ ಮತ್ತು ಕೆಳದಿ ಭದ್ರಯ್ಯನ ಪತ್ನಿ, ಘಂಟೆ ಅಮ್ಮಾಜಿಯವರು ತಮ್ಮ ಮದುವೆಯಲ್ಲಿ ತನ್ನ ತಂದೆಯಿಂದ ಬಳುವಳಿಯಾಗಿ ಬೀಳಗಿಸೀಮೆಯಲ್ಲಿ ಸಿಕ್ಕಿದ

ಪ್ರದೇಶವಾದ ನಾಜೂರು ಮತ್ತು ಆರಮ್‌ದೂರು(Aramduru) (೫೦೦ ವರಹ) ಗ್ರಾಮಗಳನ್ನು ಪಿನ್ನಾರು ಗುಡಿಯ ವಿರೂಪಾಕ್ಷದೇವರ ಮಹಾಮತ್ತಿನ ಮಠಕ್ಕೆ ೧೬೬೫ರಲ್ಲಿ (೧೫೮೧ ಶಾಶಕ) ಉಂಬಳಿಯಾಗಿ ಬಿಟ್ಟಿದ್ದಳು[೧೧]. ಈ ಶಾಸನದಲ್ಲಿ ವಿರೂಪಾಕ್ಷದೇವನು ಧರ್ಮಶಾಸ್ತ್ರ ಪರಿಣತನೆಂದು ತಿಳಿಸಿದೆ.

ಬೀಳಗಿ ಇಮ್ಮಡಿ ಶಿವಪ್ಪನಾಯಕರೂ[೧೨] ವೀರಶೈವಮತದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರು. ಕ್ರಿ. ಶ. ೧೬೭೬ (೧೫೯೭ ಶಾ. ಶ.[೧೩]) ರಲ್ಲಿ ಇವನು ಹುಲುಗನಹಳ್ಳಿ ಚರಂತಿ ಹಿರೆಗುರುಶಾಂತದೇವರ ಶಿಷ್ಯ ಮಹಾಮತ್ತಿನ ಮಠಕ್ಕೆ ಒಳಗಾದ ಕೋಲೂರು ದೇವರಿಗೆ ನೀರೂಡಿ ಗ್ರಾಮುವನ್ನು ಅವರ ಕೇಳಿಕೆ ಯಂತೆ, ಅವರ ಕೈಯಿಂದ ೭೦ ವರಹವನ್ನು ತೆಗೆದುಕೊಂಡು, ಗುರುಶಾಂತ ದೇವರಿಗೆ ನಮಸ್ಕರಿಸಿ ಆ ಗ್ರಾಮುವನ್ನು ಶಿವಾರ್ಪಿತವಾಗಿ ಬಿಟ್ಟುಕೊಟ್ಟನು. ಇಷ್ಟಲ್ಲದೇ ಈ ಸ್ವಾಮಿಯವರು ಆ ಗ್ರಾಮದಲ್ಲಿ ಮಠವನ್ನು ಕಟ್ಟಿಕೊಂಡು "ಧರ್ಮ ವನ್ನು ಸಾಂಗವಾಗಿ, ಮಹಂತ ಪರಂಪರೆಯಾಗಿ ಸರ್ವಮಾನ್ಯವಾಗಿ ಸುಖದಿಂದ ಧರ್ಮವನ್ನು ನಡೆಸಿಕೊಂಡು ಹೋಗಬೇಕೆಂದು" ಈ ಶಾಸನದಲ್ಲಿ ವಿಧಿಸಿದ್ದು ಶಿವಪ್ಪನಿಗೆ ವೀರಶೈವ ಮತದಲ್ಲಿರುವ ಆಸಕ್ತಿಯನ್ನು ತಿಳಿಸುತ್ತದೆ.

ಇವನ ನಂತರ ಪಟ್ಟಕ್ಕೆ ಬಂದ ಬೀಳಗಿ ಒಂದನೆಯ ಸೋಮಶೇಖರ ನಾಯಕನು[೧೪] ಅಲಾಡಿಮಠದ ಪ್ರಮುಖನಾದ ಶಾಂತದೇವನ ಶಿಷ್ಯ ಬಸವಪ್ರಭು ದೇವರ ಭಕ್ತನಾಗಿದ್ದನು. ಇವರು ಶರಾವತಿ ನದಿಯಲ್ಲಿ ಕಟ್ಟಲಿರುವ ಮಠದಲ್ಲಿ ಧಾರ್ಮಿಕಸೇವೆ ನಡೆಸಲು ಕಾಕನಕುಳ್ಳಿಯಲ್ಲಿ ೧೨ ವರಹ ಬೆಲೆಯುಳ್ಳ ಪ್ರದೇಶ ವನ್ನು ಸೋಮಶೇಖರನು ಕ್ರಿ. ಶ. ೧೬೭೮ರಲ್ಲಿ ಉಂಬಳಿ ಬಿಟ್ಟಿದ್ದನು. ಈ ಉಂಬಳಿ ಬಿಡುವಾಗ ಮಠದಲ್ಲಿ ನಡೆಯುವ ಧಾರ್ಮಿಕವಿಧಿಯನ್ನು ಜಂಗಮ ಗುರುಗಳು ನಡೆಸಿಕೊಂಡು ಬರಬೇಕೆಂದು ಈ ಶಾಸನದಲ್ಲಿ ತಿಳಿಸಿದ್ದನು[೧೫]. ಈ ಸೋಮಶೇಖರನಾಯಕನು ಕ್ರಿ.ಶ. ೧೬೮೫ರಲ್ಲಿ ಗೋಕರ್ಣ ಮಹಾಬಲೇಶ್ವರ ದೇವರಲ್ಲಿ ನಡೆಯುವ ಏಕಾದಶಿ, ಪಂಚಪರ್ವ ಮತ್ತು ಶಿವರಾತ್ರಿ ಮಹಾಪೂಜೆ ಮತ್ತು ರುದ್ರಾಭಿಷೇಕಗಳಂತಹ ಧಾರ್ಮಿಕ ಕಟ್ಟಳೆಗಳನ್ನು ನಡೆಸಿಕೊಂಡು ಬರುವಂತೆ ೪೫ ವರಹವನ್ನು ಕಾಣಿಕೆಯಾಗಿ ಕೊಟ್ಟಿದ್ದನು. ಈ ಶಾಸನದ ಆರಂಭದ ಪಂಕ್ತಿಯಲ್ಲಿ "ಶ್ರೀಮದ್ ಗೋಕರ್ಣ ಮಹಾಬಲೇಶ್ವರ ಸ್ವಾಮಿಯ ದೇವರ ಶ್ರೀಪಾದ ಪದ್ಮಗಳಿಗೆ ಬೀಳಗಿ ಸೋಮಶೇಖರನಾಯಕರು ಮಾಡುವ ಬಿನ್ನಹ"[೧೬] ಎಂಬ ಉಕ್ತಿ ಇವನ ಶಿವಭಕ್ತಿಯನ್ನು ವ್ಯಕ್ತಮಾಡುತ್ತವೆ.

ಇವನ ನಂತರ ಆಳಿದ ಇಮ್ಮಡಿ ಸೋಮಶೇಖರ ನಾಯಕನು ನಿಷ್ಠಾವಂತ ವೀರಶೈವನಾಗಿದ್ದನು. ಇವನು ವೀರಶೈವ "ಚರರೊಳು | ಪಾವನ ಚರಿತ್ರ,

ನಿಷ್ಠರಂ ಗುರುಕುಲಂ | ಕೈವಲ್ಯಪತಿಯ ಭಕ್ತರ | ದೇವ ಮಹಾ ಪೃಥ್ವಿಗಥಿತ ಜಂಗಮವರಂ |" ಎಂದೂ ಮತ್ತು ಇವನು ಜಂಗಮರಿಗೆ ಅತ್ಯಂತ ಭಕ್ತಿಯಲ್ಲಿ ಷೋಡಶ ದಾನಗಳನ್ನು ನೀಡಿದ್ದನೆಂದು ಬೀಳಗಿ ಅರಸುಗಳ ವಂಶಾವಳಿ ತಿಳಿಸುತವೆ.[೧೭] ಇದೇ ರೀತಿಯಲ್ಲಿ ಇವನ ಪತ್ನಿ ಚೆನ್ನಮಲ್ಲಮ್ಮಾಜಿಗೂ ಜಂಗಮ, ಗುರುಗಳಲ್ಲಿ ಅತ್ಯಂತ ಭಕ್ತಿ ಇತ್ತು. ಇವಳು ಕ್ರಿ. ಶ. ೧೭೧೦ರಲ್ಲಿ ತನ್ನ ಪೂರ್ವರಿಗೆ ಶಿವ ಸಾಯುಜ್ಯವಾಗಲೆಂದು ಚೆನ್ನಮಲ್ಲಂಬಪುರ ಎಂಬ ಗ್ರಾಮದಲ್ಲಿನ ಕೆಲವು ಸ್ಥಳಗಳನ್ನು "ಶ್ರೀಮತ್ ಸಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ದೇವ ಪೃಥ್ವಿ ಮಹಾಮತ್ತಿಗೊಳಗಾದ ಚರಮೂರ್ತಿ ಮಹೇಶ್ವರದ ಉಪ್ಪಿನಹಳ್ಳಿ ಮಠದ ಮಹತ್ ದೇವರ ಶಿಷ್ಯರಾದ ಬಸವಲಿಂಗದೇವರಿಗೆ" ಬರೆಸಿ ಭೂ ಶ್ವಾಸ್ತಿ ಮಾಡಿಸಿದಳು.[೧೮] ಈ ಇಮ್ಮಡಿ ಸೋಮಶೇಖರ ನಾಯಕ ಮತ್ತು ಅವನ ಪತ್ನಿ ಚೆನ್ನಮಲ್ಲಮ್ಮರೂ "ಶ್ರೀಮತ್ ಸಜ್ಜನ್ ಶುದ್ಧ ಶಿವಾಚಾರ ಸಂಪನ್ನರಾದ ದೇವಪ್ರೀತ ಮಹಾಮತ್ತಿನೊಳಗಾದ ಸಾಸಿನಹಳ್ಳಿ ಮಲ್ಲಪ್ಪ ದೇವರ ಮಗ ಮಲ್ಲಿಕಾರ್ಜುನ ದೇವರಿಗೆ ಬನವಾಸಿ ಪನ್ನಿಚಾರ್ಸಿರಕ್ಕೆ ಸಲ್ಲುವ ಗುತ್ತಿವೆಂಟೆ ಒಳಗಣ, ಚಿಕ್ಕಬೈಲಹಳ್ಳಿ ಗ್ರಾಮ ಪುಂಜ್ಯಯಳ್ಳಿ" ಎಂಬ ಸ್ಥಳವನ್ನು ಕ್ರಿ ಶ. ೧೭೧೬ ರಲ್ಲಿ ಶಾಸನ ಭೂಶಾಸನ ಬರೆಸಿಕೊಟ್ಟರು.[೧೯] ಇವನ ನಂತರ ಪಟ್ಟಕ್ಕೆ ಬಂದವನು ವೀರಭದ್ರ. ಇವನು ಶಿವನ ಪರಮ ಭಕ್ತ. ಶಿವಾಚಾರರ ಪಂಕ್ತಿಯನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದನು. ಇವನು ಐಸೂರಿನಲ್ಲಿ ಶ್ರೀ ವೀರೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದನು.[೨೦] ಬೀಳಗಿ ಕೊನೆಯ ಅರಸನಾದ ಮುಮ್ಮಡಿ ಸೋಮಶೇಖರನು ವೀರಶೈವಮತವನ್ನು ಪ್ರೋತ್ಸಾಹಿಸುವಲ್ಲಿ ಹಿಂದೆ ಬೀಳಲಿಲ್ಲ. ಇವನು ಸಿದ್ದಾಪುರದ ಗಂಗಾಧರೇಶ್ವರ ದೇವಾಲಯದ ರಥೋತ್ಸವ ನಡೆಯಲು ಕಿ. ಶ. ೧೭೪೯ರಲ್ಲಿ ಕೆಲವು ಪ್ರದೇಶಗಳನ್ನು ದಾನನಾಡಿ ಅಲ್ಲಿ ಬರುತ್ತಿದ್ದ ಸರಕುಗಳ ಮೇಲಿನ ಕರವನ್ನು ವಿನಾಯತಿ ಮಾಡಿದನು.[೨೧]

ವೀರಶೈವಮತದ ವೈಶಿಷ್ಟ್ಯ :

ಬೀಳಗಿಯಲ್ಲಿ ವೀರಶೈವಮತ ಪ್ರಾಬಲ್ಯವಿದ್ದಾಗಲೂ ಇನ್ನಿತರ ಮತಗಳು ಯಾವ ತೊಂದರೆ ಇಲ್ಲದೆ ಬೆಳೆದವು. ಈ ಅರಸರು ನಿಷ್ಠಾವಂತ ವೀರಶೈವರಾಗಿರುವಾಗ ಯಾವ ಇನ್ನಿತರ ಮತಗಳನ್ನು ಹಿಂಸಿಸಲಿಲ್ಲ. ಬೀಳಗಿಯಲ್ಲಿರುವ ಜೈನ ಬಸದಿ ಮತ್ತು ಲಕ್ಷ್ಮೀನಾರಾಯಣ, ಸಿದ್ದಾಪುರದಲ್ಲಿರುವ ವಿನಾಯಕ ದೇವಾಲಯಗಳೇ ಇದಕ್ಕೆ ಸಾಕ್ಷಿ. ನಿಷ್ಠಾವಂತ ಶಿವಭಕ್ತನಾದ ಇಮ್ಮಡಿ ಬೀಳಗಿ ಸೋಮಶೇಖ ನಾಯಕನು ಜಂಗಮರೊಂದಿಗೆ ಬ್ರಾಹ್ಮಣರಿಗೆ ಮಾಡಿದ ದಾನ[೨೨] ಮತ್ತು ವೀರಭದ್ರನು ಭುವನಗಿರಿಯ ಬ್ರಾಹ್ಮಣರಿಗಾಗಿ ಭುವನೇಶ್ವರಿ ದೇವಾಲಯದ

ಪೂಜೆಗೆ ಬಿಟ್ಟ ವಿನಿಯೋಗಗಳು[೨೩] ಈ ಅರಸರ ಧಾರ್ಮಿಕ ಸಹಿಷ್ಣುತೆಯನ್ನು ತೋರಿಸುತ್ತದೆ. ಈ ಅರಸರು ವೀರಶೈವಮಠಕ್ಕೆ ಉಂಬಳಿ ಬಿಡುವಾಗ ಮಠದಲ್ಲಿ ಬರುವ ದೇವರು ಮುಂತಾದವರಿಗೆ ಲಿಂಗ, ಅಗ್ನಿ ಶ್ರಾವ ಧರ್ಮವನ್ನು ನಡೆಸಿಕೊಂಡು ಹೋಗಬೇಕೆಂದೂ, ಪೂರ್ವ ಮರ್ಯಾದೆಗಳನ್ನು ನಡೆಸಿಕೊಂಡು ಹೋಗಬೇಕೆಂದೂ, ಅಲ್ಲಿ ನಡೆಯುವ ಧಾರ್ಮಿಕ ಕಟ್ಟಳೆಗಳನ್ನು ನಡೆಸಿಕೊಂಡು ಹೋಗಬೇಕೆಂದೂ, ಬಂದಂತಹ ಅತಿಥಿಗಳನ್ನು ಆದರಿಸಬೇಕೆಂದು ಮತ್ತು ಇನ್ನಿತರ ಧಾರ್ಮಿಕ ಕಟ್ಟಳೆಗಳನ್ನು ಸಾಂಗವಾಗಿ ನಡೆಸಿಕೊಂಡು ಹೋಗಬೇಕೆಂದು ಅಲ್ಲಿನ ಗುರುಗಳಿಗೆ ಅಜ್ಞಾಪಿಸಿದ್ದರು.[೨೪] ಇವನ್ನೆಲ್ಲಾ ನಡೆಸಿಕೊಂಡು ಬಂದರೆ ಮಠಕ್ಕೆ ಬಿಟ್ಟ ಸ್ಥಳದಲ್ಲಿ ಸಸಿ ಬಳ್ಳಿ ಮತ್ತು ಬಾಳೆಗಳನ್ನು ನೆಡಿಸಿ-ಕೊಂಡು ಹೋಗುವ ವಿಶೇಷ ಅಧಿಕಾರವನ್ನು ಮಠಾಧೀಶರು ಪಡೆದಿದ್ದರು. ಬೀಳಗಿ ಬಸವೇಂದ್ರನು ಹಸಿದವರಿಗೆ ಅನ್ನ ಪಸುಳೆಗೆ ಹಾಲು ಬೆಣ್ಣೆ. ಜಾನುವಾರುಗಳಿಗೆ ಹುಲ್ಲುಗಳನ್ನಿತ್ತು ಧರೆಯನ್ನು ಪಾಲಿಸಿದನೆಂದು ಕೇಳುವಾಗ[೨೫] ಈ ನಿಷ್ಠಾವಂತ ವೀರಶೈವ ಬಸವೇಂದ್ರನ ಧರ್ಮ ಮಾನವೀಯವಾಗಿತ್ತೆಂದು ತಿಳಿಯ-ಬಹುದು.

ಇಮ್ಮಡಿ ಸೋಮಶೇಖರ, ವೀರಭದ್ರ ಮತ್ತು ಬಸವೇಂದ್ರರು ವೀರಶೈವ ಮತದೊಂದಿಗೆ ಕಲೆ ಸಾಹಿತ್ಯ ಮತ್ತು ವಿದ್ವತ್ತನ್ನು ಬೆಳಗಿಸಿದರೆಂದು ತಿಳಿಯುವಾಗ[೨೬] ವೀರಶೈವಮತ ಇವುಗಳಿಗೆ ಸ್ಫೂರ್ತಿಯನ್ನಿತ್ತಿದೆಯೆಂದು ತಿಳಿದರೆ ತಪ್ಪಾಗಲಿಕ್ಕಿಲ್ಲ. ಈ ಅರಸರಲ್ಲಿ ಇಮ್ಮಡಿ ಸೋಮಶೇಖರನು ಭರತ, ಗಣಿತ, ಗುರುತರ ಛಂದೋ ವಿಶೇಷ ಕೃತಿರಚನೆ ಮತ್ತು ಲಿಪಿಶಾಸ್ತ್ರಗಳಲ್ಲಿ ಪರಿಣಿತನೆಂದು ವಂಶಾವಳಿಯಿಂದ ತಿಳಿದುಬರುತ್ತದೆ.[೨೭] ಈ ವೀರಶೈವಮತದ ಪ್ರೇರಣೆಯಿಂದಲೇ ಬೀಳಗಿ ಅರಸರು ವಾಸ್ತುಶಿಲ್ಪವಾದ ವಿರೂಪಾಕ್ಷದೇವಾಲಯ ಮತ್ತು ಕಲ್ಲಿಂದರ ಮಠವನ್ನು ಬೀಳಗಿಯಲ್ಲಿ ಕಟ್ಟಿಸಿದರು.

ಉಪಸಂಹಾರ :

ವೀರಶೈವಮತವು ಹದಿನೇಳನೆಯ ಶತಮಾನದಿಂದ ಬೀಳಗಿ ರಾಜ್ಯದಲ್ಲಿ ಪ್ರಬಲವಾಯಿತು. ಆದರೆ ಈ ಪಂಥ ಪ್ರಬಲವಾಗುತ್ತಿರುವಾಗ ಇನ್ನಿತರ ಪಂಥಗಳನ್ನು ಪೀಡಿಸಲಿಲ್ಲ. ಈ ಪಂಥವನ್ನು ಅಂಗೀಕರಿಸಿದ ಬೀಳಗಿ ಅರಸರು ಧರ್ಮಸಹಿಷ್ಣುಗಳಾಗಿದ್ದರು. ವೀರಶೈವ ಪಂಥದ ಬೆಳವಣಿಗೆ ಅನುಕ್ರಮವಾಗಿ ಶಾಂತ ರೀತಿಯಲ್ಲಿ ನಡೆಯಿತು. ಜೈನ ಮತವನ್ನು ಬೀಳಗಿ ಅರಸರು ಏಕೆ ತ್ಯಜಿಸಿದರೆಂಬುದಕ್ಕೆ ಯಾವ ಐತಿಹಾಸಿಕ ಆಧಾರ ಸಿಗಲಿಲ್ಲದಿದ್ದರೂ, ಜೈನ ವಿದ್ವಾಂಸರ ಅಭಾವದಿಂದಾಗಿ ಆ ಅರಸರಿಗೆ ಜೈನ ಮತದಲ್ಲಿ ಉಪೇಕ್ಷೆ ಮತ್ತು ರಾಣಿಯರಿಗೆ ಶಿವನ ಒಲವುಗಳಿಂದಾಗಿ ಬೀಳಗಿ ಅರಸರು ಕ್ರಮೇಣ ವೀರಶೈವ

ಮತಾವಲಂಬಿಗಳಾದರೆಂದು ಊಹಿಸಲು ಸಾಧ್ಯತೆ ಇದೆ. ಬೀಳಗಿ ಅರಸರ ಆಶ್ರಯದಲ್ಲಿ ವೀರಶೈವಪಂಥವು ಮಹೋನ್ನತಿಯುಳ್ಳುದಾಗಿತ್ತು. ಈ ಪಂಥದ ಗುರುಗಳು ಶಿವಾಚಾರಸಂಪನ್ನರಾಗಿದ್ದರು. ಇಲ್ಲಿನ ಮಠಗಳು ಕ್ರಮಬದ್ಧವಾಗಿ ಸುಸಂಘಟಿತವಾಗಿದ್ದುವು. ಈ ಅರಸರು ಮಠದಲ್ಲಿ ಧಾರ್ಮಿಕ ಕಟ್ಟಳೆ ನಡೆಯುವಂತೆ ಆಜ್ಞಾಪಿಸಿ ಅದನ್ನು ನಡೆಸಿಕೊಂಡು ಬರಲು ಹೇರಳ ಉಂಬಳಿ ಬಿಟ್ಟಿದ್ದರು. ಒಟ್ಟಿನಲ್ಲಿ ಬೀಳಗಿರಾಜ್ಯದಲ್ಲಿ ವೀರಶೈವಪಂಥವು ಜ್ಞಾನದೀವಟಿಗೆಯಾಗಿ ಕಲೆ, ಸಾಹಿತ್ಯ, ವಿದ್ವತ್ತನ್ನು ಬೆಳೆಸಲು ಸ್ಫೂರ್ತಿಯನ್ನಿತ್ತಿತು.

ಅಡಿಟಿಪ್ಪಣಿ

೧ ಬೀಳಗಿರಾಜ್ಯವು ಉತ್ತರಕನ್ನಡಜಿಲ್ಲೆಯ ಸಿದ್ದಾಪುರ ತಾಲೂಕು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿರುವ ಸೊರಬ ತಾಲೂಕಿನ ಪ್ರದೇಶಗಳನ್ನೊಳಗೊಂಡಿತ್ತು. ಇವರ ರಾಜಧಾನಿ ಐಸೂರು. ಒಂದನೆಯ ಘಂಟೇಂದ್ರನು ರಾಜಧಾನಿಯನ್ನು ಬೀಳಗಿಗೆ ವರ್ಗಾಯಿಸಿದನು.

೨ ಪಂಜೆ ಮಂಗೇಶರಾಯರು: 'ಬೀಳಗಿಯ ಶಾಸನಗಳು'—ಪಂಜೆಯವರ ನೆನಪಿಗಾಗಿ (೧೯೫೨-ಪುತ್ತೂರು) ಪು. ೧೭. ರಂಗರಾಜನಿಗೆ ನರಸಿಂಹ ಎಂಬ ಹೆಸರಿದ್ದಿತ್ತೆಂದು ಬೀಳಗಿ ವಿರೂಪಾಕ್ಷ ದೇವಾಲಯದಲ್ಲಿರುವ ಶಾಸನ ತಿಳಿಸುತ್ತದೆ. ವಿವರ : ಮುಂದಿನ ಟಿಪ್ಪಣಿ ನೋಡಿರಿ.

೩ ಶರಣಸಾಹಿತ್ಯ ೧೮೬೨ ಸಂಪುಟ ೩ ಪು.೬೪೩–೬೪೬ —'ಬೀಳಗಿ ಅರಸುಗಳ ವಂಶಾವಳಿ'— ಶಿವಾನುಭವ (೧೯೨೭) ಆಶ್ವಾಸ ೧, ಪದ್ಯ ೧೨-೧೩.

೪ ಶಿವಮೂರ್ತಿಶಾಸ್ತ್ರಿ: 'ಬೀಳಗಿ ಅರಸರ ಧರ್ಮ'—ಶಿವಾನುಭವ ೧೯೨೭. ಪು. ೨೬.

೫ ಅಡಿಟಿಪ್ಪಣಿ ೩ ನೋಡಿ. ಮುಮ್ಮಡಿ ಘಂಟೇಂದ್ರನ ಪುತ್ರಿ ಘಂಟೆ ಅಮ್ಮಾಜಿಯು ತಾನು ಶಿವಭಕ್ತಳೆಂದು ಹೇಳಿಕೊಂಡಿದ್ದಾಳೆ. ವಿವರ : Mysore Archaeological Report 1943 No. 39 P. 122 ಈ ಶಾಸನದ ಕಾಲ ಕ್ರಿ. ಶ. 1666 (೧೫೮೯ ಶಾ. ಶ ಕ) ಇವರ ಕೆಳದಿಭದ್ರಯ್ಯನನ್ನು ಮದುವೆಯಾಗಿದ್ದಳು. ವಿವರ : ಲಿಂಗಣ್ಣಕವಿ ಕೆಳದಿನೃಪವಿಜಯಂ P. 85, 1973 ಅದೇ ರೀತಿಯಲ್ಲಿ ಮುಮ್ಮಡಿಘಂಟೇಂದ್ರನ ಪತ್ನಿ ಜಟ್ಟಮ್ಮನವರು ತಾವು ಕಟ್ಟಿಸಿದ ಸಿದ್ಧಿವಿನಾಯಕ ದೇವಸ್ಥಾನದ ಶಾಸನದಲ್ಲಿ ತಮಗೆ ಶಿವ ಸಹಾಯೋಜ್ಯವಾಗಬೇಕೆಂಬ ಉಲ್ಲೇಖನವಿರುವುದರಿಂದ ಇವರು ಶಿವನ ಮೇಲೆ ಒಲವು ತೋರಿಸಿದ್ದರೆಂದು ಊಹಿಸಲು ಸಾಧ್ಯತೆಯಿದೆ. Karnataka Inscription V No 73 P. 273 ಬೀಳಗಿ ಅರಸುಗಳ ವಂಶಾವಳಿಯು ಈ ಸಿದ್ಧಿವಿನಾಯಕ ದೇವಸ್ಥಾನವನ್ನು ಸಿದ್ಧಪ್ಪನಾಯಕನ ಪತ್ನಿ ಕಟ್ಟಿಸಿದಳೆಂದು ತಿಳಿಸುತ್ತದೆ. ವಂಶಾವಳಿ ಒಂದನೆಯ ಆಶ್ವಾಸ ಪದ್ಯ ೧೬೭.ಆದರೆ ಈ ಹೇಳಿಕೆ ಸರಿಯಲ್ಲ. ಏಕೆಂದರೆ ಈ ಕಾವ್ಯ ಸಮಕಾಲೀನವಲ್ಲ.

೬ M. A. R 1922-23 P. 104.

೭ ಪಂಜೆ ಮಂಗೇಶರಾಯರು : ಬೀಳಗೆ ಶಾಸನಗಳು—ಪಂಜೆಯವರ ನೆನಪಿಗಾಗಿ ಪು. ೨೨.

೮ ಇವನು ಘಂಟೇಂದ್ರನ ದತ್ತು ಪುತ್ರ ಇವನಿಗೆ ಒಂದನೆಯ ಬೀಳಗಿ ಶಿವಪ್ಪ ನಾಯಕನೆಂದು ಕರೆಯುತ್ತಾರೆ. ವಿವರ ವಂಶಾವಳಿ ಆಶ್ವಾಸ ಪ. ೧೪೧–೧೪೨.

೮A M. A. R 1922-23 ಪು ೧೦೧.

೯ ಅದೇ ೧೯೨೯ ಪು ೨೫೨–೫೩ ಇಲ್ಲಿ ಹೇಳಿದ ಕೊಂಡಹಳ್ಳಿ ಗ್ರಾಮವಾಗಿದೆ.

೧೦ ಅದೇ ೧೯೨೯ ಪು. ೨೫೩ ಪಂಕ್ತಿ ೪೩–೪೫.

೧೧ M. A.R 1949 No. 39 ಪು. ೧೨೨.

೧೨ ಇವನು ಒಂದನೆಯ ಶಿವಪ್ಪನ ನಂತರ ಪಟ್ಟಕ್ಕೆ ಬಂದನು. ವಂಶಾವಳಿ ಒಂದನೆಯ ಆಶ್ವಾಸ ಪದ್ಯ ೧೪೪.

೧೩ Ebigraphila Caruatica, viii; ತೀರ್ಥಹಳ್ಳಿ, No 70.

೧೪ ಇವನು ಒಂದನೆಯ ಶಿವಪ್ಪನಾಯಕನ ಇನ್ನೊಬ್ಬ ದತ್ತಕಪುತ್ರ. ಇಮ್ಮಡಿ ಶಿವಪ್ಪ ನಾಯಕನ ಸಹೋದರ. ವಂಶಾವಳಿ, ಒಂದನೆಯ ಆಶ್ವಾಸ ಪದ್ಯ ೧೪೬.

೧೫ M. A. R 1922-23, ಪು ೯೮

೧೬ Annual Report on South Indian Epigraphy 1940-41 No. 17 ಈ ಶಾಸನದ ಪಾಠ ದಿ| ಡಾ' ಪಿ. ಬಿ. ದೇಸಾಯಿಯವರಿಂದ ಸಿಕ್ಕಿತು.

೧೭ ವಂಶಾವಳಿ ೭ನೆಯ ಆಶ್ವಾಸ, ಪದ್ಯ ೧೬೩–೧೬೬.

೧೮ A. R. S. I. E of 1939-40 No, 7a.

೧೯ ಅದೇ, No 13a ಈ ಎರಡು ಶಾಸನಗಳ ಪಾಠಗಳನ್ನು ದಿ. ಪಿ. ಬಿ. ದೇಸಾಯಿಯವರು ನನಗೆ ಕೊಟ್ಟರು.

೨೦ ವಂಶಾವಳಿ ಎರಡನೆಯ ಅಶ್ವಾಸ ಪ. ೨೪೬.

೨೧ A. R. S. I. E. of 1939-40 No. 12 and 14 ಈ ಅರಸನ ಕುರಿತಾಗಿ ವಂಶಾವಳಿ ತಿಳಿಸುವುದಿಲ್ಲ. ಈ ಶಾಸನಗಳ ಪಾಠಗಳನ್ನು ಕೊಟ್ಟವರು ದಿ. ಪಿ. ಬಿ. ದೇಸಾಯಿಯವರು.

೨೨ ಅಡಿಟಿಪ್ಪಣಿ ೧೭ ನೋಡಿ.

೨೩ ವಂಶಾವಳಿ ಎರಡನೆ ಆಶ್ವಾಸ ಪದ್ಯ ೨೪೮

೨೪ M. A. R ೧೯೨೨–೨೩ ಪು. ೧೦೧, ೧೯೯ ಪು. ೨೫೩, E. C. VIII No. 70 ತೀರ್ಥಹಳ್ಳಿ.
A. R. S. I. E of 1930-40 No. 1i and 14.

೨೫ ವಂಶಾವಳಿ ಎರಡನೆಯ ಆಶ್ವಾಸ ಪದ್ಯ ೨೭೧.

೨೬ ಅದೇ ಪ. ೨೨, ೨೪೦, ೨೬೭.

೨೭ ಅದೇ ಪ. ೨೧. ೨೨.

ಈ ಲೇಖನವನ್ನು ಬರೆಯಲು ಹಲವಾರು ರೀತಿಯ ಸಲಹೆ ಮತ್ತು ಶಾಸನಗಳ ಪಾಠಗಳನ್ನು ಕೊಟ್ಟ ದಿ. ಪಿ. ಬಿ. ದೇಸಾಯಿಯವರಿಗೆ ಕೃತಜ್ಞತೆಗಳು.

ಭೂಮಿ - ನಾನು

ಸತೀಶ ಕುಲಕರ್ಣಿ

ಈ ನೆಲ—
ನೂರು ವರುಷಗಳಿಂದ
ಆಕಾಶದ ನೀಲಿ ಮುಖವನ್ನು
ವಾತಾವರಣದ ಬರಿ ಶಾಖದಿಂದ
ಖಾಲಿ ಗಾಜಿನಿಂದ ನೋಡಿನೋಡಿ
ಮಡಿಯಿಂದ—ಎದೆ ಕಾದು ಆವೆಯಾಗಿ
ಮೇಲಿಂದ ಮತ್ತೆಮತ್ತೆ ಅವೇ ಅಸಲಿ
ಹನಿಗಳು ಉದುರಿ, ಉದರದಲಿ ಒಕ್ಕಿ
ಬರುವ ವಸಂತಗಳಲಿ ಮೂಕ ವ್ಯಸನವ ಹಂಚಿ,
ಬಾಡಿ ಬೀಳುವ ಹೂಗಳನು, ಮುಕ್ಕಟ್ಟಿನಿಂದ ಮುಚ್ಚಿಟ್ಟು
ಕೊಳೆತು ಒಂದಾಗುವತನ ಕಾಯ್ದಿಟ್ಟ,
ಹರಿಯುವ ಈ ನದಿಗಳಿಂದ ಎದೆ ಕೊರೆಯಿಸಿಕೊಂಡು
ಹುಟ್ಟುವ ಬಂಡೆಗಳಿಗೆ ಕಂದರಗಳಿಗೆ ತಬ್ಬಿಟ್ಟು
ತಿರುಗುವ ಈ ಭೂಮಿಯು
ಕಚ್ಚೆಯ ನಿರಿಗೆಗಳಲಿ
ವಲಯುವಲಯುಗಳಲಿ
ಗತಕಾಲ ಸತ್ತು–ಹೂತಿರುವ ಹಸಿರುತನ
ಅದಕ್ಕೆ ಮಾತ್ರ ಗೊತ್ತು!
ಒಣಒಣ ಒರಟು ಎದೆಯು
ಆಳದಲ್ಲಿ ಅಡಗಿದ ಸಾವಿರ
ನೆನಪುಗಳ ಸೊತ್ತು!

ಪಂಪಭಾರತದ ಪಾಠಾಂತರಗಳು :
(ನವಮ, ದಶಮ, ಏಕಾದಶಾಶ್ವಾಸಗಳು)

ಹೇಮಲತಾ ಪದಕಿ

೯-೭೧ ಕುರುಕ್ಷೇತ್ರಯುದ್ಧದ ನಿರ್ಣಯವಾದಾಗ ಪಾಂಡವಪಕ್ಷಪಾತಿ ಶ್ರೀಕೃಷ್ಣ, ಪಾಂಡವರಿಗೆ ಜಯದೊರೆಯುವ ಹಾಗೆ ಪ್ರಯತ್ನಪಡಲುದ್ಯುಕ್ತನಾಗುತ್ತಾನೆ. ಈ ಉದ್ದೇಶದಿಂದ ಕರ್ಣನಲ್ಲಿಗೆ ಹೋಗಿ ಆತನ ಜನ್ಮರಹಸ್ಯವನ್ನು ಅರುಹುತ್ತಾನೆ. ಇದರಿಂದ ಕರ್ಣನ ಮನಸ್ಸಿನಲ್ಲಿ ದ್ವಂದ್ವವುಂಟಾಗುತ್ತದೆ. ಅಂತಹ ಆ ಮನಃಸ್ಥಿತಿಯನ್ನು ಈ ಪದ್ಯದಲ್ಲಿ ವರ್ಣಿಸಲಾಗಿದೆ. ಇಲ್ಲಿ ಬರುವ 'ಅಳ್ಳಾಡೆ' ಪದ ಚಿಂತನೀಯ. ಪಂ. ಭಾ. ದ ಮುದ್ರಿತಪ್ರತಿಯಲ್ಲಿ 'ಅಳ್ಳಾಡೆ' ಪದವಿದ್ದರೆ 'ಕ' ಪ್ರತಿಯಲ್ಲಿ 'ಅಬ್ಬ್ಯಾಕಡೆ' ಪಾಠವಿದೆ. ಅಳ್ಳಾಡು-ಅಲುಗಾಡುವುದು, ಅಬ್ಬ್ಯಾಕಡು-ನಾಶವಾಗುವುದು. ಕರ್ಣ ತನ್ನನ್ನು ಪೊರೆದು, ತನ್ನನ್ನೇ ನಂಬಿದ ದುರ್ಯೋಧನನಿಗೆ ಮೋಸಮಾಡಲು ಸಿದ್ಧನಾಗದೆ ವೈರಿಸೈನ್ಯ ನಾಶವಾಗುವ ಹಾಗೆ ಯುದ್ಧರಂಗದಲ್ಲಿ ಹೋರಾಡಿ, ಕುರುರಾಜನಿಗಿಂತ ತಾನೇ ಮೊದಲು ಅಳಿಯುವ ನಿರ್ಣಯವನ್ನು ಕೈಗೊಳ್ಳುತ್ತಾನೆ. ವೈರಿಸೈನ್ಯ ಅಲುಗಾಡುವ ಹಾಗೆ ಮಾಡುವುದರಲ್ಲಿ ಶೌರ್ಯ ಪ್ರದರ್ಶನಕ್ಕೆ ಅಥವಾ ಕಾದಿ ಮಡಿಯುವುದಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಇಲ್ಲಿ ವೈರಿಸೈನ್ಯ ನಾಶವಾಗುವ ಹಾಗೆ ಹೋರಾಡಿ ಸಾಯುತ್ತೇನೆ ಎಂಬರ್ಥದ 'ಅಬ್ಬ್ಯಾಕಡೆ' ಪಾಠವಿರಬೇಕೆಂದು ತೋರುತ್ತದೆ. ಡಾ. ಡಿ. ಎಲ್. ಎನ್. ಅವರೂ ಅಬ್ಬ್ಯಾಕಡೆ ಪಾಠವನ್ನೇ ಸ್ವೀಕರಿಸಿದ್ದಾರೆ. ಆದ್ದರಿಂದ ಈಗಿರುವ 'ಅಳ್ಳಾಡೆ' ಪಾಠಕ್ಕಿಂತ 'ಕ' ಪ್ರತಿಯ 'ಅಬ್ಬ್ಯಾಕಡೆ' ಪಾಠ ಉಚಿತವೆಂದು ತೋರುತ್ತದೆ.

೯-೯೩ ಶ್ರೀಕೃಷ್ಣನ ದೌತ್ಯಕಾರ್ಯ ವಿಫಲವಾಗಿ ಕುರುಕ್ಷೇತ್ರ ಯುದ್ಧದ ನಿರ್ಣಯವಾಗುತ್ತದೆ. ಆಗ ಧರ್ಮರಾಜ "ದುರ್ಯೋಧನ ನಮಗೆ ಭೂಮಿಯನ್ನು ಯುದ್ಧಮಾಡದೇ ಕೊಡುವುದಿಲ್ಲವೆಂದು ಹೇಳಿ ಯುದ್ಧವನ್ನು ನಿಶ್ಚಯಿಸಿದ್ದಾನೆ. ಅವನೇ ನಮ್ಮಲ್ಲಿ ಯುದ್ಧವನ್ನು ಬೇಡಿದ್ದಾನೆ. ಇನ್ನು ನಮಗೆ ತಡಬೇಡ" ಎಂದು ಹೇಳಿ ಯುದ್ಧಕ್ಕೆ ಸನ್ನದ್ಧನಾಗುತ್ತಾನೆ. ಈ ವಿಷಯವನ್ನೊಳಗೊಂಡ ಪದ್ಯದಲ್ಲಿ 'ಕೇಳ್ದಂ' ಪಾಠ ಗಮನಾರ್ಹವಾದದ್ದು. 'ಎಮ್ಮೊಳ್ ಕಳನಂ ಬೇಡೆಯ್ದೆ ಕೇಳ್ದಂ' ಘಟ್ಟನೆ ಇಲ್ಲಿಯ ದೋಷ ಎದ್ದುಕಾಣುತ್ತದೆ.

ಇದು ಅಜಾತಶತ್ರು ದುರ್ಯೋಧನನನ್ನುದ್ದೇಶಿಸಿ ಹೇಳುವ ಮಾತು. 'ಕೇಳ್ದಂ' ಪಾಠಕ್ಕೆ ಪಾಠಾಂತರಗಳೇನೂ ಇಲ್ಲ. ಆದರೂ ಇಲ್ಲಿ ಅರ್ಥದೋಷವುಂಟಾಗುವುದರಿಂದ ಇದನ್ನು ಕೇ[ಳ್ದಂ] ಎಂದು ಪರಿಷ್ಕರಿಸಬೇಕೆಂದು ತೋರುತ್ತದೆ. ಅಂದಾಗ ಮಾತ್ರ ಪದ್ಯದ ಉದ್ದೇಶ ನೆರವೇರುತ್ತದೆ. ಇಲ್ಲಿ ಯುದ್ಧವನ್ನು ಕೇಳಿದವನು ಧರ್ಮರಾಜನಲ್ಲ, ದುರ್ಯೋಧನ. 'ಕೇಳ್ದಂ' ಪಾಠವನ್ನಿಟ್ಟುಕೊಂಡರೆ ಇದಕ್ಕೆ ತದ್ವಿರುದ್ಧವಾದ ಅರ್ಥ ಉಂಟಾಗುತ್ತವೆ. ಆದ್ದರಿಂದ ಇಲ್ಲಿ ಕೇ[ಳ್ದಂ] ಪಾಠ ಉದ್ದೇಶಿತ ಅರ್ಥವನ್ನು ನೀಡುವ ಪಾಠವೆಂದು ಹೇಳಬಹುದು.

೧೦–೫ ವಚನ ಸಮಾಲೋಚನೆಯನ್ನು ಮಾಡುವುದಕ್ಕಾಗಿ ಕೌರವರಾಯ ಸಿಂಧುಜನಲ್ಲಿಗೆ ಬರುತ್ತಾನೆ. ಅಲ್ಲಿಗೆ ಬಂದ ಕೌರವರಾಯ 'ಮಣಿಮಯ ಹೇಮಾಸನ'ದಲ್ಲಿ ಕುಳಿತುಕೊಳ್ಳುತ್ತಾನೆ. ಇಲ್ಲಿ 'ಹೇಮಾಸನ' ಚಿಂತನೀಯ ಪದ. ಇದಕ್ಕೆ ಕ, ಖ, ಗ ಪ್ರತಿಗಳಲ್ಲಿ 'ಲೋಹಾಸನ'ವೆಂಬ ಪಾಠಾಂತರ ದೊರೆಯುತ್ತದೆ. "ಲೋಹಾಸನವು ಐದು, ಏಳು ಅಥವಾ ಒಂಬತ್ತು ಲೋಹಗಳ ಮಿಶ್ರಣದಿಂದ ರಚಿಸಿದ ಕಾಲುಗಳುಳ್ಳ, ಆ ಲೋಹದ ಪಟ್ಟಿಗಳಿಂದಲೇ ಹೆಣೆಯಲ್ಪಟ್ಟ ಮೇಲ್ಭಾಗವುಳ್ಳ, ಮಧ್ಯಭಾಗದಲ್ಲಿ ಹತ್ತಿಯ ಬಟ್ಟೆಯಿಂದ ಹೆಣೆಯಲ್ಪಟ್ಟ ಒಂದು ಪೀಠ"[೧] ಲೋಹಾಸನವೆಂಬ ಪಾಠವನ್ನು ಪಂಪ ಇದೇ ಕೃತಿಯ ಇತರೆಡೆಗಳಲ್ಲಿ (೯–೨೪, ೯–೨೮ ವ) ಬಳಸಿದ್ದಾನೆ. ಇದೊಂದು ಗೌರವಪೂರ್ಣವಾದ ಪೀಠ, ಆ ಕಾಲದಲ್ಲಿ ರೂಢಿಯಲ್ಲಿದ್ದ ವಿಶೇಷವಾದ ಆಸನ. ಲೋಹಾಸನಕ್ಕಿಂತ ಹೇಮಾಸನ ವೈಭವಯುತವಾದುದು, ಬೆಲೆಯುಳ್ಳುದು ಎಂಬ ಭಾವನೆಯಿಂದ ಡಾ. ಡಿ. ಎಲ್. ಎನ್. ಹಾಗೂ ಪಂ. ಭಾ. ದ ಸಂಪಾದಕರು 'ಹೇಮಾಸನ' ಪಾಠವನ್ನು ಇಟ್ಟುಕೊಂಡಂತಿವೆ. ಮಾನಸೋಲ್ಲಾಸದಲ್ಲಿಯ ಲೋಹಾಸನದ ಬಗೆಗಿನ ವಿವರಣೆಯ ಬಲದಿಂದ, ಇತರೆಡೆಗಳಲ್ಲಿಯ ಪಂಪನ ಇದೇ ಪದಪ್ರಯೋಗದ ಆಧಾರದಿಂದ 'ಲೋಹಾಸನ'ವೆಂಬ ಪಾಠವನ್ನೇ ಇಲ್ಲಿಯೂ ಸ್ವೀಕರಿಸುವುದು ಒಳ್ಳೆಯದು.

೧೦–೨೫ ಭೀಷ್ಮನಿಗೆ ಸೇನಾಪತಿ ಪಟ್ಟವನ್ನು ದುರ್ಯೋಧನ ವಹಿಸಿದಾಗ ತನಗೆ ಪಟ್ಟಗಟ್ಟಲಿಲ್ಲವೆಂಬ ಸಿಟ್ಟಿನಿಂದ ಕರ್ಣ ಅವರನ್ನು ಹೀನಾಯವಾಗಿ ನಿಂದಿಸುತ್ತಾನೆ. ಅದನ್ನೆಲ್ಲ ಕೇಳಿದ ನಂತರ ಭೀಷ್ಮರು ತಮ್ಮ ಪ್ರತಿಜ್ಞೆಯನ್ನು ಸಭೆಗೆ ಹಾಗೂ ಕರ್ಣನಿಗೆ ತಿಳಿಸುತ್ತಾರೆ. "ಚಕ್ರವನ್ನು ಹಿಡಿಯಲಾರೆನೆಂಬ

---

೧ ಮಾನಸೋಲ್ಲಾಸ ೯–೭–೫೨, ೫೩.

೨ ನೋಡಿ: ಕನ್ನಡ ಗ್ರಂಥಸಂಪಾದನಾಶಾಸ್ತ್ರ ಪು. ೧೯೦–ಡಾ. ಎಂ. ಎಂ. ಕಲಬುರ್ಗಿ.

ಕೃಷ್ಣನಿಂದ ಕರಚಕ್ರವನ್ನು ಹಿಡಿಯಿಸುತ್ತೇನೆ. ನರನ ರಥ, ಎಂಟುಗಾವುದ ಹಿಂದೆ ಹೋಗುವಂತೆ ಬಾಣಪ್ರಯೋಗಮಾಡುತ್ತೇನೆ. ದಿನವೂ ಹತ್ತುಸಾವಿರ ರಾಜರು ನಾಶವಾಗುವ ಹಾಗೆ ಕಾದುತ್ತೇನೆ." ಇದು ಭೀಷ್ಮರ ಪ್ರತಿಜ್ಞೆ. ಈ ಸಂದರ್ಭದಲ್ಲಿ ಬರುವಂಥ 'ಚಕ್ರಿಯನಿಳಾಚಕ್ರಂ...' ಪಾಠ ವಿಚಾರಾರ್ಹವಾದದ್ದು. ಇದಕ್ಕಿರುವ ಇನ್ನೊಂದು ಪಾಠ 'ಚಕ್ರಿಯಿನಿಳಾ...' 'ಗ'. ಇಲ್ಲಿ ಹಿಡಿಯಿಸುತ್ತೇನೆ (ಪಿಡಿಯಿಪ್ಪೆಂ) ಎಂಬ ಕ್ರಿಯಾಪದಕ್ಕೆ ಕರ್ತೃ, ಚಕ್ರಿ. ಈ ಕಾರ್ಯ ಅವನಿಂದ ಆಗಬೇಕಾದುದು. ಕರ್ತೃವಿಗೆ ತೃತೀಯಾವಿಭಕ್ತಿಪ್ರತ್ಯಯ ಸೇರಬೇಕು. ಕರಚಕ್ರಮುಂ ಇಳಾಚಕ್ರಂ ಭಯಂಗೊಳ್ವಿನಂ ಚಕ್ರಿಯಿಂ ಪಿಡಿಯಿಪ್ಪೆಂ ಎಂದರೆ ಅರ್ಥ ಸರಿಯಾಗುವುದಿಲ್ಲ. ವ್ಯಾಕರಣದೋಷ ಕಂಡುಬರುತ್ತದೆ. ಆದ್ದರಿಂದ 'ಗ' ಪ್ರತಿಯ 'ಚಕ್ರಿಯಿನಿಳಾಚಕ್ರಂ......' ಪಾಠ ಉಚಿತವಾದದ್ದು ಹಾಗೂ ದೋಷಮುಕ್ತವಾದದ್ದೆಂದು ಹೇಳಬಹುದು.

೧೮–೮೪ ಈ ಪದ್ಯದಲ್ಲಿ ಕೌರವ–ಪಾಂಡವ ಸೈನ್ಯದಲ್ಲಾದ ಯುದ್ಧದ ವರ್ಣನೆಯಿದೆ. ಖಡ್ಗಗಳ ತಾಕಲಾಟದಿಂದ ಹುಟ್ಟಿದ ಕಿಡಿಗಳು, ಬಾಳ್ಬೊಗೆಯಿಂದ ಕಾರಮುಗಿಲು ಬಳ್ಳಿಮಿಂಚಿನಿಂದ ಪ್ರಕಾಶಿಸುವ ಹಾಗೆ ಪ್ರಕಾಶಿಸುತ್ತಿದ್ದವು. ಪಂಪಭಾರತದ ಮುದ್ರಿತಪ್ರತಿಯಲ್ಲಿ 'ಕಾಱಮುಗಿಲ್' ಎಂಬ ಪಾಠವಿದೆ. ಅದೂ ಊಹಾತ್ಮಕವಾಗಿ ಪರಿಷ್ಕರಿಸಿದ್ದು. ಈ ಪಾಠ ದೋಷಪೂರ್ಣವಾದದ್ದು. ಇಲ್ಲಿರುವುದು ಱಕಾರವಲ್ಲ, ರಕಾರ. ಈ ಪದದ ಇತರ ಪ್ರಯೋಗಗಳು ರಕಾರಯುಕ್ತವಾಗಿವೆ. ಇದ್ದರಿಂದ ಇದು 'ಕಾಱಮುಗಿಲ್' ಅಲ್ಲ, 'ಕಾರಮುಗಿಲ್'. ಡಾ. ಡಿ. ಎಲ್. ಎನ್ ಅವರೂ ಈ ಪಾಠವನ್ನು 'ಕಾ[ರ]-ಮುಗಿಲ್' ಎಂದು ಪರಿಷ್ಕರಿಸಿದ್ದಾರೆ.

೧೧–೧೨೧ ಈ ಪದ್ಯದಲ್ಲಿ ಶ್ವೇತ ಹಾಗೂ ಭೀಷ್ಮರಲ್ಲಿ ನಡೆದ ವಾಗ್ವಾದವಿದೆ. ಶ್ವೇತನ ಶರಾಸನದಲ್ಲಿ ದಯೆಯಿಂದ ಬಂದಿದ್ದ ಶೂಲಿ, ಭೀಷ್ಮರಿಗೆ ಕಾಣಿಸಿ-ಕೊಂಡಾಗ ಒಮ್ಮೆಲೇ ಅವರು ದೀರ್ಘದಂಡಪ್ರಣಾಮ ಮಾಡುತ್ತಾರೆ. ಇದಕ್ಕೆ ಹೇಡಿತನದ ಅರ್ಥವನ್ನು ಹಚ್ಚಿ, ಶ್ವೇತ ಅವರನ್ನು ಹೇಡಿಯೆಂದು ಮೂದಲಿಸುತ್ತಾನೆ. ಆಗ ಭೀಷ್ಮರು "ದೇವೇಶನನ್ನು ಏಕೆ ಸೆರೆಹಿಡಿದೆ? ಅವನ ಆಶ್ರಯವನ್ನು ಬಿಟ್ಟು ಬಾ. ಆಗ ನನ್ನ ನಿನ್ನ ಯುದ್ಧವನ್ನು ತಿಳಿದುಕೊ" ಎಂದು ಹೇಳುತ್ತಾರೆ. ಇಲ್ಲಿ ಬರುವ 'ಸೆಱೆವಿಡಿದೆ' ಪಾಠ ವಿಚಾರಾರ್ಹವಾದದ್ದು. ಶೂಲಿ, ಶ್ವೇತನ ಶರಾಸನದಲ್ಲಿ ದಯೆಯಿಂದ ಬಂದಿದ್ದನೆಂದು ಮೊದಲು ಹೇಳಲಾಗಿದೆ. ಮುಂದೆ ಭೀಷ್ಮರು ಅವನನ್ನೇಕೆ ಸೆರೆಹಿಡಿದೆ ಎಂದು ಪ್ರಶ್ನಿಸುತ್ತಾರೆ. ಶೂಲಿಯನ್ನು ಸೆರೆಹಿಡಿದು ತರುವಂಥ ಶೂರನೇನಲ್ಲ ಶ್ವೇತ. ಶೂಲಿಯನ್ನು ಸೆರೆಹಿಡಿದು ತರು

ವುದು ಶ್ವೇತನಿಗೆ ಅಸಾಧ್ಯವಾದಂಥ ಕೆಲಸವೇ. ಸೆಱಿ ಶಬ್ದಕ್ಕೆ ದೀಪಿಕೆಯಲ್ಲಿ ಮೊರೆಹೋಗು ಎಂಬರ್ಥವಿದೆ. ಆದರೆ ಕಿಟ್ಟೆಲ್‌ಕೋಶದಲ್ಲಿ ಈ ಪದಕ್ಕೆ ಸೆರೆಹಿಡಿ ಎಂಬರ್ಥವೇ ಸಿಗುತ್ತದೆ. ಈ ಪಾಠಕ್ಕೆ ಘ§ ಪ್ರತಿಯಲ್ಲಿ 'ಮಱೆವಿಡಿವೊ' ಎಂಬ ಭಿನ್ನಪಾಠವೊಂದಿದೆ. ಈ ಪಾಠ ಪ್ರಸ್ತುತ ಸಂದರ್ಭಕ್ಕೆ ಹೊಂದುತ್ತದೆ. ಶ್ವೇತ ಶೂಲಿಯನ್ನು ಭೀಷ್ಮರಿಂದ ತನ್ನನ್ನು ಕಾಪಾಡಲು ಮೊರೆಹೊಕ್ಕಿದ್ದಾನೆ. ಅಂತೆಯೇ ಶಿವ ಶ್ವೇತನ ಶರಾಸನದಲ್ಲಿ ಕಾಣಿಸಿಕೊಂಡ. ಆ ಶಿವನ ಮೊರೆಯನ್ನು (ಆಶ್ರಯವನ್ನು) ಬಿಟ್ಟು ಈಚೆಗೆ ಬಂದರೆ ಖಂಡಿತವಾಗಿಯೂ ಶ್ವೇತನಿಗೆ ಸೋಲು ಕಟ್ಟಿಟ್ಟದ್ದೇ. ಈ ಮಾತನ್ನೇ ಭೀಷ್ಮರು ಹೇಳುತ್ತಾರೆ. ಶ್ವೇತನಿಗೆ "ದೇವೇಶನನೇಂ ಮಱೆವಿಡಿವೊ? ತೊಲಗು, ದೇವನ ಮಱೆಯಂ ಬಳಿಕಱಿಯ-ಲಕ್ಕುಮೇನಗಂ ನಿನಗಂ". ಆದ್ದರಿಂದ ಇಲ್ಲಿ 'ಸೆಱೆವಿಡಿದೆ' ಪಾಠಕ್ಕಿಂತ ಘ§ ಪ್ರತಿಯ 'ಮಱೆವಿಡಿವೊ' ಪಾಠ ಸ್ವೀಕಾರಾರ್ಹವೆನಿಸುತ್ತದೆ.

೧೧-೭೬ ಸುಪ್ರತೀಕವನ್ನೂ ಭಗದತ್ತನನ್ನೂ ತೀಕ್ಷ್ಣವಾದ ಬಾಣಗಳಿಂದ ಅರ್ಜುನನು ಗಾಸಿಗೊಳಿಸಿದಾಗ ಭಗದತ್ತ ತಾನು ಭೂದೇವಿಯಿಂದ ಪಡೆದ ದಿವ್ಯಾಂಕುಶವನ್ನು ಪ್ರಯೋಗಿಸುತ್ತಾನೆ. ಅದನ್ನು ಅರ್ಜುನನ ಸಾರಥಿ ಶ್ರೀಕೃಷ್ಣ, ತನ್ನ ಎದೆಯಲ್ಲಿ ಧರಿಸಿಕೊಂಡನು. ಅರ್ಜುನ ಬೆರಗಾಗಿ ಪ್ರಶ್ನಿಸಲು, ಆ ಆಯುಧದ ಮಹಿಮೆಯನ್ನು ಆತನಿಗೆ ತಿಳಿಸಿ 'ಇನ್ನು ಆನೆಯನ್ನೂ ಭಗದತ್ತನನ್ನೂ ಸುಲಭವಾಗಿ ಸಂಹರಿಸು' ಎಂದನು. ಈ ಪದ್ಯದಲ್ಲಿ ಬರುವಂಥ 'ಏತರಿನಾಕುಲಮಿರ್ದೆ' ಎಂಬ ಪಾಠ, ಗಮನಾರ್ಹವಾದದ್ದು. ಏನ್-ಸರ್ವನಾಮ ಪದ. ಪ್ರಥಮೆಯಲ್ಲಿ ಈ ಏನ್ ಎಂಬ ಸರ್ವನಾಮಪದ, ಏನ್-ಏತಱ್ ಎಂದೂ ಚತುರ್ಥಿಯಲ್ಲಿ ಏತರ್ಕೆ, ಏಕೆ ಎಂದೂ ತೃತೀಯಾ ಮೊದಲಾದವುಗಳಲ್ಲಿ ಏತಱ ಎಂದೂ ಪ್ರಕೃತಿಯಾಗಿ ನಿಲ್ಲುತ್ತದೆ. ಇದು ಕೇಶಿರಾಜನ ಶ. ಮ. ದ ಸೂ-೧೨೨ ರಿಂದ ಸ್ಪಷ್ಟವಾಗುತ್ತದೆ. ಈ ಪದ್ಯದಲ್ಲಿ ಬರುವ ಏತರಿನ್ ಅದು ಏನ್ ಸರ್ವನಾಮಪದದ ತೃತೀಯೆಯ ಪ್ರಕೃತಿ. ಇದು ಪಂಚಮಿಯಲ್ಲಿ ಏತಱತ್ತಣಿಂ, ಷಷ್ಠಿಯಲ್ಲಿ ಏತಱ ಎಂದೂ ಸಪ್ತಮಿಯಲ್ಲಿ ಏತಱೊಳ್ ಎಂದೂ ಆಗುತ್ತದೆ. ಮೇಲಿನ ಪದ್ಯದಲ್ಲಿ ಬಂದ ರೇಫೆವೆರಸಿದ 'ಏತರಿನಾಕುಲಮಿದೆ' ಪದ, ತಪ್ಪು; ಅದು 'ಏತಱಿನಾಕುಲಮಿರ್ದೆ' ಎಂದು ಶಕಟರೇಫಯುಕ್ತವಾಗಿರಬೇಕು. ಏತಱ ಮಾತೋ ಭೂತಳದೊಳ್ ಎಂಬ ಕೇಶಿರಾಜನ ಮತ್ತೊಂದು ಉದಾಹರಣೆಯನ್ನು ಗಮನಿಸಬಹುದು.[೧]

(ಮುಂದುವರಿಯುವುದು)

೧. ಪಂಪಭಾರತದ ಕೆಲವು ಪಾಠಾಂತರಗಳು—ಹಂಪನಾ.

ಕ್ಷೇತ್ರ ಗೋಕರ್ಣ ಮತ್ತು ಇಡಗುಂಜಿಯ ಶಿಲಾಗಣೇಶ ಮೂರ್ತಿಗಳು ಹಾಗೂ ಶಿಲಾಗಣೇಶ ಶಿಲ್ಪದ ಪ್ರಾಚೀನತೆ

ಅ. ಸುಂದರ

ಭಾರತದಲ್ಲಿ ಶಿಲಾಗಣೇಶ ಶಿಲ್ಪದ ಪ್ರಾಚೀನತೆಯ ಬಗ್ಗೆ ಅಷ್ಟು ಸ್ಪಷ್ಟ ಅಭಿಪ್ರಾಯ ತಜ್ಞರಿಂದ[೧] ಇನ್ನೂ ವ್ಯಕ್ತವಾಗಿಲ್ಲ.

ಆನಂದಕುಮಾರ ಸ್ವಾಮಿಯವರು[೨] ಅಮರಾವತಿಯಲ್ಲಿಯ ಕ್ರಿ. ಶ. ೧-೨ನೆಯ ಶತಮಾನದ ಬೌದ್ಧಸ್ತೂಪದ ಚಿತ್ರಪಟ್ಟಿಕೆಯಲ್ಲಿರುವ ಸೊಂಡಿಲು, ದಂತವಿಲ್ಲದ ಗಜಾಮುಖಾಕೃತಿಯ ಯಕ್ಷನಂತಹ ಚಿತ್ರಗಳೇ ತರುವಾಯ ಕಾಲದ ಬ್ರಾಹ್ಮಣಧರ್ಮದ ಗಣಪತಿಯ ಶಿಲ್ಪಕ್ಕೆ ಮಾದರಿಯಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಮಥುರೆಯಲ್ಲಿಯ ಸಂಕಿಸ ದಿಬ್ಬದಲ್ಲಿ ದೊರೆತದ್ದೆಂದು ನಂಬಲಾದ ಒಂದು ೫೦ ಸೆಂ. ಮೀ. ಎತ್ತರದ ನಿಂತಭಂಗಿಯಲ್ಲಿರುವ ನಗ್ನ ದ್ವಿಭುಜ ಗಣಪತಿಯ ಉಬ್ಬುಶಿಲ್ಪವೇ ಪ್ರಾಯಶಃ ಪ್ರಾಚೀನತಮವೆಂದು ಬಗೆಯಲಾಗಿದೆ. ಇದರ ಕಾಲಮಾನ ನಿರ್ದಿಷ್ಟವಾಗಿ ತಿಳಿದಿಲ್ಲ. ಕೆಲವರು ಗುಪ್ತರ ಕಾಲದ್ದಿರಬಹುದೆಂದು ತರ್ಕಿಸುತ್ತಾರೆ.

ಆಲಿಗೆಟ್ಟಿಯವರು[೩] ಇವೇ ಅಭಿಪ್ರಾಯಗಳನ್ನು ಪುನರುಚ್ಚರಿಸುತ್ತಾರೆ. ಈಗ ತಿಳಿದಮಟ್ಟಿಗೆ ಭೂಮಾರ(ಮಧ್ಯಪ್ರದೇಶ)ದಲ್ಲಿಯ ಗುಪ್ತರಕಾಲದ ೫ನೆಯ ಶತಮಾನದ ಶಿವದೇವಾಲಯದ ಕುಳಿತ ಭಂಗಿಯಲ್ಲಿರುವ ಪೂರ್ಣವಾಗಿ ವಿಕಾಸಹೊಂದಿದ ಶಿಲಾಗಣಪತಿಯು[೪] ಪ್ರಾಚೀನವಾದದ್ದೆಂದು ತಜ್ಞರಿಂದ ಬಗೆಯಲಾಗಿದೆ. ಗೋಪಿನಾಥರಾಯರು[೫] ಗಣಪತಿಯ ಬಗ್ಗೆ ಗ್ರಂಥ ಹಾಗೂ ಶಿಲ್ಪಗಳನ್ನು ಸಾಕಷ್ಟು ವಿಶದವಾಗಿ ವಿವರಿಸಿದ್ದರೂ ಮೂರ್ತಿಶಿಲ್ಪದ ಪ್ರಾಚೀನತೆಯ ಬಗ್ಗೆ ಅಷ್ಟು ತರ್ಕಿಸಿಲ್ಲ; ಮತ್ತು ಭೂಮಾರದ ಶಿಲ್ಪಕ್ಕಿಂತಲೂ ಪ್ರಾಚೀನವಾದವುದೇನೂ ಉಲ್ಲೇಖಿಸಿಲ್ಲ. ಈಚೆಗೆ ಡಾ. ಢವಳಿಕರ್[೬] ಅವರು ಕಾಬೂಲಿನ ವಸ್ತುಸಂಗ್ರಹಾಲಯದಲ್ಲಿರುವ ಗುಪ್ತರಕಾಲದ ಮತ್ತೆರಡು ಅಪರೂಪದ ಗಣೇಶನ ಶಿಲಾಮೂರ್ತಿಗಳ ಬಗ್ಗೆ ವಿವರವಾಗಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಸಕರ್ ಧಾರ್ (ಕಾಬೂಲ್, ಅಫಘಾನಿಸ್ತಾನ) ಗಣಪತಿ ಸು. ಕ್ರಿ. ಶ. ೬ನೆಯ ಶತಮಾನದ ಮಧ್ಯಭಾಗದ್ದಿರಬಹುದೆಂದು ತರ್ಕಿಸಿದ್ದಾರೆ.

ನಾನು ಉತ್ತರಕನ್ನಡ ಜಿಲ್ಲೆಯ ಅಂಕೋಲ, ಹೊನ್ನಾವರ ಮತ್ತು ಸಿರ್ಸಿ ಪ್ರದೇಶಗಳಲ್ಲಿ ೧೯೭೩ ಮತ್ತು ೧೯೭೪ ಮೇ, ಜೂನ್ ತಿಂಗಳಲ್ಲಿ ಪುರಾತತ್ವ ಶೋಧನೆಯನ್ನು ನಡೆಸುತ್ತಿದ್ದಾಗ ಸುಪ್ರಸಿದ್ಧ ಕ್ಷೇತ್ರಗಳಾದ ಗೋಕರ್ಣ, (ಅಂಕೋಲ ತಾ.) ಮತ್ತು ಇಡಗುಂಜಿ (ಹೊನ್ನಾವರ ತಾ.) ಗಳಲ್ಲಿಯ ಗಣೇಶ ದೇವಾಲಯಗಳ ಗಣೇಶ ಮೂರ್ತಿಗಳನ್ನು ಕೂಲಂಕುಷವಾಗಿ ನೋಡಲು ನನಗೆ ಸಾಧ್ಯವಾಯಿತು. ನನಗೆ ತೋರಿದಮಟ್ಟಿಗೆ ಗೋಕರ್ಣದ ಗಣೇಶಶಿಲ್ಪವೇ ಅತ್ಯಂತ ಪ್ರಾಚೀನವಾದದ್ದು. ಹಲವು ವರ್ಷಗಳಿಂದೀಚೆಗೆ ಹೆಚ್ಚಾಗಿ ಈ ಕ್ಷೇತ್ರಗಳು ಸಾಕಷ್ಟು ಪ್ರಚಾರವಲ್ಲಿದ್ದರೂ ಇಲ್ಲಿಯ ಮೂರ್ತಿಗಳು ಅದೇಕೋ ಮೇಲೆ ಹೇಳಿದ ಯಾವ ತಜ್ಞರ ಗಮನವನ್ನು ಸೆಳೆಯಲಿಲ್ಲ. ಇವರ್‍ಯಾರು ಈ ಮೂರ್ತಿಗಳನ್ನು ಉಲ್ಲೇಖಿಸಿಲ್ಲ.

ಇತ್ತೀಚೆಗೆ ರಾಷ್ಟ್ರೋತ್ಥಾನ ಸಾಹಿತ್ಯದವರು **ಗಣಪತಿ** (೧೯೭೧) ಎಂಬ ಒಂದು ಒಳ್ಳೆಯ ಕನ್ನಡ ಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಚಿತ್ರ ಸಹಿತ ಈ ಎರಡು ಗಣಪತಿ ಮೂರ್ತಿಗಳನ್ನು ಉಲ್ಲೇಖಿಸಲಾಗಿದೆ. ಹಾಗೆಯೆ ಗೋರಖಪುರದ 'ಕಲ್ಯಾಣ' ಸಂಸ್ಥೆಯವರು ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಬರುವ ಗಣೇಶನ ವರ್ಣನೆ ಉಲ್ಲೇಖಗಳೆಲ್ಲವನ್ನು ಸಂಗ್ರಹಿಸಿ **ಶ್ರೀ ಗಣೇಶ** (೧೯೭೪) ಎಂಬ ಪ್ರತ್ಯೇಕವಾದ, ವಿಸ್ತಾರವಾದ ಉಪಯುಕ್ತ ಗ್ರಂಥವನ್ನು ಹಿಂದಿಯಲ್ಲಿ ಹೊರಡಿಸಿದ್ದಾರೆ. ಇದರಲ್ಲಿಯೂ ಈ ಎರಡು ಸ್ಥಳಗಳ ಬಗ್ಗೆ ಸಣ್ಣ ಟಿಪ್ಪಣಿಗಳಿವೆ. ಆದರೆ, ಈ ಎರಡು ಪುಸ್ತಕಗಳಲ್ಲಿ ಈ ಮೂರ್ತಿಗಳ ಸಂಪೂರ್ಣ ವರ್ಣನೆಯಾಗಲಿ ಅವುಗಳ ಕಾಲಮಾನದ ಚರ್ಚೆಯಾಗಲಿ ಇಲ್ಲ. ಕಾರಣ ಈ ಪುಸ್ತಕಗಳಲ್ಲಿ ವಿಷಯನಿರೂಪಣೆಯ ಉದ್ದೇಶ ಮತ್ತು ಕ್ರಮಗಳಲ್ಲಿ ಈ ವಿಚಾರಗಳು ಅಪ್ರಧಾನ. ಆದುದರಿಂದ ಈ ಮೂರ್ತಿಗಳ ಶಿಲ್ಪ ವಿವರಣೆಗಳೊಡನೆ ಗಣೇಶಶಿಲ್ಪದ ಕಾಲಮಾನವನ್ನು ಕೆಳಗೆ ಚರ್ಚಿಸಲಾಗಿದೆ.

ಗೋಕರ್ಣದ ಶ್ರೀ ಮಹಾಗಣಪತಿ :

ಪ್ರಾಯಶಃ ವಿಜಯನಗರ ಕಾಲದ್ದೆನ್ನಬಹುದಾದ ದೇವಾಲಯದಲ್ಲಿರುವ ಶ್ರೀ ಮಹಾಗಣಪತಿ ಮೂರ್ತಿಯು (ಚಿತ್ರ 1, ೧) ದುಂಡು ಶಿಲ್ಪದಲ್ಲಿದೆ. ಎತ್ತರ ೮೯ ಸೆಂ. ಮಿ. ಅಗಲ ೪೮ ಸೆಂ. ಮಿ. ಒಂದು ಕಲ್ಲಿನ ಪಟ್ಟಿಕೆ (೪೦ ಸೆಂ. ಮಿ. ಅ. × ೧೦ ಸೆಂ. ಮಿ. ಎ.) ಯ ಮೇಲೆ ನಿಂತಿದ್ದಾನೆ. ದ್ವಿಭುಜನು, ಗಜಮುಖನು, ಏಕದಂತನು, ವಿಶಾಲವಾದ ಭುಜ, ಡೊಳ್ಳುಹೊಟ್ಟೆ, ಗಿಡ್ಡ ಹಾಗೂ ದಪ್ಪ ಕೈಕಾಲುಗಳುಳ್ಳವನು. ಏಕದಂತ ಮುರಿದಹಾಗಿದೆ. ಆನೆಮುಖವಿದ್ದರೂ ತಲೆಯ ಹಿಂಬದಿ ಮಾತ್ರ ಮಾನವನ ತರಹದ್ದಾಗಿದೆ. ಮೇಲ್ಭಾಗ ಬೋಳಾಗಿದ್ದು

ಹಿಂಬದಿಯಲ್ಲಿ ಹೇರಳವಾಗಿ ಕೂದಲಿದ್ದು ಅವು ಸುಮಾರು ೨೦ ಕೊಳವೆಯಾಕಾರದ ಎಳೆಗಳಾಗಿ ಕುತ್ತಿಗೆ ಬೆನ್ನುಮೇಲೆ ಹರಡಿವೆ. ಮತ್ತು ಮಧ್ಯದಲ್ಲಿ ನೇತಾಡುವ ಎಳೆಗಳುಳ್ಳ ದುಂಡಾದ ಜಡೆ ಬಿಲ್ಲೆಯನ್ನು ಸಿಕ್ಕಿಸಿದೆ (ಚಿತ್ರ 1, ೨). ಅರ್ಧ ಚಂದ್ರ ಪದಕವುಳ್ಳ ಎರಡು ಸುತ್ತಿನ ಕ್ರೋಳ್ಬಂದಿ, ಕೈಬಳೆ, (ಚಿತ್ರ 2, ೧) ಯಜ್ಞೋಪವೀತ ರೀತಿಯಲ್ಲಿ ಧರಿಸಿದ ದುಂಡುಗೆಜ್ಜೆಯ ಸರ ಮತ್ತು ಆ ಸರದಲ್ಲಿ ಬಲಭಾಗದ ಮುಂಬದಿಯಲ್ಲಿ ಉದ್ದನೆ ಮಣಿಯಿದ್ದ ಹಾಗಿದೆ. ಸೊಂಟದಲ್ಲಿ ಗೆಜ್ಜೆಪಟ್ಟಿ (1 ಅ). ಇವಿಷ್ಟು ಸರಳ ಆಭರಣಗಳು. ಎರಡು ಬದಿಗಳಲ್ಲಿ ಸ್ವಲ್ಪ ಉಂಗುರಾಕಾರದ ಮಡಿಕೆಯಿದ್ದು ಹಾಗೂ ಪಾದದ ವರೆಗೂ ಇಳಿಬೀಳುವ ಹಾಗೆ ಮತ್ತು ಮುಂಭಾಗದಲ್ಲಿ ಪಾಲಾಕಾರ ರೀತಿಯಲ್ಲಿ ಮೊಣಕಾಲಿನ ವರೆಗೆ ಬರುವ ಹಾಗೆ ಕಚ್ಚೆಹಾಕಿ ಧೋತ್ರ ಉಟ್ಟಿದ್ದಾನೆ. ಒಟ್ಟಿನಲ್ಲಿ ಸ್ಥೂಲ ಹಾಗೂ ಕುಬ್ಜ ಶರೀರವಾಗಿದ್ದರೂ ಅದಕ್ಕೆ ತಕ್ಕುದಾದ ದೃಢ ಹಾಗೂ ಪ್ರಮಾಣಬದ್ಧವಾದ ಒಳ್ಳೆ ಮೈಕಟ್ಟಿದ್ದು ಮೂರ್ತಿ ಆಕರ್ಷಕವಾಗಿದೆ. ಬಲಗೈಯಲ್ಲಿ ಮೊಗ್ಗುಳ್ಳ ತಾವರೆ ದಂಟು ಇದೆ. ಎಡಗೈಯಲ್ಲಿ ಬುಡದಲ್ಲಿ ಹಿಡಿಕೆಯುಳ್ಳ ಮೋದಕ ಪಾತ್ರೆಯಿದೆ. ಆ ಹಿಡಿಕೆಯನ್ನು ಕೈಯಲ್ಲಿ ಹಿಡಿದಿದ್ದಾನೆ. ಸೊಂಡಿಲನ್ನು ಎಡಕ್ಕೆ ತಿರುವಿ ಮೋದಕಪಾತ್ರೆಯಲ್ಲಿ ಇಡಲ್ಪಟ್ಟಿದೆ. ಈ ಮೂರ್ತಿಯು ಶಿಲ್ಪಕಲೆಯ ಪ್ರತಿಭೆಯ ಒಂದು ಉತ್ತಮ ನಿದರ್ಶನ.

ಈ ಮೂರ್ತಿಯು ಸಮಭಾಹು ಚತರ್ಭುಜ (೮೬ ಸೆ. ಮಿ. ಉ × ೮೬ ಸೆ. ಮಿ. ಅ × ೪೦ ಸೆ. ಮಿ. ಎ) ಜಲಧಾರೆಯುಳ್ಳ ಹಾಗು ಬದಿಯಲ್ಲಿ ಅಡ್ಡ ಮಡಿಕೆಯುಳ್ಳ ಕರಿಶಿಲೆಯ ಪೀಠದ ಮೇಲಿದೆ. ಪೀಠದ ಮೇಲೆ ವರ್ತುಳಾಕಾರದ ಸ್ವಲ್ಪ ತಗ್ಗು ಇದೆ. ಇದರಲ್ಲಿ ನಿಂತಿದ್ದಾನೆ ಮಹಾಗಣಪತಿ ಭವ್ಯವಾಗಿ. ಮೂರ್ತಿಯು ಒಳ್ಳೆ ಜಾತಿಯ ಸಿಸ್ಟ್ (Schist) ಎಂಬ ಮೃದು ಕರಿಶಿಲೆಯದ್ದಾಗಿದೆ. ಪೀಠವು ಗಟ್ಟಿಯಾದ ಡೊಲೊರೈಟ್ (Dolerite) ಕಲ್ಲಿನದ್ದಾಗಿದೆ. ಪ್ರತಿನಿತ್ಯವೂ ಭಕ್ತರ ಅನೇಕ ಅಭಿಷೇಕದ ಪೂಜೆಗಳಿಂದ ಮೂರ್ತಿಯ ಲಕ್ಷಣಗಳು ಅಲ್ಲಲ್ಲಿ ಮಸುಕಾಗಿದೆ.

ಇಡಗುಂಜಿಯ ಶ್ರೀ ಮಹಾಗಣಪತಿ :

ಗೋಕರ್ಣದಷ್ಟು ಇಡಗುಂಜಿ ಇನ್ನೂ ಪ್ರಸಿದ್ಧವಾಗಿಲ್ಲದಿದ್ದರೂ ಇದರ ಸನ್ನಿವೇಶ, ಸ್ಥಳ ಪುರಾಣ ಮತ್ತು ಶ್ರೀ ಮಹಾಗಣಪತಿ ದೇವಾಲಯ ಅಷ್ಟೆ ಸ್ವಾರಸ್ಯಕರವಾಗಿದ್ದು ಮತ್ತು ಮಹತ್ವದ್ದಾಗಿವೆ. ಶರಾವತಿ ನದಿ ಬಯಲಿನಲ್ಲಿ ಹಸಿರುಗಿಡ ಮರಗಳ ದಟ್ಟವಾದ ಕಾಡಿನಿಂದ ಆವೃತವಾದ ಮುಗಿಲು ಮುಟ್ಟುವ ಬೆಟ್ಟಗಳ ಮಧ್ಯದಲ್ಲಿ ಪ್ರತಿಷ್ಠಿತವಾಗಿದೆ. ಈ ಮಹಾಗಣಪತಿ ದೇವಾಲಯ ಸ್ಥಳ ಪುರಾಣದಂತೆ

ವಾಲಖಿಲ್ಯ ಮಹಾಮುನಿಗಳ ಆಶ್ರಮವಾಗಿದ್ದು ನಾರದರ ಪ್ರಯತ್ನದಿಂದ ಇಲ್ಲಿಯ "ಇಡಾ ಕುಂಜವನ"ದಲ್ಲಿ ಪೂರ್ವ ತ್ರೇತಾಯುಗ ನೃಪತೀಕ ಚಂಡಶಕಾಬ್ದ ೮೧೩ನೇ ವಿಭವ ಸಂವತ್ಸರದ ಉತ್ತರಾಯಣದ ಶಿಶಿರ ಋತುವಿನ ಮಾಘ ಮಾಸದ ಶುಕ್ಲಪಕ್ಷ ದ್ವಿತೀಯ ಬುಧವಾರ ಉತ್ತರಾಷಾಢ ನಕ್ಷತ್ರ ಮೀನಲಗ್ನದ ಇಷ್ಟಾಂಶದಲ್ಲಿ ಶ್ರೀ ಮಹಾಗಣಪತಿ ಪ್ರತಿಷ್ಠೆಯಾಯಿತಂತೆ.

ಹಿಂದೆ ಇದ್ದ ಜೀರ್ಣವಾದ ದೇವಾಲಯವನ್ನು ಬಿಚ್ಚಿ ಇತ್ತೀಚೆಗೆ ಹಳದೀಪುರದ ಡಾ. ಜಿ. ಎನ್. ಸಭಾಹಿತ ಇವರ ನೇತೃತ್ವದಲ್ಲಿ ಹೊಸ ದೇವಾಲಯವನ್ನು ಕಟ್ಟಲಾಗಿದೆ.

ಇಲ್ಲಿಯ ಮಹಾಗಣಪತಿ ಮೂರ್ತಿ ಮುಂಡು ಶಿಲ್ಪದಲ್ಲಿದೆ. ಒಂದು ಕಲ್ಲು ಹಲಗೆಯ ಮೇಲೆ ನಿಂತ ಭಂಗಿಯಲ್ಲಿದೆ. ೮೩ ಸೆ. ಮಿ. ಎ; ೫೯ ಸೆ. ಮಿ. ಅ. ದೈಹಿಕ ಲಕ್ಷಣಗಳಲ್ಲಿ ಗೋಕರ್ಣದ ಗಣಪತಿಯನ್ನು ಹೋಲುತ್ತದೆ. ಆದರೆ ದ್ವಿದಂತನಾಗಿದ್ದಾನೆ. (ಚಿತ್ರ. 3, ೨ ಅ) ತಲೆಯ ಮೇಲ್ಭಾಗದ ಮುಂಭಾಗವು ಆನೆಯ ಕುಂಭ ಸ್ಥಳದ ಹಾಗೆ ಚೆನ್ನಾಗಿ ಬಿಡಿಸಿದೆ. ಮೇಲೆ ಪೂರ್ಣವಾಗಿ ಅರಳಿದ (ಸಹಸ್ರದಳ) ಕಮಲವಿದೆ. ಹಿಂಬದಿಯಲ್ಲಿ ತುಂಬ ಕೂದಲಿದ್ದು ಅವನ್ನು ಸ್ವಲ್ಪ ಓರೆ ಕೋರೆಯಾಗಿ ಸುಮಾರು ೨೦, ೨೨ ಎಳೆಗಳಾಗಿ ಬಿಡಿಸಿವೆ. ಪ್ರತಿಯೊಂದು ಎಳೆಯ ತುದಿಯು ಚೂಪಾಗಿವೆ (ಚಿತ್ರ 3, ೧, ೧ ಅ) ಧೋತ್ರವನ್ನು ಉಟ್ಟಿರುವ ರೀತಿ ಬಹುಮಟ್ಟಿಗೆ ಗೋಕರ್ಣದ ಗಣಪತಿಗೆ ಹೋಲಿದರೂ, ಮುಂದೆ ಮಧ್ಯದಲ್ಲಿ ನೆರಿಗೆ ನೆರಿಗೆ ಮಾಡಿ ವಸ್ತ್ರವನ್ನು ಇಳಿಬಿಟ್ಟಿದೆ. ಪದಕವುಳ್ಳ ಅಗಲ ಪಟ್ಟಿಯಂಥ ಕಂಠಾಭರಣ, ಯಜ್ಞೋಪವೀತ ರೀತಿಯಲ್ಲಿ ಧರಿಸಿದ ಸಣ್ಣ ಗಂಟೆಗಳ ಸರ, ಅರ್ಧ ಚಂದ್ರಾಕೃತಿಯ ಪದಕವುಳ್ಳ ಮಣಿಪಟ್ಟಿಯ ತೋಳ್ಬಂದಿ ಇವು ಆಭರಣಗಳು ಬಲಗೈಯಲ್ಲಿ ಪತ್ರಗಳ ಗೊಂಚಲು (ಬಹುಶಃ ಕಮಲ ದಂಟು) ಎಡಗೈ ಅಂಗೈಯಲ್ಲಿ ಗೋಲಾಕಾರದ ಮೋದಕ ಪಾತ್ರೆಯು ಇದೆ. ಸೊಂಡಿಲನ್ನು ಎಡಕ್ಕೆ ತಿರುವಿ ಮೋದಕ ಪಾತ್ರೆಯಲ್ಲಿ ಇರಿಸಿದೆ. ಜಲಧಾರೆಯುಳ್ಳ, ಪೀಠವು ೮೩ × ೮೩ ಸೆ. ಮಿ. ಮತ್ತು ೩೪೫ ಸೆ. ಮಿ. ಎತ್ತರ. ಇದರ ಮೇಲೆಯು ೮೦ ಸೆ. ಮಿ. ವ್ಯಾಸದ ವರ್ತುಳಾಕಾರದ ತಗ್ಗು ಇದೆ.

ಒಟ್ಟಿನಲ್ಲಿ ದೈಹಿಕ ಲಕ್ಷಣಗಳಲ್ಲಿ ಮತ್ತು ಪ್ರಮಾಣದಲ್ಲಿ ಇದೆರಡು ಮೂರ್ತಿ ಶಿಲ್ಪಗಳಲ್ಲಿ ಬಹುಮಟ್ಟಿಗೆ ಹೋಲಿಕೆಯಿದ್ದರೂ ಅವುಗಳ ಕೂದಲನ್ನು ಹೆಣೆದ ರೀತಿಯಲ್ಲಿ, ಆಭರಣ ವೈವಿಧ್ಯತೆಯಲ್ಲಿ, ವಸ್ತ್ರ ಧರಿಸಿದ ರೀತಿಯಲ್ಲಿ ಮತ್ತು ಹಸ್ತಗಳಲ್ಲಿರುವ ವಸ್ತುಗಳಲ್ಲಿ ಸ್ಪಷ್ಟವಾದ ವ್ಯತ್ಯಾಸಗಳಿವೆ.

ಸಮಾಲೋಚನೆ :

ಗಣೇಶನ ಈ ಮೂರ್ತಿಗಳಲ್ಲಿ ಗಮನಿಸಬೇಕಾದ ಅಂಶಗಳೆಂದರೆ: ದ್ವಿಭುಜನಾಗಿರುವುದು, ಹೊಟ್ಟೆಗೆ ಸರ್ಪಬಂಧ ಮತ್ತು ಇಲಿ ವಾಹನ ಇಲ್ಲದಿರುವಿಕೆ. ಸಾಮಾನ್ಯವಾಗಿ, ೫ನೇ ಶತಮಾನದಿಂದ ಗಣೇಶನು ಜಟಾಮುಕುಟವನ್ನಾಗಲಿ ಅಥವಾ ಕಿರೀಟ ಮುಕುಟವನ್ನಾಗಲಿ ಧರಿಸಿದ ಹಾಗೆ ಶಿಲ್ಪದಲ್ಲಿ ತೋರಿಸಿದೆ. ಇಲ್ಲಿ ಹಾಗಿರದೆ, ಮುಂಭಾಗ ಮಾತ್ರ ಆನೆಯ ಮುಖದಂತಿದ್ದು ಹಿಂಭಾಗ ಮನುಷ್ಯನ ತರಹದ್ದಿದೆ. 'ಗಜ ಮುಖ'ನೆಂಬುದಕ್ಕೆ ತಕ್ಕುದಾಗಿದೆ.

ಈ ಮಾದರಿಯ ದ್ವಿಭುಜ ಗಣೇಶನ ವರ್ಣನೆ ಮೂರ್ತಿಶಿಲ್ಪ ಗ್ರಂಥಗಳಲ್ಲಿ, ಆಗಮ ಪುರಾಣಗಳಲ್ಲಿ ಮತ್ತು ಇತರ ಸಂಬಂಧಪಟ್ಟ ಪ್ರಾಚೀನ ಸಾಹಿತ್ಯದಲ್ಲಿ ದೊರಕುವುದಿಲ್ಲ. **ಗಣೇಶ ಪುರಾಣದ** ಕ್ರೀಡಾಖಂಡದಲ್ಲಿ (೧, ೧೮–೨೧) ರಲ್ಲಿ ಕೃತಯುಗದಲ್ಲಿ ದಶಭುಜನಾಗಿಯೂ, ಮಹಾಕಾಯನಾಗಿಯೂ, ಸಿಂಹವನ್ನು ವಾಹನವನ್ನಾಗಿ ಮಾಡಿಕೊಂಡು 'ವಿನಾಯಕ'ನೆಂದು; ತ್ರೇತಾಯುಗದಲ್ಲಿ ಆರು ಭುಜಗಳುಳ್ಳವನಾಗಿ ನವಿಲು ವಾಹನವುಳ್ಳವನಾಗಿ 'ಮಯೂರೇಶ್ವರ'ನೆಂದು; ದ್ವಾಪರ ಯುಗದಲ್ಲಿ ಚತುರ್ಭುಜನಾಗಿಯೂ ರಕ್ತವರ್ಣದವನಾಗಿ ಇಲಿಯನ್ನು ವಾಹನವನ್ನಾಗಿ ಮಾಡಿಕೊಂಡು 'ಗಜಾನನ'ನೆಂದು ಮತ್ತು ಕಲಿಯುಗದಲ್ಲಿ ಕತ್ತಿ ಗುರಾಣಿಯನ್ನು ಹಿಡಿದು ದ್ವಿಭುಜನಾಗಿಯೂ ಕುದುರೆ ವಾಹನವುಳ್ಳವನಾಗಿ 'ಧೂಮ್ರಕೇತು' ಎಂದು ಹೀಗೆ ಬೇರೆ ಬೇರೆ ಯುಗಗಳಲ್ಲಿಯ ಗಣೇಶನ ಅವತಾರಗಳ ವರ್ಣನೆಯಿದೆ. ಆದರೆ ಗಣೇಶ ಪುರಾಣವು ಕಾಲಮಾನದಲ್ಲಿ ಬಹಳ ಪ್ರಾಚೀನ ಗ್ರಂಥವಲ್ಲ. 'ಗಣೇಶ ಪಂಥ' ಬೆಳೆದ ಮೇಲೆಯೇ ಈ ಪುರಾಣವನ್ನು ರಚಿಸಿರಬೇಕು. ಅಂದರೆ ಕ್ರಿ. ಶ. ೬ನೇಯ ಶತಮಾನದ ನಂತರವೇ. ವರಾಹಮಿಹಿರನ **ಬೃಹತ್ ಸಂಹಿತೆ**ಯಲ್ಲಿ ಪ್ರತಿಮಾಲಕ್ಷಣ ವಿಭಾಗದಲ್ಲಿ ನಂತರ ಸೇರಿಸಿದ್ದಿರಬಹುದಾದ ಶ್ಲೋಕಗಳಲ್ಲಿ ಗಣಪತಿಯು ದ್ವಿಭುಜನಾಗಿಯು. ಪರಶು ಮತ್ತು ಮೂಲಂಗಿ (ಮೂಲ) ಫಲವನ್ನು ಹಿಡಿದಿರುವನಾಗಿ ವರ್ಣಿಸಿದೆ.

ಗೋಕರ್ಣ ಮತ್ತು ಇಡಗುಂಜಿ ದೇವಾಲಯಗಳಲ್ಲಿ ಪೂಜೆ ಮಾಡುವ ಕಾಲದಲ್ಲಿ ಹೇಳುವ ಧ್ಯಾನ ಮಂತ್ರಗಳು ಕ್ರಮವಾಗಿ ಹೀಗಿವೆ :

> ಗೋಕರ್ಣ ಕ್ಷೇತ್ರನಿಲಯಂ ದ್ವಿಭುಜಂ ವರದಂ ಸದಾ |
> ಸರ್ವಾಭೀಷ್ಟ ಪ್ರಸಿದ್ಧ್ಯರ್ಥಂ ತನ್ನಮಾಮಿ ಗಜಾನನಂ ||

> ರಕ್ತಾಂಭರಣಮಾಲ್ಯವಿಭೂಷಣಾಢ್ಯಂ
> ತಿಷ್ಠಂತಮಬ್ಜ ಮಪಸವ್ಯಕರೆ ದಧಾನಂ |
> ಶುಂಡಾಗ್ರಲಗ್ನ ಜಪಕಂ ನಿಜವಾಮ ಹಸ್ತೆ
> ಧ್ಯಾಯೇದ್ಗ ಜಾಸ್ಯಮರುಣಂ (ವದನಂ) ದ್ವಿಭುಜಂ ತ್ರಿಣೇತ್ರಂ ||

ಆದರೆ ಈ ಎರಡು ಧ್ಯಾನ ಮಂತ್ರಗಳು ಸಂಬಂಧಪಟ್ಟ ಪ್ರಾಚೀನ ಗ್ರಂಥಗಳಲ್ಲಿ ಇಲ್ಲ. ಇಡಗುಂಜಿಯ ಮಂತ್ರದಲ್ಲಿ "ರಕ್ತಾಂಭರಣಮಾಲ್ಯವಿಭೂಷಣಾಢ್ಯಂ" ಹಾಗು "ತ್ರಿಣೇತ್ರಂ" ಲಕ್ಷಣಗಳನ್ನು ಬಿಟ್ಟು ಅಲ್ಲಿಯ ಗಣೇಶನ ಮಾದರಿಯ ವರ್ಣನೆಯನ್ನು ಬಹುಮಟ್ಟಿಗೆ ಸರಿಯಾಗಿ ಕೊಟ್ಟಿದೆ. ಆದುದರಿಂದ ಈ ಮೂರ್ತಿಯನ್ನು ನೋಡಿದ ಮೇಲೆ ಭಾವಿಕವಾಗಿ ಅದಕ್ಕನುಗುಣವಾಗಿ ಈ ಮಂತ್ರಗಳನ್ನು ರಚಿಸಿರಬೇಕೆಂದು, ಆದುದರಿಂದ ಈ ಮಂತ್ರಗಳು ಈ ಮೂರ್ತಿಗಳ ನಿರ್ಮಾಣಕ್ಕೆ ಆಧಾರವಾಗಿಲ್ಲವೆಂದು ತೋರುವುದು. ಒಟ್ಟಿನಲ್ಲಿ ಮೂರ್ತಿಶಿಲ್ಪದ ಗ್ರಂಥಗಳ, ಪುರಾಣಗಳ, ಆಗಮಗಳು ಮುಂತಾದ ಸಂಬಂಧಪಟ್ಟ ಗ್ರಂಥಗಳ ಮತ್ತು ಮೇಲೆ ಉದ್ಧರಿಸಿದ ಧ್ಯಾನಮಂತ್ರಗಳ ರಚನೆಯ ಪೂರ್ವದಲ್ಲಿಯೇ ಈ ಮೂರ್ತಿಗಳಿದ್ದಿರಬೇಕೆಂದು ಬಹುಮಟ್ಟಿಗೆ ಕಾಣುವುದು.

ಗೋಕರ್ಣ ಸ್ಥಳ ಪುರಾಣಗಳಂತೆ, ಲಂಕೇಶ್ವರನಾದ ರಾವಣನು ಪರಮೇಶ್ವರನಿಂದ ಅವನ ಆತ್ಮಲಿಂಗವನ್ನು ತಪಸ್ಸಿನಿಂದ ಪಡೆದು ತನ್ನ ರಾಜಧಾನಿಗೆ ಹಿಂತಿರುಗುತ್ತಿದ್ದಾಗ ಗಣಪತಿಯು ಗೋಕರ್ಣ ಪ್ರದೇಶದಲ್ಲಿ ವಟು (ಬಾಲ ಬ್ರಹ್ಮಚಾರಿ)ವಾಗಿ ಕಾಣಿಸಿಕೊಂಡು ಆ ಆತ್ಮಲಿಂಗವು ಅಲ್ಲಿಯೇ ಮಹಾಬಲೇಶ್ವರನಾಗಿ ಸ್ಥಾಪನೆಯಾಗಲು ಕಾರಣನಾದ ಕಥೆ ಸರ್ವ ವಿದಿತ. ಪ್ರಸ್ತುತ ಮುಖ್ಯವಾದ ವಿಷಯವೆಂದರೆ ಗೋಕರ್ಣದ ಮಹಾ ಗಣಪತಿ ಈ ವಟುವಿನ ಸ್ವರೂಪದಲ್ಲಿದ್ದಾನೆ ಎಂಬ ನಂಬಿಕೆ. ದ್ವಿಭುಜನಾಗಿಯೂ, ಸರಳವಾಗಿಯೂ, ನಿಂತ ಭಂಗಿಯಲ್ಲಿ ಇರುವ ಈ ಗಣಪತಿ ವಟುವಿನಂತೆ ತೋರುವುದು ಸಹಜ. ಆದರೆ ಪುರಾಣಗಳಲ್ಲಿ ಬರುವ ಬಾಲ ಬ್ರಹ್ಮಚಾರಿ ಗಣಪತಿಯ ವರ್ಣನೆಗೂ ಇಲ್ಲಿ ಇದ್ದ ಗಣಪತಿ ಶಿಲ್ಪಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಆದುದರಿಂದ ಪುರಾಣಗಳಲ್ಲಿ ಈ ಕಥೆ ಬರುವುದಕ್ಕೂ ಮುಂಚೆಯೇ ಈ ಮೂರ್ತಿಶಿಲ್ಪವಿದ್ದಿರಬೇಕೆಂದು ತೋರುವುದು.

ಈ ಅಭಿಪ್ರಾಯವನ್ನು ಬೆಂಬಲಿಸುವಂತೆ ಇಡಗುಂಜಿ ಗಣಪತಿಯ ಬಗ್ಗೆ ಸ್ಥಳಿಕ ಕಥೆ ಇದೆ. ಬನವಾಸಿ ಕದಂಬ ರಾಜ್ಯ ಸ್ಥಾಪಕನಾದ ಮಯೂರಶರ್ಮನು ತನ್ನ ರಾಜ್ಯ ನಿರ್ಮಾಣ ಕಾರ್ಯವು ಯಶಸ್ವಿಯಾಗಲು ಆಗಲೇ ಪ್ರಸಿದ್ಧವಾಗಿದ್ದ ಈ ಇಡಗುಂಜಿಯ ಗಣಪತಿ ದರ್ಶನ ಮಾಡಿ ಸೇವೆ ಸಲ್ಲಿಸಿದನಂತೆ. ಇವನು ತನ್ನ ರಾಜ್ಯದಲ್ಲಿ ವೈದಿಕ ಧರ್ಮಾಚರಣೆಯುಳ್ಳ ಬೇರೆ ಬೇರೆ ಬ್ರಾಹ್ಮಣ ಪಂಗಡಗಳನ್ನು ಅಲ್ಲಲ್ಲಿ ನೆಲೆಸುವಂತೆ ಮಾಡಿದನಂತೆ. ಸಭಾಹಿತ ಎಂಬ ಹವ್ಯಕ ಪಂಗಡದವರು ಈ ಗಣಪತಿ ಪೂಜೆಗೆ ನಿಯೋಜಿಸಲ್ಪಟ್ಟರಂತೆ. ಈಗಲೂ ಹಳದೀಪುರದಲ್ಲಿರುವ ಸಭಾಹಿತ ವಂಶದವರೇ ಈ ದೇವಸ್ಥಾನದ ಮೇಲ್ವಿಚಾರಕರಾಗಿದ್ದಾರೆ. ಆದರೆ ಕುಂದೇವರು ಈ ಗಣಪತಿ ಒಟ್ಟಿನಲ್ಲಿ ಐತಿಹಾಸಿಕ ವಿಷಯ ಆಧಾರಿತವಾದ ಈ

ಕಥೆಯ ಪ್ರಕಾರ ಮಯೂರಶರ್ಮನ ಕಾಲಕ್ಕಿಂತಲೂ ಮುಂಚೆಯೇ ಇಲ್ಲಿ ಈ ಗಣಪತಿ ಮೂರ್ತಿ ಇದ್ದ ವಿಷಯ ಮುಖ್ಯ. ತಾಳಗುಂದದ ಶಾಂತಿವರ್ಮನ ಶಾಸನದಲ್ಲಿಯ ಶಾತಕರ್ಣಿಗಳಿಂದ ಸೇವಿಸಲ್ಪಟ್ಟ ಮಹಾದೇವನ ಉಲ್ಲೇಖವನ್ನು ಸ್ವಲ್ಪ ಮಟ್ಟಿಗೆ ಜ್ಞಾಪಕಕ್ಕೆ ತರುತ್ತದೆ.

ಗ್ರಂಥಗಳ, ಸ್ಥಳ ಪುರಾಣಗಳ ವಿಮರ್ಶೆಯ ನಂತರ ಇನ್ನು ಮೂರ್ತಿಶಿಲ್ಪಗಳ ಲಕ್ಷಣಗಳನ್ನು ಪರಿಶೀಲಿಸುವ. ಈ ಮೂರ್ತಿಗಳು ದೈಹಿಕ ಲಕ್ಷಣಗಳಲ್ಲಿ ಬಹಳಷ್ಟು ಕ್ರಿ. ಶ. ೧–೨ನೇಯ ಶತಮಾನಗಳ ಕುಬ್ಜ ಯಕ್ಷಗಳನ್ನು ಹೋಲುತ್ತವೆ. ಸ್ವಲ್ಪ ಹಿಂದೆ ನನಗೆ ಈ ಪ್ರದೇಶದಲ್ಲಿಯ ಗುಡ್ಡಾಪುರದಲ್ಲಿ ಕಂಡು ಬಂದ ಕ್ರಿ. ಶ. ೧–೨ನೇಯ ಶತಮಾನದ ಕುಬ್ಜ ಯಕ್ಷನನ್ನು ಜ್ಞಾಪಿಸಿಕೊಳ್ಳಬಹುದು. ಹಾಗೆಯೇ ಸನ್ನತಿಯಲ್ಲಿಯ ಅದೇ ಕಾಲದ ಬೌದ್ಧ ಧರ್ಮದ ಅವಶೇಷಗಳೊಡನೆ ದೊರೆತ ಭಗ್ನ ಯಕ್ಷಲನನ್ನು, ಔರಂಗಾಬಾದ ಜಿಲ್ಲೆ (ಮಹಾರಾಷ್ಟ್ರ)ಯ, ಪಿಥಲ್‌ಕೋರದಲ್ಲಿಯ ಬೌದ್ಧ ಗುಹಾ ದೇವಾಲಯದಲ್ಲಿಯ ಕುಬ್ಜ ಯಕ್ಷನನ್ನು ಉದ್ಧರಿಸಬಹುದು. ತಲೆ ಹಿಂಬದಿಯಲ್ಲಿ ತಲೆಗೂದಲನ್ನು ಹೆಣೆದಿರುವ ರೀತಿ ಸಾಂಚಿ ಸ್ತೂಪದ ತೋರಣದಲ್ಲಿರುವ ಶಾಲಭಂಜಿಕೆಯ ವಿಗ್ರಹಗಳಲ್ಲಿಯ ಮಾದರಿಯನ್ನು ಹೋಲುವುದು. ಧೋತ್ರವನ್ನು ಉಟ್ಟ ರೀತಿಯೂ ಉತ್ತರ ಭಾರತದಲ್ಲಿಯ ಸುಮಾರು ಕ್ರಿ ಪೂ. ೨–೧ನೇಯ ಶತಮಾನದ ದೊಡ್ಡ ಯಕ್ಷ ಮೂರ್ತಿಗಳಲ್ಲಿರುವುದಕ್ಕೆ ಹೋಲುತ್ತವೆ. ಇತ್ತೀಚೆಗೆ ಹೈಗುಂದದಲ್ಲಿ ನನಗೆ ದೊರೆತ ಕ್ರಿ. ಶ. ೨–೩ನೇಯ ಶತಮಾನದ ಯಕ್ಷನು ಧೋತ್ರವನ್ನು ತೊಟ್ಟ ಮಾದರಿಯು ಹೆಚ್ಚು ಸಮಂಜಸವಾದ ಹೋಲಿಕೆ.

ಇಡಗುಂಜಿ ಮಹಾಗಣಪತಿಯು ಧರಿಸಿದ ಪದಕದ ಹಾರ (ಚಿತ್ರ 3. ೨ ಅ). ಹೈಗುಂದದ ಯಕ್ಷನ ಪದಕದ ಹಾಗಿದೆ. ಹಾಗೆಯೇ ಗೋಕರ್ಣದ ಮಹಾಗಣಪತಿಯ ಉಪವೀತ ಗೆಜ್ಜೆ ಸರದಲ್ಲಿರುವ ಮಣಿಯು ಕುಷಾನರ ಕಾಲದ ಬೋಧಿಸತ್ವನ ಮೂರ್ತಿಯಲ್ಲಿರುವ ಮಣಿ ಸರಕ್ಕೆ ಹೋಲುತ್ತವೆ.

ಮುಖ್ಯವಾಗಿ ಗೋಕರ್ಣದ ಮಹಾಗಣಪತಿಯು ಎಡಗೈಯಲ್ಲಿರುವ ಹಿಡಿಕೆಯುಳ್ಳ ಮೋದಕ ಪಾತ್ರೆ ತುಂಬ ಗಮನಾರ್ಹವಾದುದು. ಹಟ್ಟಿಯಂಗಡಿ (ಕುಂದಾಪುರ ತಾ. ದಕ್ಷಿಣ ಕನ್ನಡ ಜಿಲ್ಲೆ) ಯ (ಚಿತ್ರ 3, ೨. ೨ ಅ.) ಮತ್ತು ಉಪ್ಪಿನ ಪಟ್ಟಣ (ಉತ್ತರ ಕನ್ನಡ ಜಿಲ್ಲೆ), ಗಣಪತಿ ಮೂರ್ತಿಗಳನ್ನು ಬಿಟ್ಟರೆ, ಇಡಗುಂಜಿಯದನ್ನು ಹಿಡಿದು, ಇದುವರೆಗೂ ಪ್ರಕಟಿತ ಗಣಪತಿ ಮೂರ್ತಿಗಳಲ್ಲಿ ಮೋದಕ ಪಾತ್ರೆಯುದ್ದಿಡೆಯಲ್ಲಿಲ್ಲ ಅದು ಅರ್ಧ ಗೋಲಾಕಾರವಾಗಿದ್ದು ಅದನ್ನು ಅಂಗೈಯಲ್ಲಿ ಇಟ್ಟುಕೊಂಡ ಹಾಗೆ ತೋರಿಸಿರುತ್ತವೆ. ಗೋಕರ್ಣ, ಉಪ್ಪಿನ

ಪಟ್ಟಣ ಮತ್ತು ಹಟ್ಟಿಯಂಗಡಿಯಲ್ಲಿಯ ಗಣಪತಿಯ ಮೋದಕಪಾತ್ರೆ ತರಹದ್ದು ಮತ್ತೆ ಬೇರೆ ಗಣಪತಿ ಮೂರ್ತಿಗಳಲ್ಲಿ ಕಂಡು ಬಂದಿಲ್ಲ. ಕ್ರಿ. ಶ. ೧-೨ ನೇ ಶತಮಾನದ ಅಮರಾವತಿ[೧೪] ಮತ್ತು ಮಥುರಾ[೧೪ಅ] ಶಿಲ್ಪದಲ್ಲಿ ಈ ವಿಧವಾದ ಪಾತ್ರೆಯನ್ನು ತೋರಿಸಲಾಗಿದೆ. ಸ್ವಾಟ್ ಕಣಿವೆ ಪ್ರದೇಶದ ಪಾಚ ಮುಂತಾದೆಡೆಗಳಲ್ಲಿಯ ಉತ್ಖನನಗಳಲ್ಲಿಯೂ[೧೫] ಮತ್ತು ತಕ್ಷಶಿಲೆಯ ಸಮೀಪದಲ್ಲಿಯ ಚಾರ್ಸದಲ್ಲಿ[೧೬]ಯ ಉತ್ಖನನಗಳಲ್ಲಿಯೂ ಕ್ರಿ. ಪೂ. ೬ ನೇ ಶತಮಾನದಿಂದ ೪ ನೇ ಶತಮಾನಗಳ ವರೆಗಿನ ಪ್ರಾಚ್ಯವಸ್ತುಗಳಲ್ಲಿ ಇದೇ ವಿಧವಾದ ಮಣ್ಣಿನ ಪಾತ್ರೆಗಳು ಹೆಚ್ಚಾಗಿ ಇವೆ. ಕರ್ನಾಟಕದಲ್ಲಿ ಮಹಾಕೂಟದ (ಪಟ್ಟದಕಲ್ಲಿನ ಹತ್ತಿರ) ಮಹಾಕೂಟೇಶ್ವರದ ದೇವಾಲಯದ ಅಧಿಷ್ಠಾನದ (ನೈರುತ್ಯ ದಿಕ್ಕಿನ ಮೂಲೆಯ ಪಶ್ಚಿಮಕ್ಕೆ ಎದುರಾಗಿರುವ) ಅಡ್ಡ ಪಟ್ಟಿಕೆಯಲ್ಲಿನ ದೃಶ್ಯದಲ್ಲಿ ಸ್ವಲ್ಪ ಬೇರೆ ಮಾದರಿಯ ಈ ವಿಧದ ಪಾತ್ರೆಯ ಚಿತ್ರವಿದೆ[೧೬]. ಆದರೆ ಬಾದಾಮಿ ಚಾಲುಕ್ಯ ಕಾಲದ ಯಾವ ಗಣಪತಿಯೂ ಈ ವಿಧವಾದ ಮೋದಕ ಪಾತ್ರೆಯನ್ನು ಹಿಡಿದಿಲ್ಲ. ಕ್ರಿ. ಶ. ೬ ನೇ ಶತಮಾನದಿಂದ ಮುಂದೆ ಈ ವಿಧದ ಪಾತ್ರೆ ಶಿಲ್ಪದಲ್ಲಿ ತೋರಿಸಿದ ಹಾಗಿಲ್ಲ.

ಈ ರೀತಿ ಎಲ್ಲ ಅಂಶಗಳನ್ನು ಬಿಡಿಸಿ ನೋಡುವುದರಿಂದ ಗೋಕರ್ಣದ ಮಹಾಗಣಪತಿಯು ಬಹುಮಟ್ಟಿಗೆ ಕ್ರಿ. ಶ. ೧-೨ ನೇ ಶತಮಾನದಾಗಿದ್ದಿರಬಹುದೆಂದು ತೋರುವುದು. ಇಡಗುಂಜಿಯ ಗಣಪತಿಯ ತಲೆಯಮೇಲಿನ ಕಮಲವಿರುವ ಮತ್ತು ಮೋದಕ ಪಾತ್ರೆಯ ಲಕ್ಷಣಗಳು ಅದು ಗೋಕರ್ಣದ ಗಣಪತಿಗಿಂತ ಸ್ವಲ್ಪ ನಂತರದ್ದಿರಬಹುದು ಎಂದು ಸೂಚಿಸುವ ಹಾಗೆ ಕಾಣುತ್ತವೆ. ಪ್ರಾಯಶಃ ೨-೩ ನೆಯ ಶತಮಾನದ್ದಿರಬಹುದು. ಹಟ್ಟಿಯಂಗಡಿಯ ಗಣಪತಿಯು ಬಲಗೈಯಲ್ಲಿ ಹಿಡಿಕೆಯುಳ್ಳ ಮೋದಕ ಪಾತ್ರೆಯು ಗೋಕರ್ಣ ಗಣಪತಿಯದನ್ನು, ತಲೆಯ ಮೇಲಿನ ಕಮಲವು ಇಡಗುಂಜಿ ಗಣಪತಿಯದನ್ನು ಹೋಲುತ್ತದೆ. ಮತ್ತು ಗಂಟೆ ಸರದ ಬದಲು ಎರಡು ಎಳೆಯ ಯಜ್ಞೋಪವೀತವಿದೆ. ಉಪ್ಪಿನಅಂಗಡಿಯ ಗಣಪತಿಯ ಮೋದಕ ಪಾತ್ರೆಯೂ ಗೋಕರ್ಣದ ಗಣಪತಿಯದನ್ನು ಹೋಲುತ್ತದೆ. ಆದರೆ ತಲೆಯ ಮೇಲೆ ಕಮಲದ ಹೂವು ಇದ್ದ ಹಾಗೆ ಕಾಣುವುದಿಲ್ಲ. ಈ ಎರಡು ಗಣಪತಿಗಳು ಕುಳಿತ ಭಂಗಿಯಲ್ಲಿವೆ. ಆದುದರಿಂದ ಗೋಕರ್ಣ ಮತ್ತು ಇಡಗುಂಜಿಯ ಗಣಪತಿಗಳ ಕಾಲಕ್ಕಿಂತಲೂ ಸ್ವಲ್ಪ ನಂತರದ್ದಾಗಿದ್ದು ಭೂಮಾರದ, ಮುಕುಟಧಾರಿಯಯಗಿದ್ದು ಉಪವೀತ ರೀತಿಯಲ್ಲಿ ಧರಿಸಿದ ಗಂಟೆ ಸರವನ್ನಲ್ಲದೆ ಕುತ್ತಿಗೆಗೂ, ತೋಳಿಗೂ, ಕಾಲಿಗೂ, ಗೆಜ್ಜೆ ಸರವುಳ್ಳ ದ್ವಿಬಾಹು ಗಣಪತಿಗಿಂತ ಹಿಂದಿನದೆಂದು ತೋರುವುದು.

ಇವೆಲ್ಲವನ್ನು ಮೂರ್ತಿ ಶಿಲ್ಪದ ಗ್ರಂಥಗಳು ಬರುವ ಪೂರ್ವದಲ್ಲಿ ಮಾಡಿದ್ದಾಗಿರಬೇಕು. ಪ್ರಾಯಶಃ ೪–೫ನೆಯ ಶತಮಾನದ್ದಿರಬಹುದು.

ಐಹೊಳೆಯಲ್ಲಿ ದುಂಡುಶಿಲ್ಪದ ದ್ವಿಬಾಹು ಗಣೇಶನ ಎರಡು ಭಗ್ನ ಮೂರ್ತಿಗಳಿವೆ (ಚಿತ್ರ 4). ಒಂದು ಕುಳಿತ ಭಂಗಿಯಲ್ಲಿದ್ದು ಆಕಾರದಲ್ಲಿ ಮತ್ತು ಲಕ್ಷಣಗಳಲ್ಲಿ ಉಪ್ಪಿನಪಟ್ಟಣ ಮತ್ತು ಪಟ್ಟಿಯುಂಗಡಿಯದನ್ನು ಹೋಲುತ್ತಿದ್ದರೂ ಇವರಲ್ಲಿ ಒಂದೆರಡು ವಿಶಿಷ್ಟ ಲಕ್ಷಣಗಳಿವೆ. ತಲೆಯ ಮೇಲಿನ ಸಣ್ಣ ಕಮಲದ ಹೂವು ಮತ್ತು ಹಿಂಬದಿಯಲ್ಲಿ ಪೂರ್ಣ ಅರಳಿದ ಕಮಲದ ಮಂಡಲ ಇವೆ (ಚಿತ್ರ 4; ೨). ಹೊಟ್ಟೆಯ ಮೇಲೆ ಅಡ್ಡಲಾಗಿ ಚಿತ್ರಿತ ಮಣಿಪಟ್ಟಿಯಿದೆ. ಆದುದರಿಂದ ಇದು ಪ್ರಾಯಶಃ ೫ನೆಯ ಶತಮಾನದ್ದಿರಬಹುದು. ಮತ್ತೊಂದರ (ಚಿತ್ರ 4; ೪) ಕಮಲ ಪುಷ್ಪವುಳ್ಳ ತಲೆಯು ಹೆಚ್ಚು ಸಪಾಟಾಗಿದೆ. ಇದಕ್ಕೆ ಗೆಜ್ಜೆಯ ಅಡ್ಡ ಪಟ್ಟಿಯಿದೆ. ಬಲದಂತವು ಒಡೆದಿದ್ದು ಕಾಣುವುದು. ಇದರ ಕೈಗಳು, ಸೊಂಡಿಲು, ಎದೆಯ ಕೆಳಭಾಗ ಪೂರ್ತಿ ಒಡೆದುಹೋಗಿವೆ. ಯಾವ ಭಂಗಿಯಲ್ಲಿದೆ ಎಂಬುದು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಪ್ರಾಯಶಃ ಸು. ೬ನೆಯ ಶತಮಾನದ್ದಾಗಿರಬಹುದು.

ಗಣಪತಿಯ ತಲೆಯಮೇಲಿನ ಕಮಲದ ಹೂವು ಅಥರ್ವ ವೇದ ಮತ್ತು ಬಹು ಪ್ರಾಚೀನ ಯೋಗ ಗ್ರಂಥಗಳಲ್ಲಿ ಬರುವ ಮಾನವನ ಯೋಗಬಲದಿಂದ ತಿಳಿಯಬಹುದಾದ ಅತೀಂದ್ರಿಯ ಸೂಕ್ಷ್ಮಬುದ್ಧಿಯನ್ನು ಸೂಚಿಸುವ 'ಸಹಸ್ರದಳ ಕಮಲದ' ಸಂಕೇತ. ಪುರಾಣಗಳ, ಮೂರ್ತಿವಿಜ್ಞಾನ, ಗ್ರಂಥಗಳಲ್ಲಿ ದೇವರ ಮೂರ್ತಿಗಳ ವರ್ಣನೆಗಳಲ್ಲಿ ಈ ಲಕ್ಷಣವನ್ನು ಹೇಳಿಲ್ಲ. ಆದುದರಿಂದ ಈ ಲಕ್ಷಣವು ಬಹು ಪ್ರಾಚೀನ ಯೋಗ ತತ್ವಗಳ ಗ್ರಂಥಗಳ ಪ್ರಭಾವಕ್ಕೊಳಗಾಗಿ ಈ ಮೂರ್ತಿಗಳನ್ನು ಮಾಡಿರುವುದಾಗಿ ತೋರಿಸುವುದು. ಅಪರೂಪವಾಗಿ ಬಾದಾಮಿ ಚಾಲುಕ್ಯರ ಕಾಲದ ಶಿಲ್ಪದಲ್ಲಿಯೂ ಈ ಲಕ್ಷಣವು ಕಾಣಿಸಿಕೊಳ್ಳುವುದು ಉದಾ : ಬಾದಾಮಿ ವೈಷ್ಣವ ೨ನೆಯ ಗುಹೆಯಲ್ಲಿಯ ತಲೆಯ ಮೇಲೆ ಕಮಲಧಾರಿಯಾದ ನರಸಿಂಹ.

ಮೇಲೆ ಹೇಳಿದ ವಿಶಿಷ್ಟ ಲಕ್ಷಣಗಳುಳ್ಳ ದ್ವಿಬಾಹು ಗಣಪತಿಗಳು ಈಗ ತಿಳಿದ ಮಟ್ಟಿಗೆ ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳ ಅಂಕೋಲ-ಕುಂದಾಪುರ ಭಾಗದಲ್ಲಿ ಕಂಡುಬಂದಿವೆ. ಈ ಪ್ರದೇಶವನ್ನು ಕೂಲಂಕುಷವಾಗಿ ಪರಿಶೀಲಿಸಿದರೆ ಈ ವಿಧದ ಗಣಪತಿ ಶಿಲ್ಪದ ಪ್ರಾಚೀನತೆ, ಮೂಲ, ವಿಕಾಸ ಮತ್ತು ಮಾದರಿಗಳ ಬಗ್ಗೆ ಹೆಚ್ಚು ತಿಳಿಯಬಹುದು.

ಕಪಿಶೀ ನಗರದ ಜನರಲ್ಲಿ ಕ್ರಿ.ಪೂ. ೨ನೆಯ ಶತಮಾನಕ್ಕಿಂತ ಪೂರ್ವದಲ್ಲಿಯೇ ಗಜ-ದೇವತೆಯ ಪೂಜೆಯಿದ್ದುದರಿಂದಲೂ, ಆ ದೇವರಿಗೆ ಪಿ-ಲೊ-ಶೊ-ಲೊ





೨

೧





೧ಅ

೨ಅ

ಗೋಕರ್ಣ ಮಹಾಗಣಪತಿ : ೧. ಮುಂಭಾಗ. ೧ಅ. ಎಡಗೈಯಲ್ಲಿ ಹಿಡಿಕೆಯುಳ್ಳ ಮೋದಕ ಪಾತ್ರೆ: ೨. ಹಿಂಭಾಗ; ೨ಅ ಕೆಳಭಾಗ.

ಚಿತ್ರ 2



೧



೨



೧ಅ



೨ಅ

೧, ೧ಅ ಗೋಕರ್ಣದ ಮಹಾಗಣಪತಿಯ ಬಲಬದಿ (ಮೇಲೆ, ಕೆಳಗೆ).
೨, ೨ಅ ಇಡಗುಂಜಿಯ ಮಹಾಗಣಪತಿಯ ಮುಂಭಾಗ ಮತ್ತು ಮೇಲ್ಭಾಗ.



೧



೨



೧ಅ



೨ಅ

೧, ೧ಅ ಇಡಗುಂಜಿಯ ಮಹಾಗಣಪತಿಯ ಹಿಂಭಾಗ. ೨, ೨ಅ ಹಟ್ಟಿಯಂಗಡಿಯ ಗಣಪತಿಯ ಮುಂಭಾಗ, ಹಿಂಭಾಗ.

ಚಿತ್ರ 4



೧



೨



೩



೪

ಐಹೊಳೆ ೧, ೨ ಮತ್ತು ೩ ದ್ವಿಭುಜ ಗಣೇಶನ ಮೂರು ಚಿತ್ರಗಳು. ೪ ತಲೆಯ ಮೇಲೆ ಕಮಲದ ಹೂವುಳ್ಳ ಮತ್ತೊಂದು ಶಿಲ್ಪ.

(ಅಂದರೆ ಗಜಾಂಶವುಳ್ಳವನು ಎಂಬರ್ಥ), ಕಪಿಶೀ (ಕಪಿ–ಆನೆ) ಎಂಬ ಹೆಸರು ಅದೇ ಅರ್ಥವನ್ನು ಕೊಡುವುದರಿಂದ, ಆ ಪ್ರದೇಶದಲ್ಲಿ ಅತೀ ಪ್ರಾಚೀನ ಅಂದರೆ ೪ನೆಯ ಶತಮಾನದ ಗಣೇಶನ ಮೂರ್ತಿ ದೊರೆತಿದ್ದರಿಂದಲೂ ಮತ್ತು ದಕ್ಷಿಣ ಭಾರತದಲ್ಲಿ ಗಣೇಶನಿಗೆ 'ಪಿಳ್ಳೆಯಾರ್' (**ಪಾಯಿಯ ಸದ್ದ ಮಹಾರ್ಣವ** ಗ್ರಂಥದ ಪ್ರಕಾರ ಆನೆಮರಿ ಎಂದು ಅರ್ಥ) ಎಂಬ ಹೆಸರಿರುವುದರಿಂದ, ಗಣೇಶನ ಮೂರ್ತಿಶಿಲ್ಪದ ಕಲ್ಪನೆ ಭಾರತಕ್ಕೆ ಅಫಘಾನಿಸ್ಥಾನದಿಂದ ಬಂದಿರಬಹುದೆಂದು ಧವಳಿಕರ್[೧೯]ರವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಮೇಲಿನ ನನ್ನ ವಿವರಣೆಯ ಪ್ರಕಾರ ಈ ಅಭಿಪ್ರಾಯವನ್ನು ಪುನವಿಮರ್ಶಿಸಬೇಕಾಗುತ್ತದೆ.

ಈ ದಿಶೆಯಲ್ಲಿ ಆನಂದಕುಮಾರಸ್ವಾಮಿಯವರ ಬ್ರಾಹ್ಮಣಧರ್ಮದ ಗಣೇಶನ ಮೂರ್ತಿಶಿಲ್ಪದ ಕಲ್ಪನೆ, ಪ್ರಾಯಶಃ ಪ್ರಾಚೀನ ಯಕ್ಷಪೂಜೆ ಮತ್ತು ಶಿಲ್ಪದಿಂದ ಕ್ರಮೇಣ ಬಂದಿರಬೇಕೆಂಬ ವಿಚಾರ[೨೦] ಬಹುಮಟ್ಟಿಗೆ ಸಮಂಜಸವಾಗಿ ಕಾಣುತ್ತದೆ. ಅವರು ಭೂಮಾರದ ಗಣಪತಿಯನ್ನೇ ಪ್ರಾಚೀನವೆಂದು ಹೇಳಿದ್ದಾರೆ. ಆ ಗಣಪತಿಗೆ ಗಂಟೆಯ ಸರವಿದೆ. ಈ ಸಂದರ್ಭದಲ್ಲಿ ಬುದ್ಧನ ಸಮಕಾಲೀನ ಬಿಂಬಸಾರ ರಾಜನ ಕಾಲದಲ್ಲಿ ಪ್ರಚಲಿತ ಒಂದು ಕಥೆ ಟಿಬೇಟಿನ ಕಥೆಗಳ ಸಂಕಲನದಲ್ಲಿ ಉಲ್ಲೇಖಿತವಾಗಿದ್ದು, ಅದು ಪ್ರಾಯಶಃ ಗಂಟೆಯ ಸರದ ಔಚಿತ್ಯದ ಬಗ್ಗೆ ಸೂಚನೆಯನ್ನು ಕೊಡುವಹಾಗೆ ಕಾಣುತ್ತದೆ ಎಂದು ಅವರು ಭಾವಿಸುತ್ತಾರೆ. ವೈಶಾಲಿನಗರದ ದ್ವಾರಪಾಲಕನು ಮರಣಾನಂತರ ಮತ್ತೆ ಹುಟ್ಟಿದನಂತೆ. ತನ್ನದೇ ಒಂದು ಯಕ್ಷಪ್ರತಿಮೆಯನ್ನು ಮಾಡಿ ಇಡಬೇಕೆಂದು ಅದಕ್ಕೆ ಗಂಟೆಯ ಸರವನ್ನು ಹಾಕಬೇಕೆಂದು ನಗರದ ಜನರನ್ನು ಕೇಳಿಕೊಂಡನಂತೆ. ಆ ನಗರಕ್ಕೆ ಶತ್ರುಗಳಿಂದ ತೊಂದರೆಯ ಸಂಭವ ಕಂಡುಬಂದಲ್ಲಿ ತಾನು ಗಂಟೆಯ ಶಬ್ದ ಮಾಡಿ ಜನರನ್ನು ಎಚ್ಚರಗೊಳಿಸುವುದಾಗಿ ಹೇಳಿದನಂತೆ. ಅದರಂತೆ ಜನರು ಗಂಟೆಯ ಸರವುಳ್ಳ ಯಕ್ಷಪ್ರತಿಮೆ ಮಾಡಿಸಿಟ್ಟರಂತೆ. ನಂತರ ಆ ಯಕ್ಷನ ಸಹಾಯದಿಂದ ಶತ್ರು ಭೀತಿಯಿಲ್ಲದೆ ಸುಖವಾಗಿದ್ದರಂತೆ. ಬಹು ಹಿಂದಿನಿಂದಲೂ ಸಾಮಾನ್ಯವಾಗಿ ಶೈವ ದೇವಾಲಯದಲ್ಲಿ ಗಣೇಶನನ್ನು ಗರ್ಭಗುಡಿಯ ಬಲಬದಿಯಲ್ಲಿ ಸ್ಥಾಪಿಸುತ್ತಿದ್ದುದನ್ನು ಇಲ್ಲಿ ನೆನಸಿಕೊಳ್ಳಬಹುದು. ಮೇಲೆ ವಿವರಿಸಿದ ಹಾಗೆ ಗೋಕರ್ಣ ಮತ್ತು ಇಡಗುಂಜಿ ಮಹಾಗಣಪತಿ ಮೂರ್ತಿಗಳ ಕ್ರಿ. ಪೂ. ೧– ಕ್ರಿ. ಶ. ೧–೨ನೆಯ ಕುಬ್ಜ ಯಕ್ಷಗಳನ್ನು ತುಂಬ ಹೋಲುತ್ತವೆ. ಅವುಗಳ ಗಂಟೆಯ ಸರವು ಈ ಹಿನ್ನೆಲೆಯಲ್ಲಿ ಅರ್ಥಗರ್ಭಿತವಾಗಿದೆ. ಹೀಗೆ ಆನಂದಕುಮಾರಸ್ವಾಮಿಯವರ ಅಭಿಪ್ರಾಯವನ್ನು ನಿಸ್ಸಂಶಯವಾಗಿ ಪುಷ್ಟೀಕರಿಸುತ್ತದೆ. ಈ ಮೂರ್ತಿಗಳು ಪ್ರಾಚೀನ ಯಕ್ಷ ಮೂರ್ತಿಗಳ ಮತ್ತು ಭೂಮಾರದ ಗಣಪತಿಯ ಮಧ್ಯಕಾಲದ ಕೊಂಡಿಯನ್ನು ದೊರಕಿಸಿಕೊಟ್ಟು ಗಣೇಶಶಿಲ್ಪದ ಪ್ರಾಚೀನತೆಗೆ ಆಧಾರವಾಗಿವೆ.

ಅಡಿಟಿಪ್ಪಣಿ

೧ ಗೋಪಿನಾಥರಾವ್, ಟಿ. ಎ. ೧೯೧೪: ದಿ. ಎಲಿಮೆಂಟ್ಸ್ ಆಫ್ ಹಿಂದು ಐಕೊನಾಗ್ರಫಿ, ತ್ರಿವೇಂದ್ರಮ್.
ಎರಡನೆಯ ಮುದ್ರಣ (೧೯೭೧) ಸಂಪುಟ ೧ ಭಾಗ ೧ ಪುಟ ೩೫–೬೭.
ಆಲಿಗೆಟ್ಟಿ: ೧೯೩೬ : ಗಣೇಶ, ಆಕ್ಸ್‌ಫರ್ಡ್ ೨ನೆಯ ಮುದ್ರಣ (೧೯೭೧) ಹೊಸದೆಹಲಿ ಪುಟ. ೨೫–೨೬.

ಬ್ಯಾನರ್ಜಿಯ ಜೆ. ಎನ್. ೧೯೫೬ : ದಿ ಡೆವೆಲಪ್‌ಮೆಂಟ್ ಆಫ್ ಹಿಂದು ಐಕೊನೊಗ್ರಫಿ, ಕಲ್ಕತ್ತ ಪುಟಗಳು ೩೫೪–೬೧.

ಹೆರಾಸ್, ಎಚ್ ೧೯೭೨: ದಿ. ಪ್ರಾಬ್ಲೆಮ್ ಆಫ್ ಗಣಪತಿ, ದೆಹಲಿ. ಪು. viii ಮತ್ತು ೨೭–೨೯.

೨ ಆನಂದಕುಮಾರಸ್ವಾಮಿ, ೧೯೭೧ : ಯಕ್ಷರು. ಪು. ೭. ದೆಹಲಿ (ಹೊಸ ಮುದ್ರಣ).

೩ ಬ್ಯಾನರ್ಜಿ ಆರ್.ಡಿ, ೧೯೨೪: 'ದಿ ಟೆಂಪಲ್ ಆಫ್ ಶಿವ ಆ್ಯಟ್ ಭೂಮಾರ'. ಮೆಮಾಯರ್ಸ್ ಆಫ್ ದಿ ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯ ನಂ. ೧೬, ಪ್ಲೇಟ್ ೧೫, a, b.

೪ ಆಲಿಗೆಟ್ಟಿ, ಅದೇ ಕಡೆ.

೫ ಗೋಪಿನಾಥರಾವ್, ಅದೇ ಕಡೆ.

೬ ಧವಳಿಕರ್, ಎಂ. ಕೆ ೧೯೭೧ "ಎ ನೋಟ್ ಆನ್ ಟು ಗಣೇಶ ಸ್ಟ್ಯಾಚ್ಯುಸ್ ಫ್ರಮ್ ಅಫ್‌ಘಾನಿಸ್ಥಾನ್" ಈಸ್ಟ್ ಆ್ಯಂಡ್ ವೆಸ್ಟ್, ಸಂಪುಟ ೨೧. ಸಂ. ೩–೪, ಪುಟ ೩೩೧-೩೩೬

೭ ಸುಂದರ, ಅ ೧೯೭೧: "ಬನವಾಸಿ ಕದಂಬರ ಕಾಲದ (?) ಕೆಲವು ಶಿಲಾಮೂರ್ತಿಗಳು." ಕರ್ನಾಟಕ ಭಾರತಿ, ಸಂಪುಟ ೪. ಸಂಚಿಕೆ ೨, ಪುಟಗಳು ೯೦–೯೫

೮ ದೇಸಾಯಿ, ಪಾಂ. ಭೀ. ೧೯೬೮: "ಎ ನ್ಯೂ ಬುದ್ಧಿಸ್ಟ್ ಸೆಂಟರ್," ಜರ್ನಲ್ ಆಫ್ ದಿ ಕರ್ನಾಟಕ ಯೂನಿವರ್ಸಿಟಿ(ಸೋಷಿಯಲ್ ಸೈನ್ಸ್‌ಸ್)ಸಂಪುಟ iv, ಪು. ೧–೮, ಚಿತ್ರ ೫.

೯ ಏನ್ಶಿಯಂಟ್ ಇಂಡಿಯಾ, ನಂ ೧೫, ೧೯೫೯.

೧೦ ಆನಂದಕುಮಾರಸ್ವಾಮಿ ಅದೇ ಕಡೇ ಪ್ಲೇಟ್ ii ಚಿತ್ರ ೨.

೧೧ ಸುಂದರ, ಅ. "ಕ್ರಿ. ಶ. ೨-೩ನೆಯ ಶತಮಾನದ ಅಪೂರ್ವಶಿಲ್ಪಶೋಧ," ಸಂಯುಕ್ತ ಕರ್ನಾಟಕ. ದಿ. ೨-೭-೭೪. ಪು. ೬.

೧೨ ಅಗ್ರವಾಲ, ವಿ. ಎಸ್; ೧೯೬೫: ಇಂಡಿಯನ್ ಆರ್ಟ್, ಪ್ಲೇಟ XLVI ಚಿತ್ರ ೧೫೨ ಪು. ೩೪೫, ೩೫೦.

೧೩ ಪಿ. ಗುರುರಾಜ ಭಟ್ಟರು ಉಪ್ಪಿನ ಪಟ್ಟಣ, ಕಿರುಮಂಜೇಶ್ವರ, ಹಟ್ಟಿಯಂಗಡಿ ಹೀಗೆ ಸುಮಾರು ಒಂಬತ್ತು ಕಡೆಗಳಲ್ಲಿ ದ್ವಿಭುಜ ಗಣಪತಿಯನ್ನು ಶೋಧಿಸಿದ್ದಾರೆ. "ದ್ವಿಬಾಹು ಗಣಪತಿ ಬಿಂಬಗಳು" (ಪುಟಗಳು ೪೧-೪೫) ಎಂಬ ತಮ್ಮ ಲೇಖನದಲ್ಲಿ ಅವುಗಳ ಸಣ್ಣ ಪರಿಚಯವನ್ನು ಕೊಟ್ಟಿದ್ದಾರೆ. ಗೋಕರ್ಣ ಮತ್ತು ಇಡಗುಂಜಿಯ ಗಣಪತಿಗಳ ಸಣ್ಣ ವಿವರಣೆಯೂ ಇದೆ. ಲೇಖನದ ಮುದ್ರಿತಪ್ರತಿಯಲ್ಲಿ ಅದು ಯಾವುದರಲ್ಲಿ ಮತ್ತು ಯಾವಾಗ ಪ್ರಕಟವಾಗಿದೆ ಎಂದು ಹಾಕಿಲ್ಲ.

೧೪ ಶಿವರಾಮ ಮೂರ್ತಿ, ಸಿ. ೯೫೬ ಅಮರಾವತಿ ಸ್ಕಲ್ಪರ್ಸ್ ಇನ್ ದಿ ಮದ್ರಾಸ ಗೌರ್ನಮೆಂಟ ಮ್ಯುಸಿಯಮ್, ಮದ್ರಾಸ್. ಪ್ಲೇಟ್ V ಚಿತ್ರ ೨೦.

೧೫ ಸ್ಟಕಲ್. ಜಿ ೧೯೬೬: "ಡಿಸ್ಕವರಿ ಆಫ್ ಫೋರ್ ಪ್ರಿ–ಬುದ್ಧಿಸ್ಟ್ ಸಿಮೆಟರಿಸ್ ನಿಯರ್ ಪಾಚ ಇನ್ ಬನರ್ (ಸ್ವಾಟ್, ಪ. ಪಾಕಿಸ್ತಾನ)" ಈಸ್ಟ ಆ್ಯಂಡ್ ವೆಸ್ಟ ಸಂಪುಟ ೧೬, ಪುಟ ೭೨೬. ಚಿತ್ರಗಳು ೨೬, ೨೭, ೨೯.

೧೬ ಸರ್ ವ್ಹೀಲರ್. ಎಂ ೧೯೬೨ ಚಾರ್ಸದ, ಎ ಮೆಟ್ರೊ ಪಾಲಿಸ್ ಆಫ್ ದಿ ನಾರ್ಥವೆಸ್ಟ ಫ್ರಾಂಟಿಯರ್, ಪುಟ ೪೮. ಚಿತ್ರ ೧೩*a* .

೧೭ ಇತ್ತೀಚೆಗೆ ನಾನು ಈ ದೇವಾಲಯವನ್ನು ಪರಿಶೀಲಿಸುತ್ತಿದ್ದಾಗ ಈ ಚಿತ್ರ ನನಗೆ ತೋರಿ ಬಂತು.

೧೮ ಅಗ್ರವಾಲ, ಪಿ. ಎಸ್. ೧೯೬೬ : ಶಿವ ಮಹಾದೇವ, ವಾರಣಾಸಿ. ಪು. ೫–೭. ೫೭ ನೆಯ ಪುಟದಲ್ಲಿರುವ ಚಿತ್ರವನ್ನು ನೋಡಿ.

೧೯ ಧವಳಿಕರ್ ಅದೇ ಕಡೆ.

೨೦ ಆನಂದಕುಮಾರಸ್ವಾಮಿ: ಅದೇ ಕಡೆ ಪುಟಗಳು ೧೪–೧೫.

ಕೃತಜ್ಞತೆ

ವಿಶ್ವವಿದ್ಯಾಲಯ ಧನಸಹಾಯ ಆಯೋಗ ಸಮಿತಿಯ "ಫೈನಾನ್ಶಿಯಲ್ ಅಸಿಸ್ಟನ್ಸ್ ಟು ಯೂನಿವರ್ಸಿಟಿ ಟೀಚರ್ಸ್ ಫಾರ್ ರಿಸರ್ಚ್" ಎಂಬ ಯೋಜನೆಯಲ್ಲಿ ನನಗೆ ದೊರೆತ ಧನಸಹಾಯದಿಂದ ಈ ಪುರಾತತ್ವ ಶೋಧನೆಯನ್ನು ನಡೆಸಿದೆನು. ಇಡಗುಂಜಿ ಮಹಾಗಣಪತಿ ದೇವಾಲಯದ ಮೇಲ್ವಿಚಾರಕರಾದ ಹಳದಿಪುರದ ಡಾ. ಜಿ. ಎನ್. ಸಭಾಹಿತರು ನನ್ನೊಡನೆ ಬಂದು ನನ್ನ ಶೋಧನೆಯಲ್ಲಿ ವೈಯಕ್ತಿಕವಾಗಿ ವಿಶ್ವಾಸದಿಂದ ತುಂಬ ಸಹಾಯಮಾಡಿದ್ದಾರೆ. ಗೋಕರ್ಣದಲ್ಲಿ ಶ್ರೀ ಪಂಡಿತರು ಮತ್ತು ಅರ್ಚಕವರ್ಗದವರು ಅಲ್ಲಿಯ ಮಹಾಗಣಪತಿಯ ಶೋಧನೆಕಾರ್ಯದಲ್ಲಿ ಆತ್ಮೀಯವಾಗಿ ಸಹಾಯಮಾಡಿದ್ದಾರೆ. ನನ್ನ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರ, ಈ ಲೇಖನದ ಉತ್ತಮಪ್ರತಿಯನ್ನು ಬರೆದುಕೊಟ್ಟಿದ್ದಾರೆ. ಇವರೆಲ್ಲರಿಗೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಗೌಡ್ರಗೌಡರು ಕೂಡಿ ಕೆರಿಬಾಂವಿ ಕಟ್ಟಿಸ್ಯಾರ ಕೋಲೆನ್ನ ಕೋಲ
ಕೆರಿಯಾರ ಕಟ್ಟಿಸಿ ಹನ್ನೆಡ್ಡವರಸಾತ | "
ಹನ್ನೆಡ್ಡವರಸಾತ ಸೆರಿಮುಂಕ್ಯ ನೀರಿಲ್ಲ | "
ಕೇಳೀಸಿ ನೋಡಾಕ ನಡದಾರ ಅವರಿನ್ನ | "
ದೇವರ ಕೇಳಾಕ ನಡದಾರ ಅವರಿನ್ನ | "
ದೇವರ ಹೇಳವರ ಏನಂತ ಹೇಳ್ಯಾರ | "
ಹಿರಿಸೊಸಿ ಮಲ್ಲವನ ಹಾರವ ಕೊಡಬೇಕ | "
ಹಾರವ ಕೊಟ್ಟರ ನಡಮನಿಯಾಗ್ಯಾರಿಲ್ಲ | "
ಹಾರವ ಕೊಟ್ಟರ ಹಿರಿತನ ಮಾಡಾವರಿಲ್ಲ | "
ಮಲಪುರಿ ನನಸೊಸಿಯು ಕ್ಯಾಮಣ್ಣ ತರಹೋಗ | "

ಮುಂಪಕೂತು ಹ್ವಾದಾಳ ಅವರವ್ವ ಕಂಡಾಳ | "
ಅವರವ್ವ ಕಂಡಾಳ ಮಾದುಕ್ಕ ಮಾಡ್ಯಾಳ | "
ಎಂದಿಲ್ಲ ನನಮಗಳ ಇಂದ್ಯಾಕ ಮಾದುಕ್ಕ | "
ನಮ್ಮತ್ತಿ ನಮ್ಮಾವ ಬ್ಯಾರಿಡತಾರಂತವ್ವ | "
ಬ್ಯಾರಿಟ್ಟಕಾಲಕ್ಕ ಗಡಿಮಡಿಕಿ ಕೊಡವೇನ | "
ಗಡಿಮಡಿಕಿ ಓದಕ್ಯಾಸ ಕೆರಿಪಾಳಿಗಿರಡರೆವ್ವ | "
ಮುಂಪಕೂತು ಹ್ವಾದಾಳ ಅವರಪ್ಪ ಕಂಡಾಳ | "
ಅವರಪ್ಪ ಕಂಡಾಳ ಮಾದುಕ್ಕ ಮಾಡ್ಯಾಳ | "
ಎಂದಿಲ್ಲ ನನಮಗಳ ಇಂದ್ಯಾಕ ಮಾದುಕ್ಕ | "
ನಮ್ಮತ್ತಿ ನಮ್ಮಾವ ಬ್ಯಾರಿಡತಾರಂತೆಪ್ಪ | "
ಬ್ಯಾರಿಟ್ಟಕಾಲಕ್ಕ ಎಮ್ಮಿಯುರ ಕೊಡವೇನ | "
ಎಮ್ಮಿಯು ಓದಕ್ಯಾಸ ಕೆರಿಪಾಳಿಗಿಡವೋಗ | "
ಮುಂಪಕೂತು ಹ್ವಾದಾಳ ಅವರಣ್ಣನ ಕಂಡಾಳ | "
ಅವರಣ್ಣನ ಕಂಡಾಳ ಮಾದುಕ್ಕ ಮಾಡ್ಯಾಳ | "
ಎಂದಿಲ್ಲ ನನತಂಗಿ ಇಂದ್ಯಾಕ ಮಾದುಕ್ಕ | "

ನಮ್ಮತ್ತಿ ನಮ್ಮಾವ ಬ್ಯಾರಿಡತಾರಂತಣ್ಣ | ಕೋಲೆನ್ನ ಕೋಲ
ಬ್ಯಾರಿಟ್ಟಕಾಲಕ್ಕ ದಾಗೀನರ ಕೊಡವೇನ | ”
ದಾಗೀನ ಓದಕ್ಯಾಸ ಕೆರಿಪಾಳಿಗಿಡರೆಪ್ಪ | ”
ಮುಂದಕೂತು ಹ್ವಾದಾಳ ಅವರಕ್ಕನ್ನ ಕಂಡಾಳ | ”
ಅವರಕ್ಕನ್ನ ಕಂಡಾಳ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನಸತಂಗಿ ಇಂದ್ಯಾಕ ಮಾದುಕ್ಕ | ”
ನಮ್ಮತ್ತಿ ನಮ್ಮಾವ ಬ್ಯಾರಿಡತಾರಂತಕ್ಕ | ”
ಬ್ಯಾರಿಟ್ಟಕಾಲಕ್ಕ ಮಕ್ಕಳನ ಕೊಡವೇನ | ”
ಮಕ್ಕಳನ ಓದಕ್ಯಾಸ ಕೆರಿಪಾಳಿಗಿಡರೆವ್ವ | ”
ಮುಂದಕೂತು ಹ್ವಾದಾಳ ಗೆಣತಿ ನಿಂಗವನ | ”
ನಿಂಗವನ ಕಂಡಾಳ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ಮಲಪುರಿ ಇಂದ್ಯಾಕ ಮಾದುಕ್ಕ | ”
ನಮ್ಮತ್ತಿ ನಮ್ಮಾವ ಕೆರಿಗ್ಹಾರ ಕೊಡತಾರ | ”
ಇಷ್ಟಽರ ಹೇಳ್ಯಾಳ ಮನಿಗ್ಯಾರೆ ಬಂದಾಳ | ”

ಮಲಪುರಿ ನನಸೊಸಿಯು ಗೋದಿಽಯು ಹಸಮಾಡ | ”
ಗೋದಿಽಯು ಹಸಮಾಡ್ತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಗೋದ್ಯಾನ್ಹಳ್ಳುವ ಬಂದ ಕಣ್ಣಿಗೆ ಬಡದಾವರತ್ತಿ | ”
ಮಲಪುರಿ ನನಸೊಸಿಯು ಗೋದಿಽಯು ಬೀಸವ್ವ | ”
ಗೋದಿಽಯು ಬೀಸುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಕಲ್ಲಾನ್ಹಿಟ್ಟುವ ಬಂದ ಕಣ್ಣಿಗೆ ಸೋಕ್ಯಾವರತ್ತಿ | ”
ಮಲಪುರಿ ನನಸೊಸಿಯು ಬ್ಯಾಳಿಽಯು ಹಾಕವ್ವ | ”
ಬ್ಯಾಳಿಽಯು ಹಾಕುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಬ್ಯಾಳಿಽ ಉಗ್ಗುವ ಬಂದ ಕಣ್ಣಿಗೆ ಸೋಕ್ಯಾವರತ್ತಿ | ”
ಮಲಪುರಿ ನನಸೊಸಿಯು ಮುತ್ತೋದ್ಯಾರ್ನಿಡಪೋಗ | ”
ಮುತ್ತೋದ್ಯಾರ್ನಿಡಪೂತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ಮಲಪುರಿ ಇಂದ್ಯಾಕ ಮಾದುಕ್ಕ | ”
ಓಣ್ಯಾನ್ಹಳ್ಳುವ ಬಂದ ಕಣ್ಣಿಗೆ ಸೋಕ್ಯಾವರೆವ್ವ | ”
ಮುತ್ತೋದ್ಯಾರ್ನಿಟ್ಟ್ಯಾಳ ಮನಿಗ್ಯಾರೆ ಬಂದಾಳ | ”

ಮಲಪುರಿ ನನಸೊಸಿಯು ಹೋಳಿಽಗಿ ಮಾಡವ್ವ | ಕೋಲೆನ್ನ ಕೋಲ
ಹೋಳಿಽಗಿ ಮಾಡುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಹೋಳಿಗಿಗುಣಿ ಬಂದ ಕಣ್ಣಿಗೆ ಬಡದಾವರತ್ತಿ | ”
ಮಲಪುರಿ ನನಸೊಸಿಯು ತಲಿಯಾರ ಹಿಕ್ಕೋರ | ”
ತಲಿಯಾರ ಹಿಕ್ಕುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಹಣಿಗ್ಯಾನ್ಹಲ್ಲವ ಬಂದ ಕಣ್ಣಿಗೆ ಸೋಕ್ಯಾವರತ್ತಿ | ”
ಮಲಪುರಿ ನನಸೊಸಿಯು ಜಳಕಽವ ಮಾಡವ್ವ | ”
ಜಳಕಽವ ಮಾಡುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಚರಿಗಿಕಂಟುವ ಬಂದ ಕಣ್ಣಿಗೆ ಸೋಕ್ಯಾವರತ್ತಿ | ”
ಮಲಪುರಿ ನನಸೊಸಿಯು ಸೀರಿಽಯು ಉಡವ್ವ | ”
ಸೀರಿಽಯು ಉಡವುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಸೀರಿಽ ಕರಿಯುವ ಬಂದ ಕಣ್ಣಿಗೆ ಸೋಕ್ಯಾವರತ್ತಿ | ”
ಮಲಪುರಿ ನನಸೊಸಿಯು ಬುಟ್ಟಿಽಯು ತುಂಬವ್ವ | ”
ಬುಟ್ಟಿಽಯು ತುಂಬುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಬುಟ್ಟಿಸಿಬರ ಬಂದ ಕಣ್ಣಿಗೆ ಸೋಕ್ಯಾವರತ್ತಿ | ”
ಮಲಪುರಿ ನನಸೊಸಿಯು ಬಾಳಿಯೆಲಿ ಈಡವ್ವ | ”
ಎಲಿಽಯು ಇಡವುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ನನಸೊಸಿಯು ಇಂದ್ಯಾಕ ಮಾದುಕ್ಕ | ”
ಬಾಳಿಗರಿಯುವ ಬಂದು ಕಣ್ಣಿಗೆ ಸೋಕ್ಯಾವರತ್ತಿ | ”
ಮಲಪುರಿ ನನಸೊಸಿಯು ಮುತ್ತೋದೆರ ಕರಿಯುವ್ವ | ”
ಮುತ್ತೋದ್ಯಾರ ಕರಿವುತ ಮಾದುಕ್ಕ ಮಾಡ್ಯಾಳ | ”
ಎಂದಿಲ್ಲ ಮಲಪುರಿ ಇಂದ್ಯಾಕ ಮಾದುಕ್ಕ | ”
ಓಣ್ಯಾನ್ಹಳ್ಳವ ಬಂದ ಕಣ್ಣಿಗೆ ಬಡದಾವರೆವ್ವ | ”
ಮುತ್ತೋದ್ಯಾರ್ನ ಕರದಾಳ ಮನಿಗ್ಯಾರೆ ಬಂದಾಳ | ”

ಬುಟ್ಟಿಽಯು ಹೊತಗೊಂಡ ಕೆರಿದಾರಿ ಹಿಡದಾರ | ”
ಮುಂದಮುಂದ ಮಲಪುರಿ ಹಿಂದಿಂದ ಮುತ್ತೋದ್ಯಾರ | ”

ಕೆರಿದಾರಿ ಹಿಡದಾಳ ಮಾಮುಕ್ಕ ಮಾಡ್ಯಾಳ | ಕೋಲೆನ್ನ ಕೋಲ
ಎಂದಿಲ್ಲ ಮಲಪುರಿ ಇಂದ್ಯಾಕ ಮಾಮುಕ್ಕ | ”
ದಾರ್‍ಯಾನ್ಪುಲ್ಲವ ಬಂದ ಕಣ್ಣಿಗೆ ಸೋಕ್ಯಾವರತ್ತಿ | ”
ಕೆರಿಗ್ಯಾರ ಹ್ವಾದಾರ ಬುಟ್ಟಿಽಯು ಇಳಿವ್ಯಾರ | ”
ಬುಟ್ಟಿಽಯು ಇಳಿವ್ಯಾರ ಎಲ್ಲಾರು ಕುಂತಾರ | ”
ನಟ್ಟನಡು ಕೆರಿಯಾಗ ನಡದಾರ ಅವರಿನ್ನ | ”
ಸೀರಿಽಯು ಕುಪ್ಪಸ ಇಟ್ಟಾರ ಅವರಿನ್ನ | ”
ನೆನಿಯುಕ್ಕಿ ನೆನಿಗಡಲಿ ಗೋಣಿಯು ಬಾಳಿಽಹಣ್ಣ | ”
ಅಷ್ಟೆಲ್ಲ ಉಡಿಯಾಗ ತುಂಬತಾರಽ | ”
ಪೂಜಿಽಯು ಮಾಡ್ಯಾರ ನಿವಾದ್ಯೆ ಹಿಡದಾರ | ”
ಎಲ್ಲಾರು ಉಂಡಾರು ಮಲಪುರಿ ಉಣವಾಗ | ”
ಮಲಪುರಿ ಉಣವಾಗ ಕಣ್ಣೀರ ಹರದಾವ | ”
ಉಂಡಾರ ಉಟ್ಟಾರ ಬುಟ್ಟಿಽಯು ತುಂಬ್ಯಾರ | ”
ಬಟ್ಲಽವ ಇಟ್ಟಾರ ಬುಟ್ಟಿಽಯು ಹೊತ್ತಾರ | ”
ಬುಟ್ಟಿಽಯು ಹೊತ್ತಾರ ಮನಿದಾರಿ ಹಿಡದಾರ | ”
ಮಲಪುರಿ ನನಸೊಸಿಯು ಬಟ್ಲವ ತರಹೋಗ | ”
ಬುಟ್ಟಿಽಯು ಕೊಟ್ಟಾಳ ಕೆರಿದಾರಿ ಹಿಡದಾಳ | ”
ಒಂದ ಪಾವಟಿಗಿಳಿದಾಳ ಪಾದಮಟ ಬಂದಾವ ನೀರ | ”
ಎಡ್ಡ ಪಾವಟಿಗಿಳಿದಾಳ ಹಡ್ಡಮಟ ಬಂದಾವ ನೀರ | ”
ಮೂರ ಪಾವಟಿಗಿಳಿದಾಳ ಮೊಣಕಾಲಮಟ ಬಂದಾವ ನೀರ | ”
ನಾಕ ಪಾವಟಿಗಿಳಿದಾಳ ನಡಮಟ ಬಂದಾವ ನೀರ | ”
ಐದ ಪಾವಟಿಗಿಳಿದಾಳ ಎದಿಮಟ ಬಂದಾವ ನೀರ | ”
ಆರ ಪಾವಟಿಗಿಳಿದಾಳ ಕುತ್ತಿಗಿಮಟ ಬಂದಾವ ನೀರ | ”
ಯೋಳ ಪಾವಟಿಗಿಳಿದಾಳ ಗಳಮ್ಮಗಪ್ಪಾದಾಳ | ”

ಗಂಡ ಮಾತೂರಾಯು ದಂಡಿಽಗಿ ಹೋದಾನ | ”
ಇಷ್ಟಽ ಆಗಗೊಡದ ದಂಡಿಂದ ಬಂದಾನ | ”
ಬರ್‍ರ್ಯಽನ ಬಂದಾನ ಬಾಗಿಲಿಗೆ ನಿಂದಾನ | ”
ಹಡದವ್ವ ಹಡದವ್ವ ಕದಗೋಳ ತೆಗಿರೆವ್ವ | ”
ಕದಗೋಳ ತೆಗಿದಾಳ ಸೆಳಿಮಂಚ ಹಾಕ್ಯಾಳ | ”
ಸೆಳಿಮಂಚೀನ ಮಾಡಲಿ ಮಡದೆಲ್ಲಿಗೆ ಹೋಗ್ಯಾಳ | ”
ನಿನಮಡದಿ ಮಲಪುರಿ ತವರ್‍ಮನಿಗೆ ಹೋಗ್ಯಾಳ | ”

ಅತ್ತಿಽಯಮನಿಗೆ ಬರ್ರಽನ ಹೊಂಟಾನ | ಕೋಲೆನ್ನ ಕೋಲ
ಕುದರಿಽಯ ಇಳದಾನ ಬಾಗಿಲಿಗೆ ನಿಂತಾನ | ”
ಅತ್ತೆವ್ವ ಅತ್ತೆವ್ವ ಕದಗೊ ಳ ತೆಗಿರೆವ್ವ | ”
ಕದಗೋಳ ತೆಗಿದಾಳ ಸೆಳಿಮಂಚ ಹಾಕ್ಯಾಳ | ”
ಸೆಳಿಮಂಚೇನಮಾಡಲಿ ಮಲಪುರೆಲ್ಹೋಗ್ಯಾಳು | ”
ಗೆಳತಿ ನಿಂಗವ್ನ ಮನಿಗ್ಯಾರೆ ಹ್ವಾದಾಳ | ”
ಬರ್ರಽನ ಹ್ವಾದ ನಿಂಗವ್ನ ಮನಿಗೆ | ”
ಕುದರಿಽಯ ಇಳದಾನ ಬಾಗಿಲಿಗೆ ನಿಂತಾನ | ”
ನಿಂಗವ್ವ ನಿಂಗವ್ವ ಕದಗೋಳ ತೆಗಿರೆವ್ವ | ”
ಕದಗೋಳ ತೆಗಿದಾಳು ಸೆಳಿಮಂಚ ಹಾಕ್ಯಾಳು | ”
ಸೆಳಿಮಂಚೇನ ಮಾಡಲಿ ಮಲಪುರೆಲ್ಹೋಗ್ಯಾಳ | ”
ನಿಮ್ಮವ್ವ ನಿಮ್ಮಪ್ಪ ಕೆರಿಗ್ಹಾರ ಕೊಟ್ಟಾರ | ”
ಬರ್ರಽನ ಹೊಂಟಾನ ಕೆರಿದಾರಿ ಹಿಡದಾನ | ”
ಕೆರಿಗ್ಯಾರೆ ಬಂದಾನ ಕುದರಿಽಯ ಇಳದಾನ | ”
ಸಾವಿರ ಕೊಟ್ಟಿಽರೋ ಮಡದಿ ಎಲ್ಲಿ ಮುಣಗೀದಿ | ”
ಒಂದ್ಽಸಲ್ಲ ಕರದಾನ ಎಡ್ಡ್ಽಸಲ್ಲ ಕರದಾನ | ”
ಮೂರಸಲ್ಲ ಕರದಾಗ ಮಲಪುರಿ ಓಗೊಡತಾಳ | ”
ಕಾಮಾಳದ ಹೂವಾಗಿ ತೇಲ್ಯಾಡತಾಳ | ”
ನನಗಽ ತೋರಿಽಧಂಗ ಇನ್ನೊಬ್ರಿಗೆ ತೋರ್ಬ್ಯಾಡ | ”
ಇಷ್ಟಽರ ಹೇಳ್ಯಾನ ತಾನೂನು ಜಿಗದಾನ | ”
ಆ ಕೆರಿಯಾಗವರು ಇಬ್ಬಽರ ಇರಲೆವ್ವ | ”

ಪಂಪ : ಒಂದು ಅಧ್ಯಯನ
(ಒಂದು ಸಮಾಲೋಚನೆ)

ಗೌರೀಶ ಕಾಯ್ಕಿಣಿ

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ೧೯೭೭ರ ಮಾರ್ಚ ತಿಂಗಳಲ್ಲಿ ತನ್ನ ಮೂರನೆಯ ವಿಚಾರಸಂಕಿರಣವನ್ನು 'ಪಂಪ'ನ ವಿಷಯವಾಗಿ ಏರ್ಪಡಿಸಿತು. ಅದರಲ್ಲಿ ಓದಿದ ೧೫ ಪ್ರಬಂಧಗಳ ಸಂಗ್ರಹವಿದು. ಕನ್ನಡದ ಕಾವ್ಯ, ಭಾಷೆ, ಶೈಲಿಗಳ ಪರಂಪರೆಯ ಪ್ರವರ್ತಕರಲ್ಲಿ 'ಆದಿ ಕವಿ' ಪಂಪನ ಕುರಿತು ಅಧ್ಯಯನ, ವಿಮರ್ಶೆ, ವಿಚಿಕಿತ್ಸೆಗಳ ಅಗತ್ಯ ಅದೆಷ್ಟು ಮಹತ್ವದ್ದು, ಜೀವಾಳದ್ದು ಎಂಬುದನ್ನು ತಿಳಿದವರಿಗೆ ಹೇಳಬೇಕಾಗಿಲ್ಲ, ತಿಳಿಯದವರಿಗೂ ಹೇಳಬೇಕಾಗಿಲ್ಲ.

ಪಂಪನಂಥ ಮಹಾಕವಿಗಳ ಬಗೆಗೆ ಕಾಲಕಾಲಕ್ಕೆ ಪರ್ಯಾಲೋಚನೆ ಸಮಾಲೋಚನೆಗಳು ನಡೆಯಲೇಬೇಕು. ಇಂಥ ಪ್ರಾಚೀನ ಕವಿಗಳು ನಿತ್ಯನೂತನರು, ಅತ್ಯಾಧುನಿಕರು. ತಾತ್ಕಾಲಿಕ ಸಂದರ್ಭಗಳನ್ನು ಮೀರಿ ಅವರ ಸತ್ವದ ಸಂದೇಶ ವಿಜೃಂಭಿಸುತ್ತದೆ. ಎರಡು ಕಾರಣಗಳಿಗಾಗಿ ಇಂಥ ಮಹಾಕವಿಗಳ ಮಹಾಕೃತಿಗಳನ್ನು ನಾವು ಮತ್ತೆ ಮತ್ತೆ ಸಮೀಕ್ಷಿಸಬೇಕು. ಒಂದು, ಕೆಲವೊಂದು ಕಾಲ ಗತಿಸಿದಾಗ ಇವರ ಬಗೆಗೆ ಹೊಸ ಹೊಸ ವಿವರಗಳೂ ದಾಖಲೆಗಳೂ ಸಂಗ್ರಹವಾಗಿರಬಹುದು. ಅವುಗಳ ಬೆಳಕಿನಲ್ಲಿ ಈ ಕವಿ-ಕೃತಿಗಳ ಪುನರ್ವಿಮರ್ಶೆ ಅಗತ್ಯ; ಇನ್ನೊಂದು, ದೇಶ ಕಾಲ ಪರಿಸ್ಥಿತಿಯ ಹೊಸ ಸಂದರ್ಭಕ್ಕೆ, ಆಧುನಿಕ ಜೀವನದರ್ಶನದ ಹೊಸ ದೃಷ್ಟಿಗೆ ಈ ಹಳೆಯ ಕಾವ್ಯಗಳು ಮತ್ತೆ ಮತ್ತೆ ಹೇಗೆ ಸತ್ಯವಾಗಬಲ್ಲವು, ಆಗಬೇಕು ಎಂಬುದರ ತೀರ್ಮಾನ, ಅಂದರೆ ಈ ಕೃತಿಗಳ ಪುನರ್ಮೌಲ್ಯಮಾಪನವೂ ಅಗತ್ಯವಾಗುತ್ತದೆ.

ಈ ಅರ್ಥದಲ್ಲಿ "ಪಂಪ : ಒಂದು ಅಧ್ಯಯನ" ಈ ಗ್ರಂಥವು ಕನ್ನಡ ವಿಮರ್ಶನ ಕ್ಷೇತ್ರಕ್ಕೆ ಒಂದು ಹೊಸ ಕೃಷಿ, ಹೊಸ ಫಸಲು.

೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆಯಿಂದ "ಮಹಾ ಕವಿ ಪಂಪ ಹಾಗೂ ಅವನ ಕೃತಿಗಳು"— ಎಂಬ ಆರು ಉಪನ್ಯಾಸಗಳ ಒಂದು ಕಿರು ಹೊತ್ತಿಗೆ ಪ್ರಕಟವಾಗಿತ್ತು. ಈ ಗ್ರಂಥದ

ನಂತರ ಪಂಪನ ಕುರಿತು ನಡೆದ ವಿಶೇಷ ವ್ಯಾಸಂಗೋಪನ್ಯಾಸಗಳು ಈ ಸಂಕಿರಣದಲ್ಲಿಯೇ ಓದಿದ ಚರ್ಚಿಸಿದ ಈ ಪ್ರಬಂಧಗಳು.

ಆ ಆರು ಉಪನ್ಯಾಸಗಳು ವ್ಯಾಸಂಗ ವಿಸ್ತರಣರಂಗದವು. ಪೂರ್ಣ ವಿದ್ಯಾಪರಿಣತರಲ್ಲದಿದ್ದರೂ ವ್ಯಾಸಂಗಾಭಿರುಚಿಯುಳ್ಳ ಹಾಗೂ ಸಾಮಾನ್ಯ ಸುಶಿಕ್ಷಿತ ಜಿಜ್ಞಾಸೆಯ ಜನರಿಗಾಗಿ ಮಾಡಿದ ಭಾಷಣಗಳವು. ಆದರೆ ಈ 'ಅಧ್ಯಯನ' ಗ್ರಂಥದಲ್ಲಿಯ ಹದಿನೈದು ಪ್ರಬಂಧಗಳು "ಪರಿಪ್ರಶ್ನೇನ ಸೇವಯಾ" ಎಂಬ ರೀತಿಯಲ್ಲಿ ಹೆಚ್ಚಿನ ವ್ಯಾಪ್ತಿಯನ್ನೂ ಆಳವನ್ನೂ ಪಡೆದಿವೆ. ಪಂಪ ಮಹಾಕವಿಯ ಅಧ್ಯಯನ ವಿಮರ್ಶೆಗಳ ಬಗೆಗೆ ಈ ಗ್ರಂಥವು ಒಂದು ಅತಿ ಮಹತ್ವದ ಕೊಡುಗೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಆದರೂ ಇಲ್ಲಿಯ ಹದಿನೈದು ಪ್ರಬಂಧಗಳಲ್ಲಿ ಎಲ್ಲವೂ ಪಂಪನ ಪುನರ್ಮೌಲ್ಯಮಾಪನಕ್ಕೆ ಹೊರಟಂತಿಲ್ಲ. ಪಂಪನ ವಿಷಯ ಹೊಸ ಪ್ರಶ್ನೆ ಹೊಸ ವಿಚಿಕಿತ್ಸೆ ಕೇಳುವ ಕೆದಕುವ ಬರಹಗಳು ಇಲ್ಲಿ ೪-೫ ಮಾತ್ರ. ಉಳಿದವು ಒಂದು ರೀತಿ ಹಳೆಯ ಆಶಯವನ್ನು ಹೊಸ ಭಾಷೆಯಲ್ಲಿ ಹೊಯ್ದ ಎರಕಗಳು. ಅನೇಕ ಪ್ರಬಂಧಗಳು ಪಂಪನನ್ನು ಆಮೂಲಾಗ್ರವಾಗಿ ಹೊಸ ಅಧ್ಯಯನಕ್ಕಾಗಿ ಓದದೆ ಕೆಲವೊಂದು ಆ ಕುರಿತ ಆಧಾರಗ್ರಂಥಗಳ ಆಲೋಚನೆಯಿಂದಲೇ ತಯಾರಿಸಿದಂತೆ ಅನಿಸುವವು. ಸರ್ವಶ್ರೀ ಮುಳಿಯ, ಡಿ. ಎಲ್. ಎನ್., ಮುಗಳಿ, ಕುವೆಂಪು, ವಿ. ಸೀ., ಶಿವರುದ್ರಪ್ಪ ಪ್ರಭೃತಿಗಳ ಗ್ರಂಥಗಳನ್ನೇ ಓದಿ ಅದರಿಂದಲೇ ತಮ್ಮ ಕೆಲಸ ಮಾಡಿ ಮುಗಿಸಿದಂತೆ, ಕಡಿಮೆಬಿದ್ದುದನ್ನು ತಮ್ಮ ಭಾಷೆ, ಕಲ್ಪನೆಗಳ ವಿಲಾಸದಿಂದ ತುಂಬಿಕೊಂಡಂತೆ ಕಾಣುತ್ತದೆ. ಹೀಗಾಗಿ, ಈ ಪ್ರಬಂಧಗಳಲ್ಲಿ ಸಾಕಷ್ಟು ಒಳಿತೂ ಹೊಸತೂ ಇದ್ದರೂ, ಒಳಿತಿನ ಭಾಗವು ಅಷ್ಟೊಂದು ಹೊಸತಾಗಿ ಆಗಲಿ, ಹೊಸತಿನ ಭಾಗವು ಅಷ್ಟೊಂದು ಒಳಿತಾಗಿ ಆಗಲಿ ಕಾಣುವದಿಲ್ಲ.

ಪ್ರಬಂಧಗಳ ವಿಷಯಗಳೂ ಅನೇಕ ಸಲ ಪುನರುಕ್ತಿ (overlapping) ಗೊಂಡಂತಿವೆ. "ಪಂಪನ ಧಾರ್ಮಿಕ-ಐತಿಹಾಸಿಕ ಹಿನ್ನೆಲೆ", "ಧಾರ್ಮಿಕ ಕವಿಯಾಗಿ ಪಂಪ" ಹಾಗೂ "ಪಂಪ ಮತ್ತು ಯುಗಧರ್ಮ" ಇವುಗಳಲ್ಲಿ ವಿಶೇಷ ವಿಷಯಾಂತರವಾದಂತೆ ಇಲ್ಲ–ಅಲ್ಲಲ್ಲಿ ಕೆಲವು ಎತ್ತುಗಡೆ ಒತ್ತುಗಡೆ (emphasis) ಬೇರೆಯಾಗಿದೆ. ಅದೇ ರೀತಿ, "ಪಂಪನ ಜೀವನಚಿತ್ರ" ಮತ್ತು "ಪಂಪನ ಜೀವನದೃಷ್ಟಿ" ಇವುಗಳ ವಿಷಯ ವಿನ್ಯಾಸ. "ಪರಂಪರೆಯ ನಿರ್ಮಾಪಕ" ಎಂದು ಪಂಪನನ್ನು ಮೀಮಾಂಸಿಸಿದ ಶ್ರೀ ಜಿ. ಎಸ್. ಸಿದ್ಧಲಿಂಗಯ್ಯನವರು, ಅವನ ಭಾಷಾ ಶೈಲಿಯನ್ನೆತ್ತಿ ಚರ್ಚಿಸುತ್ತ ಶ್ರೀ ಕೆ. ವಿ. ನಾರಾಯಣರು ವಿವೇಚಿಸಿದ "ಪಂಪನ ದೇಸಿ"ಯ ವಿಚಾರವನ್ನು ಅಭಾವಿತವಾಗಿ ವಿಸ್ತಾರವಾಗಿ ಚರ್ಚಿಸಿದ್ದಾರೆ.

ಆದರೆ ಇವೆಲ್ಲ ಆಯಾ ಪ್ರಬಂಧಕಾರರ ಸಹೇತುಕ ತಪ್ಪಲ್ಲ. ಅವರಿಗೆ ಕೊಟ್ಟ ವಿಷಯಗಳ ಸಾಮಾನ್ಯ ಸ್ವರೂಪವೂ, ಅವರು ಪರಸ್ಪರ ಸಂಪರ್ಕವಿಲ್ಲದೆ ಸ್ವತಂತ್ರವಾಗಿ ಕೈಗೊಂಡ ಲೇಖನ ಪ್ರಯತ್ನಗಳೂ ಈ ಚರ್ವಿತಚರ್ವಣಕ್ಕೆ ಕಾರಣ. ಆದರೆ ಗ್ರಂಥವನ್ನು ಒಟ್ಟಾಗಿ ಗಮನಿಸುವಾಗ ಇವನ್ನು ಅಲಕ್ಷಿಸುವಂತೆಯೂ ಇಲ್ಲ.

ಈ ಅಧ್ಯಯನ ಗ್ರಂಥದಲ್ಲಿ ಪುನರ್‌ಮೌಲ್ಯಮಾಪನದ ದೃಷ್ಟಿಯಿಂದ ವಿಶೇಷ ಸ್ವಾರಸ್ಯವುಳ್ಳ ಪ್ರಬಂಧಗಳೆಂದರೆ, ಡಾ. ಕೆ. ಕೃಷ್ಣಮೂರ್ತಿ, ಶ್ರೀ ಜಿ. ಎಚ್. ನಾಯಕ, ಶ್ರೀ ಕೆ. ವಿ. ಸುಬ್ಬಣ್ಣ ಮತ್ತು ಡಾ. ಎಲ್. ಬಸವರಾಜು ಇವರ ಲೇಖನಗಳು. ಪುನರ್ವಿಮರ್ಶನೆಗೆ ಪ್ರಾಸ್ತಾವಿಕವಾಗಿ ಕೆ. ವಿ. ಸುಬ್ಬಣ್ಣರ ಪ್ರಬಂಧವೇ ಗ್ರಂಥದ ಆರಂಭಕ್ಕೆ ಬರಬೇಕಿತ್ತು. "ಅನುಸಂಧಾನಕ್ಕೆ ಹೊಸ ಮಾರ್ಗ"ವನ್ನು ಅವರು ತುಂಬ ವಿಚಾರಪ್ರಚೋದಕವಾಗಿ ತೆರೆದಿದ್ದಾರೆ. ಇವರೂ ಜಿ. ಎಚ್. ನಾಯಕರೂ ಪಂಪನ ಕಾವ್ಯವನ್ನು ಅತ್ಯಾಧುನಿಕ ವಿಮರ್ಶೆಯ ಪರಿಭಾಷೆಯಲ್ಲಿ ಸಮಾಲೋಚಿಸಲು ಯತ್ನಿಸಿದ್ದಾರೆ. ಡಾ. ಎಲ್. ಬಸವರಾಜು ಅವರು ಪಂಪನು ಕೇವಲ ಆದಿಕವಿ ಅಗ್ರಕವಿಯಲ್ಲದೆ, ಕ್ರಾಂತಿಕಾರಿ ಕವಿಯೂ ಆಗಿದ್ದನೆಂದು ಒಳ್ಳೆಯ ವಾಗ್ಮಿತೆಯಿಂದ ಪ್ರತಿಪಾದಿಸಿದ್ದಾರೆ. ಡಾ. ಕೆ. ಕೃಷ್ಣಮೂರ್ತಿ ಪಂಪನ ಬಗೆಗೆ ಒಂದೆರಡು ಮೌಲಿಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಆದರೆ ಆ ಕುರಿತು "ಕುರಿತೋದಿದ-ಓದದ" ಯಾರೂ ವಿಚಿಕಿತ್ಸೆ ಮಾಡಿಲ್ಲ!

ಡಾ. ಟಿ. ವಿ. ಸುಬ್ಬರಾವ್ (ಪಂಪ–ನನ್ನಯ) 'ಸುಜನಾ' (ಪಂಪಭಾರತದ ವಸ್ತುವಿನ್ಯಾಸ) ಮತ್ತು ಎಂ. ವಿ. ಶ್ರೀನಿವಾಸಮೂರ್ತಿ (ಆದಿಪುರಾಣದ ವಸ್ತುವಿನ್ಯಾಸ) ಈ ಮೂವರು ವಿದ್ವಾಂಸರ ಪ್ರಬಂಧಗಳು ಅತ್ಯಂತ ಅಭ್ಯಾಸಪೂರ್ಣವಾಗಿವೆ. ಡಾ. ಸುಬ್ಬರಾವ್, ಪಂಪನು ತೆಲಗು ಭಾಷೆಯಲ್ಲೂ 'ಪದ್ಮಕವಿ' ಎಂಬ ಅಭಿಧಾನದಿಂದ 'ಜಿನೇಂದ್ರಪುರಾಣ'ವೆಂಬ ಕೃತಿಯನ್ನು ರಚಿಸಿರಬೇಕೆಂಬ ಪ್ರಮೇಯವನ್ನು ಮಂಡಿಸಿದ್ದು ಸ್ವಾರಸ್ಯದ್ದಾಗಿದೆ. 'ಸುಜನಾ' ತಮ್ಮ ಪ್ರಬಂಧದಲ್ಲಿ ವ್ಯಾಸಭಾರತದ ಕಥಾಪ್ರಸಂಗ ಮೂಲಗಳನ್ನು ಧಾರಾಳವಾಗಿ ಉದಾಹರಿಸಿ ಅಲ್ಲಲ್ಲಿ ಪಂಪನ ಸಂಕ್ಷೇಪ ಸಂಗ್ರಹ ಮೂಲದ ಸ್ವಾರಸ್ಯವನ್ನು ಹೇಗೆ ಕಳೆದುಕೊಂಡಿದೆ, ಅರಿಕೇಸರಿಯೊಂದಿಗೆ ತಳಕುಹಾಕಲು ಹೋಗಿ ಅರ್ಜುನನ ಸೂಕ್ಷ್ಮ ಸಂವೇದಿಯಾದ ಪಾತ್ರವನ್ನು ಪಂಪ ಹೇಗೆ ಸರಳೀಕರಣಕ್ಕೆ ಗುರಿಮಾಡಬೇಕಾಯಿತು ಎಂಬುದನ್ನು ಪಾರದರ್ಶಿಯಾಗಿ ಒತ್ತಿ ಒತ್ತಿ ಹೇಳಿದ್ದಾರೆ. ಮಹಾ ಕವಿ ಪಂಪನಿಗೆ ಏನೂ ಅಪಚಾರವೆಸಗದೆ ಮಹಾಭಾರತಕಾರ ಕವಿವ್ಯಾಸರತ್ತ ಪಂಪ ಪಕ್ಷಪಾತಿಗಳ ಗಮನವನ್ನು ಸೆಳೆಯುವಂತೆ ತೌಲನಿಕ ವಿಮರ್ಶೆಗೆ ತುಂಬ ಉಪಕಾರ ಮಾಡಿದ್ದಾರೆ.

ವಿಶೇಷವೇನೂ ಅನ್ನದೆ ಬಹಳ ಆಡಿದ ರೀತಿಯಲ್ಲಿ ಬರೆದವರು, ಡಾ. ಜಿ. ವರದರಾಜರಾವ್ ಮತ್ತು ಜಿ. ಎಸ್. ಸಿದ್ಧಲಿಂಗಯ್ಯ. (ಈ ಕುರಿತು ಮುಂದೆ ವಿವರವಾಗಿ ಹೇಳಲಿದೆ)

ಅನೇಕ ಪ್ರಬಂಧಕಾರರಿಗೆ "ವೃಥಾಪಲ್ಲಟ"ದ ದೋಷ ದೋಹಿಸಿದೆ. ತಮ್ಮ ವಿಷಯಕ್ಕೆ ನೇರವಾಗಿ ನಿಲುಕದೆ ಸುತ್ತಲೂ ಹುತ್ತಬಡಿಯುವತ್ತ ಅವರ ಒಲವು.

ಡಾ. ಚಿದಾನಂದಮೂರ್ತಿಯವರು 'ವೀರ ಯುಗ'ದ ಲಕ್ಷಣಗಳನ್ನು ಹೇಳುತ್ತ ಸಮಾಜಶಾಸ್ತ್ರೀಯವಾಗಿ ಸಮಾಜದ ಸ್ಥಿರ ಮತ್ತು ಚರ ಇವೆರಡು ಸ್ಥಿತಿ-ಗತಿಗಳ ಬಗೆಗೆ ನೀಡಿದ ವಿವೇಚನೆ ಆ ವಿಷಯದ ವ್ಯಾಸಂಗಿಗಳಿಗೆ ಎಷ್ಟೇ ಉದ್ಬೋಧಕವಾಗಿದ್ದರೂ ಅವರ ಪ್ರಸ್ತುತ ಪ್ರತಿಪಾದನೆಗೆ ಅಷ್ಟೊಂದು ಅವಶ್ಯವಿದ್ದಂತಿಲ್ಲ. ಅದೇ ರೀತಿ, ಶ್ರೀ 'ಸುಜನಾ' ಉದಾಹರಿಸಿದ ಮೂಲ ಭಾರತದ ಸಾಂದರ್ಭಿಕ ಉಲ್ಲೇಖಗಳೂ ಸ್ವತಃ ಅತ್ಯಂತ ಸ್ವಾರಸ್ಯವುಳ್ಳವಾಗಿದ್ದೂ ಅವರ ಪ್ರಬಂಧದ ಪರಿಮಿತಿಗೆ ಮೀರಿದ ವಿಸ್ತಾರಕ್ಕೆ ಚಾಚಿಕೊಂಡಿವೆ. ಹಾಗೆಯೇ ಅನೇಕ ಪ್ರಬಂಧಕಾರರು ಅವೇ ಅವೇ ಪದ್ಯಗಳನ್ನೂ ಶ್ಲೋಕಗಳನ್ನೂ ಪಂಪನಿಂದ ಆಯ್ದುಕೊಟ್ಟದ್ದೂ ಕಂಡುಬರುತ್ತದೆ.

* * *

ಪಂಪನ ಸಂಸ್ಕೃತ ಹಿನ್ನೆಲೆಯ ಕುರಿತು **ಡಾ. ಕೆ. ಕೃಷ್ಣಮೂರ್ತಿ** ತುಂಬ ಅಭ್ಯಾಸಪೂರ್ಣವಾಗಿ ವಿವೇಚಿಸಿದ್ದಾರೆ. ಪಂಪನಿಗೂ ಕಾಳಿದಾಸ, ಭಾರವಿ, ಮಾಘ, ಭವಭೂತಿ, ಭಟ್ಟ ನಾರಾಯಣಾದಿ ಕವಿಗಳಿಗೂ ಇರುವ ಭಾವಸಾಮ್ಯ ಭಾಷಾ ಸಾಮ್ಯಗಳನ್ನು ಅರ್ಧಶತಮಾನ ಹಿಂದೆಯೇ ಗುರುತಿಸಿದ್ದುಂಟು. ಆದರೆ ಈಚೆಗೆ ಪಂಪ ವಿಮರ್ಶನೆಯ ಗ್ರಂಥಗಳಲ್ಲಿ ಅವನ ಸಂಸ್ಕೃತದ "ಋಷಿಋಣ"ವನ್ನು ಎತ್ತಿತೋರಿಸಿದ್ದು ವಿರಳ. ಈ ದೃಷ್ಟಿಯಿಂದ ಪಂಪನನ್ನು ಮತ್ತೊಮ್ಮೆ ಓದಿ ಹೊಳೆದ ಹಲವಾರು ಹೊಸ ಅಂಶಗಳ ಪ್ರಸ್ತಾಪ ಇಲ್ಲಿ ಸಮರ್ಥವಾಗಿ ಬಂದಿವೆ.

ಡಾ. ಕೃಷ್ಣಮೂರ್ತಿ ಎತ್ತಿದ ಒಂದೆರಡು ಮಹತ್ವದ ಪ್ರಶ್ನೆಗಳು ಇಂತಿವೆ: ಆರ್. ನರಸಿಂಹಾಚಾರ್ಯರು ಹಿಂದೆ ಎತ್ತಿದ ಪ್ರಶ್ನೆ ಇದು. ಆದರೆ ಅದಕ್ಕೆ ಸಮರ್ಪಕ ಉತ್ತರ ಇಂದಿಗೂ ದೊರೆತಿಲ್ಲ. ಅದೆಂದರೆ ಮಹಾಭಾರತದ ವ್ಯಾಸ ಮಹರ್ಷಿ ಬೇರೆ, ಪಂಪನು ಉಲ್ಲೇಖಿಸುವ ಕವಿವ್ಯಾಸ ಬೇರೆ. ಈ 'ಕವಿವ್ಯಾಸ'ನೆಂಬವನ ಕನ್ನಡ ಭಾರತ ಕೃತಿಯು ಪಂಪನಿಗೂ ಹಿಂದೆ ಪ್ರಚಲಿತವಿದ್ದಿದ್ದರೆ, ಅದು ಇನ್ನೂ ಅನುಪಲಬ್ಧ, ಅಪ್ರಸಿದ್ಧ. ಅದಾಗ್ಯೂ ಪಂಪನು ಈ 'ಕವಿವ್ಯಾಸ'ನನ್ನು ವ್ಯಾಸಮುನೀಂದ್ರನಿಂದ ಭಿನ್ನವಾಗಿ ಹೆಸರೆತ್ತಿ ಹೇಳಿದ್ದಾನೆ!

ಅವರೀರ್ವರ ಅಭೇದವೇ ಇದ್ದಿದ್ದರೆ ಹೀಗೆ ಬೇರೆಬೇರೆ ನಾಮನಿರ್ದೇಶವೇಕೆ? ಡಾ. ಕೃಷ್ಣಮೂರ್ತಿಗಳ ಈ ಪ್ರಶ್ನೆ ನಿಜವಾಗಿಯೂ ಅತಿ ಮಹತ್ವದ್ದು. ಮುಂದೆ ಗದುಗಿನ ನಾರಣಪ್ಪನು ತನ್ನನ್ನು 'ಕುಮಾರವ್ಯಾಸ'ನೆಂದು ಒಮ್ಮೆಲೇ ಹೇಗೆ ಕರೆದುಕೊಂಡಿರಬಹುದು? ಮೂಲದಲ್ಲಿ ಪಂಪ ಪ್ರಸ್ತಾಪಿತ 'ಸತ್ಕವಿವ್ಯಾಸ'ನೊಬ್ಬನಿದ್ದಾನೆಂದು ನಂಬಿದ್ದರಿಂದಲೇ ಇರಬೇಕು. ಸಂಸ್ಕೃತ ಭಾರತಕಾರ ವ್ಯಾಸಮುನಿಗೆ ತಾನು ಕುಮಾರನೆಂದು ನಾರಣಪ್ಪ ಹೇಳಿಕೊಂಡಿರಲಾರ.

ಕಾವ್ಯನಾಯಕನನ್ನು ತನಗೆ ಆಶ್ರಯವಿತ್ತ ದೊರೆಯೊಂದಿಗೆ ಸಮೀಕರಿಸಿ ವರ್ಣಿಸುವುದು ಪಂಪಪೂರ್ವಪದ್ಧತಿಯೆಂದು ಡಾ. ಕೃಷ್ಣಮೂರ್ತಿ ಗುಣವರ್ಮನ 'ಶೂದ್ರಕ ಕಾವ್ಯ'ವನ್ನು ಉದಾಹರಿಸಿ ಪ್ರತಿಪಾದಿಸಿದ್ದು ಒಪ್ಪತಕ್ಕ ಮಾತಾಗಿದೆ. ಆದರೆ ಮುಂದೆ ಅವರ ಘನಪಾಂಡಿತ್ಯ ಅವರನ್ನು ಎಲ್ಲಿಗೋ ತನ್ನ ಒತ್ತಡಕ್ಕೆ ಓಡಿಸಿಕೊಂಡಂತಿದೆ. ಏಕೆಂದರೆ, ಹರ್ಷಚರಿತ್ರೆಗೂ ಮಹಾಭಾರತಕ್ಕೂ ಅದನ್ನು ದ್ವಿತೀಯ ಮಹಾಭಾರತವೆನ್ನಲಾಗಿದೆ. ಸರಿ, ಆದರೆ ಹರ್ಷನ ರಾಜ್ಯಕ್ಕೂ ಪುರಾಣದ ಸಂಗೀತಕ್ಕೂ ಹರ್ಷಚರಿತ್ರೆಗೂ ಪುರಾಣಕ್ಕೂ ವ್ಯತ್ಯಾಸವಿಲ್ಲವೆಂದು ಗಮಕಿ ಸುವೃಷ್ಟಿಯು ಪುರಾಣಶ್ರವಣಕ್ಕೆ ಸೇರಿದ ಜನರೆಲ್ಲರಿಗೂ ತೋರುತ್ತದೆ—ಇತ್ಯಾದಿ ವಿವರಗಳು ಪಂಪನ ಕಥನ ತಂತ್ರದ ಮೂಲವೇನೆಂಬುದನ್ನು ಪ್ರಸ್ತಾಪಿಸಲು ಹೇಗೆ ಪೋಷಕವೊ! ಬಾಣಭಟ್ಟನಿಗೆ ಹರ್ಷಚರಿತೆಯಲ್ಲಿ ಪ್ರತ್ಯಕ್ಷವಾಗಿಯೇ ತನ್ನ ಮಹಾಪೋಷಕ ದೊರೆ ಕಥಾನಾಯಕ. ಪಂಪನೊಂದಿಗೆ ಈ ಕುರಿತು ಅಲ್ಲಿ ಯಾವ ಸಾಮ್ಯವೂ ಇಲ್ಲ.

ಆದರೆ ಡಾ. ಕೃಷ್ಣಮೂರ್ತಿ ಇನ್ನೊಂದು ಪ್ರಶ್ನೆ ಎತ್ತಿದ್ದು ತುಂಬ ಸ್ವಾರಸ್ಯವಾಗಿದೆ. ಅದು ಪಂಪನ ಕಾವ್ಯದ 'ಗೇಯತ್ವ'ದ ಬಗೆಗೆ. ಈ ದೃಷ್ಟಿಯಿಂದ ಅವನು ಅತ್ತ ಮತ್ತೆ ಮತ್ತೆ ಬಳಸುವ 'ಮಾರ್ಗ' ಮತ್ತು 'ದೇಸಿ' ಪದಗಳನ್ನು ಸಂಗೀತ ಶಾಸ್ತ್ರೀಯವಾಗಿ ಕಂಡಿದ್ದಾರೆ. ಈ ಕುರಿತು ಅವರ ಪ್ರತಿಪಾದನೆ ತುಸು ದೂರಾನ್ವಯದ್ದಾಗಿಯೂ ಅತಿ ಚತುರವಾಗಿಯೂ ಕಾಣುತ್ತದೆ. ಆದರೂ ಈ ಪ್ರಮೇಯ ಇನ್ನೂ ಹೆಚ್ಚಿನ ಸಂಶೋಧನೆ ವಿಮರ್ಶೆಗಳಿಗೆ ಅರ್ಹವಾಗಿದೆಯೆಂಬುದನ್ನು ಒಪ್ಪಲೇಬೇಕು.

ಧ್ವನಿತತ್ತ್ವಕ್ಕೆ ಸಂಬಂಧಿಸಿದಂತೆ, 'ಆದಿಪುರಾಣ'ದ ಒಂದು ಪದ್ಯಕ್ಕೆ ತಾನು ಕೊಟ್ಟ ವಿವರಣೆಯನ್ನು ದಿ. ತೀ. ನಂ. ಶ್ರೀ. ನಿರಾಕರಿಸಿದ್ದನ್ನೆತ್ತಿಕೊಂಡು ಉತ್ತರಿಸಿದ್ದು ಈ ಪ್ರಬಂಧಕ್ಕೆ ನಿಜವಾಗಿಯೂ ಅಪ್ರಸ್ತುತವೆನಿಸುವಂತಿದೆ (ಆದರೆ 'ಇಸು' ಪ್ರತ್ಯಯದ ಬಗೆಗೆ ಕೊಟ್ಟ ಸಮರ್ಥನೆ ಸಮರ್ಥವಾಗಿದೆ.) "ಈ ಸೂಕ್ಷ್ಮ ವಿವರವನ್ನು ಇಷ್ಟೊಂದು ವಿವರಿಸುವ" ಕಾರಣವಿದ್ದಿಲ್ಲ.

ಪಂಪನ ಸಂಸ್ಕೃತ ಹಿನ್ನೆಲೆ ಕೇವಲ ಕೆಲವು ಕಾವ್ಯಗಳದು ಮಾತ್ರವಲ್ಲ. ಸಂಗೀತನಾಟ್ಯ ಛಂದಸ್ಸು ಅಲಂಕಾರ ಮುಂತಾದವುಗಳ ಅನುಸಂಧಾನದಿಂದಲೂ ಕೂಡಿದ್ದು, ಕವಿಯಾಗಿ ಮಾತ್ರವಲ್ಲ ಪಂಡಿತನಾಗಿಯೂ ಆತನನ್ನು ಅರಿತುಕೊಳ್ಳುವ ಅಗತ್ಯವನ್ನು ಡಾ. ಕೃಷ್ಣಮೂರ್ತಿ ಧಾರಾಳವಾಗಿ ಆರುಹಿದ್ದಾರೆ. ಪಂಪ ಕಾಲಿದಾಸನ ವೈದರ್ಭಿಗಿಂತ ಬಾಣನ ಪಾಂಚಾಲೀ ಶೈಲಿಯನ್ನು ಅಲಂಕಾರಾದಿಗಳಲ್ಲಿ ಮಾಘ ಭಾರವಿಯರನ್ನು ಅನುಸರಿಸುವನೆಂದು ಪ್ರಬಂಧಕಾರರು ತೋರಿಸಿದ್ದಾರೆ. ಅವನ ಅಷ್ಟಾದಶ ವರ್ಣನೆಗಳು ವಿಶೇಷವಾಗಿ ಪಂಡಿತ ಕವಿಗಳಂತೆ ಅಲಂಕಾರ ಚಮತ್ಕಾರವನ್ನು ಮೆರೆಯಲಿಕ್ಕೇ ಬಂದವು—ಎನ್ನುತ್ತಾರೆ ಕೆ. ಕೃ.

ಪಂಪನು ನೇರವಾಗಿ ಸಂಸ್ಕೃತದಿಂದ ಆಯ್ದು ಅಳವಡಿಸಿಕೊಂಡ, 'ಘಂಟಾ' ಮಾಘನ ರೈವತಕ ವರ್ಣನೆ, ವಲ್ಲಭದೇವನ ಚಂದ್ರೋದಯ ವರ್ಣನೆ, ಅನೇಕ ಸಂಸ್ಕೃತ ಶೃಂಗಾರ ಸೂಕ್ತಿಗಳು, ಅಮರು ಕವಿ, ಭೋಜನ ಕಾಲದ ಮಹಾನಾಟಕದಿಂದ ಸೀತಾ–ರಾಮರ ವಿರಹ ಶ್ಲೋಕ, ದಂಡಿ, ಭವಭೂತಿ, ವಿಶಾಖಾದತ್ತರಿಂದ ಎರವಲು. ಸುದೀರ್ಘ ಸಮಸ್ತಪದಾವಲಿಗಳು—ಇವನ್ನೆಲ್ಲ ಪ್ರಬಂಧಕಾರರು ಅನೇಕಾನೇಕ ಉದಾಹರಣೆಗಳಿಂದ ವಿಶದಗೊಳಿಸಿದ್ದಾರೆ. ಇವೆಲ್ಲಕ್ಕೂ ಮಿಗಿಲಾಗಿ ಅವರು ಎತ್ತಿದ ಒಂದು ಮೌಲಿಕ ಪ್ರಶ್ನೆ—'ಉರಗಪತಾಕ' 'ಫಣಿರಾಜಕೇತನ' ಎಂಬ ಬಿರುದಿನದು. ಪಂಪನ ಈ ಪ್ರಮಾದವನ್ನೆ ಮುಂದಿನ ಕವಿಗಳು ಪ್ರಮಾಣವಾಗಿ ಅನುಸರಿಸಿದ್ದಾರೆ! ಭಾಸನಲ್ಲಿ 'ನಾಗಕೇತನ' ಬಂದಿದೆ. ಆದರೆ ಅದರರ್ಥ 'ಗಜಧ್ವಜ'ವೆಂದೇ. ಮಹಾಭಾರತದಲ್ಲಿ ೪ ಕಡೆಗೆ ಬಂದ ಈ ಬಿರುದಿನ ವ್ಯಾಖ್ಯಾನವೂ ಆನೆಯ ಚಿಹ್ನದ ಧ್ವಜವೆಂದೇ. ಹೀಗಿದ್ದೂ ಇವನ್ನು ನಾಗ ಅಂದರೆ ಹಾವೆಂದು ಕಲ್ಪಿಸಿ ಪಂಪನಿಂದ ಈ ಸರ್ಪಧ್ವಜನೆಂಬ ಬಿರುದು ದುರ್ಯೋಧನನಿಗೆ ಅಂಟಿಕೊಂಡು ಬಂದಿದೆ! ಆದರೆ ಪಂಪನ ಈ ತಪ್ಪಿಗೆ ಮೂಲವೇನು? 'ಭಾರತ ಚಂಪೂ' ಕಾವ್ಯದಲ್ಲಿ 'ಪನ್ನಗಕೇತನಂ' ಎಂದಿದೆ! ೧೨ನೆಯ ಶತಮಾನದಿಂದ ಈಚೆಗೆ ಆಂಧ್ರ ಕರ್ನಾಟಕಗಳಲ್ಲಿ ಇದೇ ಅಪಾರ್ಥ ರೂಢವಾಗಿ ಬಂತು. ಆದರೆ ಗುಜರಾತ ಬಂಗಾಲಗಳಲ್ಲಿ 'ಆನೆಯ ಚಿಹ್ನ'ವೆಂದೇ ಅರ್ಥಮಾಡಿದ್ದು ಕಾಣುತ್ತವೆ.

ನಿಜವಾಗಿಯೂ ಈ 'ಪದಾರ್ಥ'ವು ಡಾ. ಕೃಷ್ಣಮೂರ್ತಿಯವರ ವಿಮರ್ಶಾ ವಿಚಕ್ಷಣತೆಯ ಪಾಕಸಿದ್ಧಿಗೆ ಒಂದು ಧನ್ಯ ನಿದರ್ಶನ.

ಇದೇ ರೀತಿ ರಾವಣ ದುರ್ಯೋಧನಾದಿಗಳಲ್ಲಿ ಕೀಚಕ ಕರ್ಣಾದಿಗಳಲ್ಲಿ ದುರಂತನಾಯಕನನ್ನು ಕಾಣುವ ಪಾಶ್ಚಾತ್ಯ ವಿಮರ್ಶನದ ರೀತಿ ನಮ್ಮ ಮಹಾಕಾವ್ಯಗಳಿಗೆ ಸಲ್ಲದೆಂದು ಕೃಷ್ಣಮೂರ್ತಿ ಮನನೀಯವಾದ ವಾದವನ್ನು ಮುಂದಿಸಿದ್ದಾರೆ. ಗ್ರೀಕ ಕಾವ್ಯಗಳಂತೆ ರಾಮಾಯಣ ಮಹಾಭಾರತಾದಿಗಳು ಏಕನಾಯಕವಲ್ಲ ಬಹುನಾಯಕತ್ವದ ಕೃತಿಗಳು. ಒಬ್ಬೊಬ್ಬ ನಾಯಕನಿಗೆ ಒಂದೊಂದು

ಗುಣದ ಜೋಷದ ಉತ್ಕರ್ಷ. ಅಲ್ಲದೆ ಗ್ರೀಕರಲ್ಲಿ ವೀರಸ್ವರ್ಗವಿಲ್ಲ. ನಮ್ಮ ಮಹಾಕಾವ್ಯದ ನಾಯಕರಿಗೆ ಮರಣ ಒಂದು ದುರಂತವಲ್ಲ. ಗ್ರೀಕ ಕಾವ್ಯನಾಯಕರಂತೆ ಕರ್ಣ ದುರ್ಯೋಧನಾದಿಗಳಿಗೆ ಸಾವಿನ ಇದುರು ಚಿತ್ತಕ್ಷೋಭವಿಲ್ಲ. ಆದ್ದರಿಂದ Tragic Hero ಮಾದರಿ ಇವರ ಮೇಲೆ ಆರೋಪಿಸುವದು ಸರಿ ಅಲ್ಲ.

ಇನ್ನು ಇಡಿಯ ಗ್ರಂಥದ ವಿಮರ್ಶೆ ಪ್ರಾಚೀನ ಪಂಡಿತರಲ್ಲಿ ಇರಲಿಲ್ಲ. ಲಂಬ ವಿಧಾನವನ್ನು ನಿರಾಕರಿಸಲು ಪ್ರಬಂಧಕಾರರು ಮಾಡಿದ ಯುಕ್ತಿವಾದ ಅಷ್ಟೊಂದು ಪರಿಣಾಮಕರವಾಗಿಲ್ಲ. ಇಡಿಯ ಗ್ರಂಥದ ವಿಮರ್ಶೆ ಔಚಿತ್ಯ ತತ್ವದ ಮೇಲೆ ಪ್ರತಿಷ್ಠಿತವೆಂಬ ಅವರ ಹೇಳಿಕೆಗೆ ಕೊಟ್ಟ ಆಧಾರಗಳು ಬಲಿಷ್ಠವಾಗಿಲ್ಲ, ಇರಲಿ. ಇದು ಪ್ರಬಂಧದ ಪ್ರತಿಪಾದ್ಯ ವಿಷಯವೂ ಅಲ್ಲ.

'ಪಂಪ' ಶಬ್ದದ ನಿಷ್ಪತ್ತಿಯ ಬಗೆಗೆ ಪ್ರಬಂಧಕಾರರ ನಿಲುವು ತಟಸ್ಥ. ಈವರೆಗಿನ ಅದರ ನಿಷ್ಪತ್ತಿಯ ಪ್ರಯತ್ನಗಳಿಂದ ಅವರಿಗೆ ತೃಪ್ತಿ ಇಲ್ಲ. ಇದು ನಿಜವಾದ ಸಂಶೋಧಕನ ನಿಲುವು.

ಡಾ. ಎಂ. ಎಂ. ಕಲಬುರ್ಗಿ—ಪ್ರಾಚೀನ ಭಾರತೀಯ ಬದುಕನ್ನು ರೂಪಿಸಿದ ಶಕ್ತಿಗಳು ಎರಡು : ರಾಜ ಮತ್ತು ಧರ್ಮ. ಪಂಪನು ಅರಿಕೇಸರಿಯ ಮೂಲಕ ರಾಜಕೀಯ, ದೇವೇಂದ್ರ ಮುನಿಯ ಮೂಲಕ ಧಾರ್ಮಿಕ—ಹೀಗೆ ತಮ್ಮ ಕವಿತ್ವಕ್ಕೆ ನೇರ ಆಶ್ರಯ-ಅನುಗ್ರಹ ಪಡೆದು ಅವೆರಡಕ್ಕೂ ಎರಡು ಕಾವ್ಯಗಳನ್ನು ಮುಡಿಪಿಟ್ಟನೆಂದು discovery of the obvious ಮಾಡಿದ್ದಾರೆ. ರಾಷ್ಟ್ರಕೂಟರ ಸಾಮಂತ ಅರಿಕೇಸರಿ(ಚಾಲುಕ್ಯ)ಯ ಮನೆತನದ ಇತಿಹಾಸವನ್ನು ವೇಮುಲವಾಡ ಶಿಲಾಶಾಸನ, ಪರಭಣಿ ತಾಮ್ರಶಾಸನ ಹಾಗೂ ವಿಕ್ರಮಾರ್ಜುನ ವಿಜಯ ಬಳಸಿಕೊಂಡ ವಂಶಾವಳಿ ಇವುಗಳ ಆಧಾರವನ್ನು ಕೊಡಲಾಗಿದೆ. ಅರಿಕೇಸರಿಯ ಆಸ್ಥಾನವನ್ನು ಪಂಪ ಸೇರಿದ ವಿವ್ಯವಾನವೆಲ್ಲ ಇಲ್ಲಿ ಬಂದಿವೆ. ಅರಿಕೇಸರಿಯೊಂದಿಗೆ ಅರ್ಜುನನು ತಳಕು ಬಿದ್ದುದರಿಂದ ಕುರುಕ್ಷೇತ್ರ ಕನ್ನಡ ನೆಲವಾಯಿತು. ಕರ್ನಾಟಕತ್ವ ಮಹಾಭಾರತವನ್ನು ಸೇರಿತು—ಎಂದ ಪ್ರಬಂಧಕಾರರ ಮಾತು ಅಲಂಕಾರಿಕವಾಗಿಯೇ ಉಳಿದಿದೆ. ಅದು ಹೇಗೆ ಸಮನ್ವಯಗೊಂಡಿದೆ ಎಂಬುದನ್ನು ಆಳವಾಗಿ ಸೂಕ್ಷ್ಮವಾಗಿ ಅವರು ತೋರಿಸಿಲ್ಲ. ಏಕೆಂದರೆ ಅರಿಕೇಸರಿಯದೆಂದು ಹೇಳಿದ ಘಟನೆಗಳು ಚಾರಿತ್ರಿಕವೋ ಕಾಲ್ಪನಿಕವೋ ಹೇಳುವದು ಕಷ್ಟವೆಂದು ಒಪ್ಪಿಕೊಂಡಿದ್ದು, ಪ್ರಾ. ಕಲಬುರ್ಗಿಯವರು ಪಂಪನ 'ಕಾಪ್ಯೋದ್ಯೋಗಕ್ಕೆ ಹಿನ್ನೆಲೆ'ಯಾಗಿ ಸೇರಿಸಿದ ನಾಲ್ಕು ಚಾರಿತ್ರಿಕ ಘಟನೆಗಳನ್ನು ಎತ್ತಿ ಕೊಟ್ಟಿದ್ದಾರೆ. ಆದರೆ ಈ ಘಟನೆಗಳು ಅರ್ಜುನನ ಚರಿತ್ರೆಯ ಅಂಶಗಳೊಂದಿಗೆ ಯಾವ ಒಳ ಹೊಂದಿಕೆಯನ್ನು ಸಾಧಿಸದೆ ಅಲ್ಲಲ್ಲಿ ನಡುವೆ ನುಸುಳಿದಂತೆ ಕಾವ್ಯದಲ್ಲಿ ಬಂದಿವೆ. ಇವು ಪಂಪನ ಕೃತಿಯಲ್ಲಿಯೆ ಬಂದುದರಿಂದ

ಅವನ ಕಾವ್ಯೋದ್ಯೋಗಕ್ಕೆ ‘ಹಿನ್ನೆಲೆ’ ಆಗುವದೆಂತು? ಪಂಪನ ಲೆಕ್ಕಕ್ಕೆ ಭಾರತದ ಕಥೆಯೇ ಅವನ ಕಾವ್ಯಕ್ಕೆ ಭಿತ್ತಿ. ಅದರ ಮೇಲೆ ಆತ ಅರಿಕೇಸರಿಯ ಚರಿತ್ರಾಂಶಗಳನ್ನು ಆರೋಪಿಸಹೊರಟಿದ್ದ. ಅಂದಾಗ ಈ ನಾಲ್ಕು ಘಟನೆಗಳು ‘ಹಿನ್ನೆಲೆ’ಯಲ್ಲ. ಅವು ಅಲ್ಲಲ್ಲಿ ಉಕ್ತವಾದ ಸಮಕಾಲೀನ ಚಾರಿತ್ರಿಕ ವಿವರಗಳು. ಅವುಗಳ ಬಗೆಗೂ ಡಾ. ಕಲಬುರ್ಗಿಯವರ ಟೀಕೆ ಹೀಗಿದೆ:

ಮೊದಲನೆಯ ಘಟನೆಯೊಳಗೆ ಬರುವ ವಿಜಯಾದಿತ್ಯ ಯಾರು? ಗೋವಿಂದನೊಂದಿಗೆ ಇವನ ಮನಸ್ತಾಪಕ್ಕೆ ಕಾರಣವೇನು? ಇವು ಇನ್ನೂ ಪ್ರಶ್ನೆಗಳಾಗಿಯೇ ಉಳಿದಿವೆ. ಎರಡನೆ ಘಟನೆಯಲ್ಲಿಯ ಅರಿಕೇಸರಿ ಗೋವಿಂದನನ್ನು ಎರಡನೆಯ ಸಲ ಗೆದ್ದ ಉಲ್ಲೇಖ ಯಾವ ಶಾಸನಗಳಲ್ಲಿಯೂ ಇನ್ನೂ ದೊರೆತಿಲ್ಲ.

ಉಳಿದ ಎರಡರಲ್ಲಿ ಮೂರನೆಯ ಘಟನೆಯೇ ಅರಿಕೇಸರಿಯ ಚರಿತ್ರದಲ್ಲಿ ಅತಿ ಮಹತ್ವದ್ದು—ಅರಿಕೇಸರಿ ತನ್ನ ಚಕ್ರವರ್ತಿ (ಗೋವಿಂದ)ಯ ಮೇಲೆ ಮೂರನೆಯ ಸಲ ಏರಿ ಹೋಗಿ, ತನಗೆ ಮೊರೆಹೊಕ್ಕ ಬದ್ದೆಗದೇವನಿಗೆ ಚಕ್ರವರ್ತಿ ಪಟ್ಟಕ್ಕೇರಿಸಿದ್ದು. ನಾಲ್ಕನೆಯ ಘಟನೆ ವಿಶೇಷ ಮಹತ್ವದ್ದಲ್ಲ.

ಹಾಗೆ ನೋಡಿದರೆ ಅರಿಕೇಸರಿಯನ್ನು ವಿಕ್ರಮಾರ್ಜುನನನ್ನಾಗಿ ಮಾಡಿಸುವ ಪಂಪನ ಕಾವ್ಯದಲ್ಲಿ ಎಲ್ಲೆಲ್ಲೋ ಬರುವ ಒಂದೆರಡು ವಾಕ್ಯಗಳಲ್ಲಿ ಈ ಘಟನೆಗಳನ್ನು ಹೇಳಿ ಪಂಪ ಕೈತೊಳೆದುಕೊಂಡಿದ್ದಾನೆಂದು ಪ್ರಬಂಧಕಾರರು ದಿಟ್ಟವಾಗಿಯೇ ಅಂದಿದ್ದಾರೆ. ಇದೂ ಅಲ್ಲದೆ ದಿ. ಶ್ರೀ ಮುಳಿಯ ತಿಮ್ಮಪ್ಪಯ್ಯಾದಿಗಳು ಗೋವಿಂದನ ಮೂಲೋತ್ಪಾಟನ ಮಾಡಿದ ಯುದ್ಧವನ್ನೆ ಪಂಪ ಕುರುಕ್ಷೇತ್ರದ ಯುದ್ಧಕ್ಕೆ ತಗುಳ್ಚಿರುವನೆಂದು ಭಾವಿಸಿ ಸಮಸ್ತ ಭಾರತದಲ್ಲಿ ಅರಿಕೇಸರಿಯ ಸ್ವಪಕ್ಷ ಪರಪಕ್ಷದವರನ್ನೂ ಹುಡುಕಿ ಹೇಳುವ ವಿಫಲ ಪ್ರಯತ್ನ ಮಾಡಿರುವರೆಂದೂ ಪ್ರಾ. ಕಲಬುರ್ಗಿ ಟೀಕಿಸಿದ್ದಾರೆ. ಆದರೆ ನಿಜವಾಗಿಯೂ ಪಂಪನು ಅರಿಕೇಸರಿಯ ಅಂಗಿಯನ್ನು ಅರ್ಜುನನಿಗೆ ತೊಡಿಸಿದ್ದೇ ಹೊರತು ಹೆಚ್ಚಿನದೇನೂ ಸಾಧಿಸಿಲ್ಲ ಅಂದಿದ್ದಾರೆ. ಆದಾಗ್ಯೂ ಅಂದಿನ ರಾಜಕೀಯದ ಯುದ್ಧ ನಿರ್ವಹಣೆಯ ಶಿಬಿರ ಜೀವನ, ಶಸ್ತ್ರಾಸ್ತ್ರ ವರ್ಣನೆ, ಸಮರ ಪ್ರಕ್ರಿಯೆಗಳ ಪ್ರಜ್ಞೆ ಕಲಿಯಾಗಿಯೂ ಕವಿಯಾಗಿಯೂ ಮೆರೆದ ಪಂಪನು ಈ ಲೌಕಿಕ ಕಾವ್ಯದಲ್ಲಿ ಚೆನ್ನಾಗಿ ಜೀವಂತವಾಗಿ ಪ್ರಕಟಿಸಿದ್ದು ಪ್ರಬಂಧಕಾರರೇ ಎತ್ತಿ ಹೇಳಿದ್ದಾರೆ. ಆದರೆ ಇಲ್ಲಿಯೂ ಪಂಪ ತನ್ನ ರಣ ಪರಿಚಯವನ್ನು ಅಳವಡಿಸಿಕೊಂಡಿದ್ದು ಅಂದಿನ ಆ ಕುರಿತ ಪಾರಿಭಾಷಿಕ ಪದಗಳ ಮಟ್ಟಿಗೇ ಆಗಿದ್ದು ಅಲ್ಲಲ್ಲಿಯ ಸಮರ ಸನ್ನಾಹ ಶಿಬಿರ ಜೀವನಗಳ ವರ್ಣನೆಗೆ ಮೂಲ ಭಾರತದ ‘ಯುದ್ಧ ನಿರ್ವಹಣ’ ಪರ್ವಕ್ಕೂ ಕುರುಕ್ಷೇತ್ರದ ಯುದ್ಧ ವರ್ಣನೆಗಳಿಗೂ ಸಾಕಷ್ಟು

ಚುಣೆಯಾಗಿರಬೇಕೆಂಬುದನ್ನು ಅಲ್ಲಗಳೆಯುವಂತಿಲ್ಲ. ಇಲ್ಲಿ ಮೂಲದ ಕನ್ನಡೀಕರಣವೆಷ್ಟು, ಕವಿಯ ಸ್ವಾನುಭವದ ವ್ಯಂಜನೆಯೆಷ್ಟು—ವಿಂಗಡಿಸಿದ್ದೂ ಇಲ್ಲ.

ಹಾಗೆಯೇ 'ಕುಯ್ಯಲ್ ಇರಿಯಲ್ ಶರಣರಿಗೆ ಕಾಯಲ್ ಕ್ಷತ್ರಿಯರೆ ಬಲ್ಲರ್' ಎಂಬುದು ಕೇವಲ ಪಂಪಯುಗದ ೧೦ನೆಯ ಶತಮಾನದ ವೀರಧರ್ಮವೆಂದು ಹೇಳುವುದು ಅತ್ಯುತ್ಸಾಹದ ಮಾತಾದೀತು. ಈ ಗುಣತ್ರಯಗಳು ಎಂದೆಂದಿನ ಕ್ಷತ್ರಿಯ ಧರ್ಮದ ಮುಖಗಳು. ವ್ಯಾಸಭಾರತದಲ್ಲಿಯೂ ಇವು ಹೊಗಳಲ್ಪಟ್ಟಿವೆ. ಅದೇ ರೀತಿ ಜೋಳವಾಳಿ, ವೀರಸ್ವರ್ಗ ಸಹಗಮನ ಇತ್ಯಾದಿ ಸಮಕಾಲೀನ ಪರಿಭಾಷೆಯಾಗಿ ಕಂಡರೂ ಮೂಲತಃ ಪ್ರಾಚೀನ ಕ್ಷಾತ್ರಧರ್ಮದ ಪರಂಪರೆಯಲ್ಲಿಯೇ ಬಂದವು.

ಇನ್ನು ಧಾರ್ಮಿಕ ಹಿನ್ನೆಲೆಯ ವಿಚಾರವಾಗಿ ಪ್ರಬಂಧಕಾರರು ಪಂಪನನ್ನು ಸುತ್ತುಗಟ್ಟಿದ ಜೈನ ಪರಿಸರವನ್ನು ಹೆಡಸಾಗಿ ಒಡಮೂಡಿಸಿದ್ದಾರೆ. ಅವರ, ತೀರ್ಥಂಕರರ ಜತೆಗೆ ಪರಿವಾರ ದೇವತೆಗಳನ್ನೂ ಪಂಚನಮಸ್ಕಾರಗಳ ಜತೆಗೆ ಮಂತ್ರಪಾಟಗಳನ್ನೂ, ಪಿಶಾಚಪೀಡೆ ಶನಿಕಾಟಗಳ ನಿವಾರಣೆಯ ತಂತ್ರಾದಿಗಳನ್ನು ಅಪ್ಪಿಕೊಂಡ ಜಾನಪದ ಧರ್ಮವಾಗಿ ಜೈನಧರ್ಮವು ತನ್ನ ಮಧ್ಯಾಹ್ನವನ್ನು ಮೀರಿ ಇಳಿಮುಖವಾದ ವಿಚಾರವನ್ನು ಹಲವು ಹತ್ತು ಉದಾಹರಣೆಗಳಿಂದ ಪ್ರಬಂಧಕಾರರು ಪ್ರತಿಪಾದಿಸಿದ್ದಾರೆ. ಆದರೆ ಅವೆಲ್ಲ ಪಂಪನ ಕಾವ್ಯಭಿತ್ತಿಯಾಗಿ ಸೇರಿಕೊಂಡ ದಾಖಲೆಗಳನ್ನು ಅವರು ಅಷ್ಟಾಗಿ ಕೊಟ್ಟಿಲ್ಲ. ಅದ್ದರಿಂದ ಈ ವಿವೇಚನೆ ಅವಾಂತರವಾಗಿ ಬಂದಂತೆ ಅನಿಸುತ್ತದೆ.—ಇದಕ್ಕೆ ಅಪವಾದವೆಂಬಂತೆ 'ಆದಿಪುರಾಣ'ದಲ್ಲಿ ಬರುವ ಯಕ್ಷ-ಯಕ್ಷಿಯರ ಸ್ತುತಿಯೊಂದೇ ಭಾರತೀಯ ಜೈನ ವಾಙ್ಮಯದಲ್ಲಿಯೇ ಅತಿ ಪ್ರಾಚೀನವೆಂಬ ಅಭಿಪ್ರಾಯ ವ್ಯಕ್ತವಾಗಿದೆ.

ಆದರೆ ದಾಖಲೆಗಳ ಅನುಭವವನ್ನು ಪ್ರಾ. ಕಲಬುರ್ಗಿಯವರು ಪಂಪನ ಮೇಲೆ ಆಕ್ಷೇಪವಾಗಿ ಉದಾಹರಿಸಿದ್ದಾರೆ. ಪಂಪ ತನ್ನ ಸಮಕಾಲೀನ ರಾಜಕೀಯ ಜೀವನವನ್ನು ತನ್ನ ಕಾವ್ಯಕ್ಕೆ ಬಳಸಿಕೊಂಡನು. ಆದರೆ ಅಂದಿನ ಧಾರ್ಮಿಕ ಜೀವನವನ್ನು ಬಳಸಿಕೊಳ್ಳದೇ ಹೋದನು. ಇದಕ್ಕೆ ಕಾರಣ, ಪಂಪ ಪುರಾಣ ಪರಂಪರೆಗೆ ಸೆರೆಸಿಕ್ಕನು ಎಂದಿದ್ದಾರೆ ಪ್ರಬಂಧಕಾರರು. ಈ ಟೀಕೆ ಸಾಧುವಲ್ಲ. ಆತನ ಉಭಯ ಕಾವ್ಯಗಳ ವಸ್ತು ಪರಿಮಿತಿಯನ್ನು ಗಮನಿಸಿದಾಗ ಅರಿಕೆ ಆಗುವುದೇನೆಂದರೆ ಒಂದರಲ್ಲಿ ರಾಜಕೀಯ ಜೀವನ(!)ವನ್ನೂ ಅಳವಡಿಸಿ-ಕೊಳ್ಳುವುದು ಆತನಿಗೆ ಎಷ್ಟು ಅನಿವಾರ್ಯವಾಗಿತ್ತೋ ಅಷ್ಟೇ ಇನ್ನೊಂದರಲ್ಲಿ ಸಮಕಾಲೀನ ಧಾರ್ಮಿಕ ಜೀವನವನ್ನು ಅಳವಡಿಸದೇ ಇರುವುದೂ ಅನಿವಾರ್ಯವಾಗಿತ್ತು. ಅರ್ಜುನ ಅರಿಕೇಸರಿಯರನ್ನು ತಳಕು ಹಾಕುವುದರಿಂದ ಅರಿಕೇಸರಿಯ ಬಾಳಿನ ಘಟನೆಗಳನ್ನು ಪರ್ಯಾಯವಾಗಿ ಮುಖ್ಯಯುಗನ—ಮಹಾಭಾರತ

ಕಾಲದಿಂದಲೂ ನಡೆದುಬಂದ ಕ್ಷಾತ್ರ ಧರ್ಮದ—ಯೋಧ ಜೀವನವನ್ನು ಆತ ಉಲ್ಲೇಖಿಸಲೇಬೇಕಾಯಿತು. ಅದೇ ರೀತಿ 'ಆದಿಪುರಾಣ'ದ ಮಟ್ಟಿಗೆ ಆತ ಪೂರ್ವ ಪುರಾಣದ ಪ್ರಪಂಚಕ್ಕೆ ಒಳಪಡಬೇಕಾಯಿತು. ಅದನ್ನು ಕನ್ನಡದಲ್ಲಿ ರೂಪಿಸುವಾಗ ಅದರಿಂದ ಹೊರಬಿದ್ದು ತನ್ನ ಸಮಕಾಲೀನ ಜೈನ ಧರ್ಮದ ಇಳಿಗಾಲದ ಚಿತ್ರವನ್ನು ತನ್ನ ಕಾವ್ಯದಲ್ಲಿ ಅಳವಡಿಸುವುದು, 'ವಿಕ್ರಮಾರ್ಜುನ ವಿಜಯ'ದಲ್ಲಿಯ ರಾಜಕೀಯ ಜೀವನಚಿತ್ರಣದಷ್ಟು ಸಹಜ ಸಾಧ್ಯವಿದ್ದಿಲ್ಲ. ಆದ್ದರಿಂದ ಆಮಟ್ಟಿಗೆ ಆತ ಪುರಾಣಪರಂಪರೆಗೆ ಸೆರೆಸಿಕ್ಕನೆಂದು ಆಕ್ಷೇಪಿಸುವದು ಯೋಗ್ಯವಲ್ಲ. ಉಭಯ ಕಾವ್ಯಗಳಲ್ಲಿಯೂ ಆತ ತಾನೇ ಆಯ್ದುಕೊಂಡ ವಸ್ತು ಪರಿಮಿತಿಗೆ ವಿಧೇಯನಾಗಿ ವರ್ತಿಸಿದ್ದಾನೆ.

ಪಂಪ ವಿಶ್ವಮಾನವ ದೃಷ್ಟಿಯುಳ್ಳವನಾಗಿ ಬೆಳೆದನೆಂಬುದು ಒಂದು ಕಲ್ಪನಾವಿಲಾಸ. 'ಮನುಷ್ಯ ಜಾತಿ ತಾನೊಂದೆವಲಂ' ಎಂದಿದ್ದಾನೆ. ಆದರೆ ಹಾಗೆ ಅಂದವನೇ ಇನ್ನೊಂದೆಡೆಗೆ ವಿಪ್ರವರ್ಗ 'ಜಾತಿಯೊಳೆಲ್ಲಮುತ್ತಮಂ ಜಾತಿ' ಎಂದೂ ಹೇಳಿದ್ದಾನೆ. ಹಾಗೆಯೇ ಶೂದ್ರ-ಬ್ರಾಹ್ಮಣ ಸಂದರ್ಭದಲ್ಲಿ ಆತ ಕಾಲದ ಜಂಭ ಹಿರಿಮೆಗಳನ್ನು ಕಟುವಾಗಿ ಟೀಕಿಸಿದ್ದಾನೆ. ಆದರೆ ಇದೆಲ್ಲ ಪಂಪ ನಾಗಿ ಅಲ್ಲ, ಅಲ್ಲಲ್ಲಿಯ ಪಾತ್ರಪ್ರಸಂಗಗಳ ಸಂದರ್ಭಕ್ಕೆ ಉಚಿತವಾಗಿ ಅಂಥ ಉದ್ಗಾರಗಳು ಹೊರಟಿವೆ. ಭಟ್ಟನಾರಾಯಣನ 'ವೇಣಿಸಂಹಾರ'ದ ಕರ್ಣಾಶ್ವತ್ಥಾಮರ ವಾಗ್ವಾದದಲ್ಲಿ, ಮೂಲ ಭಾರತದ ಶಲ್ಯ-ಕರ್ಣರ ಜಗಳದಾಟದಲ್ಲಿ ಈ ಕುಲಜಾತಿ ಮಹಿಮೆಯ ತೆಗಳಿಕೆ ಬಂದಿದೆ. ಪಂಪನಲ್ಲಿ ಅದೇ ದೊಡ್ಡ ಪ್ರತಿಧ್ವನಿಯಾಗಿ ಮೊಳಗಿದೆ. ಅದೇ ರೀತಿ 'ಭಗವತಿಯೇರುವ ತೆರನೆ'—ಮುಂತಾದ ಉಪಮಾ-ನೋಕ್ತಿಗಳಲ್ಲಿ ಪಂಪ ಅಂದಿನ ಮೂಢ ನಂಬಿಕೆಗಳನ್ನು ಅಧಿಕ್ಷೇಪಿಸುತ್ತಿದ್ದಾನೆಂದು ಭಾವಿಸಬೇಕಾಗಿಲ್ಲ. ಇಂಥ ವಿವಿಧ ಪಾತ್ರಳಿಯ ಉಪಮಾನಗಳಿಂದ ಆ ಮಹಾಕವಿಯ ವಿಶಾಲವಾದ ಲೋಕಾನುಭವವೇ ವ್ಯಕ್ತವಾಗುವದೇ ಹೊರತು ಅಲ್ಲಿ ಹೆಚ್ಚಿನ ಅಭಿಪ್ರಾಯವನ್ನು ಹುಡುಕುವದು ಸರಿಯಲ್ಲ.

ಕೊನೆಗೆ ಪ್ರಬಂಧಕಾರರೇ ಪ್ರಶ್ನೋತ್ತರಗಳಲ್ಲಿ ಒಂದೆಡೆಗೆ ಒಪ್ಪಿಕೊಂಡಿದ್ದಾರೆ: 'ಶಿಥಿಲವಾಗುತ್ತಿರುವ ಜೈನ ಧರ್ಮದ ವಿವರಗಳು ವಿಕ್ರಮಾರ್ಜುನ ವಿಜಯದಲ್ಲಿ ಅಪ್ರಸ್ತುತ; ಆದಿಪುರಾಣದಲ್ಲಿ ಅಪೌರಾಣಿಕ' ಅಂದಾಗ ಅಂದಿನ ಧಾರ್ಮಿಕ ಹಿನ್ನೆಲೆ ಆದಿಪುರಾಣದಲ್ಲಿ ಪಂಪನು ಒಡಮೂಡಿಸಿಲ್ಲವೆಂದು ಆಕ್ಷೇಪಿ-ಸುವದೇಕೆ?

ಪ್ರೊ. ಎಚ್. ಕೆ. ಜಯದೇವರು—ಪಂಪನ ಜೀವನ ಚಿತ್ರವನ್ನು ಅವನ ಕಾವ್ಯಗಳಿಂದ ಕಂಡುಕೊಂಡು ಜಿನವಲ್ಲಭನ ಶಾಸನದ ವಿವರಗಳೊಂದಿಗೆ ಸೇರಿಸಿ

ನಿರೂಪಿಸಿದ್ದಾರೆ. ಹಳೆಯ ಕವಿಗಳಲ್ಲಿ ಕೆಲವರು ತಮ್ಮ ವಿಷಯ ಹೇಳಿಕೊಳ್ಳದೆ ಉದಾಸೀನರಾಗಿರುತ್ತಾರೆ. ಆದರೆ ಪಂಪ ಇವೆರಡೂ ಗುಂಪಿಗೆ ಸೇರದೆ ಹಿತಮಿತವಾಗಿ ಸ್ವವಿಷಯವನ್ನು, ಕವಿತಾ ಸಾಮರ್ಥ್ಯವನ್ನು ಹೇಳಿಕೊಂಡಿದ್ದಾನೆಂದು ಜಯದೇವರ ಹೇಳಿಕೆ. ಇದರೆ ಇದು ಪೂರ್ತಿ ಯಾಥಾರ್ಥವೇ? ಪಂಪ ಆತ್ಮ ಸಂಮೋಹಿತ ಆತ್ಮಸಂಭಾವಿತನಾಗಿ ಕಾಣುವದಿಲ್ಲವೇ—ಅವನ ಆತ್ಮಕಥನದಿಂದ? ತನ್ನ ರೂಪಸೌಂದರ್ಯ, ಶತ್ರು ಭಯಂಕರವಾದ ರಣಸಾಹಸ, ರಸಿಕತನ, ಅನೇಕ ವೇಶ್ಯೆಗಳ ಸುಂದರಿಯರನ್ನು ಭೋಗಿಸುವ ಸುಭಗತನ, ರಾಜವಲ್ಲಭತ್ವ—ಇತ್ಯಾದಿ ಗುಣಲಕ್ಷಣ ವಿಷಯಗಳನ್ನೂ ಪಂಪನು ಮನಸ್ವಿಯಾಗಿ ಕೊಂಡಾಡಿಕೊಳ್ಳುತ್ತಾನೆ. ಅವನ ವಿನಯ ಪ್ರದರ್ಶನದಲ್ಲಿಯೂ ತುಂಬ ಬಿಂಕವು ಎದ್ದು ಕಾಣುತ್ತದೆ. ಆದ್ದರಿಂದ ಆತ ಹಿತಮಿತ ಮೃದುಭಾಷಿಯಾದರೂ ಅದು ಆತ್ಮ-ಶ್ಲಾಘನೆಯ ಮಟ್ಟಗೆ ಅಲ್ಲ. ತಾನು ಹಿಂದಿನ ಕವಿಗಳನ್ನೆಲ್ಲ ಮೆಟ್ಟಿನಿಲ್ಲಬಲ್ಲ ಕೃತಿಕಾರನೆಂದು ಹೇಳಿಕೊಳ್ಳುವದು ದರ್ಪೋಕ್ತಿಯಲ್ಲವೇ? ತನ್ನನ್ನು ಮಾತ್ರವಲ್ಲ ತನ್ನ ಪೂರ್ವಿಕರನ್ನೂ ಅವನು ಧಾರಾಳವಾಗಿ "ಅವನಿತಳಾಕಾಶವ್ಯಾಪ್ತ"ವಾಗಿ ಅತ್ಯುಕ್ತಿಯಿಂದ ಕೊಂಡಾಡಿಕೊಂಡಿದ್ದಾನೆ. ಅಂದಾಗ ಆತ್ಮಪ್ರಶಂಸೆಯ ಪೂರ್ವಸೂರಿಗಳ ಪರಂಪರೆಯ ಮಾರ್ಗದಲ್ಲಿ ಪಂಪನು ಮುಂದುವರಿದಂತಿದೆ. (ಈ ಕುರಿತ ಅವತರಣಿಕೆಗಳು ಇಲ್ಲಿ ಅನಗತ್ಯ.)

ತನ್ನನ್ನು 'ಪಂಚಶರೈಕ ರೂಪ' 'ಚತುರಂಗಬಲ ಭಯಂಕರ'—ಇಂಥ ಆತ್ಮಶ್ಲಾಘನೆ ಹಿತಮಿತ ಭಾಷೆಯಲ್ಲ. ಅಲ್ಲದೆ ಅಂದು ಸೇನಾನಾಯಕತ್ವ ಪಂಪನಿಗೇ ವಿಶಿಷ್ಟವಲ್ಲ. ಚಾವುಂಡರಾಯ, ನಾಗವರ್ಮ ಅದೇ ರೀತಿ ಕಲಿಯಾಗಿದ್ದ ಕವಿಗಳು.

ಪಂಪನ ಕನ್ನಡ ಭಾಷಾಪ್ರಭುತ್ವದ ಕುರಿತು ಒಂದು ಶಂಕೆ ಇಲ್ಲಿ ಮೂಡುತ್ತದೆ. ಆತನ ಬಾಲ್ಯ ವಿದ್ಯಾಭ್ಯಾಸ ಕಳೆದದ್ದು ತಾಯಿಯ ತವರ್ಮನೆ—ಅಣ್ಣಿಗೇರಿ ಬೆಳುವಲ ಸೀಮೆಯಲ್ಲಿ. ಆತ ಅತಿಯಾಗಿ ಹಂಬಲಿಸಿಕೊಳ್ಳುವದು ಬನವಾಸಿ ದೇಶವನ್ನು. ಅಂದಾಗ "ಪುಲಿಗೆರೆಯ ತಿರುಳ್ಗನ್ನಡ"ದಲ್ಲಿ ಅವನು ಬರೆದದ್ದು ಹೇಗೆ? ಪಂಪನ ಕನ್ನಡದಲ್ಲಿ ಇಂದಿಗೂ ಹವ್ಯಕರಾಡಿಕೊಳ್ಳುವ ಅನೇಕ ನುಡಿಗಟ್ಟುಗಳನ್ನು ಹಳೆಯ ರೂಪದಲ್ಲಿ ಕಾಣಬಹುದು. ಹವ್ಯಕ ಭಾಷೆ ಹಳಗನ್ನಡಕ್ಕೆ ತೀರ ಹತ್ತಿರವಾಗಿ ತೋರುತ್ತದೆ. ಅಂದಿನ ಆ "ತಿರುಳ್ಗನ್ನಡ"ದ ಸೀಮೆ ಈ ಮಲೆನಾಡಿನವರೆಗೂ ವ್ಯಾಪಿಸಿತ್ತೋ?

ಅದೇ ರೀತಿ "ಆರಂಕುಸಮಿಟ್ಟೊಡಂ" ಎಂಬ ಉಕ್ತಿಯ ಅರ್ಥಸ್ವಾರಸ್ಯವೇನು? ಆ ಪದ್ಯದಲ್ಲಿ ಅನೇಕ ಸಂಕೇತಗಳನ್ನು ಹೇಳಿ ಅವನ್ನೆಲ್ಲ ಕಂಡಾಗ

ತನಗಾಗುವ ಬನವಾಸಿ ದೇಶದ ಹಂಬಲವನ್ನು (nostalgia) ಪಂಪ ಮೊಳಕು ಹಾಕುತ್ತಾನೆ. ಆ ಸಂದರ್ಭದಲ್ಲಿ ದಂಡನಾಯಕನಾಗಿಯೂ ಮೆರೆದ ಪಂಪನಿಗೆ ಯಾರಾದರೂ ಒಂದು ಅಂಕುಶವನ್ನು ತೆಗೆದಿಟ್ಟರೆ ಸಾಕು ಅದನ್ನು ಕಂಡೊಡನೆ ಆನೆಗಳ ಕಾಡುಗಳುಳ್ಳ ಬನವಾಸಿ ದೇಶ ನೆನಪಾಗುತ್ತದೆ. ಅಂಕುಶದಂಥ ತೀರ ಒಂದು ವಸ್ತು ಕೂಡ ಆ ಹೃದ್ಯವಾದ ಹಂಬಲವನ್ನು ಭುಗಿಲೆಬ್ಬಿಸುತ್ತದೆ ಎಂದೇ ಅಲ್ಲವೇ? ಏಕೆಂದರೆ ಮನಸ್ಸಿಗೆ ಅಂಕುಶವಿಡಲು, ಬಲಾತ್ಕಾರದಿಂದ ನೆನಪು ತಡೆಗಟ್ಟಲು ಸಾಧ್ಯವೇ ಇಲ್ಲ!

ಅಂದು ಬೆಳುವಲ-ಬನವಾಸಿ ಕೂಡೇ ತೆಂಕ ನಾಡೆಂದು ಕರೆಯುತ್ತಿದ್ದರೆ? (ಮುಂದೆ ಚಾವುಂಡರಸನು ಬನವಾಸಿಯನ್ನು ಬೆಳುವಲದಲ್ಲಿಯೇ ಸಮಾವೇಶಗೊಳಿಸಿ ಬಣ್ಣಿಸಿದ್ದುಂಟು.)

ಇನ್ನು ‘ಸುಕವಿಜನಮನಮಾನಸೋತ್ತಂಸ’ ‘ಸಂಸಾರ ಸಾರೋದಯ’(?) ‘ಸರಸ್ವತೀ ಮಣಿಹಾರ’—ಇತ್ಯಾದಿ ಪಂಪನವೆಂಬ ಬಿರುದುಗಳಿಗೆ ಬೇರೆ ನಿಶ್ಚ-ಯಾತ್ಮಕ ದಾಖಲೆಗಳುಂಟೆ? (ಈ ಕುರಿತು ನನ್ನ ಓದು ತೀರ ಸೀಮಿತ—ಎಂಬುದಕ್ಕೇ ಈ ಶಂಕೆ.)

ಪಂಪನು ಬಾಲ್ಯವನ್ನು ಈ ಬೆಳುವಲ-ಬನವಾಸಿಗಳ ನಾಡಿನಲ್ಲಿ ಕಳೆದುದಕ್ಕೆ ಕಾರಣವೇನು? **ಡಾ. ಬಿ. ಎಸ್. ಕುಲಕರ್ಣಿ** ಕೊಡುವ ಸ್ಪಷ್ಟೀಕರಣವೇ ಬೇರೆ-

ವೇಂಗಿಮಂಡಳವೆಲ್ಲಿ, ಪುಲಿಗೆರೆ ಲಕ್ಷ್ಮೇಶ್ವರವೆಲ್ಲಿ? ಬನವಾಸಿ-ನಾಡು ಎಲ್ಲಿ? ಪುಲಿಗೆರೆ ಯಾವ ಕಾಲಕ್ಕೂ ೨ನೆಯ ಅರಿಕೇಸರಿಯ ರಾಜಧಾನಿ ಆಗಿದ್ದಿಲ್ಲ. ಅವನ ರಾಜಧಾನಿ ಬೋಧನ (ಪ್ರೋದನ), ಈಗಿನ ಹೈದರಾಬಾದ (ಆಂಧ್ರ) ಪ್ರಾಂತದಲ್ಲಿ. ಅಂದಾಗ ಪಂಪನು ಪುಲಿಗೆರೆಯಲ್ಲಿ ಇರಲು ಸಾಧ್ಯವೇ?

ಜೈನ ಮತಾಂತರ ಹೊಂದಿದ ಮೂಲಕ ಪಂಪನ ತಂದೆ ಭೀಮಪ್ಪಯ್ಯ (ಅಭಿರಾಮ ದೇವರಾಯ?)ನಿಗೆ ವೆಂಗಿಪಾಳು, ಸುತ್ತಲಿನ ಕೊಟ್ಟೂರು, ಸಿಡಗುಂಡಿ, ವಿಕ್ರಮಪುರಗಳ ವೈದಿಕರ ಅಗ್ರಹಾರಗಳಲ್ಲಿ ಅಂತಸ್ತು ಕೆಳಗಿಳಿದಿರಬೇಕು. ಆಗ ಆತ ರಾಷ್ಟ್ರಕೂಟರ ಗಂಗರ ಆಧಿಪತ್ಯದಿಂದ ಸುರಕ್ಷಿತವಿರುವ ಬನವಾಸಿ ನಾಡಿಗೆ—ತನ್ನ ಹೆಂಡತಿಯ ತಾಯ್ನಾಡಿಗೆ ಬಂದು ನೆಲಸಿರಬೇಕು. ಇದಕ್ಕೆ ಇನ್ನೂ ಒಂದು ಕಾರಣ. ಅರಿಕೇಸರಿಯು ತನ್ನ ಚಕ್ರವರ್ತಿ ಗೋವಿಂದನನ್ನು ವಿರೋಧಿಸಿ ನಾಲ್ಕನೆಯ ಬಾರಿ ಸೋಲಿಸಿದ್ದುಂಟು. ಆ ಕಾಲದಲ್ಲಿ ಚಾಲುಕ್ಯರ ಆಶ್ರಯದಲ್ಲಿದ್ದ ಅನೇಕರು ರಾಷ್ಟ್ರಕೂಟರ ವೈರ ಕಟ್ಟಿದ್ದುಂಟು. (ಕೋಣೂರ ಶಾಸನದಲ್ಲಿ “ದಂಪಯ್ಯ”ನೆಂಬವನು ೩ನೆಯ ಕೃಷ್ಣನನ್ನು ಎದುರಿಸಿ ಹೋರಾಡಿ ಸತ್ತ ಉಲ್ಲೇಖವಿದೆ.) ಅಂಥ ಮನೆತನಗಳಲ್ಲಿ ಭೀಮಪ್ಪಯ್ಯನೂ ಒಂದಿರ-

ಬೇಕು. (ಅವನಿಗೆ "ಭೀಮ" ಎಂಬುದು ಬಿರುದಾಗಿತ್ತೆಂದು ಒಂದು ಪಾಠವಿದೆ) ಅಭಿರಾಮದೇವನೆಂಬ ಅವನ ಹೆಸರಿಗೆ ಅಂಟಿದ "ರಾಮ" ಈ "ಅಯ್ಯ"ನಿಗೆ ಅವನ ವೀರತ್ವದ ಉಪಾಧಿ ಇರಬಹುದು. ಮಗನ ವೀರವೃತ್ತಿ ಈ ತಂದೆಯಿಂದಲೇ ಬಂದಿರಬೇಕು. ಮುಂದೆ ಈ ಯುದ್ಧಗಳ ಕಾಟದಿಂದ ದೂರವಿರಬೇಕೆಂದೂ ಆತ ದೂರದ ಬನವಾಸಿ ದೇಶಕ್ಕೆ ವಲಸೆ ಬಂದಿರಬೇಕು. (ಅವನ ಜೈನ ದೀಕ್ಷೆಯೂ ಈ ಯೋಧ ವೃತ್ತಿಗೆ ಪ್ರಾಯಶ್ಚಿತ್ತವೆಂದು ಸ್ವೀಕರಿಸಿದ ಅಹಿಂಸಾ ವ್ರತವೆ?) ಮುಂದೆ ಅರಿಕೇಸರಿಯು ತಂದೆಯಂತೆ ಕಲಿಯೂ ಮಿಗಿಲಾದ ಕವಿಯೂ ಆದ ಪಂಪನನ್ನು ತನ್ನ ಆಸ್ಥಾನಕ್ಕೆ ಕರೆಯಿಸಿಕೊಂಡಿರಬೇಕು.

ಪ್ರಬಂಧಕಾರರು ಡಾ. ಕುಲಕರ್ಣಿಯವರ ಈ ತರ್ಕಾನುಮಾನವನ್ನು ಗಮನಿಸಿಲ್ಲವೋ ಒಪ್ಪಿಲ್ಲವೋ ತಿಳಿಯುವದಿಲ್ಲ. (ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದ ವಿಶೇಷೋಪನ್ಯಾಸ ಮಾಲಿಯೊಂದು 'ಮಹಾ ಕವಿ ಪಂಪ ಮತ್ತು ಅವನ ಕೃತಿಗಳ' ಕುರಿತು ನಮ್ಮ ಜಿಲ್ಲೆಯ ಸಿರಸಿಯಲ್ಲಿ ಏರ್ಪಟ್ಟು ಅದು ಗ್ರಂಥ ರೂಪದಲ್ಲಿ ೧೯೬೭ರಲ್ಲಿಯೇ ಪ್ರಕಟವಾಗಿದೆ. ಡಾ. ಬಿ. ಎಸ್. ಕುಲಕರ್ಣಿಯವರ ಮೇಲೆ ಉದಾಹರಿಸಿದ ಉಪಪತ್ತಿ ಅವರ ಉಪನ್ಯಾಸದಲ್ಲಿ ಬಂದಿದೆ.)

ಈ ಹಿನ್ನೆಲೆಯನ್ನು ಗಮನಿಸಿದರೆ, ಪಂಪ-ಅರಿಕೇಸರಿಯರ ಸ್ನೇಹ ಒಂದು "ಯೋಗಾಯೋಗ"ವಲ್ಲ. (ಈ ಮೈತ್ರಿಯ ಸ್ವಾಮಿಭಕ್ತಿಯ "ಜೋಳವ ಪಾಳಿ"ಯ ಋಣವನ್ನು ತೀರಿಸಲು ಪಂಪ ತನ್ನ ದೊರೆಯ ಪಕ್ಷದಲ್ಲಿ ಹೋರಾಡಿದನೆಂಬ ಯುದ್ಧ ಯಾವುದು? ಗೊತ್ತಾಗಿಲ್ಲ. ಅದಕ್ಕೆ ಅವನ ಪದ್ಯವೇ ದಾಖಲೆ.)

ಪಂಪನ ಚಾರಿತ್ರ್ಯ ಚಾರುತ್ವ ಚಾತುರ್ಯಗಳನ್ನು ಪ್ರಬಂಧಕಾರರು ಮನೋಜ್ಞವಾಗಿ ಸಾಧಾರವಾಗಿ ಸಂಗ್ರಹಿಸಿ ನಿರೂಪಿಸಿದ್ದಾರೆ. ಅವನ ಬಿಂಕದ ವಿನಯವನ್ನೂ ಎತ್ತಿ ತೋರಿಸಿದ್ದಾರೆ. ಪಂಪನದು ಪೊಳ್ಳು ಬಿಂಕವಲ್ಲ. ಸ್ವಸಾಮರ್ಥ್ಯವನ್ನು ಅರಿತ ಸದಭಿಮಾನವೆನ್ನುತ್ತಾರೆ ಪ್ರಾ. ಕುಲಕರ್ಣಿ.

ಅಂದಿನ ರಾಜನೀತಿ, ರಾಜಾನುಗ್ರಹಗಳ ಬಗೆಗೆ ಪಂಪನ ನಿಲುವು ಉಭಯ ಕೃತಿಗಳಲ್ಲಿಯೂ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಪ್ರಬಂಧಕಾರರು ತೋರಿಸಿದ್ದಾರೆ. ನೃಪನೀತಿಯ ಬಗೆಗೂ ಅಂದಿನ ರಾಜರ ಬಗೆಗೂ ಈ ಸ್ವಾಭಿಮಾನಿ ಪ್ರತಿಭಾಶಾಲಿ ಕವಿಗೆ ವಿಶೇಷ ಆದರವಿಲ್ಲದಿದ್ದರೆ ಅದಕ್ಕೆ ಅವನಿಗೆ ಅದರಿಂದ ಕಟು ಅನುಭವ ಬಂದಿರಬೇಕಾಗಿ ಇಲ್ಲ. ಕವಿಯ ಜಾಗೃತ ದೃಷ್ಟಿ ಮತ್ತು ಅವಲೋಕನೆಯಿಂದ ಆ ಅಭಿಪ್ರಾಯಕ್ಕೆ ಬರುವದು ಸಾಧ್ಯ. "ಪೆರರಿವುದೇಂ"—ಇತ್ಯಾದಿ ಅವನ ಉದ್ಗಾರಗಳು ಅವನ ತಾತ್ಕಾಲಿಕ "ಮೂಡಿ"ನಿಂದ ಹೊರಟವು ಅಥವಾ

ಕಾವ್ಯದ ನಿಜವಾದ ಪ್ರಯೋಜನ ಲೌಕಿಕಕ್ಕಿಂತ ಪಾರಮಾರ್ಥಿಕ ಶ್ರೇಯಸ್ಸಿನಲ್ಲಿಯೇ ಇದೆಯೆಂಬ ನಿಲುವಿನಿಂದ ನೋಡಿದಾಗ ಅನಿಸಿದ್ದು ಅವಕ್ಕೆ ತನ್ನ ರಾಜನಲ್ಲಿ ಪಟ್ಟುಕೊಂಡ ಸ್ವಾನುಭವದ ಪಾಡೇ ತೋಡಿಕೊಳ್ಳಬೇಕಾಗಿಲ್ಲ.

ಪಂಪ ಆದಿಪುರಾಣದಲ್ಲಿ ತನ್ನ ಆಶ್ರಯದಾತ ದೊರೆಯನ್ನು ಸ್ಮರಿಸಿಲ್ಲವೆಂಬುದೊಂದು ಅರ್ಥಪೂರ್ಣ ದಾಖಲೆಯಾಗಲಾರದು. ಜಿನಾಗಮಕ್ಕೆ ಮೀಸಲಾದ ಆ ಕನ್ನಡಿಸಿದ "ಪೂರ್ವ ಪುರಾಣ"ದಲ್ಲಿ ನರಸ್ತುತಿಗೆ ಪ್ರಾಶಸ್ತ್ಯವಿರಲಾರದು. ಅಲ್ಲದೆ ಈಗ ಆತ ಅರಿಕೇಸರಿಗೆ ಮನಸಾ ಅಷ್ಟೊಂದು ನಿಕಟವರ್ತಿಯಾಗಿರಲಾರ. ಆ ಉಪೇಕ್ಷೆಯನ್ನು ಆತ ವಿಕ್ರಮಾರ್ಜುನ ವಿಜಯವನ್ನು ರಚಿಸಿ ಧಾರಾಳವಾಗಿ ನೀಗಿಸಿದ್ದಾನೆ.

ಈ ಪ್ರಬಂಧದಲ್ಲಿ ಬಂದ ಹೊಸ ವಿಷಯವೆಂದರೆ, ಪಂಪನ ಪೂರ್ವಜರು ಕನ್ನಡಿಗರು. ಕುಬ್ಜ ವಿಷ್ಣುವರ್ಧನನು ಪೂರ್ವಚಾಲುಕ್ಯ ಶಾಖೆಯನ್ನು ಸ್ಥಾಪಿಸಿದಾಗ ಹಲವು ಕನ್ನಡ ಮನೆತನಗಳು ಅಲ್ಲಿಗೆ ಹೋಗಿ ರಾಜಾಶ್ರಯವನ್ನು ಪಡೆದಿದ್ದವು. ಆದರೆ ಇಲ್ಲಿ ಒಂದು ಶಂಕೆ. ಇಂದಿನಂತೆ ಸಂಪರ್ಕ ಸೌಕರ್ಯವಿಲ್ಲದೆ ಅಂದಿನ ಕಾಲದಲ್ಲಿ ಒಂದು ಮನೆತನ ತಾಯ್ನಾಡು ಬಿಟ್ಟು ದೂರ ದೇಶದಲ್ಲಿ ಸ್ಥಾಯಿಕವಾದರೆ ಎಷ್ಟು ತಲೆಮಾರುಗಳ ವರೆಗೆ ತನ್ನ ಮೂಲದ ಪ್ರಾದೇಶಿಕತ್ವವನ್ನು ಉಳಿಸಿಕೊಳ್ಳಬಲ್ಲದು ?

ಈ ಕುರಿತು ಡಾ. ಬಿ. ಎಸ್. ಕುಲಕರ್ಣಿ ಕೊಟ್ಟ ವಿವರಣೆಯನ್ನು ಪ್ರಬಂಧಕಾರರು ಗಮನಿಸಿದಂತಿಲ್ಲ. ಡಾ. ಕುಲಕರ್ಣಿ ದಿ. ಗೋವಿಂದ ಪೈಗಳ ಅಭಿಪ್ರಾಯವನ್ನೆತ್ತಿಕೊಂಡು ಹೇಳಿರುವದೇನೆಂದರೆ "ವೆಂಗಿಮಂಡಲವೆಂಬುದು ಮೂಲತಃ ತೆಲುಗು ಸೀಮೆಯೆಂದು ತೋರಿದರೂ ಅದು ಕ್ರಮೇಣ ವಿಸ್ತರಿಸಿ ಮುಖ್ಯತಃ ಅದರ ಪಶ್ಚಿಮೋತ್ತರಗಳಲ್ಲಿ ಕರ್ನಾಟಕದ ಹಲವು ಭಾಗಗಳನ್ನು ಒಳಸಿಕೊಂಡಿರಬೇಕು. ಇದು ತೆಲುಗು ಎನಿಸಿಕೊಂಡರೂ ಕನ್ನಡ ಪ್ರದೇಶವೇ ಆಗಿರಬೇಕು. "ಛಂದೋಂಬುಧಿ" ಬರೆದ ಸಯ್ಯಡಿ ನಾಗವರ್ಮ, ಪೊನ್ನನಿಂದ "ಶಾಂತಿಪುರಾಣ ಬರೆಯಿಸಿದ ಮಲ್ಲಪಯ್ಯ, ರನ್ನನಿಂದ "ಅಜಿತಪುರಾಣ" ಬರೆಯಿಸಿದ ಅತ್ತಿಮಬ್ಬೆ ಈ ವೆಂಗಿಮಂಡಳದವರೇ; ಕನ್ನಡಿಗರೇ."

ಕೊನೆಯದಾಗಿ ಒಂದು ಮಾತು. ಬನವಾಸಿಯನ್ನು ಪಂಪನು "ಮಲಯಾಚಲ ಪ್ರದೇಶ"ವೆಂದಿದ್ದಾನೆ (ಅವನ ಲೆಕ್ಕಕ್ಕೆ ಅದು ಅಲ್ಲವೆ.) ಹಿಂದೆ ಗೋಕರ್ಣದ ವರೆಗೂ ಕೇರಳದ ವ್ಯಾಪ್ತಿಯನ್ನು ಎಣಿಸುತ್ತಿದ್ದರು. "ಕೇರಳಪೀಟ" "ಮಲಯಯುವತಿ"ಗಳ ನಿಕಟ ಸಂಪರ್ಕವಿದ್ದ ಪಂಪನ ಬನವಾಸಿ ಇಂದಿನ ಉ. ಕನ್ನಡದ ಮಲೆನಾಡಿನ ಬನವಾಸಿಯೇ? ಆದರೆ ಕೇರಳ ದೇಶದಲ್ಲಿಯಂತೆ ಲೈಂಗಿಕ

ಸ್ವಾತಂತ್ರ್ಯ ಈ ನಮ್ಮ ಜನಪದ ದೇಶದಲ್ಲಿ ಇಂದಾಗಲಿ ಅಂದಾಗಲಿ ಇದ್ದಂತಿಲ್ಲ. (ನಗೆವೊಗಮೊಳ್ ಪಳಂಚಲೆಯೆ ಕೂಡುವನಲ್ಲರೆ" "ಕೆಂದಲಂಪಂಗೆಡೆಗೊಂಡೊಡಂ") ಅಥವಾ ಮಲೆನಾಡಿನಿಂದ ಕೇರಳದ ವರೆಗಿನ ನಾಡನ್ನು ಆತ ಗಮನಿಸಿ ಈ ನಂದನಂಗಳ ವರ್ಣನೆ ಮಾಡಿರಬಹುದೇ?

ಡಾ. ಟಿ. ವೆಂಕಟಸುಬ್ಬರಾವರ ಪಂಪ-ನನ್ನಯರ ತೌಲನಿಕ ಪರಿಚಯ ಒಳ್ಳೇ ಉದ್ಬೋಧಕವಾಗಿದೆ. ನನ್ನಯನ ರಚನೆಯ ಮೇಲೆ ಆದ ಪಂಪನ ಪ್ರಭಾವವನ್ನು ಅವರು ಚೆನ್ನಾಗಿಯೇ ವಿವರಿಸಿದ್ದಾರೆ. ತೆಲುಗು ಕನ್ನಡ ಜನಪದಗಳ ಭಾಗೋಲಿಕ ಸಾಂಸ್ಕೃತಿಕ ರಾಜಕೀಯ ಮತ್ತು ಧಾರ್ಮಿಕ ಅಭಿನ್ನತೆ ಏಕರೂಪತೆಗಳನ್ನು ಅವರು ಒತ್ತಿ ಹೇಳಿದ್ದಾರೆ. ಆಂಧ್ರ ಕವಿತ್ರಯರ ಭಾರತಗಳನ್ನು ಪೂರ್ತಿಗೊಳಿಸುವ ನನ್ನಯನ ಕೃತಿರಚನಾ ಸಂದರ್ಭದ ವಿವರಗಳನ್ನೆಲ್ಲ ಪ್ರಬಂಧಕಾರರು ವಿವರಿಸಿದ್ದಾರೆ.

ಪಂಪನ ಸಮಸ್ತಭಾರತ ನನ್ನಯನ ಆದಿಪರ್ವದಷ್ಟೂ ಇಲ್ಲ. ಪಂಪನಿಗೆ ಅದನ್ನು ಬರೆಯಲು ೬ ತಿಂಗಳು ಹಿಡಿಯಿತು. ನನ್ನಯನಿಗೆ ೨½ ಪರ್ವಗಳನ್ನು ಬರೆಯಲು ೨-೩ ವರ್ಷ ಕಾಯಬೇಕಾಯಿತು—ಅಂದಿದಾರೆ ಲೇಖಕರು. ಇಲ್ಲಿ ನನ್ನಯನ ರಚನೆಯ ಅವಧಿಗೆ ಅವರಿಗೆ ಯಾವ ಆಧಾರವೊ!

"ವಿಕ್ರಮಾರ್ಜುನ"ನೆಂಬುದು ಅರಿಕೇಸರಿಯ ಬಿರುದೆಂದು ಪ್ರಬಂಧಕಾರರು ಬಗೆದಂತಿದೆ. ಆದರೆ ಅರಿಕೇಸರಿಯ ಮೊಮ್ಮಗ ೩ನೆಯ ಅರಿಕೇಸರಿ ಈ ಬಿರುದನ್ನು ಸೇರಿಸಿಕೊಂಡಿದ್ದಾನೆ. ಪರಭಣಿಯ ಶಾಸನದಲ್ಲಿ ಆ ಮುಂಚಿನ ವೇಮುಲವಾಡಿಯ ಶಾಸನದಲ್ಲಿ ಅರಿಕೇಸರಿಗೆ ಈ ಬಿರುದು ಹೇಳಿಲ್ಲ. ಅರ್ಥಾತ್ ಇದು ಪಂಪ ಭಾರತ ಪ್ರಣೀತವಾಗಿ ಅನಂತರ ಅಂಟಿಕೊಂಡಿರಬೇಕು.

ವ್ಯಾಸ ಭಾರತವು ಪುರಾಣ ಪದ್ಧತಿಯಲ್ಲಿ ಧಾರ್ಮಿಕ ದೃಷ್ಟಿಯಿಂದ ಬರೆದದ್ದು—ಅಂದಿದ್ದಾರೆ ಡಾ. ವಿ. ಸುಬ್ಬರಾವ. ಆದರೆ ವ್ಯಾಸರು ಧರ್ಮಸೂಕ್ಷ್ಮವನ್ನು ಅನೇಕ ವಿಧವಾಗಿ ಅನೇಕ ಸಲ ಹೇಳಿದ್ದರು. ಭಾರತವು ಪುರಾಣವೆನಿಸಿಕೊಂಡಿಲ್ಲ. ಕಾವ್ಯವೂ ಅನಿಸಿಕೊಂಡಿಲ್ಲ. ಅದು ಪರಂಪರೆಯಿಂದಲೂ 'ಇತಿಹಾಸ', 'ಜಯ'ವೆಂಬ ಇತಿಹಾಸ. ಹೆಚ್ಚೆಂದರೆ "ಪಂಚಮವೇದ". ಅಲ್ಲದೆ ಮಹಾಕಾವ್ಯಕ್ಕೆ ಒಂದು ಪದ್ಧತಿ ಇರುತ್ತದೆ. ಆದರೆ "ಪುರಾಣ ಪದ್ಧತಿ" ಅಂದರೆ ಏನು ?

ರಸಸೃಷ್ಟಿ ಕಾವ್ಯಪದ್ಧತಿಗಳಿಂದ ಬರೆದ ಸ್ವತಂತ್ರ ಕಾವ್ಯ ಪಂಪಭಾರತ. ಇಂಥ ಕಾವ್ಯ ಪ್ರತ್ಯೇಕವಾಗಿ ಸಂತೃಪ್ತಿಯನ್ನು ಕೊಟ್ಟರೂ ಮೂಲಗ್ರಂಥದೊಳಗಿನ ವಿಷಯಗಳನ್ನು ಯಥಾವತ್ತಾಗಿ ತಿಳಿದುಕೊಳ್ಳಲು ಬಯಸುವವರಿಗೆ ತುಂಬ

ನಿರಾಶೆಯುಂಟುಮಾಡುತ್ತದೆ— ಎಂದು ಪ್ರಬಂಧಕಾರರ ಆಕ್ಷೇಪ. ಆದರೆ ಇದು
ಅಸ್ಥಾನದಲ್ಲಿ ಅಪೇಕ್ಷೆಪಟ್ಟು ಮಾಡಿಕೊಳ್ಳುವ ನಿರಾಶೆ. ಯಾವದೇ ಕವಿ ಅಥವಾ
ಅವನ ಕೃತಿ ತನ್ನ ಉದ್ದೇಶವಲ್ಲದ್ದಕ್ಕೆ ಹೊಣೆಗಾರನಲ್ಲ. ಈ ಸಂದರ್ಭದಲ್ಲಿ
ಡಾ. ಸುಬ್ಬರಾವರು ದಿ. ಶ್ರೀಪಾದ ಕೃಷ್ಣಮೂರ್ತಿಗಳ ಮಹಾಭಾರತ ಭಾಷಾಂತರ
ಮತ್ತು ಇನ್ನಿತರ ಕೃತಿಗಳ ಪ್ರಶಂಸೆಯಲ್ಲಿ ತೊಡಗಿದ್ದು ಒಂದು ವಿಷಯಾಂತರ
ವೆನಿಸುತ್ತದೆ.

ನನ್ನಯ—ಪಂಪರ ೧೧ ಕಥಾ ಸಾದೃಶ್ಯಗಳನ್ನು, ೧೨ ವೈದೃಶ್ಯಗಳನ್ನು
ಪ್ರಬಂಧಕಾರರು ಸ್ಫುಟಗೊಳಿಸಿದ್ದಾರೆ. ನನ್ನಯ ಕುಮಾರವ್ಯಾಸನಂತೆ ಭಾರತ
ವನ್ನು ಭಗವಲ್ಲೀಲೆಯ ಕಥೆಯಾಗಿಯೇ ನೋಡುವವರಿಂದ ಆತ ಪಂಪನ ರಸಿಕ
ಕಾವ್ಯದ ದೃಷ್ಟಿಯಿಂದ ರಚನೆಗೆ ಹೊರಟವನಲ್ಲ. ಇದೊಂದು ನಿಲುಮೆಯಿಂದ
ಪಂಪ ನನ್ನಯರಲ್ಲಿಯ ಪಾತ್ರ ವಸ್ತು ವಿನ್ಯಾಸಗಳ ಅನೇಕ ವ್ಯತ್ಯಾಸಗಳು ತಾನಾ
ಗಿಯೇ ವ್ಯಾಖ್ಯಾನಗೊಳ್ಳುತ್ತವೆ, ಆ ಕುರಿತು ಪಂಪನನ್ನು ಟೀಕಿಸುವಂತಿಲ್ಲ.

ಇಲ್ಲಿ ಒಂದು ಸ್ವಾರಸ್ಯದ ಶಂಕೆಗೆ ಪ್ರಬಂಧಕಾರರು ಇಂಬುಗೊಟ್ಟಿದ್ದಾರೆ.
ಈ ಕುರಿತ ತಳ ಟಿಪ್ಪಣಿಯಲ್ಲಿ ಅವರು ಭಾರತವು ಲೌಕಿಕ ಕಾವ್ಯವೆಂದು ಸಂಸ್ಕೃತ
ದಲ್ಲಿಯೂ ಪರಿಗಣಿಸಲಾಗಿದೆ—ಎಂದಿದಾರೆ. ಅಂದಾಗ ಅದು ಧಾರ್ಮಿಕ ಪುರಾಣ
ವೆಂಬ ಲೇಖಕರ ಆರಂಭದ ನಿಲುಮೆ ಎಲ್ಲಿ? ಅಲ್ಲದೆ ಲೌಕಿಕವೆಂದರೆ ವೇದೇತರ
ಭಾಷೆಯದು—ಎಂಬ ಒಂದು ವಿವರಣೆ ಅತಿ ವ್ಯಾಪ್ತಿ ದೋಷಕ್ಕೆ ಎಡೆಗೊಡು
ತ್ತದೆ. ಲೌಕಿಕತೆ ಕೇವಲ ಭಾಷೆಯ ಲಕ್ಷಣವೆಂದಾದರೆ ವೇದಗಳನ್ನು ಬಿಟ್ಟರೆ
ಉಳಿದೆಲ್ಲ ಪ್ರಾಚೀನ ವಾಙ್ಮಯ—ಉಪನಿಷತ್ತು, ಸ್ಮೃತಿ ಸೂತ್ರ ಗ್ರಂಥಗಳು
ಇತ್ಯಾದಿ—ಲೌಕಿಕ ಗ್ರಂಥಗಳಾಗುವವು. ಹಾಗಾದರೆ ಭಾರತವನ್ನು 'ಪಂಚಮ
ವೇದ'ವೆನ್ನುವದೂ ಸಾಧುವಲ್ಲ. ಪುರಾಣ ಗ್ರಂಥಗಳೆಲ್ಲ ಶ್ರುತಿಯನ್ನೆ ಉಪಬೃಂಹಿ-
ಸುವವೆಂಬುದೂ ಸತ್ಯವಾಗಲಿಕ್ಕಿಲ್ಲ.

ತನ್ನ ದೊರೆಗೆ ಅಭೇದವಾಗಿ ಕಥಾನಾಯಕನನ್ನು ಕಂಡು ಕಥೆಯನ್ನು
ನಿರೂಪಿಸುವಲ್ಲಿ ಪಂಪನು ಮಾಡಿನ ಅನೌಚಿತ್ಯಗಳನ್ನು ನನ್ನಯ ಮಾಡಿಲ್ಲವೆಂದಿ
ದ್ದಾರೆ ಪ್ರಬಂಧಕಾರರು. ಇದು ಸ್ವಯಂಸಿದ್ಧ. ನನ್ನಯ ಹಾಗೆ "ಬದ್ಧ"
ನಾಗಿ ಬರೆಯ ಹೊರಟ ಕವಿಯಲ್ಲ. ಆತ ಕೇವಲ ಮೂಲಕೃತಿಗೆ ನಿಷ್ಠ. ಆದರೆ
ಈ ಅನೌಚತ್ಯಗಳಿಂದಾಗಿ ಮೂಲ ಕಥೆಯನ್ನು ಸಾಕಷ್ಟು ಬದಲಿಸಿದ್ದರಿಂದ
ಪಂಪನ "ವಿಕ್ರಮಾರ್ಜುನ ವಿಜಯ"ವನ್ನು "ಸಮಸ್ತ ಭಾರತ"ವೆಂದು ಕರೆಯು
ವದು ಸರಿ ಅಲ್ಲವೆಂದು ಡಾ. ಸುಬ್ಬರಾವ ಅಂದಿದ್ದಾರೆ. ಇದು ಆಲೋಚನೀಯ
ಅಂಶ. ಒಂದು ಪ್ರಸಿದ್ಧವಾದ ಮೂಲಕಾವ್ಯದ ಕಥೆಯನ್ನು ಎಷ್ಟುಮಟ್ಟಿಗೆ

ಬದಲಿಸಿಯೂ ಅದು ತನ್ನ ಮೂಲದ ಸ್ವರೂಪವನ್ನು ಹೆಸರಿನ ಸಾರ್ಥಕತೆಯನ್ನು (identity) ಕಳೆದುಕೊಳ್ಳಲಾರದು?

ಪಂಪನು ಕರ್ಣನಿಂದಲೇ ಭಾರತ, ಅಲ್ಲಿ ನೆನೆಯತಕ್ಕದ್ದು ಕರ್ಣನೊಬ್ಬನನ್ನೆ—ಎಂದು ಸಾರಿ ತನ್ನ ಕಾವ್ಯದ ಉದ್ದೇಶಕ್ಕೆ ಭಂಗ ತಂದಿದ್ದಾನಲ್ಲದೆ, ಕರ್ಣನ ಪಾತ್ರದ ಮೇಲೆ ಹೊರಲಾರದ ಭಾರ ಹೇರಿದ್ದಾನೆ—ಎಂದು ಲೇಖಕರು ಆಕ್ಷೇಪಿಸಿದ್ದಾರೆ. ಇದು ನಿಜವಾಗಿಯೂ ಗಮನಾರ್ಹ. ಈ ಮಟ್ಟಿಗೆ ಪಂಪನ ವೈಯಕ್ತಿಕ ವ್ಯಾಮೋಹವೇನೋ ಅವನನ್ನು ಕೊಚ್ಚಿಕೊಂಡು ಹೋಯಿತೆಂತಿದೆ. ವಿಮರ್ಶಕರು ಈ ಕುರಿತು ವಿಶೇಷ ಮೀಮಾಂಸೆ ಮಾಡಿಲ್ಲ—ಈ ೧೬ ಪ್ರಬಂಧಕಾರರೂ ಅದನ್ನು ಮಾಡಿಗಂತಿಲ್ಲ.

ಹಾಗೆಯೇ ಕೃಷ್ಣನ ಪಾತ್ರಕ್ಕೆ ಪಂಪ ಪ್ರಾಧಾನ್ಯ ಕೊಟ್ಟಿಲ್ಲ. ಆದ್ದರಿಂದ ರಾಮನಿಲ್ಲದ ರಾಮಾಯಣದಂತೆ ಕೃಷ್ಣನಿಲ್ಲದ ಭಾರತ ಭಾರತೀಯರಿಗೆ (ಅಂದರೆ ಹಿಂದೂಗಳಿಗೆ?) ರುಚಿಸದೆಂದೂ ಅವರು ವ್ಯಕ್ತಮಾಡಿದ್ದಾರೆ. ಆದರೆ ಈ ಪ್ರಶ್ನೆಯನ್ನೆತ್ತಿಕೊಂಡ **ಡಾ. ದ. ರಾ. ಬೇಂದ್ರೆಯವರು** "ಮಹಾ ಕವಿ ಪಂಪ ಮತ್ತು ಅವನ ಕೃತಿಗಳು" ಈ ಗ್ರಂಥದಲ್ಲಿಯ ತಮ್ಮ ಉಪನ್ಯಾಸದಲ್ಲಿ "ಪುರುಷೋತ್ತಮನಾದ ಕೃಷ್ಣನ ಚರಿತ್ರೆಯು 'ವಿಕ್ರಮಾರ್ಜುನವಿಜಯ'ದಲ್ಲಿ ಸಾಕಷ್ಟು ಅಡಕವಾಗಿ ಬಂದಿದೆ"—ಎಂದು ಅದರ ೪-೫-೬ ಮತ್ತು ೯ನೆಯ ಆಶ್ವಾಸದಿಂದ ಕೆಲವು ದಾಖಲೆಗಳನ್ನು ಕೊಟ್ಟಿದ್ದಾರೆ. ಈ ವಾದದಲ್ಲಿ ಶಕ್ತಿಯೆಷ್ಟು ಯುಕ್ತಿಯೆಷ್ಟು ವಿದ್ವಾಂಸರೇ ನಿರ್ಣಯಿಸಬೇಕು. ಇಷ್ಟೊಂದು ನಿಜ—ಅರ್ಜುನನೊಂದಿಗೆ ತನ್ನ ಆಶ್ರಯದಾತ ದೊರೆಯನ್ನು ತಳಕುಹಾಕಿದ್ದರಿಂದ ಅರ್ಜುನನಿಗೇ ಆದಷ್ಟು ಅಸಹಾಯಶೂರನಾಗಿ ಕಲ್ಪಿಸಬೇಕಾಗಿ ಬಂದು ಆ ಮಟ್ಟಿಗೆ ಶ್ರೀಕೃಷ್ಣನ ಪಾತ್ರಕ್ಕೆ ಗೌಣತ್ವವನ್ನು ಕವಿಯು ಕೊಡಲೆಬೇಕಾಯಿತು.

ಆದಿಪುರಾಣದಲ್ಲಿಯ ಮತನಿಷ್ಠೆ, ಭಕ್ತಿಶ್ರದ್ಧೆ, ಸಮಸ್ತ ಭಾರತದ ರಚನೆಯಲ್ಲಿ ಕಂಡುಬರುವದಿಲ್ಲವೆಂಬ ಪ್ರತಿಪಾದನೆ ತೆರೆದ ಬಾಗಿಲಲ್ಲಿ ನುಗ್ಗಿದಂತೆ. ಆದರೂ ರಸಿಕ ಕವಿ ದಂಡನಾಯಕ ರಾಜವಲ್ಲಭ ಪಂಪ ಹಾಗೂ ಕುಲಬ್ರಾಹ್ಮಣ ಆಚಾರನಿಷ್ಠ ಸಾತ್ವಿಕ ನನ್ನಯ ಇವರಿಬ್ಬರ ಮನೋಧರ್ಮಗಳು ಅವರವರ ಕೃತಿಗಳಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದನ್ನು ಪ್ರಬಂಧಕಾರರು ಮನಂಬುಗುವಂತೆ ನಿರೂಪಿಸಿದ್ದಾರೆ. ಅಲ್ಲದೆ ನನ್ನಯನ ಭಾರತದಲ್ಲಿ ಪಂಪನ ಅನುಕರಣೆ ಪ್ರಭಾವಗಳನ್ನು ವಿವರವಾಗಿ ಎತ್ತಿತೋರಿಸಿದ್ದಾರೆ. ಪಂಪನಲ್ಲಿ ಹೃದ್ಯವೆಂದು ತೋರಿದ ಪದ್ಯ, ನುಡಿಕಟ್ಟು, ವರ್ಣನೆ ಮುಂತಾದವುಗಳನ್ನು ನನ್ನಯ ನಿಸ್ಸಂಕೋಚವಾಗಿ ನಿಸ್ಸಂಶಯವಾಗಿ ಬಳಸಿಕೊಂಡದ್ದು ಕಾಣುತ್ತದೆ. ವ್ಯಾಸನಲ್ಲಿ ಇಲ್ಲದ ಅನೇಕ

ವರ್ಣನಾಪ್ರಸಂಗಗಳನ್ನು ನನ್ನಯನು ಪಂಪನಿಂದ ಎತ್ತಿಕೊಂಡಿದ್ದನ್ನು ಡಾ. ಸುಬ್ಬರಾವ ಕಾಣಿಸಿದ್ದಾರೆ. ಸಮಾಸಾದಿ ಭಾಷಾಪದವಿಧಾನ, ಪರಿಣಾಮಕ್ಕಾಗಿ ಪ್ರಾಸಸ್ಥಾನಗಳ ಹಾಗೂ ಇತರ ಪದಪುಂಜಗಳ ಪುನರುಕ್ತಿ, ಕೆಲವೊಂದು ಪ್ರಯೋಗ ವೈಶಿಷ್ಟ್ಯಗಳು—ಇವೆಲ್ಲ ನನ್ನಯ ಪಂಪನಿಂದ ಪಡೆದುದನ್ನು ಉಭಯ ಕವಿಗಳಿಂದ ಹೇರಳ ಅವತರಣಿಕೆಗಳನ್ನು ಕೊಟ್ಟು ಪ್ರಬಂಧಕಾರರು ನಿರ್ವಿವಾದವಾಗಿ ತೋರಿಸಿದ್ದಾರೆ. ಹಾಗೆಯೇ ಬಂಧದ ಬಿಗಿ, ಸಮುಚ್ಚಯಗಳ ಬಳಕೆ, ಪಾತ್ರ ಚಿತ್ರಣದ ನಾಟಕೀಯತೆ, ಇವಕ್ಕೆಲ್ಲ ನನ್ನಯ ಪಂಪನಿಗೆ ಋಣಿ. ಆದರೆ ಇಬ್ಬರೂ ಚಂಪೂ ಕೃತಿಗಳನ್ನೆ ರಚಿಸಿದ್ದರೂ ನನ್ನಯನ ವಚನಗಳಲ್ಲಿ ಪಂಪನ ವಚನಗಳ ಲಯಬದ್ಧತೆ ಇಲ್ಲ—ಇತ್ಯಾದಿ ವಿವರಗಳನ್ನು ಪ್ರಬಂಧಕಾರರು ಪ್ರಚಾರವಾಗಿ ತುಂಬಿದ್ದಾರೆ.

ಡಾ. ಸುಬ್ಬರಾವರು ಎತ್ತಿ ಹೇಳಿದ ಒಂದು ಮಹತ್ವದ ಅಂಶ, ಪಂಪನೇ 'ಪದ್ಮ ಕವಿ'ಯೆಂಬ ಹೆಸರಿನಲ್ಲಿ ಜಿನೇಂದ್ರ ಮುನಿಯ ಚರಿತ್ರೆಯನ್ನು "ಜಿನೇಂದ್ರ ಪುರಾಣ"ವೆಂದು ರಚಿಸಿರಬಹುದೆಂಬ ಊಹೆ! ಅದೇ ರೀತಿ "ನನ್ನಯ"ನ ಹೆಸರಿನಲ್ಲಿಯ "ನನಿ" ಇಂದ ಆತ ಕನ್ನಡಿಗನೇ?—ಎಂಬ ಪ್ರಶ್ನೆ ಎತ್ತಿದ್ದಾರೆ.

ಈ ಪ್ರಬಂಧವು ಈ ವಿಷಯದಲ್ಲಿಯ ಒಂದು ಮೌಲಿಕ ಪ್ರಸ್ತಾಪ. ಆದರೆ ಈ ಕುರಿತು ಸಂಕಿರಣದ ವಿದ್ವನ್ಮಂಡಲಿ ಯಾರೂ ಏನೂ ಪ್ರಶ್ನೆಯನ್ನೇ ಕೇಳಿಲ್ಲ! ಇದು ಮಾತ್ರ ಸೋಜಿಗ.

ಡಾ. ಜಿ. ವರದರಾಜರಾವ್ ಅವರು ಧಾರ್ಮಿಕ ಕವಿಯಾಗಿ ಪಂಪನು ಹೇಗೆ ನಿಂತಿದ್ದಾನೆ ಎಂಬುದನ್ನು ವ್ಯಾಖ್ಯಾನಿಸಿದ ಪ್ರಬಂಧದ ಉದ್ದೇಶ "ಪಂಪನು ಜೈನಧರ್ಮದ ತತ್ವಗಳನ್ನು ಸಾರಿಹೇಳುವ ಪ್ರಚಾರಕನಾಗದೆ, ಕಡೆಯವರೆಗೂ ಅವುಗಳನ್ನು ಸಹಜಸುಂದರವಾಗಿ ಇತರ ಮತೀಯರಿಗೂ ಪ್ರಿಯವಾಗುವಂತೆ ತಿಳಿಹೇಳುವ ಕುಶಲ ಕವಿಯಾಗಿರುವದು ಗಮನಾರ್ಹ" ಸಂಗತಿ ಎಂಬುದು. ಅಂದರೆ ಏನೆಂದಂತೆ? ಪಂಪನು ಧಾರ್ಮಿಕ ಕವಿಯೋ ಪ್ರಿಯವಾದಿ ಕುಶಲ ಕವಿಯೊ? ಧರ್ಮಬೋಧನೆಯ ಪ್ರಚಾರಕನ ಅಭಿನಿವೇಶವಿಲ್ಲದೆ ಒಬ್ಬ ಕವಿ ಧಾರ್ಮಿಕ ಕವಿಯಾಗಬಲ್ಲನೇ?

ಪ್ರಬಂಧಕಾರರು ಪಂಪನ ಪಾಂಡಿತ್ಯ, ಪ್ರತಿಭೆ, ಕಾವ್ಯನಿರ್ಮಾಣದ ವೈಖರಿ, ಪೂರ್ವಪುರಾಣವನ್ನು ಸಂಗ್ರಹಿಸಿದ ರೀತಿ, ಅವನ ರಸಿಕತನಕ್ಕೆ ಸಾಕ್ಷಿಯಾಗಿ ಭವಾವಳಿಗಳಲ್ಲಿಯ ಆಯಾ ಆಯಕಟ್ಟಿನ ಪ್ರಸಂಗಗಳು, ಅವುಗಳ ರಸವತ್ತಾದ ಪುನರ್ನಿರ್ಮಾಣ, ಅಲ್ಲಿಯ ಭೂಲೋಕಕ್ಕೆ ಅತೀತವಾದ ವಾತಾವರಣ ಇತ್ಯಾದಿ ಅನೇಕಾನೇಕ ವಿವರಗಳ ಮೇಲೆ ಪ್ರಬಂಧಕಾರರು ಅನೇಕ ಪುಟಗಳನ್ನು ವೆಚ್ಚ ಮಾಡಿದ್ದಾರೆ. ಇದೆಲ್ಲದರಲ್ಲಿ ಪಂಪನು ಧಾರ್ಮಿಕ ಕವಿಯಾಗಿ ಕಾಣುವದಿಲ್ಲ.

"ಜೈನಧರ್ಮದ ಹಲವಾರು ಪ್ರಕ್ರಿಯೆಗಳ ಹಂದರದ ಮೇಲೆ ಪಂಪ ಮಹಾಕವಿಯು ತನ್ನ ಕಾವ್ಯಲತೆಯನ್ನು ಬೆಳೆಸಿ, ಧರ್ಮದ ಸಾರವತ್ತಾದ ಫಲವನ್ನು ಸರ್ವರೂ ಸವಿದು ಚಪ್ಪರಿಸುವಂತೆ ಅವಕಾಶ ಕಲ್ಪಿಸಿದ್ದಾನೆ" ಅಂದಿದ್ದಾರೆ. ಸರಿ. ಆದರೆ ಈ ಪ್ರಕ್ರಿಯೆಗಳ ಹಂದರವನ್ನು ಪ್ರಬಂಧಕಾರರು ಬಿಡಿಸಿ ತೆರೆದು ತೋರಿಸಿಲ್ಲ. ಈ ಕಾವ್ಯಲತೆಯ ಸೊಬಗು ಬಣ್ಣಿಸುವವರಲ್ಲಿಯೆ ಡಾ. ವರದರಾಜ ರಾವ್ ತನ್ಮಯರಾದಂತಿದೆ—ಪಂಪನಂತೆಯೇ ಧರ್ಮವನ್ನು ಕಾವ್ಯಧರ್ಮದಲ್ಲಿ ಅಡಕವಾಗಿ ಕಂಡಂತಿದೆ.

"ಅವನು ಜೈನಧರ್ಮದ ಕತೆಯನ್ನು ಹೇಳತೊಡಗಿದರೂ ಆಯಾ ಸನ್ನಿವೇಶವನ್ನು ಬಿಡಿಬಿಡಿಯಾಗಿ ಬಿಡಿಸಿ ನೋಡಿದಾಗ, ಮಾನವಜೀವನದ ರಹಸ್ಯವನ್ನು ಸಾರಿಹೇಳುವಂತೆ ಭಾಸವಾಗುತ್ತದೆ."

"ಜೈನಧರ್ಮದ ರೀತಿ-ನೀತಿಗಳು ಉದ್ದಕ್ಕೂ ಅಸ್ಥಿಪಂಜರದಂತೆ ಹುದುಗಿಕೊಂಡಿದ್ದರೂ ಇಲ್ಲಿ ಎದ್ದುಕಾಣುವ ಕಾವ್ಯಸೌಷ್ಟವದಿಂದ ಆದಿಪುರಾಣ ಅನ್ಯಮತೀಯರಿಗೂ ಪ್ರಮೋದಪ್ರದವಾಗಿದೆ" ಎಂಬುದು. ಇಲ್ಲಿ "ಹುದುಕಿಕೊಂಡ"ದ್ದು ಎದ್ದುಕಾಣುವಂತಿಲ್ಲ. ಧರ್ಮವನ್ನು ಮರೆಯಿಸುವ ಕಾವ್ಯಸೌಷ್ಟವ ಧಾರ್ಮಿಕ ಕವಿಯಾದ ಪಂಪನಲ್ಲಿ ಗುಣವೋ ದೋಷವೋ ಪಂಪನು ಇಲ್ಲಿ ಜಿನಾಗಮವನ್ನು ಅನ್ಯಮತೀಯರನ್ನು ಮೆಚ್ಚಿಸಲು ಬರೆದನೇ?

ಪಂಪನ ಆದಿಪುರಾಣದ ಸಂದೇಶವೇನೆಂಬುದನ್ನು ಪ್ರಬಂಧಕಾರರು ವಿವರಿಸಿದ್ದಾರೆ. ಅದರಿಂದ ಈತ ಒಬ್ಬ ದಾರ್ಶನಿಕ ಕವಿಯಾಗಿ ತೋರುವನೇ ಹೊರತು "ಧಾರ್ಮಿಕ ಕವಿ"ಯಾಗಿ ಅಲ್ಲ. ಮಹಾಕವಿ ಮಿಲ್ಟನ್ ಒಬ್ಬ ಪ್ಯೂರಿಟನ್‌ಕ್ರೈಸ್ತ ಕವಿಯೆಂದು ಅವನ "ಪ್ಯಾರಡೈಜ ಲಾಸ್ಟ" ಮಹಾಕಾವ್ಯದಿಂದ ಗೊತ್ತಾಗುತ್ತದೆ. ಆದರೆ ಪಂಪನ ಕಾವ್ಯದ ಧಾರ್ಮಿಕತೆ ಈ ಪ್ರಬಂಧದಿಂದ ಮನದಟ್ಟಾಗುವದಿಲ್ಲ.

ಪ್ರಬಂಧದ ಕೊನೆಗೆ ಕೇಳಿದ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆ : "ಜೈನಧರ್ಮ-ತೀರ್ಥಂಕರರ ಚರಿತ್ರೆ ಕಾವ್ಯವಸ್ತುವಾದ ಮಾತ್ರದಿಂದ ಕವಿಯನ್ನು ಧಾರ್ಮಿಕ ಕವಿಯೆಂದು ಕರೆಯಬಹುದೆ? ಇದಕ್ಕೆ ಡಾ. ವರದರಾಜರ ಉತ್ತರವು ಸಮಾಧಾನಕಾರಿಯಾಗಿಲ್ಲ. "ಪುರಾಣದ ಚೌಕಟ್ಟಿನಲ್ಲಿ ಜೀವಂತವಾದ ಸನ್ನಿವೇಶಗಳನ್ನು ಕಾಣಬಲ್ಲ ದಾರ್ಶನಿಕ ಕವಿ ನಮ್ಮ ಪಂಪ" "ಮತಪ್ರಕ್ರಿಯೆಗಳ ಚೌಕಟ್ಟಿನಲ್ಲಿಯೂ ತನ್ನ ವ್ಯಕ್ತಿತ್ವವನ್ನು (ದಾರ್ಶನಿಕ ಕವಿಯೆಂದು) ಕಳೆದುಕೊಳ್ಳದ ದಿಟ್ಟ ನಿಯಮ ಅವನದು" ಅಂದಿದ್ದಾರೆ ಪ್ರಬಂಧಕಾರರು. ಅಂದರೆ ಧಾರ್ಮಿಕ ಕವಿಯಾಗಿ ಪಂಪನೊ, ಅಥವಾ ಅವನನ್ನು ಹಾಗೆ ಚಿತ್ರಿಸಹೋದ ಪ್ರಬಂಧಕಾರರೇ—ಸೋತಂತಿದೆ! ತುಂಬ ವಾಚನೀಯವಾಗಿಯೂ ಈ ಪ್ರಬಂಧದ

ಘೋರಣೆ ತಪ್ಪಿದೆ. ಜೈನಮತದ ಪ್ರಮೇಯಗಳೂ ಜಿನಾಗಮದ ತತ್ವ-ತಂತ್ರಗಳೂ ಪಂಪನ ಕಾವ್ಯದಲ್ಲಿ ಹೇಗೆ ಅನುಸ್ಯೂತವಾಗಿವೆಯೆಂಬುದನ್ನು ಇಲ್ಲಿ ಸರಿಯಾಗಿ ತೋರಿಸಿಯೇ ಇಲ್ಲ. ಪಂಪನ ಅತಿಶಯದ ಸರಣಿ, ರಸಾನುಭವ ಅರ್ಥವ್ಯಕ್ತಿಗಳ ಒಡನಾಟ, ಒಡಗೂಟ ಇವೆಲ್ಲ ಈ ಪ್ರಬಂಧಕ್ಕೆ ಗೌಣ ವಿಷಯ. ಆದರೆ ಡಾ. ವರದರಾಜರ ರಸಿಕತೆ ಇವನ್ನು ಹೆಚ್ಚು ವರ್ಣಿಸಿದೆ. ಅದರೂ "ಅಭಾವ ವೈರಾಗ್ಯವಲ್ಲ, ಭೋಗದ ಅಸಾರತೆಯನ್ನು ತಾನೇ ತಾನಾಗಿ ಅರಿತು ಕಣ್ತೆರೆದ ಸಹಜ ವೈರಾಗ್ಯ"ದ ಚಿತ್ರಣವೇ ಇಲ್ಲಿ ಮುಖ್ಯ ಎಂಬುದೊಂದೇ ಅಂಶ ಈ ಪ್ರಬಂಧದಲ್ಲಿ ಗಮನೀಯ. ಹಾಗೆಯೇ ನೈಜಸ್ವಭಾವ ಮತ್ತು ಧಾರ್ಮಿಕ ಪ್ರಭಾವ ಇವೆರಡನ್ನೂ ಜತೆಜತೆ ನಡೆಯಿಸಿಕೊಂಡು ಹೋಗುವ ಪುರಾಣಕವಿಗಳ ವಿರಳಸಂಖ್ಯೆಗೆ ಪಂಪನು ಸೇರಿದ್ದಾನೆಂದು ಪ್ರಬಂಧಕಾರರು ಒಟ್ಟಾರೆ "ಧಾರ್ಮಿಕ ಕವಿ"ಯೆಂದು ಮಾಡಿದ ಪಂಪನ ಮೌಲ್ಯಮಾಪನ. ಆದರೆ 'ಪೂರ್ವಪುರಾಣ' ಕಾರನಂತೆ ಪಂಪನು ಪುರಾಣಕವಿಯೋ ಪುರಾಣವನ್ನು ಬರೆದ ಮಹಾಕವಿಯೊ? ಧರ್ಮಕ್ಕಿಂತ ಹೆಚ್ಚಾಗಿ ದರ್ಶನಧ್ವನಿಯನ್ನು ವಿಜೃಂಭಿಸಿದ ಪಂಪನನ್ನು ಧಾರ್ಮಿಕ ಕವಿಯೆಂದು ವರ್ಗೀಕರಿಸುವದು ನ್ಯಾಯವೆ? ಈ ಪ್ರಶ್ನೆಗೆ ಪ್ರಬಂಧದಲ್ಲಿ ಪೂರ್ತಿ ನ್ಯಾಯ ದೊರೆತಿಲ್ಲ.

(ಸಶೇಷ)

ಕರೀಂನಗರ ಶಾಸನದಲ್ಲಿ ಪಂಪಭಾರತದ ಪದ್ಯಗಳು

ಪಿ. ವಿ. ಪರಬ್ರಹ್ಮಶಾಸ್ತ್ರಿ
ಎಂ. ಎಂ. ಕಲಬುರ್ಗಿ

ಕೆಲವು ವರ್ಷಗಳ ಹಿಂದೆ ಕುರ್ಕಿಯಾಲ್ ಗ್ರಾಮದ ಗಿರಿಶಾಸನ ಲಭಿಸಿ, ಮಹಾಕವಿ ಪಂಪನಿಗೆ ಸಂಬಂಧಿಸಿದ ಹೊಸಹೊಸ ವಿಷಯಗಳು ಬೆಳಕಿಗೆ ಬಂದವು. ಈಗ ಇತ್ತೀಚೆ ಬೆಳಕಿಗೆಬಂದಿರುವ ಇನ್ನೊಂದು ಶಾಸನ, ಪಂಪ ಭಾರತದ ಕಾಲ ಮೊದಲಾದ ವಿಷಯಗಳ ಬಗ್ಗೆ ಹೆಚ್ಚಿನ ತಿಳಿವಳಿಕೆಯನ್ನು ನೀಡುತ್ತಿದೆ.

೧. **ಶಾಸನ ಲಭಿಸಿದ ಗ್ರಾಮ** : ಆಂಧ್ರಪ್ರದೇಶದ ಜಿಲ್ಲೆಯ ಸ್ಥಳವಾದ ಕರೀಂನಗರ ಪಟ್ಟಣದ ಮ್ಯೂಜಿಯಂ ಉಪವನದಲ್ಲಿ ಈ ಶಾಸನವಿದೆ. ಇದನ್ನು ಯಾರು? ಎಂದು? ಯಾವ ಊರಿನಿಂದ ಇಲ್ಲಿಗೆ ತಂದರು? ಎಂಬ ಪ್ರಶ್ನೆಗಳಿಗೆ ಈಗ ಖಚಿತ ಉತ್ತರಕೊಡುವುದು ಸಾಧ್ಯವಿಲ್ಲ. ಶಾಸನದಲ್ಲಿ ಬರುವ ಭೌಗೋಲಿಕ ಸಂಗತಿಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಈ ಶಾಸನ ಕರೀಂನಗರ ಜಿಲ್ಲೆಯ ಒಂದು ಹಳ್ಳಿಗೆ ಸಂಬಂಧಿಸಿರಬಹುದು. ಬಹುಶಃ ನೂತುಲಪಾಡು ಗ್ರಾಮದ ಬ್ರಾಹ್ಮಣನೊಬ್ಬನಿಗೆ ಅರಿಪನಪಳ್ಳಿ ಗ್ರಾಮದಲ್ಲಿ ಭೂಮಿಯನ್ನು ದಾನವಾಗಿ ಕೊಟ್ಟ ವಿಷಯವನ್ನೊಳಗೊಂಡ ಕಾರಣ, ಇದು ಈ ಎರಡರಲ್ಲಿ ಒಂದು ಗ್ರಾಮಕ್ಕೆ ಸಂಬಂಧಿಸಿರಬಹುದು. ಇವು ಈಗಿನ ಯಾವ ಗ್ರಾಮಗಳೆಂಬುದನ್ನು ಗುರುತಿಸಿದರೆ ಶಾಸನದ ಮೂಲಸ್ಥಳ ಗೊತ್ತಾಗಬಹುದು.

೨. **ಶಾಸನದ ಕಾಲ** : ಈ ಶಾಸನದಲ್ಲಿ "[ಸ]ಕ ವರ್ಷ [೮]೬೯ನೆಯ ಪರಾಭವ ಸಂವತ್ಸರದ ಕಾರ್ತಿಕ ಬಹುಳ ಏ[ಕಾದ]ಸಿ ಸೋಮವಾರ" ಎಂದು ಕಾಲನಿರ್ದೇಶನವಿದೆ. ಇದು ಕ್ರಿ. ಶ. ೯೪೬ ಕ್ಕೆ ಸಮಾನವಾಗಿದೆ.

ಇಮ್ಮಡಿ ಅರಿಕೇಸರಿಯ ಕಾಲದಲ್ಲಿ ಹುಟ್ಟಿದ ತೇದಿಯಿಲ್ಲದ ವೇಮುಲವಾಡ ಶಾಸನ, ಕ್ರಿ. ಶ. ೯೪೦ ರ ಚೆನ್ನೂರ ಶಾಸನಗಳ ಮಗ್ಗುಲಲ್ಲಿಟ್ಟು ನೋಡಿದರೆ, ಈ ಶಾಸನ ಈಗಿನ ಮಟ್ಟಿಗೆ ಇಮ್ಮಡಿ ಅರಿಕೇಸರಿ ಆಳಿಕೆಯ ಉತ್ತರಸೀಮೆಯನ್ನು ಸೂಚಿಸುವುದಾಗಿದೆ.

ಪಂಪನ ಎರಡು ಕೃತಿಗಳಲ್ಲಿ ಆದಿಪುರಾಣ ಮೊದಲು, ವಿಕ್ರಮಾರ್ಜುನ ವಿಜಯ ತರುವಾಯ ಹುಟ್ಟಿವೆ. ಆದಿಪುರಾಣವನ್ನು ಕ್ರಿ.ಶ. ೯೪೧ ರಲ್ಲಿ ರಚಿಸಿರುವ

ನೆಂದು ಹೇಳುವ ಪಂಪ, ವಿಕ್ರಮಾರ್ಜುನವಿಜಯದ ರಚನೆಯ ಕಾಲದ ಬಗ್ಗೆ ಮೌನತಾಳಿದ್ದಾನೆ. ಈ ಶಾಸನದಲ್ಲಿ ವಿಕ್ರಮಾರ್ಜುನವಿಜಯದ ಐದು ಪದ್ಯಗಳು ಬರುವುದರಿಂದ, ಅದು ಶಾಸನಕಾಲವಾದ ೯೪೬ಕ್ಕೆ ಮುಂಚೆ ಹುಟ್ಟಿದೆಯೆಂಬ ಸಂಗತಿ ಮೊದಲಬಾರಿ ನಮ್ಮ ಗಮನಕ್ಕೆ ಬರುತ್ತದೆ.

೩. **ಅರಸು** : ದೇವತಾಸ್ತುತಿ ಮೊದಲಾದವುಗಳು ಇಲ್ಲದೆ "ಸ್ವಸ್ತಿ" ಎಂಬುದರ ತರುವಾಯವೇ ರಾಜವಂಶಾವಳಿಯನ್ನು ಹೇಳುವ ೫ ಕಂದಪದ್ಯಗಳಿಂದ ಪ್ರಾರಂಭವಾಗುತ್ತದೆ, ಈ ಶಾಸನ. ಪಂಪಭಾರತದ ಪ್ರಥಮಾಶ್ವಾಸದ ಪದ್ಯ ೧೫ ರಿಂದ ೫೦ ರ ವ್ಯಾಪ್ತಿಯಿಂದ ಆಯ್ದುಕೊಂಡ ಈ ಪದ್ಯಗಳು ಶಾಸನದಲ್ಲಿ ಹೀಗಿವೆ :

೧. ಶ್ರೀಮಚ್ಚಳುಕ್ಯವಂಸ |
[ವ್ಯೋ]ಮಾಮೃತಕಿರಣನೆನಿಪ ಕಾನ್ತಿಯನೊಳಕೊ |
ಣ್ಡೀ ಮಹಿಯೊಳಾತ್ಮವಂಶ ಸಿ |
ಖಾಮಣಿ [ಜ]ಸಮೆಸೆಯೆ ಜುದ್ಧಮಲ್ಲ ನೆಗಲ್ದಿಂ ||

೨. ಆತ್ಮಭವನಾ ಧರಾಧಿಪ |
ನಾತ್ಮಜನಜನಹುಷ ಪೃಥುಭಗೀರತನಳರಾ |
ಮಾತ್ಮಜ[ರನಿಳೆ]ಸಿ ನೆಗಲ್ದ ಮ |
ಹಾತ್ಮ ನರಸಿ[ಙ್ಗ]ನೞಿವಿ[ನೊಳ್ ಪ]ರಮಾತ್ಮಂ ||

೩. ಆ ಜಾಕಯ್ಯೆಗಮಾ ವಸು |
ಧಾಜಯಾವಲ್ಲಭಂಗಮತಿವಿಶದ ಯಶೋ |
ರಾಜಿತನೆನಿಪರಿಕೇಸರಿ |
ರಾಜತ್ತೇಜೋಗ್ನಿಮಾಗ್ನರಿಪುನೃಪ[ಶ]ಲಭಂ ||

೪. ಮಗನಾ[ಳೆ]ನಾಗಿವಾಗಳೆ |
ನೆಗೞ್ತೆಯೊಳ್ಬೀರದೆಸಕದೊಳ್ನೆಗೞೆ ಮಗಂ |
ಸಮನೆನೆ ಪುಟ್ಟಲೊಡಂ ಕೊ |
ಳ್ಮಗಗೊಣ್ಡುದು ಭುವನಭವನಮರಿಕೇಸರಿಯಾ ||

೫. ಚಾಗದ ಕಂಭ ಚಾಗದ ಕಂಭಮ[ನ್ನಿೞಿಸಿ ಬೀ]
ರದ ಶಾಸನಮನ್ನೆಗೞ್ಚಿ ಕೊ |
ಳ್ವೋಗದ ಮಂಡಲಂಗಳನೆ [ಕೊ]ಣ್ಡು ಜಗತ್ರಿತಯಂಗಳೊಳ್
ಜಸ |
ಕ್ಕಾಗವಾದ ಬದ್ದೆಗನಿನಾ ನರಸಿಂಘನಿನತ್ತನಾಲ್ವರಿಂ |
ಮೇಗೆ ಪೊದಳ್ದ ಚಾಗಮೊಳಮೊನ್ದಿದ ಬೀರದೊಳಂ
ಗುಣಾರ್ಣವಂ ||

ಬೋಧನಚಾಲುಕ್ಯರ ವಂಶಾವಳಿ, ಈ ಪದ್ಯಗಳಿಂದ ಹೀಗೆ ವ್ಯಕ್ತವಾಗುತ್ತದೆ :

ಯುದ್ಧಮಲ್ಲ (III)
|
ನರಸಿಂಹ + ಜಾಕವ್ವೆ
|
ಅರಿಕೇಸರಿ (II)

ಮೊದಲನೆಯ ಯುದ್ಧಮಲ್ಲನನ್ನು ಕುರಿತ ಪಂಪಭಾರತದ ಪದ್ಯ, ಇಲ್ಲಿ ಮೂರನೆಯ ಯುದ್ಧಮಲ್ಲನಿಗೆ ಬಳಕೆಯಾಗಿದೆ. ಆಮೇಲೆ ಅಲ್ಲಿ ನರಸಿಂಹ (೧–೨೧), ಅರಿಕೇಸರಿ (೧–೪೧, ೪೨, ೫೦)ಯರಿಗೆ ಬಳಸಿದ ಪದ್ಯಗಳನ್ನು ಇಲ್ಲಿಯೂ ಅವರಿಗಾಗಿ ಬಳಸಲ್ಪಟ್ಟಿವೆ. ಪ್ರಸ್ತುತ ಶಾಸನ ಸಂಬಂಧಿಸಿದುದು ಈ ಎರಡನೆಯ ಅರಿಕೇಸರಿಗೆ.

೪. **ಶಾಸನದ ವಿಷಯ** : ಉಕ್ತವಾದ ತಿಥಿಯಂದು ಅರಿಕೇಸರಿಯು ನೂತುಲಪಾಡು ಗ್ರಾಮದ ಕೌಶಿಕಗೋತ್ರದ ವಿಷ್ಣುಭಟ್ಟನ ಮಗ ಅಪ್ಪಣಯ್ಯನ ಮಗನಾದ ಧಾರಪಯ್ಯನೆಂಬ ಬ್ರಾಹ್ಮಣನಿಗೆ "ತುಷ್ಟಿದಾನ"ವೆಂದು ಅರಿಪನಪಳ್ಳಿ ಗ್ರಾಮದಲ್ಲಿ ೫೦ ಮತ್ತರು ಭೂಮಿಯನ್ನು ನೀಡಿದುದು ಇದರ ವಿಷಯ. ಈ ಸಂದರ್ಭಕ್ಕೆ ಅನುಗುಣವಾದ ಇನ್ನೂ ಕೆಲವು ದತ್ತಿ ಸಂಗತಿಗಳು ಶಾಸನದ ಕೊನೆಯಲ್ಲಿವೆ.

೫. **ಪದ್ಯಗಳ ಪಾಠಾಂತರ:** ಕವಿರಚಿತ ಕೃತಿ, ಸಾಮಾನ್ಯವಾಗಿ ಪ್ರಾಚೀನವಿದ್ದಷ್ಟು ಶುದ್ಧವಾಗಿರುತ್ತದೆ. ಈಗ ಲಭಿಸಿದ ಪಂಪಭಾರತದ ಎರಡೂವರೆ ಹಸ್ತಪ್ರತಿಗಳು ಅಷ್ಟು ಪ್ರಾಚೀನವಲ್ಲ. ಹೀಗಾಗಿ ಈ ಶಾಸನದಲ್ಲಿದ್ದುದೇ ಪಂಪಭಾರತದ ಐದು ಪದ್ಯಗಳ ಪ್ರಾಚೀನತಮಪಾಠವಾಗಿದೆ. ಪಂಪ ಜೀವಿಸಿರುವಾಗಲೇ ಏಕೆ, ಪಂಪಭಾರತ ರಚನೆಗೊಂಡ ಹೊಸದರಲ್ಲಿಯೇ ಶಾಸನಶಿಲೆಯೇರಿದ ಈ ಪದ್ಯಗಳು "ಸದ್ಯಪ್ರತಿ"ಯ ಪಾಠವೆನಿಸಿಕೊಳ್ಳುತ್ತವೆ. ಹೀಗಾಗಿ ಇವು ಬಹುಮಟ್ಟಿಗೆ ಶುದ್ಧಪಾಠವೆನ್ನಬಹುದಾದರೂ ಲಿಪಿಕಾರ, ರೂವಾರಿಗಳಿಂದ ಕೆಲವು ಪಾಠಗಳು ಕೆಟ್ಟಂತಿವೆ. ಇಷ್ಟು ಹಿನ್ನೆಲೆಯೊಂದಿಗೆ ಇಲ್ಲಿಯ ಪಾಠಾಂತರಗಳನ್ನು ನೋಡಬಹುದು :

	ಕಾವ್ಯ	**ಶಾಸನ**
೧.	ವಂಶವ್ಯೋಮ	ವಂಸವ್ಯೋಮ
	ಮಹಿಯೊಳಾತ್ಮವಂಶ	ಮಹಿಯೊಳಾತ್ಮವಂಸ
	ಶಿಖಾಮಣಿ	ಸಿಖಾಮಣಿ

	ಯುದ್ಧಮಲ್ಲಂ ಜುದ್ಧಮಲ್ಲ (ಘ)	ಜುದ್ಧಮಲ್ಲ
೨.	ನರಾಧಿಪನಾತ್ಮಜನಾನಹುಷ ನರಾಧಿಪನಾತ್ಮಭವಂ ನಹುಷ(ಘ)	ಧರಾಧಿಪನಾತ್ಮಜನಜನಹುಷ
	ನಳಮಹಾತ್ಮರನಿಳಿಸಿ	ನಳರಾಮಾತ್ಮಜರನಿಳಿಸಿ
	ಮಹಾತ್ಮಂ	ಮಹಾತ್ಮ
	ನರಸಿಂಹನಱಿವಿನೊಳ್ ಪರಮಾತ್ಮಂ ನರಸಿಂಹನಱಿವಿನೊಳನು ಪಮಾತ್ಮಂ (ಕ, ಖ)	ನರಸಿ[ಙ್ಗ]ನಱಿವಿ[ನೊಳ್ ಪ]ರಮಾತ್ಮಂ
೩.	ಆ ಜಾಕವ್ವೆಗಮಾ	ಆ ಜಾಕಯ್ಯೆಗಮಾ
	ವಸುಧಾಜಯ ಸದ್ವಲ್ಲಭಂ ವಸುಧಾಜಿಯ ಸದ್ವಲ್ಲಭಂ (ಕ, ಖ)	ವಸುಧಾಜಯಾ ವಲ್ಲಭಂ
	ವಿಶದ ಯಶೋರಾಜಿತ ವಿಶದ ಯಶೋಭ್ರಾಜಿತ (ಕ, ಖ)	ವಿಶದಿ ಯಶೋರಾಜಿತ
	ರಾಜಂ ತೇಜೋಗ್ನಿಮಗ್ನರಿಪು ನೃಪಶಲಭಂ ರಾಜಂ ತೇಜೋಗ್ನಿಮಗ್ನರಿಪು ನೃಪಶರಭಂ (ಖ, ಘ)	ರಾಜತ್ತೇಜೋಗಿಮಾಗ್ನರಿಪು ನೃಪ[ಶ]ಲಭಂ
೪.	ಮಗನಾದ	ಮಗನಾ[ಳೆ]
	ಜಾಗದ ನೆಗೞ್ತೆಯೊಳ್	ವಾಗಳೆನೆಗೞ್ತೆಯುಳ್
	ಬೀರದೇೞ್ಗೆಯೊಳ್	ಬೀರದೆಸಕದೊಳ್
	ಮಗನೆನೆ	ಸಮನೆನೆ
	ಕೋೞ್ಮೊಗದೊಂಡುಮ ಕೇೞ್ಮೊಗಗೊಂಡುಮ (ಕ, ಖ)	ಕೊಳ್ಮೊಗಗೊಣ್ಡುಮ
	ಭುವನಭವನಮರಿಕೇಸರಿಯೊಳ್	ಭುವನಭವನಮರಿಕೇಸರಿಯಾ
೫.	ಜಾಗದ ಕಂಬಮಂ ನಿಱಿಸಿ	ಜಾಗದ ಕಂಭ ಜಾಗದ ಕಂಭಮಂ ನಿಱಿಸಿ
	ಜಸಕ್ಕಾಗರವಾದ	ಜಸಕ್ಕಾಗಮಾದ

ನರಸಿಂಹನಿನತ್ತು ನಾಲ್ವರಲ್ ಮೇಗು ನರಸಿಂಹನಿನಂತೆ ನಾಲ್ವರೊಳ್ ಮೇಗು(ಕ, ಖ) ನರಸಿಂಹನಿನತ್ತು ನಾಲ್ವೆರಲ್ ಮೇಗೆ (ಘ)	ನರಸಿಂಘನಿನತ್ತು ನಾಲ್ವರಿಂ ಮೇಗೆ
ಚಾಗದೊಳವೊಂದಿದ	ಚಾಗದೊಳಮುಂದಿದ

ಈ ಐದು ಪದ್ಯಗಳ ತರುವಾಯದ ಪ್ರಶಸ್ತಿಗದ್ಯದಲ್ಲಿ ಬರುವ 'ಪ್ರತ್ಯಕ್ಷ [ಪಾರ್ಥ್ವಮೆ]' ಎಂಬುದು ಪರಭಣಿ ತಾಮ್ರಶಾಸನದಲ್ಲಿ ಮುಮ್ಮಡಿ ಅರಿಕೇಸರಿಗೆ ಬಳಸಿದ "ಪ್ರತ್ಯಕ್ಷ ಪಾರ್ಥ್ವಳ" ಎಂಬ ಬಿರುದೇ ಆಗಿದೆ. ಪಂಪಭಾರತದಲ್ಲಿ ಈ ಇಮ್ಮಡಿ ಅರಿಕೇಸರಿಗಿರುವ "ಪ್ರತ್ಯಕ್ಷ ಜೀಮೂತವಾಹನಂ" ಎಂಬ ಬಿರುದನ್ನು ಇಲ್ಲಿ ಗಮನಿಸಬೇಕು.

ಹೀಗೆ ಹಸ್ತಪ್ರತಿಗಳಿಗೂ ಶಾಸನಕ್ಕೂ ಪಾಠವ್ಯತ್ಯಾಸ ಕಂಡುಬರುತ್ತದೆ. ಶಾಸನದಲ್ಲಿ ಸಪ್ತಮಿಯ 'ಉಳ್' ಎಂಬ ಪ್ರಾಚೀನ ಪ್ರತ್ಯಯವಿದೆಯೆಂಬುದನ್ನು ಬಿಟ್ಟರೆ ಇಲ್ಲಿಯ ಪಾಠಗಳು ಅಷ್ಟೇನು ಸಾಧುವಾಗಿಲ್ಲ. ಲಿಪಿಕಾರ ಇಲ್ಲವೆ ರೂವಾರಿಗಳು ಸಾಧಾರಣಮಟ್ಟದವರಿದ್ದುದೇ ಇವಕ್ಕೆ ಕಾರಣವಿರಬಹುದು.

ಉತ್ತರಾರ್ಧ ಶಾಸನದ ಗದ್ಯವನ್ನು ನೋಡಿದರೆ ಶಾಸನಕ್ಕೆ ಪಾಠವನ್ನೊದಗಿಸಿದವನು ಪಂಪನಲ್ಲವೆಂದೂ ಆತನ ಕೃತಿಯಿಂದ ಯಾವನೋ ಒಬ್ಬ ಶಾಸನಕವಿ ೫ ಪದ್ಯಗಳನ್ನು ಮಾತ್ರ ಸ್ವೀಕರಿಸಿರುವನೆಂದೂ ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಈ ಶಾಸನದಿಂದ ತಿಳಿದುಬರುವ ಮಹತ್ವದ ವಿಷಯಗಳಿವು:

ಅ. ವಿಕ್ರಮಾರ್ಜುನವಿಜಯದ ೫ ಪದ್ಯಗಳು ಇದರಲ್ಲಿವೆ.

ಆ. ವಿಕ್ರಮಾರ್ಜುನವಿಜಯ ಕ್ರಿ. ಶ. ೯೪೬ ಕ್ಕೆ ಮೊದಲು ಹುಟ್ಟಿದೆ.

ಇ. ಪಂಪ ಬದುಕಿದ್ದಾಗಲೇ ಏಕೆ, ವಿಕ್ರಮಾರ್ಜುನವಿಜಯ ಹುಟ್ಟಿದ ಹೊಸದರಲ್ಲಿಯೇ ಆ ಕಾವ್ಯಕ್ಕೆ ಪಾಠಾಂತರಗಳಾಗಿದ್ದವು.

ಈ. ಈ ಪದ್ಯಗಳು ವಿಕ್ರಮಾರ್ಜುನವಿಜಯದ ಪ್ರಾಚೀನತಮ ಪಾಠ.

ಉ. ಈ ಶಾಸನ ಅರಿಕೇಸರಿಯ ಆಳಿಕೆಯ ಉತ್ತರಸೀಮೆಯನ್ನು ಈಗಿನ ಮಟ್ಟಿಗೆ ಕ್ರಿ. ಶ. ೯೪೬ ರಷ್ಟು ಮುಂದೆ ಖಚಿತಪಡಿಸುತ್ತದೆ.

ಊ. ವಿಕ್ರಮಾರ್ಜುನವಿಜಯದ ಪದ್ಯಗಳಿಗೆ ಪಂಪನು ಜೀವಿಸಿರುವಾಗಲೇ ಶಾಸನಮರ್ಯಾದೆ ಲಭಿಸಿದೆ.

ಅನುಬಂಧ

First Side

1 ಸ್ವಸ್ತಿ ಶ್ರೀವಂಚ್ಚಳು-
2 ಕ್ಯವಂಸ[ವ್ಯೋ]ಮಾ-
3 ಮೃತಕಿರಣನೆನಿಪ ಕಾ-
4 ನ್ತಿಯನೊಳಕೊಣ್ಡೀ ಮಹಿಯೊ-
5 ಳಾತ್ಮವಂಶ ಸಿಖಾಮಣಿ [ಜ]-
6 ಸಮೆಸೆಯೆ ಜುದ್ಧಮಲ್ಲ ನೆಗ-
7 ಳ್ದಂ*[1]* ಆತ್ಮಭವನಾಧರಾಧಿ-
8 ಪನಾತ್ಮಜನಜನಹುಷ ಪೃಥುಭ-
9 ಗೀರತನಳರಾಮಾತ್ಮಜ[ರನಿಳ]-
10 ಸಿ ನೆಗಳ್ದಿ ಮಹಾತ್ಮ ನರಸಿ[ಙ್ಗ]-
11 ನಱುಪಿ[ನೊಳ್ ಪ]ರಮಾತ್ಮಂ [2]*
12 ಆ ಜಾಕಯ್ಯೆಗಮಾವಸುಧಾ-
13 ಜಯಾವಲ್ಲಭಂಗಮತಿವಿಶ-
14 ದಿ(ದ)ಯಶೋರಾಜಿತನೆನಿಪರಿಕೇ-
15 ಸರಿ ರಾಜತ್ತೇಜೋಗ್ನಿಮಾ(ಮ)ಗ್ನರಿ-
16 ಪುನೃಪ[ಶ]ಲಭಂ+[3]* ಮಗನಾ[ಳೆ]
17 ನಾಗಿ ವಾಗಳೆ ನೆಗಱ್ತಿಯೊಳ್ಬೀರ-
18 ದೆಸಕದೊಳ್ನೆಗಱ್ ಮಗಂ ಸಮ-
19 ನೆನೆ ಪುಟ್ಟಲೊಡಂ ಕೊಳ್ಮಗಗೊಣ್ಡು-
20 ದು ಭುವನಭವನಮರಿಕೇಸರಿ-
21 ಯಾ||[4]* ಚಾಗದಕಂಭ

Second Side

22 ಚಾಗದ ಕಂಭ[1]ಮ[ನ್ನಿಱಿಸಿ ಬೀ]-
23 ರದ ಶಾಸನಮುನ್ನೆಗಱ್ಚಿ ಕೊ-
24 ಳ್ಪೋಗದ ಮಣ್ಡಲಂಗಳನೆ [ಕೊ]-
52 ಣ್ಡು ಜಗತ್ರಿತಯಂಗಳೊಳ್ ಜ-

---

1 Redundant.

26 ಶಕ್ಕಾಗ[ರ]*ಮಾಡ ಬದ್ದೆಗನಿನಾ ನ-
27 ರಸಿಂಘನಿನತ್ತನಾಲ್ವರಿಂ ಮೇ-
28 ಗೆ ಪೊದಳ್ದ ಚಾಗದೊಳಮೊನ್ದಿ-
29 ದ ಬೀರದೊಳಂ ಗುಣಾರ್ಣ್ನವಂ[5]*
30 ಸ್ವಸ್ತಿ ಸಮಧಿಗತ ಪಞ್ಚಮ-
31 ಹಾಶಬ್ದ ಮಹಾಸಮನ್ತಾಧಿ-
32 ಪತಿ ಸಮಸ್ತಭುವನ ಸಂಸ್ತೂ-
33 ಯಮಾನ ಚಾಳುಕ್ಯವಂಶೋದ್ಭ-
34 ವಂ ಪಾಂಬರಾಂಕುಶನಮ್ಮನಗ-
35 ನ್ಧವಾರಣಂ ಗನ್ದೇಭವಿದ್ಯಾಧ-
36 ರನುದಾತ್ತನಾರಾಯಣಂ ಪ್ರತ್ಯ-
37 ಕ್ಷ[ವಾದ್ದಮೆ]ಯಾರೂಢ ಸರ್ವ್ವ-
38 ಜ್ಞ ಗುಣನಿಧಿ ಗುಣಾರ್ಣ್ನವ ಪ್ರಿ-
39 ಯಗಳ್ಳಂ ತ್ರಿಭುವನಮಲ್ಲಂ
40 ಸಾಮನ್ತಚೂಡಾಮಣಿ ನೋ[ಡಿ]-
41 ತ್ತೆ ಗೆಲ್ವಂ ಶ್ರೀಮದರಿಕೇಸ-
42 ರಿಯರಸರಯ್ಯಂಗೊಡೆಯ-
43 ನೆತ್ತಿಸಿ [ಇಪ್ಪತ್ತಿಚ್ಚಾ- -]
44 ಮುಂ ದುಷ್ಟನಿಗ್ರಹ ವಿ[-]
45 ಷ್ಟ ಪ್ರತಿಪಾಲನದಿಂ [ರಾ]ಜ್ಯ- - -

Third Side

46 [ಸ]ಕ ವರ್ಷ[೮]೬೯ನೆ-
47 ಯ ಪರಾಭವ ಸಂ-
48 ವತ್ಸರದ ಕಾರ್ತ್ತಿಕ ಬ-
49 ಹುಳ ಏ[ಕಾದ]ಸಿ ಸೋಮ-
50 ವಾರದನ್ದು ಶ್ರೀಮದರಿಕೇಸ-
51 ರಿಯರಸ[ಜ್ಚ್ಯ]ದನ ದಣ್ಡಿ[ಗೊ]-
52 [ಪಿಣ]ತ್ತುವ[ಳ್ಳೆ]ಅ ತಟಿಯ ಬೀ-
53 [ಡಿನೊಳ್]ಕೆವಿಶಿಕ ಗೋತ್ರ ನೂ-
54 ತುಲಪಾಱ ಬೋವಂ ವಿ[ಷ್ಣು]ಭ-
55 ಟ್ಟರ ಮಗಂ ಅ[ಪ್ಪ]ಣಯ್ಯ ಅ-

56 ಪ್ಪಣಯ್ಯನ ಮಗಂ ಧಾರಪ-
57 ಯ್ಯಂಗೆ ತು[ಷ್ಟಿ]ದಾನಂ ಅರಿಪ-
58 [ನ]ಪಳ್ಳಿಯ ಬಡಗಣದೆಸೆಯ
59 [ಗಾಮುಣನೆಯ್ದೊ]ೞೆಂಗೆನಿೞನಾ-
60 ರೆಯೆಲಯ್ವತ್ತುಮತ್ತರ್ನ್ನೆಲನನ-
61 ರಿಕೇಸರಿಯುರಸರ್ದ್ದಯೆಂಗೆಯ್ದು-
62 ರುದಕ್ಕೆ ಸಿದ್ಧಾಯಂಮುದ್ಧರಣಗಾ-
63 ಮುಣ್ಡಗೆ ಇಮ್ಮತ್ತರ್ನ್ನೆಲಕ್ಕೆ ನೀ-
64 [ರುಮಂ ಕುೞ]ವರು ಈ ಸ್ಥಿತಿ-
65 ಯಂ ತಪ್ಪದ ತು ನಗರೂರ
66 ಅಯ್ಯಪಗಾಮುಣ್ಡನು ಶಾ[ವು]-
67 [ಲೂ]ರದೆನ್ತಿಯನು ಮೂಲ-
68 [ಗೂ]ರ ಪೋಮಯಗಾಮುಣ್ಡೆ-
69 [- - - - -]ದ ಮಹಾ[ಜ]-
70 ನ ದಿಣ್ಡಮಯ್ಯನು ಕನ್ದರ್ಪ್ಪಯ-

Fourth Side

71 [ತಾಱೊ]ರಮಹಾಜಂಕಸ-
72 [ನ]ಯ್ಯನುಂ ಅಪ್ಪಣನು ಚಣ್ಡಿ-
73 ಯ ರಾಜನುಂ ನಾಜರಾಜನು
74 [ರೇ]ಕುರಿಕಿಯ ಮಲ್ಲಪರಾಜನು
75 ಸಾಕ್ಷಿಯಾಗೆ ಗಾಮುಣ್ಡನೆ ಚ[ಟ್ಟ]
76 ಯ್ಯನುಂ ತಮ್ಮಂಮಕಯ್ಯ
77 ಮುನಿಱ್ದಿಕ್ಕಿಸಿದ ಕಮ್ಭ ಚನು-
78 [ಲೂ]ರ ಗಾಮುಣ್ಡಂ ಚಿಂಗಪುಲಿಗೆ-
79 [ಒನ್ದು]ಮತ್ತರುವಿಱುಮಡಿಯುಃ-
80 ಮಾಯ್ಯಾರಭೋಗಪತಿ ಗಾಮುಣ್ಡ-
81 ಯ[ಗಮೆ]ರಡುಪಲದೊೞಂ ಕೆ-
82 ಱಿಯ ಮುನ್ದ[ಣ್ಣೆ] ಗುಡುವರ್ನ್ನೆಲ್ಲು
83 ಖಣ್ಡುಗ ಪನ್ನೆರಡು [ಈ] ಸ್ಥಿತಿಯಾ-
84 ಗ್ಗೆ ತಪ್ಪಸಲ್ಲಕುೞವತ್ತೞೆ-
85 ಯ ಪೆರ್ಗ್ಗಡೆ ಜುಟ್ಟಯ್ಯನ ಸಂ-

86 ಧಿಷ್ಠಿತರ್ಸೇನಬೊಜಯ ನಾ-
87 ಪದಿಯುತ್ತಂ ಶ್ರೀಮುಮ್ಮ ಬರೆ-
88 ಮೊ|| ಸ್ವದತ್ತಂ ಪರದತ್ತಂ ವ
89 ಯೋ ಹರೇತಿ ವಸುನ್ದರಿ ಪ-
90 ಷ್ಟಿವರಿಷ ಸಹಸ್ರಾಣಿ ವಿ-
91 ಷ್ಟಯಾಂ ಜಾಯತೇ ಕ್ರಿಮಿ|| ಇ-
92 ದು ತಪ್ಪಿದವ ಪ್ರಯಾಗೆಯುಂ
93 ಬಾರಣಾಸಿಯುಂ ಮಡಿದ ಪಾ-
94 ಪಮುಕಮುರಸರಜೆಯು-
95 ಮಿಕ್ಕೆ||

ಅನ್ಯಭಾಷಾಬೋಧನೆ

ವಿಲ್ಯಂ ಮಾಡ್ತ

೭ ವಸ್ತುನಿಷ್ಠ ಪರೀಕ್ಷೆ

ವಿದ್ಯಾರಂಗದಲ್ಲಿ ಪರೀಕ್ಷೆ ಅನಿವಾರ್ಯ. ವಿದ್ಯಾರ್ಥಿಯ ವಿದ್ಯಾಸಿದ್ಧಿ, ವಿದ್ಯಾಭಿವೃದ್ಧಿ, ವಿದ್ಯಾಶಕ್ತಿ, ವಿದ್ಯಾಮಟ್ಟ, ವಿದ್ಯಾಯೋಗ್ಯತೆಗಳನ್ನು ತಿಳಿದುಕೊಳ್ಳಲು ಅಂತೆಯೇ ಅವುಗಳಿಗೆ ತಕ್ಕುದಾದ ಬೋಧನಾರೀತಿಗಳನ್ನು ಅಳವಡಿಸಿಕೊಳ್ಳಲು ವಿದ್ಯಾರ್ಥಿಯ ಪರೀಕ್ಷೆ ಬೋಧಕನಿಗೆ ಅಗತ್ಯವಾಗಿರುವ ಒಂದು ಸಾಧನೆಯೆಂದರೆ ತಪ್ಪಾಗಲಾರದು. ಕಲಿಸಿದ ವಿಷಯಗಳನ್ನು ಎಷ್ಟರಮಟ್ಟಿಗೆ ವಿದ್ಯಾರ್ಥಿ ಅರಗಿಸಿಕೊಂಡು ಕರಗತಗೊಳಿಸಿದ್ದಾನೆ ಎಂಬುದನ್ನು ತಿಳಿದುಕೊಳ್ಳುವುದೇ ಪರೀಕ್ಷೆಯ ಉದ್ದೇಶ.

ಪರೀಕ್ಷೆಯಲ್ಲಿ ಮುಖ್ಯವಾಗಿ ಎರಡು ವಿಧ: ೧. ಸಾಂಪ್ರದಾಯಿಕ ೨. ವಸ್ತುನಿಷ್ಠ.

ಅನ್ಯಭಾಷಾ ಅಧ್ಯಯನದ ಬಗ್ಗೆ ಪರೀಕ್ಷೆ ನಡೆಸುವಲ್ಲಿ ಸಾಂಪ್ರದಾಯಿಕ ಮಾದರಿಯ ಪರೀಕ್ಷೆ ವಿದ್ಯಾರ್ಥಿಯ ಭಾಷಾರಚನೆಗಳಿಗಿಂತ ಸಾಹಿತ್ಯದ ಕಡೆಗೆ ತನ್ನ ಒಲವನ್ನು ತೋರಿಸುತ್ತದೆ. ಪರೀಕ್ಷಕನು ತನ್ನ ಮನೋಧರ್ಮ, ಜಾಣತನ, ಶೈಲಿ, ರೀತಿಗಳಿಗೆ ಅನುಗುಣವಾಗಿ ಪ್ರಶ್ನಪತ್ರಗಳನ್ನು ಸಿದ್ಧಗೊಳಿಸಲು ಅಲ್ಲಿ ಧಾರಾಳ ಅವಕಾಶವಿದೆ. ಬರೆದ ಉತ್ತರಗಳನ್ನು ತಿದ್ದುವ ಕ್ರಮದಲ್ಲೂ ವಸ್ತುಗತ ದೃಷ್ಟಿಕೋನಕ್ಕಿಂತ ವ್ಯಕ್ತಿಗತ ದೃಷ್ಟಿಯ ಪ್ರಭಾವ ಬಹಳ ಕಂಡು ಬರುತ್ತದೆ. ಭಾಷಾರಚನೆ, ಕ್ರಮ, ವಿನ್ಯಾಸಗಳ ಬಗ್ಗೆ ವಿದ್ಯಾರ್ಥಿಗಿರುವ ಜ್ಞಾನವನ್ನು ಪರೀಕ್ಷಿಸುವ ಬದಲು ಎಷ್ಟೋ ಸಲ ಭಾಷಾರಚನೆಗೆ ಸಂಬಂಧಪಡದ ಹಲವಾರು ಪ್ರಶ್ನೆಗಳನ್ನು ಕೇಳಲು ಸಾಧ್ಯವಿದೆ.

ಕಾರಣ, ಇಂತಹ ಪರೀಕ್ಷೆ ಎಷ್ಟೋ ಸಲ ವಿಸ್ಮಯಕಾರಕ, ಅವಾಸ್ತವಿಕ, ಅಸ್ತವ್ಯಸ್ತ, ವ್ಯಕ್ತಿಗತ ಹಾಗೂ ಅರಚನಾತ್ಮಕವಾಗಿ ಕಂಡುಬರುವುದರಿಂದ ಈ ಸಾಂಪ್ರದಾಯಿಕ ಪರೀಕ್ಷೆ ಒಟ್ಟಿನಲ್ಲಿ ಬಹುಮಟ್ಟಿಗೆ ಅಯೋಗ್ಯವೆಂದೇ ಹೇಳಬೇಕಾಗುತ್ತದೆ.

ಒಂದು ನಿರ್ದಿಷ್ಟ ಮಾದರಿಯನ್ನು ಆರಿಸಿ ಅದರಂತೆ ನಡೆಯಿಸುವ ಪರೀಕ್ಷೆಯೇ ವಸ್ತುನಿಷ್ಠ ಪರೀಕ್ಷೆ. ಪರೀಕ್ಷಾಮಾದರಿಯನ್ನು ಆರಿಸಿಕೊಳ್ಳುವಲ್ಲಿ

ಭಾಷೆ, ಸಾಹಿತ್ಯ, ಸಂಭಾಷಣೆ, ಶೈಲಿ-ರೀತಿ ಇವುಗಳ ಬಗ್ಗೆ ಅವುಗಳೊಳಗಿನ ಪರಸ್ಪರ ಸಂಬಂಧದ ಬಗ್ಗೆ ಖಚಿತವಾದ ಅಭಿಪ್ರಾಯ ಪಡೆದುಕೊಳ್ಳಬೇಕಾಗುತ್ತವೆ. ಪರೀಕ್ಷಾಮಾದರಿ ಭಾಷಾರಚನೆಗಳನ್ನೂ, ವಿವಿಧ ಭಾಷಾನೈಪುಣ್ಯಗಳನ್ನೂ ಒಳಗೊಳ್ಳಬೇಕು. ವಸ್ತುನಿಷ್ಠ ತಿದ್ದುವಿಕೆಗೆ ಅನುಕೂಲವಾಗುವಂತೆ ತಕ್ಕುದಾದ ಉತ್ತರಗಳ ಪಟ್ಟಿಯೊಂದನ್ನು ತಿದ್ದುವವರು ಇಟ್ಟುಕೊಳ್ಳಬೇಕು. ತಕ್ಕುದಾದ ಉತ್ತರಗಳಿಗೆ ಮಾತ್ರ ವಸ್ತುನಿಷ್ಠವಾಗಿ ಗುಣಗಳನ್ನು ಕೊಟ್ಟು ಅಪ್ರಸ್ತುತ, ಅಸಂಬದ್ಧ, ಅನುಚಿತ ಉತ್ತರಗಳಿಗೆ ಗುಣಗಳನ್ನು ಕಳೆಯಬೇಕು.

ಸರಿ ✓ ಅಥವಾ ತಪ್ಪು × ಎಂಬ ಮಾಪಕವನ್ನು ಉಪಯೋಗಿಸಲು ಸಾಧ್ಯವಾಗುವಂತೆ ಉತ್ತರಗಳನ್ನು ಹೊರಡಿಸುವ ಪ್ರಶ್ನೆಗಳಿಗೆ ವಸ್ತುನಿಷ್ಠಾ ಪರೀಕ್ಷೆಯಲ್ಲಿ ಮಹತ್ವದ ಸ್ಥಾನವಿದೆ. ಗುಣಗಳನ್ನೀಯುವಲ್ಲಿ ವಸ್ತುನಿಷ್ಠವಾಗಲು ಇಂಥ ಪ್ರಶ್ನೆಗಳು ಬಹಳ ಸಹಾಯಕಾರಿ. ಐದರಲ್ಲಿ ಐದು ಗುಣಗಳನ್ನು ಪಡೆಯುವ ಅರ್ಹತೆಯುಳ್ಳ ಉತ್ತರಕ್ಕೆ ಐದು ಗುಣಗಳನ್ನು ಕೊಡಲೇಬೇಕು. ಈ ಸ್ಥಿತಿಯುಂಟಾಗಬೇಕಾದರೆ ಕೇಳಿದ ಪ್ರಶ್ನೆ, ಬರೆದ ಉತ್ತರ ಎರಡೂ ವಸ್ತುನಿಷ್ಠವಾಗಿರಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕಾರಣ ಪ್ರಶ್ನಪತ್ರವನ್ನು ಸಿದ್ಧಪಡಿಸುವುದರಲ್ಲಿಯೇ ವಸ್ತುನಿಷ್ಠಾ ಪರೀಕ್ಷೆಯ ಯಶಸ್ಸು ಬಹುಮಟ್ಟಿಗೆ ಅವಲಂಬಿಸಿಕೊಂಡಿದೆ.

ಕೆಳಗಿನ ಕೆಲವು ಮಾದರಿಗಳನ್ನು ಗಮನಿಸಬಹುದು:

ಅ) **ವ್ಯಾಕರಣಜ್ಞಾನಕ್ಕೆ**

ಆವರಣದೊಳಗಿನ ತಕ್ಕುದಾದ ಪದವನ್ನು ಉಪಯೋಗಿಸಿ ಕೆಳಗಿನ ವಾಕ್ಯಗಳನ್ನು ಪೂರ್ತಿಗೊಳಿಸಿರಿ. (೧೦)

೧. ನಾಳೆ ನಾನು......(ಬಂದನು, ಬಂದೆನು, ಬರುವಳು, ಬರುವೆನು.)

೨. ಈ ದಿನ ನಾನು......ಜೊತೆಯಲ್ಲಿ ಸಿನೇಮಾಕ್ಕೆ ಹೋಗುತ್ತೇನೆ. (ನಿಮ್ಮ, ನಿಮ್ಮಿಂದ, ಅವರಿಗೆ).

೩. ನಾಯಿ ಮತ್ತು ಬೆಕ್ಕು ಓಡಿ......(ಬಂದರು, ಬಂದನು, ಬಂದಳು, ಬಂದವು).

೪. ನನ್ನ ತಂಗಿ ಚೆನ್ನಾಗಿ...... (ಹಾಡುತ್ತಾನೆ, ಹಾಡುತ್ತಾರೆ, ಹಾಡುತ್ತಾಳೆ).

೫. ರಾತ್ರಿ ನಾವೆಲ್ಲರೂ......(ಮಲಗುತ್ತಾರೆ, ಮಲಗುತ್ತೇನೆ, ಮಲಗುತ್ತೇವೆ).

ಆ) ಶಬ್ದಜ್ಞಾನಕ್ಕೆ

i) **ಉಡಿಗೆ**ಯನ್ನು ಸೂಚಿಸುವ ಪದದ ಕೆಳಗೆ ಗೆರೆಯನ್ನು ಎಳೆಯಿರಿ. (೬)

೧. ಗ್ಲಾಸು, ಮೇಜು, ಧೋತಿ, ಕುರ್ಚಿ.

೨. ರವಕೆ, ಮೂಗುತಿ, ಬಳೆ, ಮೂಗು.

೩. ನಸ್ಯ, ಚುಟ್ಟಾ, ಟೊಪ್ಪಿ, ಉಂಗುರ.

ii) **ತೊಡಿಗೆ**ಯನ್ನು ಸೂಚಿಸುವ ಪದದ ಮುಂದೆ ಗುರುತನ್ನು ಸೂಚಿಸಿರಿ. (೪)

೧. ಉಂಗುರ
೨. ವೀಳ್ಯ
೩. ಕೂದಲು
೪. ಮೀಸೆ
೫. ನೇಣು
೬. ಗೋಣಿ
೭. ಲಂಗ
೮. ಸೀರೆ
೯. ರೊಟ್ಟಿ
೧೦. ಇಡ್ಲಿ
೧೧. ಚೈನು
೧೨. ಬಟ್ಟಲು

ಇ) ಶಬ್ದಾರ್ಥಸಂಪತ್ತಿಗೆ

ಇಂಗ್ಲೀಷಿನಲ್ಲಿ ಕೆಳಗಿನ ಪದಗಳಿಗೆ ಅರ್ಥ ಕೊಡಿರಿ. (೫)

೧. ಬಾಯಿ, ೨. ಕಣ್ಣು, ೩. ಮೂಗು, ೪. ನಾಲಗೆ, ೫. ಹೊಟ್ಟೆ, ೬. ಮನೆ, ೭. ಬಾಗಿಲು, ೮. ಕಿಟಕಿ, ೯. ದನ, ೧೦. ಸಂತೆ.

ಈ) ಭಾಷಾನೈಪುಣ್ಯಗಳಿಗೆ

೧. ಕೆಳಗಿನ ವಾಕ್ಯಗಳನ್ನು ಪ್ರಶ್ನೆಗಳನ್ನಾಗಿ ರೂಪಾಂತರಿಸಿರಿ. (೩)

ಅ) ನಿಮಗೆ ಪುಸ್ತಕ ಬೇಕು

ಆ) ನನ್ನ ಹೆಸರು ಜಯ

ಇ) ನನ್ನ ಊರು ಕಡೂರು

೨. ಕೆಳಗಿನ ವಾಕ್ಯಗಳನ್ನು ನಿಷೇಧ ವಾಕ್ಯಗಳನ್ನಾಗಿ ಬದಲಾಯಿಸಿರಿ. (೨)

ಅ) ನನಗೆ ರೊಟ್ಟಿ ಬೇಕು

ಆ) ಹಾಲಿನಲ್ಲಿ ಸಕ್ಕರೆ ಇದೆ.

ಇ) ಇದು ಮಂಗಳೂರಿಗೆ ಹೋಗುವ ಬಸ್ಸು

ಈ) ನಾವು ಬಹಳ ಸಿಹಿ ತಿನ್ನಬೇಕು

೮. ಭಾಷಾ ಬೋಧನಾ ಸಲಕರಣೆಗಳು

ಭಾಷಾ ಅಧ್ಯಾಪನದಲ್ಲಿ ಭಾಷೆಯ ವಿವಿಧ ಹಂತಗಳನ್ನು ಕಲಿಸುವಲ್ಲಿ ಬಳಸುವ ಸಲಕರಣೆಗಳೇ ಭಾಷಾ ಬೋಧನಾ ಸಲಕರಣೆಗಳು. ಇವುಗಳಲ್ಲಿ ಶ್ರವಣ ಮತ್ತು ಚಾಕ್ಷುಷವೆಂದು ಎರಡು ವಿಧ. ಅನ್ಯಭಾಷಾ ಮಾದರಿಗಳನ್ನು ಕೇಳಿಕೊಂಡು ಅವುಗಳನ್ನು ರೂಢೀಕರಿಸಲು ಸಹಾಯ ಮಾಡುವವುಗಳು ಶ್ರವಣಾತ್ಮಕ ಸಲಕರಣೆಗಳಾದರೆ, ನೋಡಿಕೊಂಡು ಕಲಿಯುವಲ್ಲಿ ಸಹಕರಿಸುವವುಗಳು ಚಾಕ್ಷುಷ ಸಲಕರಣೆಗಳಾಗಿವೆ. ಶ್ರವಣಾತ್ಮಕ ಸಲಕರಣೆಗಳಲ್ಲಿ ಭಾಷಾ ಪ್ರಯೋಗ ಶಾಲೆಯೇ ಪ್ರಧಾನ.[೧]

ಭಾಷಾಬೋಧನಾ ಚಾಕ್ಷುಷ ಸಲಕರಣೆಗಳಲ್ಲಿ ಚಿತ್ರ, ಕರಿ ಹಲಗೆ, ಹೊಳಪು ಬಿಲ್ಲೆ, ನಕಾಷೆ, ಚಲಚ್ಚಿತ್ರ, ಟೆಲಿವಿಷನ್ ಅರ್ಥಾತ್ ದೂರದರ್ಶನ ಇತ್ಯಾದಿಗಳ ಬಳಕೆ ಅರ್ವಾಚೀನ ಕಾಲದಲ್ಲಿ ಅತ್ಯಧಿಕ.

ಚಿತ್ರಗಳು (Pictures)

ಬೋಧನೆಯ ಸಮಯದಲ್ಲಿ ಚಿತ್ರಗಳನ್ನು ಬಳಸುವುದರಿಂದ ಒಂದೇ ನೋಟದಿಂದ ಹಲವಾರು ಸಂಗತಿಗಳನ್ನು, ವಿಚಾರಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ.

ಮರದ ಬಗ್ಗೆ ಪಾಠ ಮಾಡುವಾಗ ಮರದ ಚಿತ್ರವನ್ನು ತೋರಿಸಿದರೆ ಎಲೆ, ಕೊಂಬೆ, ಗೆಲ್ಲು, ಕಾಂಡ, ಬೇರು ಇತ್ಯಾದಿ ವಿಷಯಗಳ ಸರಿಯಾದ ಕಲ್ಪನೆ ಮರದ ಸಮಗ್ರ ಕಲ್ಪನೆಯ ಜೊತೆಗೆ ವಿದ್ಯಾರ್ಥಿಯ ಮನಸ್ಸಿನಲ್ಲಿ ಮೂಡುತ್ತವೆ. ಆಗ ಅವುಗಳ ಬಗ್ಗೆ ವಿವರ ನೀಡುವುದು ಸುಲಭ ಸಾಧ್ಯವಾಗುತ್ತದೆ. ಅಂತೆಯೇ ಶಬ್ದಗಳು ಒಂದು ಸಮಾಜದಿಂದ ಪಡೆದುಕೊಂಡಿರುವ ಸಾಂಸ್ಕೃತಿಕ ಅರ್ಥವನ್ನು ನೀಡುವಲ್ಲಿಯೂ ಚಿತ್ರಗಳ ಉಪಯೋಗ ಅಧಿಕ. ಮದುವೆ, ಹಬ್ಬಗಳ ಬಗ್ಗೆ ಪಾಠ ಮಾಡುವಾಗ ಅವುಗಳ ಸಮಗ್ರ ವಿವರಣೆಯನ್ನೀಡುವ ಚಿತ್ರಗಳು ಇದ್ದರೆ ಪಾಠಗಳನ್ನು ವಿವರಿಸಲಿಕ್ಕೂ ತಿಳಿದುಕೊಳ್ಳಲಿಕ್ಕೂ ಸುಲಭ. ಶಬ್ದಸಂಪತ್ತನ್ನು ಬೆಳೆಯಿಸಿಕೊಳ್ಳುವಲ್ಲಿ ಪದಬದಲಾವಣೆ ನೈಪುಣ್ಯವನ್ನು ಬಳಸುವಲ್ಲಿಯೂ ಚಿತ್ರಗಳು ಅತ್ಯಂತ ಪ್ರಯೋಜನಕಾರಿ.

ಚಿತ್ರಗಳನ್ನು ಬಳಸುವುದರಿಂದ ಕೆಲವೊಮ್ಮೆ ತೊಡಕುಗಳುಂಟಾಗುವುದೂ ಉಂಟು. ಇವು ಹೆಚ್ಚಾಗಿ ಅರ್ಥವನ್ನು ಸೂಚಿಸುವಲ್ಲಿ ಸಂಭವಿಸುತ್ತವೆ. ಒಂದು ಚಿತ್ರ ಹಲವಾರು ಆಲೋಚನೆಗಳನ್ನು ಅಥವಾ ವಿಷಯಗಳನ್ನು ಗುರುತಿಸಬಹುದು. ಆಗ ವಿದ್ಯಾರ್ಥಿಗಳು ಅದನ್ನು ಯಾವುದರ ಸಂಕೇತವನ್ನು ತಿಳಿದುಕೊಳ್ಳಬೇಕೆಂಬ ಸಮಸ್ಯೆ ಹುಟ್ಟುತ್ತವೆ. ಅಧ್ಯಾಪಕನು ಛತ್ರದ ಸಸಿಯ ಚಿತ್ರವನ್ನು ಬರೆ


---

೧. ನೋಡಿ : ವಿಲ್ಯಂ ಮಾಡ್ತ, ''ಭಾಷಾ ಪ್ರಯೋಗ ಶಾಲೆ'' ಮಾನವಿಕ ಕರ್ಣಾಟಕ, ೩ : ೩ (೧೯೭೩), ಪು. ೮೫–೮೯.

ದರೆ ಅಥವಾ ತೋರಿಸಿದರೆ ಅದು ಯಾವುದನ್ನು ಸೂಚಿಸುತ್ತದೆ? ಛತ್ರವನ್ನೋ, ಸಸಿಯನ್ನೋ ಅಥವಾ ಪ್ರತ್ಯೇಕ ಸಂಸ್ಥೆಯಂಗವನ್ನೋ? ಕೆಲವೊಮ್ಮೆ ಉತ್ತಮ ಗೊಬ್ಬರವನ್ನೂ ಅದು ಸಾಂಕೇತಿಸಬಹುದು! ಹೀಗೆ ಒಂದೇ ಚಿತ್ರದಿಂದ ಹಲವಾರು ಅರ್ಥಗಳು ಮನಸ್ಸಿಗೆ ಹೊಳೆಯಬಲ್ಲವು.


ಚಿತ್ರಗಳನ್ನು ಬರೆಯುವಾಗ ಪೂರ್ಣ ಚಿತ್ರಗಳನ್ನು ಬರೆಯಬೇಕೋ ಅಥವಾ ಅಪೂರ್ಣ ಬರೆದರೆ ಸಾಕೋ ಎಂಬುದು ಇನ್ನೊಂದು ಪ್ರಶ್ನೆ. ಯಾಕೆಂದರೆ ಎಷ್ಟೋ ಸಲ ಅಪೂರ್ಣ ಚಿತ್ರಗಳು ಪರಿಪೂರ್ಣಾರ್ಥವನ್ನು ಬಿಂಬಿಸುತ್ತವೆ :


ಉಗಿಬಂಡಿ


ಹಡಗು


ಕುರ್ಚಿ


ಕ್ರೈಸ್ತದೇವಾಲಯ


ಕಿಟಕಿ

ಅನೇಕ ಬಾರಿ ಒಂದೇ ಒಂದು ಚಿತ್ರ ಬೇರೆ ಬೇರೆ ಪರಿಸರಗಳಲ್ಲಿ ಬೇರೆ ಬೇರೆ ಅರ್ಥವನ್ನೂ ಸೂಚಿಸಬಲ್ಲುದು :

× ಗುಣಾಕಾರ ಚಿಹ್ನೆ, ಆಂಪ್ಯೂಲಿನ ಶಿಲುಬೆ, ತಪ್ಪು...

→ ಈ ದಾರಿಯಲ್ಲಿ ಮುಂದುವರೆ, ಹೀಗೆ ಬರೆ...

ಈ ಕಾರಣಗಳಿಂದಾಗಿ ಅನ್ಯಭಾಷಾಬೋಧನೆಯಲ್ಲಿ ಚಿತ್ರಗಳನ್ನು ಬಳಸುವುದು ಸರ್ವದೃಷ್ಟಿಯಿಂದ ಹಿತ ಎಂದು ಹೇಳುವುದು ತಪ್ಪಾಗುತ್ತದೆ.

ಕರಿಹಲಗೆ (Black board)

ಅನ್ಯಭಾಷಾ ಅಧ್ಯಾಪನದಲ್ಲಿ ಕರಿಹಲಗೆಯಷ್ಟು ಬಳಕೆಯಾಗುವ ಸಾಧನ ಬೇರೊಂದಿಲ್ಲವೆನ್ನಬಹುದು. ಪ್ರತಿಯೊಂದು ಶಾಲಾಕೋಣೆಯಲ್ಲಿ ಅದನ್ನು ನಾವು ಕಾಣಬಹುದು. ಇದರಿಂದಲೇ ಅದರ ಉಪಯೋಗವನ್ನು ನಾವು ಅರಿತುಕೊಳ್ಳಬಹುದು. ತನ್ನ ಕ್ಲಾಸು ಮುಗಿದ ಬಳಿಕ ಅಧ್ಯಾಪಕನು ಕರಿಹಲಗೆಯನ್ನು ಒರಸಿಟ್ಟರೆ ಮುಂದೆ ಬರುವವನಿಗೆ ಅನುಕೂಲವಾಗುತ್ತದೆ. ಕ್ಲಾಸಿನ ಆರಂಭ

ದಲ್ಲಿ ಹೆಚ್ಚಾಗಿ ಕರಿಹಲಗೆ ಸ್ವಚ್ಛವಾಗಿಟ್ಟುಕೊಳ್ಳುವುದು ಉತ್ತಮ. ಪಾಠಕ್ಕೆ ಸಂಬಧಿಸಿದ ವಿಷಯ ಅವರ ಮೇಲಿರಬಾರದು. ಹೊಸ ವಿಷಯವನ್ನು ಬರೆಯುವ ಪೂರ್ವದಲ್ಲಿ ಹಳೆಯದನ್ನು ಒರಸಿಡಬೇಕು. ಆಗ ಭಾಷಾ ಅಧ್ಯಾಪನ ಅಧ್ಯಯನಗಳಿಗೆ ತೊಡಕುಂಟಾಗುವುದಿಲ್ಲ.

ಹೊಸ ಪಾಠ ಮಾಡುವಲ್ಲಿ ಅವರ ಸೂಚಿಯನ್ನು ಬೋರ್ಡಿನ ಮೇಲೆ ಬರೆಯಬೇಕು. ಸೂಚಿಯೊಳಗೆ ಮುಖ್ಯವಾದ ಅಂಶಗಳು ಮಾತ್ರ ಬರಬೇಕು. ಆಗ ವಿದ್ಯಾರ್ಥಿಗಳ ಗಮನ ಪಾಠದ ಕಡೆಗೆ ಇರುವುದು ಸಾಧ್ಯವಾಗುತ್ತದೆ; ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ಭಾಷೆ : ರಚನೆಗಳ ರಚನೆ

- ಧ್ವನಿಮಾತ್ಮಕ
- ಆಕೃತಿಮಾತ್ಮಕ
  - ಸಾಂದ್ರ
    - ಪದಪುಂಜ
  - ಅಸಾಂದ್ರ
    - ವಾಕ್ಯ

ವಿವಿಧ ವರ್ಣದ ಚಾಕ್ ತುಂಡುಗಳನ್ನು ಕ್ಲಾಸಿನಲ್ಲಿ ಬಳಸಲು ಉಪಾಧ್ಯಾಯನು ಕಲಿಯಬೇಕು. ಒಮ್ಮೆ ಬರೆಯುವಾಗ ಉದ್ದುದ್ದ ವಾಕ್ಯಗಳನ್ನಾಗಲಿ, ಪ್ಯಾರಾಗಳನ್ನಾಗಲಿ ಹಲಗೆಯ ಮೇಲೆ ಬರೆಯುತ್ತ ಹೋಗುವುದು ಎಂದೆಂದಿಗೂ ಒಳ್ಳೆಯದಲ್ಲ. ಸಂದರ್ಭೋಚಿತವಾಗಿ ಮುಖ್ಯ ಪದಗಳನ್ನೊ, ಚಿಕ್ಕ ವಾಕ್ಯಗಳನ್ನೊ ಬರೆಯಬೇಕು. ಉದ್ದವಾಗಿ ಬರೆಯುತ್ತ ಹೋದ ಪಕ್ಷದಲ್ಲಿ ವಿದ್ಯಾರ್ಥಿಳ ತಾಳ್ಮೆ ಕೆಡುವ ಸಂಭವ ಇದೆ.

ಒಂದು ವಿಷಯವನ್ನು ಬಾಯಿಪಾಠ ಮಾಡುವಲ್ಲಿ ಬೋರ್ಡು ಬಹಳ ಸಹಾಯಕಾರಿ. ಕಂಠಪಾಠ ಮಾಡಬೇಕಾದ ವಿಷಯವನ್ನು ಹಲಗೆಯ ಮೇಲೆ ಮುಂಚಿತವಾಗಿಯೇ ಬರೆದಿಡಬೇಕು. ಸಮಯ ಬಂದಾಗ ಅದನ್ನು ಕ್ಲಾಸಿನಲ್ಲಿ ವಿದ್ಯಾರ್ಥಿಗಳು ಓದಿಕೊಂಡು ಬಾಯಿಪಾಠ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಉಕ್ತ ಲೇಖನ ಅಭ್ಯಾಸದಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೂ ಕರಿಹಲಗೆಯ ಸಹಾಯ ಪಡೆದುಕೊಳ್ಳಬಹುದು. ಸರಿಯಾದ ಉಕ್ತಲೇಖನವನ್ನು ಅಧ್ಯಾಪಕನು ಅದರ ಮೇಲೆ ಬರೆದರೆ ಅದನ್ನು ನೋಡಿಕೊಂಡು ಎಲ್ಲ ವಿದ್ಯಾರ್ಥಿಗಳು ತಾವೇ ತಮ್ಮ ಉಕ್ತಲೇಖನಗಳನ್ನು ತಿದ್ದಿಕೊಳ್ಳಬಹುದು.

ವಿರೋಧ ಪ್ರಸಾರ ಯುಗ್ಮಗಳನ್ನು ಹಲಗೆಯ ಮೇಲೆ ಬರೆದರೆ ಅವುಗಳ ವ್ಯತ್ಯಾಸ ವಿದ್ಯಾರ್ಥಿಗಳಿಗೆ ಥಟ್ಟನೆ ಹೊಳೆಯುವುದು :

ಪ್ [+ ಆ + ಡ್ + ಉ > ಪಾಡು
ಬ್ [+ ಆ + ಡ್ + ಉ > ಬಾಡು

ಕ್ [+ ಉ + ರ್ + ಇ > ಕುರಿ
ಗ್ [+ ಉ + ರ್ + ಇ > ಗುರಿ

ಹೊಳಪು ಬಿಲ್ಲೆ (Flash card)

ಬಿಲ್ಲೆಯ ಒಂದು ಪಕ್ಕದಲ್ಲಿ ಪದ ಅಥವಾ ಪದಪುಂಜವಿದ್ದು ಹಿಂಬದಿಯಲ್ಲಿ ಅದರ ಅರ್ಥ ಇರುತ್ತದೆ. ವಿದ್ಯಾರ್ಥಿ ಬಿಲ್ಲೆಯನ್ನು ತೆಗೆದುಕೊಂಡು ಅದರಲ್ಲಿಯ ಪದವನ್ನು ನೋಡಿ ಅರ್ಥವನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ; ಜ್ಞಾಪಕಕ್ಕೆ ಬಾರದಿದ್ದರೆ ಅದನ್ನು ಕಟ್ಟಿನ ಬುಡದಲ್ಲಿರಿಸಿ ಇನ್ನೊಂದು ಕಾರ್ಡನ್ನು ತೆಗೆದುಕೊಳ್ಳುತ್ತಾನೆ. ಹೀಗೆಯೇ ಮುಂದುವರಿದು ಕೊನೆಗೆ ಜ್ಞಾಪಕಕ್ಕೆ ಬಾರದ ಅರ್ಥವುಳ್ಳ ಕಾರ್ಡುಗಳನ್ನು ಸ್ವೀಕರಿಸಿ ಪದ ಹಾಗೂ ಅದರ ಅರ್ಥವನ್ನು ಕಲಿತುಕೊಳ್ಳುತ್ತಾನೆ.

ಕೆಲವೊಮ್ಮೆ ಬಿಲ್ಲೆಯ ಮುಂಭಾಗದಲ್ಲಿ ಚಿತ್ರವನ್ನು ಬರೆದು ಅದಕ್ಕೆ ಸಂವಾದಿಯಾಗಿರುವ ಪರಭಾಷಾ ಶಬ್ದವನ್ನು ಹಿಂದಿನ ಪುಟದಲ್ಲಿ ಕೊಟ್ಟಿರುತ್ತಾರೆ; ಅಥವಾ ಮುಂದಿನ ಪುಟದಲ್ಲಿ ಪ್ರಥಮಭಾಷಾ ಶಬ್ದವನ್ನು ಸೂಚಿಸಿ ಹಿಂದೆ ದ್ವಿತೀಯ ಭಾಷಾಶಬ್ದವನ್ನು ಕೊಡುವುದೂ ಉಂಟು. ವಿದ್ಯಾರ್ಥಿ ಮುಂಬದಿಯ ಚಿತ್ರವನ್ನಾಗಲಿ, ಶಬ್ದವನ್ನಾಗಲಿ ನೋಡಿಕೊಂಡು ದ್ವಿತೀಯ ಭಾಷಾಶಬ್ದವನ್ನು ನೆನಪಿಗೆ ತರಲು ಪ್ರಯತ್ನಿಸುತ್ತಾನೆ. ಬಳಿಕ ಅದು ಸರಿಯೋ ತಪ್ಪೋ ಎಂದು ತಿಳಿದುಕೊಳ್ಳಲು ಹಿಂಬದಿಯನ್ನು ನೋಡುತ್ತಾನೆ.

ಉಚ್ಚಾರಾಭ್ಯಾಸದ ಸೌಲಭ್ಯಕ್ಕೋಸ್ಕರ ಧ್ವನಿ ಅಥವಾ ಧ್ವನಿಮಾ ಲಿಪಿಯನು ಬಳಸಬಹುದು. ಅದರ ಜೊತೆಯಲ್ಲಿ ಆಯಾಯಾ ಭಾಷೆಯ ಲಿಪಿಯಲ್ಲಿ ಪದಗಳನ್ನು ಬರೆಯಬಹುದು. ಯಾವುದೋ ಒಂದು ಧ್ವನಿಯ ಅಭ್ಯಾಸ ನಡೆಯಿಸಬೇಕಾದಾಗ ಆ ಧ್ವನಿಸಂಕೇತವನ್ನು ಗುರುತಿಸಿದರೆ ಅಭ್ಯಾಸಕ್ಕೆ ಅನುಕೂಲವಾಗುವುದು. ಒಟ್ಟಿನಲ್ಲಿ ಭಾಷಾಭ್ಯಾಸದಲ್ಲಿ ಹೊಳಪು ಬಿಲ್ಲೆಗಳು ಬಹು ಪ್ರಯೋಜನಕಾರಿ.

ನಕಾಶೆಗಳು (Charts)

ಮೌಖಿಕ ಅಭ್ಯಾಸಕ್ಕೆ ನಕಾಶೆಗಳು ಬಹು ಉಪಯುಕ್ತವಾಗಿವೆ. ಒಂದೇ ವಿಷಯದ ಬಗ್ಗೆ ಸಮಗ್ರ ಕ್ಲಾಸಿನ ಏಕಾಗ್ರತೆಯನ್ನು ಕೇಂದ್ರೀಕರಿಸಲು ಅವು ಸಹಾಯಕವಾಗುತ್ತವೆ. ನಕಾಶೆಗಳನ್ನು ಉಪಯೋಗಿಸಲು ಕತ್ತಲುಕೋಣೆ ಬೇಕಾಗಿಲ್ಲ, ವೆಚ್ಚದ ಯಂತ್ರೋಪಕರಣಗಳ ಅಗತ್ಯವಿಲ್ಲ ಅಥವಾ ವಿಶೇಷತರದ ತರಬೇತಿಯೂ ಬೇಕಾಗಿಲ್ಲ.


ನಕಾಶೆಗಳಲ್ಲಿ ಅನುಕರಣಾತ್ಮಕ-ಸ್ಮರಣಾಯೋಗ್ಯ ಮತ್ತು ಮಾದರಿ ಅಭ್ಯಾಸಯೋಗ್ಯಗಳೆಂದು ಮುಖ್ಯವಾಗಿ ಎರಡು ವಿಧ. ಪರಭಾಷಾ ಅಧ್ಯಾಪನದಲ್ಲಿ ಪ್ರಥಮ ಹೆಜ್ಜೆಯಾಗಿ ಕೆಲವು ಮಾದರಿ ಸಂಭಾಷಣೆಗಳನ್ನು ಬಾಯಿಪಾಠ ಮಾಡಬೇಕಾಗುತ್ತದೆ. ಇವುಗಳನ್ನು ಚಿತ್ರರೂಪದಲ್ಲಿ ತೋರಿಸಬಹುದು. ವಿದ್ಯಾರ್ಥಿ ಚಿತ್ರಕ್ಕೆ ಅಥವಾ ಚಿತ್ರದ ಭಾಗಕ್ಕೆ ಅನ್ವಯಿಸುವ ಮಾತನ್ನು ಹೇಳಿಕೊಂಡು

ಸಂಭಾಷಣೆಯನ್ನು ನಡೆಯಿಸುತ್ತಾನೆ. ಈ ರೀತಿ ಮೆಲ್ಲಮೆಲ್ಲನೆ ಸಂಪೂರ್ಣ ಸಂಭಾಷಣೆಯನ್ನು ಕಲಿತುಕೊಳ್ಳಲು ಸಾಧ್ಯವಾಗುತ್ತದೆ.

ಮಾದರಿ ಅಭ್ಯಾಸಯೋಗ್ಯ ನಕಾಶೆಗಳು ಮೂಲತಃ ಬೇರೆ ರೀತಿಯವು. ಇವು ಮಾದರಿಗಳಲ್ಲಿ ಪದಬದಲಾವಣೆಯನುನ್ನು ಮಾಡಿ ಹಲವು ಘಟಕಗಳ ಸಹಾಯದಿಂದ ಒಂದೇ ಮಾದರಿಯನ್ನು ಮನನ ಮಾಡಿಕೊಳ್ಳಲು ಸಹಾಯಕಾರಿಯಾಗುತ್ತವೆ.

ಇದು ನಮ್ಮ











ಅಧ್ಯಾಪಕನು ಮೊದಲನೆಯ ಚಿತ್ರವನ್ನು ತೋರಿಸಿ 'ಇದು ನಮ್ಮ ರೈಲು ಬಂಡಿ' ಎಂದು ಹೇಳುತ್ತಾನೆ. ಎಲ್ಲ ವಿದ್ಯಾರ್ಥಿಗಳು ಅದನ್ನು ಒಟ್ಟಿಗೆ ಉಚ್ಚರಿಸುತ್ತಾರೆ. ಆಮೇಲೆ ಎರಡನೆಯ ಚಿತ್ರವನ್ನು ತೋರಿಸಿ 'ಇದು ನಮ್ಮ ಕಿಟಕಿ' ಎಂದು ಹೇಳಿದಾಗ ವಿದ್ಯಾರ್ಥಿಗಳು ಅದನ್ನೇ ಉಚ್ಚರಿಸುತ್ತಾರೆ. ಆಮೇಲೆ ಉಪಾಧ್ಯಾಯನು ಮೂರನೆಯ ಚಿತ್ರವನ್ನು ತೋರಿಸಿದಾಗ ವಿದ್ಯಾರ್ಥಿಗಳು ಸ್ವತಃ 'ಇದು ನಮ್ಮ ಚೆಂಡು' ಎಂದು ಹೇಳಬಲ್ಲವರಾಗುತ್ತಾರೆ. ಇದೇ ರೀತಿ ಪಾಠ ಮುಂದುವರಿಯುತ್ತದೆ.

ಪ್ರಶ್ನಾರ್ಥಕ ರಚನೆಗಳನ್ನು ಕಲಿಸುವಲ್ಲಿಯೂ ಮಾದರಿ ಅಭ್ಯಾಸಯೋಗ್ಯ ನಕಾಶೆಗಳನ್ನು ಬಳಸಬಹುದು. ರೈಲುಬಂಡಿಯ ಚಿತ್ರ ತೋರಿಸಿ,

ಪ್ರಶ್ನೆ: ಇದು ರೈಲುಬಂಡಿಯೊ?

ಉತ್ತರ: ಹೌದು, ಇದು ರೈಲುಬಂಡಿ.

ಅದೇ ಚಿತ್ರವನ್ನು ತೋರಿಸಿ,

ಪ್ರಶ್ನೆ: ಇದು ಕುರ್ಚಿಯೊ?

ಉತ್ತರ: ಅಲ್ಲ, ಇದು ಕುರ್ಚಿ ಅಲ್ಲ.

ಹೀಗೆಯೇ ನಿಷೇಧಾರ್ಥಕ ವಾಕ್ಯರಚನೆಗಳನ್ನೂ ಕಲಿಸಬಹುದು.

ಮೇಲ್ಪ್ರಕ್ಷೇಪಕ (Overhead projector)

ಕರಿಯ ಹಲಗೆಯ ಮೇಲೆ ಬರೆಯಬೇಕಾದರೆ ವಿದ್ಯಾರ್ಥಿಗಳಿಗೆ ಬೆನ್ನು ಮಾಡಬೇಕಾಗುತ್ತದೆ. ಇದನ್ನು ತಪ್ಪಿಸಲು ಮೇಲ್ಪ್ರಕ್ಷೇಪಕವನ್ನು ಉಪಯೋಗಿಸುತ್ತಾರೆ. ಅಧ್ಯಾಪಕನು ವಿದ್ಯಾರ್ಥಿಗಳಿಗೆ ಮುಖ ಮಾಡಿಕೊಂಡು ಪಾರದರ್ಶಕ ಪ್ಲ್ಯಾಸ್ಟಿಕ್ ಫಿಲ್ಮಿನ ಮೇಲೆ ಬರೆಯುತ್ತಿರುವಾಗ ಅದು ಆತನ ಹಿಂದಿರುವ ಪರದೆಯ ಮೇಲೆ ಪ್ರತಿಬಿಂಬಿತಗೊಳ್ಳುತ್ತದೆ. ಇದಕ್ಕೆ ವಿಶಿಷ್ಟವಾದ ಪೆನ್ಸಿಲೊಂದು ಬೇಕಾಗುತ್ತದೆ. ಮೇಲ್ಪ್ರಕ್ಷೇಪಕದ ಮೂಲಕ ತನ್ನ ಲೇಖದ ಪ್ರತಿಬಿಂಬವನ್ನು ವರ್ಧಿಸಿಕೊಳ್ಳಲೂ ಅವಕಾಶವಿದೆ. ಚಿತ್ರ ಅಥವಾ ಬರಹವನ್ನು ಮೊದಲೇ ಫಿಲ್ಮಿನ ಮೇಲೆ ಬರೆದುಕೊಂಡು ಬರಬಹುದಾದುದರಿಂದ ವೇಳೆಯ ಅಭಾವದ ಪ್ರಶ್ನೆಯು ಇಲ್ಲಿ ಬರುವುದಿಲ್ಲ. ಉದಾಹರಣೆಗಾಗಿ ಉಕ್ತಲೇಖನವನ್ನು ಕೊಟ್ಟಬಳಿಕ ಅದನ್ನು ತಿದ್ದುವ ಮೊದಲು ಮೇಲ್ಪ್ರಕ್ಷೇಪಕದ ಮೂಲಕ ಅದನ್ನು ಪ್ರತಿಬಿಂಬಿಸಿದರೆ ಅಧ್ಯಾಪಕನು ಎಷ್ಟೋ ಸಮಯವನ್ನು ಉಳಿಸಿಕೊಳ್ಳಬಹುದು. ಅಂತೆಯೇ ರೂಢೀಕರಣ ಮಾಡುವಾಗಲೂ ಇದು ಅತ್ಯಂತ ಸಹಾಯಕಾರಿ.

ಫಲಕ-ಪ್ರಕ್ಷೇಪಕ (Slide Projector)

ಫಲಕ.ಪ್ರಕ್ಷೇಪಕಗಳಲ್ಲಿ ನಾನಾವಿಧಗಳಿವೆ. ಸ್ವಯಂಚಲಿತ ಫಲಕ-ಪ್ರಕ್ಷೇಪಕಗಳು ಬಹು ಅನುಕೂಲಕರವಾದದ್ದರಿಂದ ಅವುಗಳ ಬಳಕೆ ಇತ್ತೀಚಿಗೆ ಹೆಚ್ಚುತ್ತ ಬರುತ್ತವೆ. ಫಲಕ–ಪ್ರಕ್ಷೇಪಕವನ್ನು ಕತ್ತಲುಕೋಣೆಯಲ್ಲಿಯೇ ಬಳಸಬೇಕಾಗುತ್ತದೆಯಾದರೂ ಕತ್ತಲು ದಟ್ಟವಾಗಬೇಕಾಗಿಲ್ಲ. ಈ ಪ್ರಕ್ಷೇಪಕದ ಬಳಕೆಗೆ ಕತ್ತಲುಕೋಣೆಯಷ್ಟೇ ಮುಖ್ಯವಾದ ಇನ್ನೊಂದೆಂದರೆ ಪರದೆ. ಈ ಪರದೆಯಲ್ಲಿ ಮಣಿಪರದೆ (Beaded Screen) ಮತ್ತು ನಿರ್ಮಣಿ ಪರದೆ (Non beaded Screen) ಎಂದು ಎರಡು ತೆರ. ಕೋಣೆಯ ನಡುವಿನಲ್ಲಿ ಕುಳಿತುಕೊಂಡವರಿಗೆ ಮಣಿಪರದೆ ಪ್ರಕಾಶಮಾನವಾಗಿ ಕಂಡರೂ ಬದಿಯಲ್ಲಿ ಆಸೀನರಾದವರಿಗೆ ಹಾಗೆ ಕಾಣಿಸುವುದಿಲ್ಲ. ಕಾರಣ ನಿರ್ಮಣಿ ಪರದೆಯೇ ಹೆಚ್ಚಿನ ಬಳಕೆಯಲ್ಲಿದೆ.

ಅಪಾರದರ್ಶಕ ಪ್ರಕ್ಷೇಪಕ (Opaque Projector)

ಅಪಾರದರ್ಶಕ ಪ್ರಕ್ಷೇಪಕಕ್ಕೂ ಕತ್ತಲುಕೋಣೆ ಹಾಗೂ ಪರದೆ ಬೇಕೇ ಬೇಕು. ಅದು ಪುಸ್ತಕದೊಂದು ಪುಟವನ್ನಾಗಲಿ ಅಥವಾ ಇತರ ಬಿಡಿ ಹಾಳೆಯನ್ನಾಗಲಿ ಪರದೆಯ ಮೇಲೆ ಪ್ರತಿಬಿಂಬಿಸಬಲ್ಲುದು. ಈ ಯಂತ್ರದ ಮೂಲಕ ಛಾಯಾಚಿತ್ರವನ್ನಾಗಲಿ, ಕೋಷ್ಟಕವನ್ನಾಗಲಿ, ಪ್ಯಾರಾವನ್ನಾಗಲಿ ಪ್ರತಿಬಿಂಬಿಸಬಹುದು. ಯಾವುದನ್ನು ಪ್ರತಿಬಿಂಬಿಸಬೇಕೋ ಅದನ್ನು ಪ್ರಕ್ಷೇಪಕದ ಅಡಿಯಲ್ಲಿರುವ ತಟ್ಟೆಯಲ್ಲಿ ಇಟ್ಟರಾಯಿತು; ಅದರ ಪ್ರತಿಬಿಂಬ ಪರದೆಯ ಮೇಲೆ ಬೀಳುತ್ತವೆ. ಆದ್ದರಿಂದ ಈ ಯಂತ್ರವನ್ನು ಬಳಸುವುದರಲ್ಲಿ ವಿಶೇಷ ಮಾಹಿತಿ ಅಥವಾ ತರಬೇತಿಯ ಅಂತೆಯೇ ಖರ್ಚಿನ ಸಮಸ್ಯೆಯಿಲ್ಲ.

ಅಪಾರದರ್ಶಕ ಪ್ರಕ್ಷೇಪಕವನ್ನು ಬಳಸಲು ಕೋಣೆಯಲ್ಲಿ ಕತ್ತಲು ಇರಬೇಕಾಗುವುದರಿಂದ ವಿದ್ಯಾರ್ಥಿಗಳಿಗೆ ಇದರಿಂದಾಗಿ ಕೆಲವು ಅಡಚಣೆಗಳುಂಟಾಗುತ್ತವೆ. ಬರಹವೇ ಮೊದಲಾದ ಇತರ ಚಟುವಟಿಕೆಗಳಿಗೆ ಅವಕಾಶವಿರುವುದಿಲ್ಲ. ಪ್ರದರ್ಶಿಸಬೇಕಾದ ವಿಷಯಗಳನ್ನು ತಟ್ಟೆಯೊಳಗೆ ಹಾಕಿ ತೆಗೆಯಲು ಸಮಯ ಬೇಕಾದುದರಿಂದ ಕ್ಲಾಸಿನ ಶಿಸ್ತಿಗೂ ಭಂಗಬರುವ ಸಾಧ್ಯತೆಯಿದೆ. ಯಂತ್ರದಲ್ಲಿ ಬೆಳಗುವ ದೀಪದ ಸೆಕೆಯಿಂದಾಗಿ ತಟ್ಟೆಯಲ್ಲಿರುವ ಹಾಳೆ ಕೆಡುವ ಸಂಭವವೂ ಇದೆ.

ಚಲಚ್ಚಿತ್ರ (Motion Picture)

ಚಾಕ್ಷುಷ ಬೋಧನಾ ಸಲಕರಣೆಗಳಲ್ಲಿ ಚಲಚ್ಚಿತ್ರ ಅತ್ಯಂತ ಪರಿಣಾಮಕಾರಿ. ಇಲ್ಲಿ ಚಲನೆ, ಬಣ್ಣ ಮತ್ತು ಧ್ವನಿ ಇವು ಮೂರೂ ಕೂಡಿಬರುವುದರಿಂದ ಬೋಧನೆಯಲ್ಲಿ ಇದರ ಸ್ಥಾನ ಬಹಳ ಮಹತ್ವದ್ದಾಗಿದೆ. ಆದರೂ ಅದರ ಬಳಕೆ ಮಾತ್ರ

ಬಹು ಕ್ವಚಿತ್ತೆಂದೇ ಹೇಳಬೇಕು! ಆರ್ಥಿಕ ದೃಷ್ಟಿಯಿಂದ ನೋಡುವುದಾದರೆ ಚಲಚ್ಚಿತ್ರ ಅಷ್ಟು ಸುಲಭವಾಗಿ ಕೈಸೇರುವುದು ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲದೆ ಚಲಚ್ಚಿತ್ರದಲ್ಲಿ ಬಳಸುವ ತಂತ್ರವಿಧಾನಗಳು ಕೆಲವೇ ದಿನಗಳಲ್ಲಿ ಹಳತಾಗಿ ಹೋದರೆ ಮಾಡಿದ ವೆಚ್ಚವೆಲ್ಲ ನಿರರ್ಥಕವಾಗುವುದು. ಈ ಚಲಚ್ಚಿತ್ರಗಳಲ್ಲಿ ಯೋಜಿಗಿಂತ ಪಾಠಕ್ಕೆ ಮಹತ್ವವಿರುವುದರಿಂದ ಹೆಚ್ಚಿನ ಸಮಯ ಇವನ್ನು ವೀಕ್ಷಿಸುವುದು ದುಸ್ಸಾಧ್ಯ. ಈ ಲೋಪದೋಷಗಳನ್ನು ನಾವು ಎತ್ತಿತೋರಿಸಿದರೂ ಭಾಷೆಯ ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಗಳ ಕಲ್ಪನೆಯನ್ನು ಕೊಡುವಲ್ಲಿ ಚಲಚ್ಚಿತ್ರಗಳ ಪಾತ್ರ ಬಹಳ ಹಿರಿದಾಗಿದೆ. ಕಾರಣ ಅವುಗಳನ್ನು ಪಾಠಗಳನ್ನು ಮುಗಿಸಿದ ಬಳಿಕ ಉಪಯೋಗಿಸುವುದು ಲಾಭಕರ.

ಟೆಲಿವಿಷನ್ (ದೂರದರ್ಶನ)

ಇತ್ತೀಚೆಗೆ ಅನ್ಯಭಾಷಾ ಬೋಧನೆಯಲ್ಲಿ ಟೆಲಿವಿಷನ್—ದೂರದರ್ಶನ—ಪ್ರಮುಖಸ್ಥಾನ ವಹಿಸಿಕೊಂಡಿದೆ. ಇದರ ಮೂಲಕ ಉತ್ತಮ ತರಬೇತಿ ಹೊಂದಿದ ಭಾಷಾ ಅಧ್ಯಾಪಕನು ಯೋಗ್ಯ ಮಾದರಿಯನ್ನು ಬಳಸಿಕೊಂಡು ಹಲವಾರು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಅನ್ಯಭಾಷೆಯನ್ನು ಕಲಿಸ ಬಲ್ಲನು. ದೂರದರ್ಶನ ಪ್ರಸಾರ ನಿರ್ಣಯಿತ ಕಾಲದಲ್ಲಿ ಆಗುವುದರಿಂದ ವಿದ್ಯಾರ್ಥಿಗಳು ಸೂಕ್ತಕಾಲದಲ್ಲಿ ಸಿದ್ಧವಾಗಿರಬೇಕಾಗುತ್ತದೆ. ಈ ಪ್ರಸಾರಕ್ಕಾಗಿ ಪಾಠಗಳು ಬಹು ಚೆನ್ನಾಗಿ ತಯಾರಿಗೊಳ್ಳುತ್ತಿರುವುದರಿಂದ ಅವು ಯಶಸ್ವಿಯಾಗುವ ಸಂಭವವೇ ಹೆಚ್ಚು. ಹೀಗಿರುವಾಗ ಕ್ಲಾಸಿಗೆ ಬರುವ ಅಧ್ಯಾಪಕನ ಆವಶ್ಯ ವೇನೆಂಬ ಪ್ರಶ್ನೆ ಮೂಡಬಹುದು. ಆದರೆ ಅಧ್ಯಾಪನದಲ್ಲಿ ಅಧ್ಯಾಪಕನ ಬೋಧನೆ ಜೊತೆ ಆತನ ವ್ಯಕ್ತಿತ್ವ, ಸಂಪರ್ಕಗಳು ಅಗತ್ಯವೆಂಬುದನ್ನು ಮರೆಯುವಂತಿಲ್ಲ. ಟೆಲಿವಿಷನ್ ಆಗಲಿ ಅಥವಾ ಇತರ ಯಾವುದೇ ಬೋಧನಾಸಲಕರಣೆಯಾಗಲಿ ಅವೆಲ್ಲ ಅಧ್ಯಾಪಕನನ್ನು ಬಿಟ್ಟಿಲ್ಲ. ಅವು ಆತನ ಸಲಕರಣೆಗಳಷ್ಟೆ. ಅವನ್ನು ಬಳಸಿದರೆ ಅಧ್ಯಾಪನವನ್ನು ಯಶಸ್ವಿಯಾಗಿ ನಡೆಸಲು ಹೆಚ್ಚಿನ ಸಹಾಯವಾಗುತ್ತದೆ.

ಮೈಸೂರುಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಮತ್ತು ಅಪ್ರಕಟಿತ ಶಾಸನಗಳ ಸೂಚಿ

ಎಸ್. ಶೆಟ್ಟರ್
ಎಸ್. ರಾಜಶೇಖರ

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೯೩	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	೧೭೮೧	ನಿಜಾಂ ಅಲಿಖಾನ್	ಹೈದರಾಬಾದ ನಿಜಾಂ	ಮದುವೆ ಸಮಯದಲ್ಲಿ ಮಠಕ್ಕೆ ಕೊಡಬೇಕಾದ ಕಾಣಿಕೆಗಳನ್ನು ಮುಂದುವರಿಸಬೇಕು. ಮಕ್ಕಳಿಲ್ಲವೆ ಸತ್ತವರ ಆಸ್ತಿಯನ್ನು ಮಠಕ್ಕೆ ಸೇರಿಸಬೇಕು.	ಆ.ಸ.ಮೈ.ಆ.ರಿ. ೧೯೧೬, ಪು. ೭೧
೧೯೪	,,	,,	,,	೧೮೪೩	—	,,	ಪತ್ರ. ನರಸಿಂಹಭಾರತಿಯರ ಗಂಗಾಯಾತ್ರೆ ಪ್ರಸಂಗದಲ್ಲಿ ಹೈದರಾಬಾವಕ್ಕೆ ಭೆಟ್ಟಿ ನೀಡುವ ಉದ್ದೇಶಕ್ಕೆ ಪ್ರಧಾನಮಂತ್ರಿ ಚಂದಾಲಾಲನಿಂದ ಸ್ವಾಗತ.	,,
೧೯೫	ಯಲ್ಲಾಪುರ	ಮಾಗಡಿ	ಬೆಂಗಳೂರು	೧೫೭೩	ಮುಮ್ಮಡಿ ತಿಮ್ಮನಾಯಕಾಚಾರ್ಯ	ಚಿತ್ರದುರ್ಗ ಪಾಳೇಗಾರರು	ಬುಕ-ರಾವುತನಿಂದ ದಾಸನಾಯಕನಿಗೆ ಮಂಚಕನಹಳ್ಳಿಯ ಉಂಬಳಿ.	ಆ.ಸ.ಮೈ.ಆ.ರಿ ೧೯೧೫, ಪು.೬೨

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೯೬	ಸೋಲೂರು	ಮಾಗಡಿ	ಬೆಂಗಳೂರು	—	ತಿಮ್ಮಪ್ಪ ನಾಯಕ	ಸೋಲೂರಿನ ಪಾಳೇಗಾರರು	ಗುರುವಪ್ಪಗೌಡ ಮತ್ತು ತಿಮ್ಮರಸ ರಿಂದ ಸೋಲೂರಿನ ನೀಲಗಿರಿ ತಿರುವೆಂಗಳನಾಥ ಮತ್ತು ವೀರ ಸೋಮೇಶ್ವರ ದೇವರಿಗೆ ದತ್ತಿ.	ಆ.ಸ.ವೈ.ಆ.ರಿ. ೧೯೧೫, ಪು.೬೨
೧೯೭	ಶಿವಗಂಗೆ	ನೆಲಮಂಗಲ	,,	೧೫೬೭	ಚಿಕ್ಕಗಿರಿಯಪ್ಪಗೌಡ	ಯಲಹಂಕ ಪ್ರಭುಗಳು	ಚಿಕ್ಕಗಿರಿಯಪ್ಪ ಗೌಡನು ಶಿವಗಂಗೆಯ ಗಂಗಾಧರನಿಗೆ ಪಂಚ ಲೋಹದ ಗಂಟೆ ಮಾಡಿಸಿಕೊಟ್ಟ.	,,
೧೯೮	,,	,,	,,	೧೫೯೨	,,	,,	ಹಜಿಕಲುವಿ ಚಿಕ್ಕಪೊನ್ನೆಗೌಡನಿಂದ (ಗಂಟೆಯ) ದಾನ.	,,
೧೯೯	,,	,,	,,	೧೫೯೭	ಚಿಕ್ಕಹೊನ್ನಗೌಡ	,,	ಅಜಗಮ್ಮನಿಂದ ದಕ್ಷಿಣ ಕೈಲಾಸದ ಗಂಗಾಧರಸ್ವಾಮಿಗೆ ಗಂಟೆಯ ದಾನ.	,,
೨೦೦	,,	,,	,,	೧೫೮೮	ಕೆಂಪೇಗೌಡ	,,	ಕೆಂಪೇಗೌಡನಿಂದ ಗಂಗಾಧರಸ್ವಾಮಿಗೆ ಗಂಟೆಯ ದಾನ.	,,
೨೦೧	,,	,,	ಬೆಂಗಳೂರು	೧೬೦೮	ಕೆಂಪೇಗೌಡ	,,	ಬೆಂಗಳೂರಿನ ಕೆಂಪಯ್ಯಗೌಡನ ವಿಗ್ರಹ.	ಅದೇ, ಪು. ೬೩
೨೦೨	ಕೆಂಪಸಾಗರ	ಮಾಗಡಿ	,,	೧೬೭೪	ಮುಮ್ಮಡಿ ಕೆಂಪೇಗೌಡ	,,	ಮುಮ್ಮಡಿ ಕೆಂಪೇಗೌಡನಿಂದ ಚತಲದಾಸ ಬೋಯಿಗೆ ಭೂದತ್ತಿ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೦೩	ಮಾಗಡಿ	ನೆಲಮಂಗಲ	ಬೆಂಗಳೂರು	೧೬೮೪	ಮುಮ್ಮಡಿ ದೊಡ್ಡ ವೀರಪ್ಪ ನಾಯಕ	,,	ಮುಮ್ಮಡಿ ದೊಡ್ಡವೀರಪ್ಪಗೌಡ ರಯ್ಯನಿಂದ ಲಕ್ಷ್ಮೀಪತಿ ಭಟ್ಟನಿಗೆ ಕಲ್ಲದೇವನಹಳ್ಳಿ, ನೇರಲವಾಡಿ, ಸಾತನೂರು, ಅಗಳಕೋಟೆ, ಮುಂತಾದ ಹಳ್ಳಿಗಳ ದತ್ತಿ.	ಆ.ಸ.ಮೈ.ಆ.ರಿ. ೧೯೧೬, ಪು. ೬೪
೨೦೪	,,	,,	,,	೧೬೯೭	ಇಮ್ಮಡಿ ಕೆಂಪವೀರಪ್ಪ ಗೌಡ	,,	ಇಮ್ಮಡಿ ಕೆಂಪವೀರಪ್ಪಗೌಡನಿಂದ ಮತ್ತು ಅವನ ತಂದೆಯಿಂದ ಬ್ರಾಹ್ಮಣರಿಗೆ ಕೆಲವು ವೃತ್ತಿ ಮತ್ತು ಹಳ್ಳಿಗಳ ದಾನ.	,,
೨೦೫	,,	,,	,,	೧೭೧೫	ಮುಮ್ಮಡಿ ಕೆಂಪವೀರಪ್ಪ ಗೌಡ	,,	ಸೋಮೇಶ್ವರಲಿಂಗದ ಸ್ಥಾಪನೆಯ ಸಮಯದಲ್ಲಿ ಮಹಾಮಂಡಳೇಶ್ವರ ಕೆಂಪವೀರಪ್ಪಗೌಡನಿಂದ ನಾಲ್ಕು ಹಳ್ಳಿಗಳ ದತ್ತಿ.	ಆ.ಸ.ಮೈ.ಆ.ರಿ. ೧೯೧೫, ಪು. ೬೨
೨೦೬	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	—	ವೀರಭದ್ರ ನಾಯಕ	ಇಕ್ಕೇರಿ	ಸನದು. ಶೃಂಗೇರಿಮಠದವರಿಂದ ವೀರಭದ್ರನಾಯಕನಿಗೆ ದೂರು. ಉತ್ತರವಾಗಿ, ಶೃಂಗೇರಿಯ ಸ್ವಾಮಿಗಳಿಗೆ ಧಾರ್ಮಿಕವಾಗಿ ತಪ್ಪುಮಾಡಿದವರನ್ನು ಶಿಕ್ಷಿಸುವ ಅಧಿಕಾರವಿದೆ ಎಂದು ನಾಯಕನು ತಿಳಿಸಿದ.	ಆ.ಸ.ಮೈ.ಆ.ರಿ. ೧೯೧೬, ಪು. ೬೫

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೦೭	ಶೃಂಗೇರಿ	ಶೃಂಗೇರಿ	ಚಿಕ್ಕ ಮಂಗಳೂರು	—	ವೀರಭದ್ರ ನಾಯಕ	ಇಕ್ಕೇರಿ	ಸನದು. ಶೃಂಗೇರಿಯ ಸಚ್ಚಿದಾನಂದ ಭಾರತಿಗಳಿಗೆ ಹರಕೇರಿ ಮತ್ತು ಮಂದಳಿಗಳ ಅನುಭೋಗ ಕೊಡದೆಂದು ಹೇಳಿದ ಖೊದಾಯಿ ಸಮಾಲ್‌ಖಾನ್ ಆದವ್ ಅಫಜಲ್‌ಖಾನನ ಅಭಿಪ್ರಾಯವನ್ನು ವೀರಭದ್ರ ನಾಯಕನು ಪ್ರತಿಭಟಿಸಿದ.	ಆ.ಸ.ಮೈ.ಆ.ರಿ. ೧೯೧೬, ಪು. ೬೫
೨೦೮	,,	,,	,,	೧೬೫೨	ಶಿವಪ್ಪನಾಯಕ	,,	ಸಚ್ಚಿದಾನಂದ ಭಾರತಿಗಳಿಗೆ ಪತ್ರ. ಎರಡನೆಯ ಹರಿಹರನ ಕಾಲದಲ್ಲಿ ವಿದ್ಯಾಶಂಕರ, ಮಲ್ಲಿಕಾರ್ಜುನ, ಸರಸ್ವತಿ ಮೊದಲಾದ ದೇವರಿಗೆ ದತ್ತಿಯಿತ್ತ ಭೂಮಿಗಳನ್ನು ಅತಿಕ್ರಮಿಸಿದವರಿಂದ ಮತ್ತೆ ವಾಪಸುಪಡೆದು ಮಠಕ್ಕೆ ಒಪ್ಪಿಸಿ ತಪ್ಪಿತಸ್ಥರನ್ನು ಶಿಕ್ಷಿಸಿದ.	ಅದೇ, ಪು ೬೬
೨೦೯	,,	,,	,,	೧೬೫೬	,,	,,	ಅಳಿಯ ಕೆಂಚಣ್ಣನಿಗೆ ಪತ್ರ. ಮಂಗಳೂರು ಸೀಮೆಯ ಗೇಣಿದಾರರಿಂದ ಮಠಕ್ಕೆ ಬರುವ ಹಣ ಸಲ್ಲದಿರುವದರಿಂದ, ಅವರು ಆ ಹಣವನ್ನು ಮಠಕ್ಕೆ ಸಲ್ಲಿಸುವಂತೆ ನೋಡಿಕೊಳ್ಳಬೇಕು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೧೦	ಶೃಂಗೇರಿ	ಶೃಂಗೇರಿ	ಚಿಕ್ಕ ಮಗಳೂರು	೧೬೫೬	ಶಿವಪ್ಪ ನಾಯಕ	ಇಕ್ಕೇರಿ	ವೆಂಗಂಭಟ್ಟನಿಗೆ ಪತ್ರ. ಶೃಂಗೇರಿಗೆ ಹೋಗಿದ್ದ ಕಾರ್ಕಳದ ಕೆಲವು ಗೇಣಿದಾರರನ್ನು ಮರಳಿಬರುವಂತೆ ನೋಡಿಕೊಳ್ಳಬೇಕು.	ಆ.ಸ.ವ್ಯೆ.ಆ.ರಿ. ೧೯೧೬, ಪು. ೬೬
೨೧೧	,,	,,	,,	,,	,,	,,	ಸ್ವಾಮಿಗಳಿಗೆ ಪತ್ರ. ಶೃಂಗೇರಿ ಮತ್ತು ವಿದ್ಯಾರಣ್ಯಪುರದ ದತ್ತಿ ಶಾಸನಗಳನ್ನು ಕಳುಹಿಸಿದೆ. ಆ ದತ್ತಿಯಲ್ಲಿ ಉಲ್ಲೇಖಿಸಲ್ಪಟ್ಟ ಭೂ ಮೇರೆಗಳಲ್ಲಿ ಕಲ್ಲು ನೆಡಿಸಬೇಕು ಮತ್ತು ಆ ಶಾಸನಗಳನ್ನು ತಾತಂಭಟ್ಟರೊಡನೆ ಮರಳಿಸಬೇಕು.	,,
೨೧೨	,,	,,	,,	೧೬೫೭	,,	,,	ಪತ್ರ. ತಿಮ್ಮಣ್ಣಸೇನಬೋವನು ಶೃಂಗಪುರದ ಮಹಾಜನರಿಗೆ ಕೊಡಬೇಕಾಗಿದ್ದ ೧೨೫ ವರಹಗಳನ್ನು, ಕವಿ ತಿರುಮಲಭಟ್ಟನಿಗೆ ಒಪ್ಪಿಸಬೇಕು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೧೩	ಶೃಂಗೇರಿ	ಶೃಂಗೇರಿ	ಚಿಕ್ಕ ಮಂಗಳೂರು	೧೬೫೭	ಶಿವಪ್ಪ ನಾಯಕ	ಇಕ್ಕೇರಿ	ತಿರುಮಲಭಟ್ಟನಿಗೆ ನಿರೂಪ. ಸ್ವಾಮಿಗಳಿಗೆ ಬರೆದ ಪತ್ರದ ಒಂದು ಪ್ರತಿಯನ್ನು ಪುರಾಣಿಕ ಅಪ್ಪಭಟ್ಟ ಮತ್ತು ತಾತಂಭಟ್ಟರೊಡನೆ ಕಳುಹಿಸಿದೆ. ದತ್ತಿಗಳನ್ನು ತಾಮ್ರಪಟಗಳ ಮೇಲೆ ಕೊರೆಸಬೇಕು, ದತ್ತಿಯ ಭೂಮೇರೆಗಳಲ್ಲಿ ವಾಮನನ ಚಿತ್ರವುಳ್ಳ ಕಲ್ಲುಗಳನ್ನು ನಿಲ್ಲಿಸಬೇಕು.	ಆ.ಸ.ವೈ.ಆ.ರಿ. ೧೯೧೬, ಪು.೬೬
೨೧೪	,,	,,	,,	,,	,,	,,	ಮಲ್ಲಣ್ಣನಿಗೆ ಪತ್ರ. ವಿದ್ಯಾರಣ್ಯಪುರದ ಸದಾಶಿವ ದೇವಸ್ಥಾನದ ಪ್ರತಿಷ್ಠಾಪನೆಯನ್ನು ಬ್ರಾಹ್ಮಣರ ಸಹಾಯದಿಂದ ನಡೆಸಬೇಕು.	,,
೨೧೫	,,	,,	,,	೧೬೬೦	,,	,,	ನರಸನಿಗೆ ನಿರೂಪ. ಕೂಡಲಿ-ಶೃಂಗೇರಿ ಮಠದ ಅಮ್ಮಾಜಿಸ್ವಾಮಿಗಳಿಗೆ ಕೊಟ್ಟಿದ್ದ ದತ್ತಿಗಳನ್ನು ಶೃಂಗೇರಿ ಮಠಕ್ಕೆ ಒಪ್ಪಿಸಬೇಕು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೧೬	ಶೃಂಗೇರಿ	ಶೃಂಗೇರಿ	ಚಿಕ್ಕ ಮಂಗಳೂರು	೧೬೫೪	ಶಿವಪ್ಪ ನಾಯಕ	ಇಕ್ಕೇರಿ	ಶೃಂಗಪುರ ಮತ್ತು ವಿದ್ಯಾರಣ್ಯಪುರದ ಮಹಾಜನರಿಗೆ ಸಚ್ಚಿದಾನಂದ ಭಾರತಿಗಳಿಂದ ನಿರೂಪ. ಶಿವಪ್ಪನಾಯಕನು ಅಗ್ರಹಾರವನ್ನು ಮತ್ತೆ ಸ್ಥಾಪಿಸಿದ್ದು, ಮಹಾಜನರು ತಿರುಗಿಬಂದಲ್ಲಿ ಅವರಿಗೆ ಪುನಃ ಭೂಮಿಗಳನ್ನು ಕೊಡಲಾಗುವುದು.	ಆ.ಸ.ಮೈ.ಆ.ರಿ. ೧೯೧೬, ಪು.೬೭
೨೧೭	,,	,,	,,	೧೬೮೫	,,	,,	ಶೃಂಗೇರಿಯ ಮಲ್ಲಿಕಾರ್ಜುನ ದೇವಾಲಯದ ಸ್ತಂಭಗಣಪತಿಗೆ ಸಿದ್ಧಮ್ಮಾಜಿಯಿಂದ ದತ್ತಿ.	,,
೨೧೮	,,	,,	,,	೧೬೬೦	ವೆಂಕಟಪ್ಪ ನಾಯಕ II	,,	ಮುಕ್ಕನಾಡುಸೀಮೆಯ ಹಳ್ಳಿಯನ್ನು ಶೃಂಗೇರಿಯ ಸ್ವಾಮಿಗಳು ಬಿದರೂರಿಗೆ ಬಂದಾಗ ದಾನವಾಗಿ ಕೊಟ್ಟ ಉಲ್ಲೇಖ.	,,
೨೧೯	,,	,,	,,	,,	,,	,,	ಶೃಂಗೇರಿಯ ಸ್ವಾಮಿಗಳಿಗೆ ಹಣವನ್ನು ದಾನಮಾಡಿದ ಉಲ್ಲೇಖ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೨೦	ಶೃಂಗೇರಿ	ಶೃಂಗೇರಿ	ಚಿಕ್ಕ ಮಂಗಳೂರು	೧೬೬೨	ಭದ್ರಪ್ಪ ನಾಯಕ	ಇಕ್ಕೇರಿ	ಸನದು. ಶೃಂಗೇರಿಯ ಸಚ್ಚಿದಾನಂದ ಭಾರತಿಗಳು ಬಿದರೂರಿಗೆ ಬಂದಾಗ, ಚಂದ್ರಮೌಳೀಶ್ವರನ ಸನ್ನಿಧಿಯಲ್ಲಿ ಕೆರೆಹಳ್ಳಿ–ಗಾವಟೂರನ್ನು ಪುನಃ ದತ್ತಿ ಬಿಟ್ಟ ಉಲ್ಲೇಖ.	ಆ.ಸ.ವೈ.ಆ.ರಿ. ೧೯೧೬, ಪು. ೬೭
೨೨೧	,,	,,	,,	೧೬೬೪	ಸೋಮಶೇಖರ ನಾಯಕ	,,	ತಿರುಮಲೆಗೆ ನಿರೂಪ. ಚಂದ್ರಮೌಳೀಶ್ವರ ಮತ್ತು ಶಾರದಾಂಬೆಯ ಪೂಜೆಗೆ ೩೦೦ ವರಹ ಉತ್ಪನ್ನದ ಕಂದಿಕೆರೆಸೀಮೆಯ ಭೂಮಿಗಳ ದಾನ.	,,
೨೨೨	,,	,,	,,	೧೬೬೭	,,	,,	ಮಲ್ಲಣ್ಣನಿಗೆ ನಿರೂಪ. ಅವನಿಗೆ ೧೦೦ ವರಹಗಳನ್ನು ಕಳುಹಿಸಿದ್ದು ಶೃಂಗೇರಿಯ ಮಲ್ಲಿಕಾರ್ಜುನ ಗುಡಿಯ ದುರಸ್ತಿಕಾರ್ಯಕ್ಕೆ ಕಲ್ಲುಕುಟಿಗರನ್ನು ನೇಮಿಸಬೇಕೆಂದಿದೆ.	,,
೨೨೩	ಕಿಗ್ಗ	ಕೊಪ್ಪ	ಶಿವಮೊಗ್ಗ	೧೬೭೮	ಚೆನ್ನಮ್ಮಾಜಿ	,,	ಶೃಂಗೇಶ್ವರ ದೇವಸ್ಥಾನದ ಉತ್ಸವ ಮೂರ್ತಿಯನ್ನು ಪ್ರಧಾನಿ ಗುರುಬಸವಪ್ಪ ದೇವನು ಮಾಡಿಸಿದನು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೨೪	ಶೃಂಗೇರಿ(?)	ಶೃಂಗೇರಿ	ಚಿಕ್ಕಮಗಳೂರು	೧೬೯೧	ಚೆನ್ನಮ್ಮಾಜಿ	ಇಕ್ಕೇರಿ	ರಾಣಿಯಿಂದ ಅವುಭಳರಾಯನಿಗೆ ಪತ್ರ. ಶೃಂಗೇರಿಮಠವು ಅನುಭವಿಸುತ್ತಿದ್ದ ಮುಕ್ಕರನಾಡುಸೀಮೆಯ ಹಳ್ಳಿಗಳ ಅನುಭೋಗವನ್ನು ಮುಂದುವರಿಸಬೇಕು.	ಆ.ಸ.ಮೈ.ಆ.ರಿ. ೧೯೧೬, ಪು.೬೭
೨೨೫	ಶೃಂಗೇರಿ	,,	,,	—	,,	,,	ಸುಂಕದ ಅಧಿಕಾರಿಗೆ ಪತ್ರ. ಶೃಂಗೇರಿ ಮಠಕ್ಕೆ ತರುವ ಯಾವುದೇ ವಸ್ತುಗಳ ಮೇಲೆ ಸುಂಕ ವಿಧಿಸಬಾರದು.	,,
೨೨೬	,,	,,	,,	೧೬೯೭	ಬಸಪ್ಪ ನಾಯಕ I	,,	ಸ್ಥಳೀಯ ಅಧಿಕಾರಿಗಳಿಗೆ ಬರೆದ ನಾಲ್ಕು ನಿರೂಪಗಳು. ಶೃಂಗೇರಿ ಸ್ವಾಮಿಗಳ ಅಧಿಕಾರಿಗಳು ಬಾರಕೂರು, ಅರುವತ್ತಗ್ರಹಾರ, ಕುಂಬಳ, ಭಟಕಳ, ಬಗ್ಗವಾಡಿ, ಗೇರಸೊಪ್ಪೆ, ಶಿರಾಲಿ, ಕೆಳದಿ, ಬೆಳತಂಗಡಿ, ಮೊಗರನಾಡು ಮುಂತಾದ ಹೋಬಳಿ ಸೀಮೆಗಳ ಕಾಣಿಕೆಗಳನ್ನು ಎತ್ತುವಲ್ಲಿ ಮತ್ತು ಧಾರ್ಮಿಕ ವಿಷಯಗಳನ್ನು ಇತ್ಯರ್ಥಪಡಿಸುವಲ್ಲಿ ಸಹಕರಿಸಬೇಕು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೨೭	ಶೃಂಗೇರಿ	ಶೃಂಗೇರಿ	ಚಿಕ್ಕ ಮಂಗಳೂರು	೧೬೯೮	ಸೋಮ ಶೇಖರ ನಾಯಕ II	ಇಕ್ಕೇರಿ	ಮೂರು ಸನದುಗಳು. ಶೃಂಗೇರಿ ಮಠಕ್ಕೆ ನೀಡಿದ ದತ್ತಿಯ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೧೬, ಪು. ೬೮
೨೨೮	,,	,,	,,	೧೬೭೧	,,	,,	ನಿರೂಪ. ಸುಂಕದ ಅಧಿಕಾರಿ ಬಸವಪ್ಪನು ತನ್ನ ತಾಯಿಯ ಹೆಸರಿನಲ್ಲಿ ಥಂಗನೂರಿನ ಬಸವರಾಜದೇವರಿಗೆ ಸ್ವತಂತ್ರ ಮಠವನ್ನು ಕಟ್ಟಿಸಿ, ಅದಕ್ಕೆ ಹಳ್ಳಿಯೊಂದನ್ನು ದತ್ತಿಬಿಟ್ಟ.	,,
೨೨೯	,,	,,	,,	೧೭೦೧	,,	,,	ಎರಡು ನಿರೂಪಗಳು. ಶೃಂಗೇರಿಯ ಶಾರದಾದೇವಿಯ ನವರಾತ್ರಿಯ ಉತ್ಸವಕ್ಕಾಗಿ ತರಲಾಗುತ್ತಿದ್ದ ಸಾಮಗ್ರಿಗಳ ಮೇಲಿನ ಸುಂಕವನ್ನು ರದ್ದುಪಡಿಸಲಾಯಿತು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೩೦	ಶೃಂಗೇರಿ	ಶೃಂಗೇರಿ	ಚಿಕ್ಕ ಮಂಗಳೂರು	—	ಸೋಮಶೇಖರ ನಾಯಕ II	ಇಕ್ಕೇರಿ	ಪತ್ರ. ಶೃಂಗೇರಿಮಠದ ಸೇವಕರನ್ನು ವಿಚಾರಣೆಗೆ ಒಳಪಡಿಸಿ ತಪ್ಪಿತಸ್ಥರನ್ನು ಶಿಕ್ಷಿಸಿದ್ದು, ಮಠವು ನಷ್ಟಕ್ಕೊಳಗಾಗದಂತೆ ನೋಡಿಕೊಳ್ಳಬೇಕು.	ಆ.ಸ.ಮೈ.ಆ.ರಿ. ೧೯೧೬, ಪು. ೩೮
೨೩೧	,,	,,	,,	—	,,	,,	ಸನದು. ಶೃಂಗೇರಿಯ ಅಭಿನವ ಸಚ್ಚಿದಾನಂದ ಭಾರತಿಗಳು ಬಿದರೂರಿಗೆ ಬಂದಾಗ, ನಾಯಕನ ತಾಯಿಯಿಂದ ಚೆನ್ನವೀರ ರಾಜೇಶ್ವರ ಮತ್ತು ವೇಣುಗೋಪಾಲಕೃಷ್ಣ ದೇವರುಗಳಿಗೆ ದತ್ತಿ.	,,
೨೩೨	ಸೋದೆ	ಸಿರ್ಸಿ	ಉತ್ತರ ಕನ್ನಡ	೧೫೨೨	ಇಮ್ಮಡಿ ದೇವರಾಯ	ಗೆರೆಸೊಪ್ಪ ನಾಯಕರು	ಅರಸನು ಲಕ್ಷ್ಮೇಶ್ವರದ ಶಂಖ ಜಿನಾಲಯ ಬಸ್ತಿಯ ಚಂದ್ರನಾಥನ ಪೂಜಾಕಾರ್ಯಗಳಿಗೆ ಹರಿಯಟ್ಟ ಮಾಗಣಿಯ ಬಂಡವಾಳವನ್ನು ದತ್ತಿಯಾಗಿ ಕೊಟ್ಟನು.	ಅದೇ, ಪು. ೩೯
೨೩೩	ಶೃಂಗೇರಿ	ಶೃಂಗೇರಿ	ಚಿಕ್ಕಮಂಗಳೂರು	—	ಹಾಲೇರಿ ವೀರಪ್ಪ ಒಡೆಯರು	ಕೊಡಗಿನ ದೊರೆಗಳು	ಪತ್ರ. ಶೃಂಗೇರಿಮಠದಲ್ಲಿ ವಿಜಯದಶಮಿ ಉತ್ಸವ ನಿಮಿತ್ತ ಕೊಟ್ಟ ದತ್ತಿ ಮತ್ತು ೧೨೦ ಬೆಳ್ಳಿಹಣವನ್ನು ಕಾಣಿಕೆಯಾಗಿ ಕಳಿಸಿದ ಉಲ್ಲೇಖ.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೩೪	ಶೃಂಗೇರಿ	ಶೃಂಗೇರಿ	ಚಿಕ್ಕ ಮಂಗಳೂರು	೧೭೨೦	ಹನುಮಪ್ಪ ನಾಯಕ	ಸಂತೇಬೆ-ನ್ನೂರು	ಸಚ್ಚಿದಾನಂದ ಭಾರತಿಗೆ ಪತ್ರ. ಹಿಂದೆ ವಿದ್ಯಾರಣ್ಯರ ಕಾಲಕ್ಕೆ ಕೊಡ ಲ್ಪಟ್ಟು ನಂತರ ಹಿಂತೆಗೆದುಕೊಳ್ಳ-ಲಾ?ದ್ದ ಯರನಾಡುಸೀವೆಯ ಶಿವನೆ ಸ್ಥಳದಲ್ಲಿಯ ದಂದೂರನ್ನು ಮತ್ತೆ ದತ್ತಿ ಕೊಟ್ಟದ್ದಲ್ಲದೆ, ದೇವಪುರವೆಂಬ ಇನ್ನೊಂದು ಹಳ್ಳಿಯನ್ನೂ ದತ್ತಿ ಬಿಟ್ಟ ಉಲ್ಲೇಖ.	ಆ.ಸ.ಮೈ.ಆ.ರಿ. ೧೯೧೬, ಪು.೬೯
೨೩೫	,,	,,	,,	೧೭೪೫	,,	,,	ಸೀತಾರಾಮಯ್ಯನಿಗೆಪತ್ರ. ಶೃಂಗೇರಿ ಮಠದ ಸ್ವಾಮಿಗಳ ಅಧಿಕಾರಿಗಳಿಗೆ ಹಿಂದೆ ದತ್ತಿ ಕೊಟ್ಟಿದ್ದ ದೇವಪುರ ದುತ್ತು ದಂದೂರುಗಳನ್ನು ವಶಕ್ಕೊ-ಳಪಡಿಸಬೇಕೆಂಬ ನಿರ್ದೇಶ.	ಅದೇ, ಪು. ೭೦
೨೩೬	,,	,,	,,	—	ವೆಂಕಟಾದ್ರಿ ನಾಯಕರು	ಬೇಲೂರು	ವೆಂಕಟಾದ್ರಿನಾಯಕನಿಂದ ಶೃಂಗೇರಿಯ ಅಭಿನವ ಸಚ್ಚಿದಾನಂದಭಾರತಿಗೆ ಪತ್ರ. ಬೇಲೂರು ರಾಜ್ಯದಲ್ಲಿಯ ಮಠಕ್ಕೆ ಸೇರಿದ ಹಳ್ಳಿಗಳಲ್ಲಿ ಹಸ್ತಕ್ಷೇಪ ಮಾಡಬಾರದೆಂದು ತನ್ನ ಅಧಿಕಾರಿಗಳಿಗೆ ಹೇಳಿದೆ.	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೩೭	ಮಾದಾಪುರ	ಕೃಷ್ಣರಾಜ ಪೇಟೆ	ಮಂಡ್ಯ	೧೬೫೦	ಕಂಠೀರವ ನರಸರಾಜ ಒಡೆಯ	ಮೈಸೂರು	ಅರಸನಿಂದ ನರಸಿಂಹದೇವರಿಗೆ ಹದಿಮೂರು ಹಳ್ಳಿಗಳ ದತ್ತಿ.	ಆ. ಸ. ಮೈ. ಆ. ರಿ. ೧೯೧೫, ಪು. ೬೨
೨೩೮	ನಿಜಗಲ್-ದುರ್ಗ	ನೆಲಮಂಗಲ	ಬೆಂಗಳೂರು	೧೬೯೮	ಚಿಕ್ಕದೇವ-ರಾಜ ಒಡೆಯ	,,	ದಾಸರಾಜಯ್ಯನು ಸುಮಾರು ಇಪ್ಪತ್ತು ವರ್ಷಗಳಲ್ಲಿ ಮಾಡಿದ ಅನೇಕ ಕಾರ್ಯಗಳ ಉಲ್ಲೇಖ. ಅಂದರೆ ಅವನು ೧೬೯೮ರಲ್ಲಿ ನಿಜಗಲ್ಲಿನ ದುರ್ಗವನ್ನು ಕಟ್ಟಲಾರಂಭಿಸಿದ; ೧೭೦೬ರಲ್ಲಿ ವಿಘ್ನೇಶ್ವರನನ್ನು, ೧೭೧೪ ರಲ್ಲಿ ನರಸಿಂಹನೇವರನ್ನು ಪ್ರತಿಷ್ಠಾ-ಪಿಸಿದ; ನಂತರ ... ರಲ್ಲಿ ಪಾರ್ವತಿ ದೇವಿಯನ್ನು ... ಗುಡಿಯಲ್ಲಿ ಪ್ರತಿಷ್ಠಾಪಿಸಿದ.	ಅದೇ, ಪು. ೬೪

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೩೯	ಕಳಲೆ	ನಂಜನಗೂಡು	ಮೈಸೂರು	೧೭೧೭	ಕೃಷ್ಣರಾಜ ಒಡೆಯ I	ಮೈಸೂರು	ಕಳಲೆ ಮಲ್ಲರಾಜಯ್ಯನಿಗೆ ನಿರೂಪ. ಕಳಲೆಯ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದ ರಕ್ಷಣೆಗೆ ಹತ್ತು ಜನ ಸೇವಕರನ್ನು ನೇಮಿಸಿ, ಅವರಿಗೆ ತಲಾ ನಾಲ್ಕು ವರಹಗಳ ಸಂಬಳ ಕೊಟ್ಟು, ಅದನ್ನು ಅರಮನೆಗೆ ಸಲ್ಲಿಸುತ್ತಿದ್ದ ಕಪ್ಪದಲ್ಲಿ ಮುರಿದು ಹಾಕಿಕೊಳ್ಳಬೇಕೆಂದಿದೆ.	ಆ.ಸ.ಮೈ.ಆ.ರಿ. ೧೯೧೫,ಪು.೬೪
೨೪೦	ಹೊನ್ನಾಪುರ	ಮಾಗಡಿ	ಬೆಂಗಳೂರು	೧೭೩೫	ಕೃಷ್ಣರಾಜ ಒಡೆಯ II	,,	ಕಳಲೆ ನಂಜರಾಜಯ್ಯನಿಂದ ಮುರುಳದೇವನ ಮಠಕ್ಕೆ ದತ್ತಿ.	,,
೨೪೧	ಜಾಲಿಗೆ	ದೇವನಹಳ್ಳಿ	ಬೆಂಗಳೂರು	೧೭೪೯	,,	,,	ಅರಸನಿಂದ ಚಾಮುಂಡೇಶ್ವರಿ ದೇವಿಗೆ ಜಾಲಿಗೆ ಗ್ರಾಮದ ದತ್ತಿ.	ಆ.ಸ.ಮೈ.ಆ.ರಿ. ೧೯೧೪, ಪು. ೫೦

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೪೨	ಕಳಲೆ	ನಂಜನಗೂಡು	ಮೈಸೂರು	೧೭೫೦	ಕೃಷ್ಣರಾಜ ಒಡೆಯ II	ಮೈಸೂರು ,,	ದಳವಾಯಿ ದೇವರಾಜಯ್ಯನಿಂದ ಪಾರುಪತ್ಯಗಾರ ತಮ್ಮಯ್ಯನಿಗೆ ನಿರೂಪ. ಅರಮನೆಯವರು ಕೃಷ್ಣ-ರಾಜನಗರ ಸ್ಥಳವನ್ನು ತಮ್ಮ ವಶಕ್ಕೆ ತೆಗೆದುಕೊಂಡಾಗ, ಅರಸನು ಕಳಲೆಯ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನಕ್ಕೆ ೧೦೦ ವರಹ ಕಂದಾಯ ಉತ್ಪನ್ನ ವಿದ್ದ ಹಳ್ಳಿಯೊಂದನ್ನು ದತ್ತಿಬಿಡಲು ಮಾಡಿದ ಅಪ್ಪಣೆಯನ್ನು ನೆರವೇರಿಸ-ಬೇಕು.	ಆ.ಸ.ಮೈ.ಆ.ರಿ. ೧೯೧೫, ಪು. ೬೪
೨೪೩	ಶೃಂಗೇರಿ (?)	ಶೃಂಗೇರಿ	ಚಿಕ್ಕಮಗಳೂರು	೧೭೫೩	,,	,,	ದಳವಾಯಿ ದೇವರಾಜಯ್ಯನಿಂದ ಅಧಿಕಾರಿ ವೀರರಾಜುವಿಗೆ ನಿರೂಪ. ಶೃಂಗೇರಿಯ ಸ್ವಾಮಿಗಳು ತಮ್ಮ ಕಾಣಿಕೆ ಸಂಗ್ರಹ ಮಾಡುವುದಕ್ಕೂ ಶಿಷ್ಯರ ನಡತೆಯ ಬಗ್ಗೆ ವಿಚಾರಿಸುವುದಕ್ಕೂ ಅನುಕೂಲ ಒದಗಿಸಬೇಕು.	ಆ ಸ.ಮೈ.ಆ.ರಿ. ೧೯೧೬, ಪು. ೭೨

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೪೪	ಮಾಗಡಿ	ಮಾಗಡಿ	ಬೆಂಗಳೂರು	೧೭೫೭	ಕೃಷ್ಣರಾಜ ಒಡೆಯ II	ಮೈಸೂರು	ಇದು ಶಾಸನವೊಂದರ ಪಾಠವನ್ನು ಒಳಗೊಂಡ ತಾಳೆಗರಿ. ರಂಗಸೆಟ್ಟಿಯಿಂದ ಲಕ್ಕಮಭಟ್ಟನಿಗೆ ಲಕ್ಷ್ಮೀ-ನಾರಾಯಣ ಸಮುದ್ರದಲ್ಲಿಯ ವೃತ್ತಿಯೊಂದರ ದಾನ.	ಆ.ಸ.ಮೈ.ಆ.ರಿ. ೧೯೧೫, ಪು. ೬೪
೨೪೫	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	೧೭೫೯	,,	,,	ನಿರೂಪ. ಅಭಿನವ ಸಚ್ಚಿದಾನಂದ ಭಾರತಿಗಳು ಶ್ರೀರಂಗಪಟ್ಟಣ ಮತ್ತು ನಂಜನಗೂಡಿಗೆ ಬರುವ ಉದ್ದೇಶವನ್ನು ಸ್ವಾಗತಿಸಿ, ಅವರನ್ನು ಸಕಲ ಮರ್ಯಾದೆ, ಕಾಣಿಕೆಗಳೊಂದಿಗೆ ಬರಮಾಡಿಕೊಳ್ಳಲು ಎಲ್ಲಾ ಅಧಿಕಾರಿಗಳಿಗೂ ಸೂಚಿಸಿದೆ.	ಆ.ಸ.ಮೈ.ರಿ. ೧೯೧೬, ಪು.೭೨
೨೪೬	,,	,,	,,	೧೭೬೦	,,	,,	ನಿರೂಪ. ಗಿರಿವಾಸ ರಂಗಸೆಟ್ಟಿಯು ಶೃಂಗೇರಿಮಠಕ್ಕೆ ದತ್ತಿ ಕೊಟ್ಟಿರುವ ಮೆಳೆನಹಳ್ಳಿಯನ್ನು ಸರ್ವಮಾನ್ಯ ಗ್ರಾಮವಾಗಿ ಪರಿಗಣಿಸಬೇಕು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೪೭	ಶೃಂಗೇರಿ	ಶೃಂಗೇರಿ	ಚಿಕ್ಕಮಗ ಳೂರು	೧೭೬೦	ಕೃಷ್ಣರಾಜ ಒಡೆಯ II	ಮೈಸೂರು	ಅಧಿಕಾರಿ ಲಕ್ಷ್ಮೀಕಾಂತಯ್ಯನಿಗೆ ನಿರೂಪ. ೧೨೦೦ ವರಹ ಉತ್ಪನ್ನವಿರುವ ಹಳ್ಳಿಯೊಂದನ್ನು ಮಠಕ್ಕೆ ದತ್ತಿಯಾಗಿ ಕೊಡಲು ನಿಶ್ಚಯಿಸಿದ್ದು, ಅದಕ್ಕಾಗಿ ಆಯ್ಕೆಯಾಗಿರುವ ಬೇಲೂರಿನ ಬೆಳವಾಡಿಯನ್ನು ಮಠಕ್ಕೆ ಒಪ್ಪಿಸಬೇಕು.	ಆ.ಸ.ಮೈ.ಆ.ರಿ. ೧೯೧೬, ಪು. ೭೨
೨೪೮	,,	,,	,,	,,	,,	,,	ನಿರೂಪ. ಕೊಡಲಿಪುರ ಮತ್ತು ಗೂಳಿಹರವಿಯನ್ನು ಮಠದ ಸರ್ವಮಾನ್ಯ ಗ್ರಾಮವೆಂದು ಪರಿಗಣಿಸಬೇಕು.	ಅದೇ, ಪು. ೭೨
೨೪೯	,,	,,	,,	೧೭೬೨	,,	,,	,,	,,
೨೫೦	ಮೈಸೂರು	ಮೈಸೂರು	ಮೈಸೂರು	೧೭೬೧	,,	,,	ಸನ್ನದು. ಕೃಷ್ಣರಾಜ ಒಡೆಯರಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೧೫, ಪು. ೬೪
೨೫೧	,,	,,	,,	೧೭೬೨	,,	,,	,,	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೫೨	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	೧೭೬೨	ಕೃಷ್ಣರಾಜ ಒಡೆಯ II	ಮೈಸೂರು	ಹೈದರ ಅಲಿಖಾನ ಬಹದೂರನಿಗೆ ನಿರೂಪ. ಬೆಳವಡಿ ಗ್ರಾಮದಲ್ಲಿ ಕಂದಾಯ ಸಂಗ್ರಹಿಸುತ್ತಿದ್ದ ಬೇಲೂರಿನ ಅಧಿಕಾರಿಯು, ಆ ಗ್ರಾಮವನ್ನು ಮಠಕ್ಕೆ ಸರ್ವಮಾನ್ಯವಾಗಿ ಬಿಟ್ಟಿರುವುದರಿಂದ, ಆ ಗ್ರಾಮ ಮತ್ತು ಅಲ್ಲಿಯ ಹಣ ಮಠಕ್ಕೆ ಸೇರುವಂತೆ ನೋಡಿಕೊಳ್ಳಬೇಕು.	ಆ.ಸ.ಮೈ.ಆ.ರಿ. ೧೯೧೬, ಪು. ೭೨
೨೫೩	ಕಳಲೆ	ನಂಜನಗೂಡು	ಮೈಸೂರು	೧೭೬೩	,,	,,	ನಂಜರಾಜಯ್ಯನಿಂದ ವೆಂಕಟೇಶಯ್ಯನಿಗೆ ನಿರೂಪ. ಕಳಲೆಯ ದೇವಸ್ಥಾನಕ್ಕೆ ೫೦ ಆಕಳುಗಳನ್ನು ಕಳಿಸಬೇಕು. ಮತ್ತು ಕರತಾಳು ಗ್ರಾಮದ ಕಂದಾಯ ಸಂಗ್ರಹ ಮಾಡಿ ರಥೋತ್ಸವ ನಡೆಸಬೇಕು.	ಆ.ಸ.ಮೈ.ಆ.ರಿ. ೧೯೧೫, ಪು. ೬೫
೨೫೪	,,	,,	,,	,,	,,	,,	ಚನ್ನಮಲ್ಲಯ್ಯನಿಂದ ನಾಗಯ್ಯನಿಗೆ ನಿರೂಪ. ಕರತಾಳು ಗ್ರಾಮವನ್ನು ದೇವಸ್ಥಾನಕ್ಕೆ ಸೇರಿದ ಆಸ್ತಿಯಾಗಿ ಪರಿಗಣಿಸಬೇಕು.	,,

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೫೫	ಕಳಲೆ	ನಂಜನಗೂಡು	ಮೈಸೂರು	೧೭೬೨	ಕೃಷ್ಣರಾಜ ಒಡೆಯ II	ಮೈಸೂರು	ನಂಜರಾಜಯ್ಯನಿಂದ ನಿರೂಪ. ಕರತಾಳು ಗ್ರಾಮವನ್ನು ಕಳಲೆಯ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದ ರಥೋತ್ಸವ ನಡೆಸಲು ಬಿಟ್ಟುಕೊಡಲಾಗಿದೆ.	ಆ.ಸ.ಮೈ.ಆ.ರಿ. ೧೯೧೫, ಪು. ೬೫
೨೫೬	ಕಾಮೇನಹಳ್ಳಿ	ದೇವನಹಳ್ಳಿ	ಬೆಂಗಳೂರು	—	,,	,,	ಕಾಮೇನಹಳ್ಳಿಯ ಕಂದಾಯವನ್ನು ದತ್ತಿಯಾಗಿ ಬಿಟ್ಟುದು.	ಆ.ಸ.ಮೈ.ಆ.ರಿ. ೧೯೧೪, ಪು. ೫೦
೨೫೭	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	—	,,	,,	ರಹದಾರಿ. ಶೃಂಗೇರಿ ಮಠದ ಸ್ವಾಮಿಗಳು ಸೇತುವಿಗೆ ಯಾತ್ರಾರ್ಥವಾಗಿ ಬರುವ ವಿಷಯ.	ಆ.ಸ.ಮೈ.ಆ.ರಿ. ೧೯೧೬, ಪು. ೭೨
೨೫೮	ಶಿವಗಂಗೆ	ನೆಲಮಂಗಲ	ಬೆಂಗಳೂರು	೧೭೯೦	ಚಾಮರಾಜ ಒಡೆಯ	,,	ಕಂಠಾಭರಣದ ಮೇಲಿರುವ ಶಾಸನ. ಆ ಆಭರಣವನ್ನು ಚಾಮರಾಜ ಒಡೆಯರ ರಾಣಿ ದೇವಾಜಮ್ಮಣ್ಣಿಯವರು ಕೊಟ್ಟುದು.	ಆ.ಸ.ಮೈ.ಆ.ರಿ. ೧೯೧೫, ಪು. ೬೫

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ.ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೫೯	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	—	ಚಾಮರಾಜ ಒಡೆಯ	ಮೈಸೂರು	ಶೃಂಗೇರಿಯ ಸಚ್ಚಿದಾನಂದ ಭಾರತಿ ಗಳಿಗೆ ಪತ್ರ. ಸ್ವಾಮಿಗಳು ಕಳಿಸಿದ ಪ್ರಸಾದ ಮತ್ತು ಇತರ ವಸ್ತುಗಳನ್ನು ಸ್ವೀಕರಿಸಿದುದಾಗಿಯೂ ಮತ್ತು ಶಾರದಾದೇವಿಯ ಪೂಜಾ ಕಾರ್ಯಗಳಿಗಾಗಿ ಆಭರಣ ಮುಂತಾದುವನ್ನು ಕಳಿಸಿರುವುದಾಗಿ ತಿಳಿಸಿದೆ.	ಆ.ಸ.ವೈ.ಆ.ರಿ ೧೯೧೬, ಪು. ೭೨

(ಮುಂದುವರಿಯುವುದು)

ಒರೆಗಲ್ಲು

ನೇಮರಸ : ಕಾಲವಿಚಾರ

ಡಾ. ಬಿ. ಎಸ್. ಕುಲಕರ್ಣಿ ಅವರಿಂದ ಸಂಪಾದಿತವಾಗಿ ಪ್ರಕಟವಾಗಿರುವ[1] ನೇಮರಸನ 'ಲೋಭದತ್ತ ಚರಿತೆ' ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರ ಗಮನಕ್ಕೆಬಾರದ ಕೃತಿಗಳಲ್ಲೊಂದು. ಈ ಕೃತಿ ಸಾಂಗತ್ಯ ಹಾಗೂ ರಗಳೆಗಳಲ್ಲಿದ್ದು ಅನ್ನದಾನದ ಮಹಿಮೆಯ ಪ್ರತಿಪಾದನೆ ಇದರ ವಸ್ತು. ನೇಮರಸ ತನ್ನ ಕಾಲದ ಬಗೆಗೆ ಕೃತಿಯಲ್ಲಿ ಏನೂ ಸೂಚಿಸಿಲ್ಲ. ಅಲ್ಲದೆ ಮುಂದಿನ ಕವಿಗಳು ನೇಮರಸನನ್ನು ಹೆಸರಿಸಿದಂತಿಲ್ಲ.

ಡಾ. ಕುಲಕರ್ಣಿ ಅವರು ಈತನ ಕಾಲದ ಬಗೆಗೆ "ನಮಗೆ ದೊರೆತ ತಾಳೇಗ್ರಂಥದ ಹಿನ್ನೆಲೆಯಲ್ಲಿ ಸುಮಾರು ಎರಡುನೂರು ವರುಷಗಳ ಮೊದಲು ಈ ಕವಿ ಬದುಕಿರಬಹುದೆಂದು ತರ್ಕಿಸಬಹುದಾಗಿದೆ" ಎಂದು ಕೃತಿಯ ಮುನ್ನುಡಿ (ಪುಟ ೧೧) ಯಲ್ಲಿ ಹೇಳಿದ್ದಾರೆ.

ನೇಮರಸ 'ಲೋಭದತ್ತ ಚರಿತೆ'ಯ ಪ್ರಥಮಸಂಧಿ ಪದ್ಯ ೨೬ ರಲ್ಲಿ ತಾನು ಈ ಮೊದಲು 'ಸುದರುಸನ ಚರಿತೆ'ಯನ್ನು ರಚಿಸಿರುವುದಾಗಿ ಹೇಳಿದ್ದಾನೆ. ಅದೃಷ್ಟವಶಾತ್ ಈ ಕೃತಿಯ ಓಲೆಪ್ರತಿಯೊಂದು[2] ಉಪಲಬ್ಧವಿದ್ದು ಮೂಡಬಿದರೆಯ 'ಚೌಟರ ಧರ್ಮಸಾಮ್ರಾಜ್ಯ' ದಲ್ಲಿದೆ. ಅದರಲ್ಲಿ ಕವಿ ತಾನು 'ಸುದರ್ಶನ ಚರಿತೆ'ಯನ್ನು ಶಾಲಿವಾಹನ ಶಕೆ ೧೪೦೬ (= ಕ್ರಿ. ಶ. ೧೪೮೪-೮೫) ರಲ್ಲಿ ವಿರಚಿಸಿದಂತೆ ತಿಳಿಸಿರುವನು. ಈ ಕಾರಣದಿಂದ ನೇಮರಸ ೧೫ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿ ತನ್ನ ಕೃತಿಗಳನ್ನು ರಚಿಸಿದನೆಂಬುದರಲ್ಲಿ ಸಂಶಯವಿಲ್ಲ.

●

ಎಸ್. ಶಿವಣ್ಣ

---

೧ ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೭೦)

೨ ಕೆ. ಭುಜಬಲಿಶಾಸ್ತ್ರೀ — ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚಿ (೧೯೪೮), ಪು. ೨೬೯.

೧. ಕುರುಗೋಡಿನ ಉಜ್ವಲರಾಯನ ಗುಡಿ

ಉಜ್ವಲರಾಯನ ಪೇಟೆ, ಕುರುಗೋಡಿನ ಅತಿ ಪ್ರಾಚೀನವಾದ ಅವಶೇಷಗಳನ್ನು ಹೊಂದಿದೆ. ಇಲ್ಲಿಯೇ ಇರುವ ಕತ್ತೆಬಂಡೆಯ ಮೇಲೆ ಎರಡನೆಯ ಪುಲಕೇಶಿಯ ಶಾಸನವಿದೆ. ಇದಕ್ಕೆ ಹತ್ತಿರದಲ್ಲಿಯೇ ಉಜ್ವಲರಾಯನ ಗುಡಿ ಇದೆ. ಈ ದೇವಸ್ಥಾನವು ಗರ್ಭಗೃಹ, ಅಂತರಾಳ, ಕಂಬಗಳ ಮೊಗಸಾಲೆ ಮತ್ತು ಚಿಕ್ಕ ಮಂಟಪವನ್ನು ಒಳಗೊಂಡಿದ್ದು ದೇವಸ್ಥಾನದ ಎದುರುಭಾಗದಲ್ಲಿ ನಂದಿ ಮಂಟಪವಿದೆ. ಗರ್ಭಗೃಹದ ಮೇಲೆ ಕದಂಬನಾಗರ ಶಿಖರವಿದೆ.

ದೇವಾಲಯದ ಅಂತರಾಳದ ದ್ವಾರಶಾಖೆಗಳ ಕೆಳಭಾಗದಲ್ಲಿ ಚೌರಿಯನ್ನು ಹಿಡಿದಿರುವ ಎರಡು ಮೂರ್ತಿಗಳನ್ನು ಕೆತ್ತಲಾಗಿದೆ. ಇವು ತ್ರಿಭಂಗಿಯಲ್ಲಿವೆ. "ಶ್ರೀ ಲೋಕಾಪುರದ ದೇಚಲದೇವಿ" ಎಂಬ ಒಂದೇ ಶಾಸನವನ್ನು ಈ ಎರಡೂ ಮೂರ್ತಿಗಳ ಕೆಳಭಾಗದಲ್ಲಿ ಕೊರೆಯಲಾಗಿದೆ. ಈ ಶಾಸನದ ಆಧಾರದಿಂದ ಲೋಕಾಪುರದ ಏಚಲದೇವಿಯು ದೇವಸ್ಥಾನವನ್ನು ಕಟ್ಟಿಸಿದಳೆಂದು ಊಹಿಸಲು ಎಡೆಯುಂಟು.

೨. ಮೇಗುಡಿಯ ಹಿಂದೆ ಇರುವ ಕೆಲವು ಶಾಸನಗಳು

ವಾತಾಪಿ ಚಾಳುಕ್ಯ ಅರಸರ ಕಾಲದ ಮುಖ್ಯ ಪಟ್ಟಣಗಳಲ್ಲಿ ಒಂದಾದ ಅಯ್ಯಾವೊಳೆ ಅನೇಕ ದೇವಾಲಯಗಳನ್ನೂ ಶಾಸನಗಳನ್ನೂ ಹೊಂದಿರುವುದು ಸರ್ವವಿದಿತ. ಅಲ್ಲಿಯ ಮೇಗುಡಿ ಜಿನಾಲಯದ ಹಿಂಭಾಗದ ಬಂಡೆಗಲ್ಲುಗಳ ಮೇಲೆ ಅನೇಕ ಚಿಕ್ಕ ಶಾಸನಗಳನ್ನು ಕೊರೆಯಲಾಗಿದೆ. ಇವು ಮೇಗುಡಿಯ ರವಿಕೀರ್ತಿಯ ಶಾಸನಕ್ಕಿಂತ ಹಳೆಯವು. ಆರನೆಯ ಶತಮಾನದಲ್ಲಿ ಕೊರೆಯಲ್ಪಟ್ಟ ಇವುಗಳಲ್ಲಿ ಹಲವು ಕುತೂಹಲಕಾರಿ ಹೆಸರುಗಳಷ್ಟೆ ಕಂಡುಬರುತ್ತವೆ. ಅವೆಲ್ಲಾ ಒಂದೊಂದೇ ಹೆಸರಿನ ಶಾಸನವಾಗಿವೆ. ಬಹುಶಃ ಈ ಹೆಸರುಗಳು ಯಾತ್ರಿಕರು ಕೊರೆದ ಅವರವರ ಹೆಸರುಗಳಾಗಿರಬಹುದು. ಇಂತಹ ಅನೇಕ ಹೆಸರುಗಳಲ್ಲಿ ಹಲವು ಮಳೆ-ಬಿಸಿಲಿನ ಹೊಡೆತಕ್ಕೆ ಈಡಾಗಿ ಸವೆದುಹೋಗಿವೆ. ಉಳಿದವು ಕೆಳಗಿನಂತಿವೆ.

೧ ಶ್ರೀಯನ್
೨ ಮನವಶನ್
೩ ಮುರಿಗುಂತಿ
೪ ಮುರಿಗುಂದಿ
೫ ಚಿತ್ರನ್
೬ ಸಿದ್ಧಮ
೭ ಶ್ರೀಮಾರ್ಗನ್
೮ ಸಾನ್ತಿವುಗ
೯ ಸುರತನ್
೧೦ ನನ್ದೀಸ್ವರನ್
೧೧ ಶ್ರೀ ಸವಗುಮಿ
೧೨ ಶ್ರೀ ಕಾನ್ಥ(?) ಪುತ್ರನ್
೧೩ ಕಲ್ಕಿಬರಾಸಿ
೧೪ ಶ್ರೀಬಲೊಬಮಸು

ಈ ಹೆಸರುಗಳು ಸ್ಪಷ್ಟವಾಗಿ ಯಾವ ವಿಷಯವನ್ನು ಒಳಗೊಂಡವಲ್ಲ; ಕೇವಲ ವ್ಯಕ್ತಿನಾಮವಾಗಿ ನೋಡುಗನ ಕುತೂಹಲವನ್ನು ಕೆರಳಿಸುವ ತಮ್ಮ ಪ್ರಭಾವದ ಮುದ್ರೆಯೊತ್ತುತ್ತವೆ. ಏನಿದ್ದರೂ, ವಿಷಯವೇ ಇಲ್ಲದ ಈ ಹೆಸರುಗಳು ಯಾತ್ರಿಕರ ಹೆಸರುಗಳೇ ಇರಬಹುದೆಂದು ಹೇಳಲು ಸಾಧ್ಯವಿದೆ. ಅಲ್ಲದೆ

೧. ಶ್ರೀ ರಜಕೊಮರ
೨. ಉದವತಿ

ಎಂಬ ಎರಡು ಹೆಸರುಗಳನ್ನು ಮೇಗುಡಿಯ ಮಾಳಿಗೆಯ ಮೇಲಿನ ಕಲ್ಲು ಚಪ್ಪಡಿಯ ಮೇಲೆ ಕೊರೆಯಲಾಗಿದೆ. ಈ ಶಾಸನಗಳು ಇನ್ನೂ ಬೆಳಕು ಕಂಡಿಲ್ಲ.

ಎಸ್. ರಾಜಶೇಖರ

ಗ್ರಂಥಾವಲೋಕನ

ನನ್ನ ಪಯಣ (ಕವನಸಂಕಲನ) : ರಘುರಾಮರಾವ ಬೈಕಂಪಾಡಿ ಗೀತಾ ಬುಕ್‌ಹೌಸ್ ಮೈಸೂರು, ೧೯೭೨. **ಬೆಲೆ : ೫ ರೂಪಾಯಿ, ಪುಟ : ೧೦ + ೬೨**

ಕನ್ನಡಕಾವ್ಯ ಎರಡು ಭಿನ್ನವಾದ ಮಾರ್ಗದಗುಂಟ ಸಾಗಿ, ಸಾಕಷ್ಟು ಬೆಳವಣಿಗೆ ಸಾಧಿಸಿರುವ ಕಾಲದಲ್ಲಿ, ಎರಡೂ ಮಾರ್ಗಗಳ ಉತ್ತಮಾಂಶಗಳನ್ನು ಕ್ರೋಢೀಕರಿಸಿಕೊಂಡ 'ಸುವರ್ಣಮಾಧ್ಯಮ'ದ ಕಾವ್ಯವು ನಮ್ಮೆದುರು ಬಂದಾಗ ಕಾವ್ಯನಿರ್ಮಾಣದ ಬಗ್ಗೆ ಒಂದು ತರದ ಬೆರಗು ಹುಟ್ಟುವದರೊಂದಿಗೆ ಅದು ಸಾಧ್ಯವಾದುದರ ಕುರಿತು ಅಭಿಮಾನವೂ ಉಂಟಾಗುತ್ತದೆ. ಶ್ರೀ ರಘುರಾಮರಾವ ಬೈಕಂಪಾಡಿಯವರ 'ನನ್ನ ಪಯಣ' ಆ ದೃಷ್ಟಿಯಿಂದ ಹೊಸ ಆಸೆಯನ್ನು ಹುಟ್ಟಿಸುವ ಮಹತ್ವಾಕಾಂಕ್ಷಿ ಕವನಸಂಕಲನ.

ಸು. ೧೯೫೮–೧೯೭೨ರ ವರೆಗಿನ ವ್ಯಾಪಕವಾದ ಅವಧಿ (ಈ ಅವಧಿಯಲ್ಲಿಯೇ ಕನ್ನಡಕಾವ್ಯ 'ನವ್ಯತೆ'ಯ ಸೆಳವಿಗೆ ಸಿಕ್ಕು ತನ್ನ ಜೀವಂತಿಕೆಯ ಸಲ್ಲಕ್ಷಣಗಳನ್ನು ತೋರಿದ್ದು) ಯಲ್ಲಿ ರಚನೆಗೊಂಡ ಇಲ್ಲಿನ ಕವನಗಳ ಮೂಲ ಪ್ರೇರಣೆ: ಕವಿಯ ಆತ್ಮಗತ ಅನಿಸಿಕೆಗಳಾದ ಜೀವನಾದರ್ಶ, ಪ್ರಕೃತಿಯ ಚೆಲುವು–ಒಲವು ಹಾಗೂ ಲಘುಮನಸ್ಸಿನ ಹಲವು ಲಹರಿಗಳು.

ಸತ್ವಯುತ ಕವಿತಾರಚನೆಗಾಗಿ ಪ್ರಜ್ಞಾಪೂರ್ವಕ ಛಲ ತೊಟ್ಟ ಈ ಕವಿಯ ಜೀವನದೃಷ್ಟಿ, ಅಭಿರುಚಿ ಅತ್ಯಂತ ಉಚ್ಚಮಟ್ಟದ್ದು. ನವೋದಯಕಾವ್ಯ ಮಾರ್ಗದ ಆದರ್ಶಪರ ದೃಷ್ಟಿಕೋನ, ಬೈಕಂಪಾಡಿಯವರಲ್ಲಿ ಬರಿ ಘೋಷಣೆ ರೂಪದಲ್ಲಿ (ಹೆಚ್ಚು ಸಲ) ಬರದೆ ಅವರ ಜೀವನದ ಉಸಿರಾಗಿ ಬರುತ್ತಿವೆಯೆಂಬುದು ಗಟ್ಟಿಮುಟ್ಟಾದ ಈ ಸಾಲುಗಳಿಂದ ಮನವರಿಕೆಯಾಗುತ್ತದೆ :

ನೆರಳಿರಲಿ ಬಿಸಿಲಿರಲಿ ಹಸಿದ ಹುದಿಲೇ ಬರಲಿ
ನಲ್ಮೆಯಾಗಸದಡಿಯೆ ನನ್ನ ಪಯಣ
ಕಾಲ್ಕುಸಿವ ಉಸುಕಿರಲಿ ಕುರುಡು ಕತ್ತಲು ತರಲಿ
ಉಸಿರೊಳಗೆ ಶ್ರುತಿಗೊಂಡ ಸಾಮಗಾನ

೧೯೫೮ರ ಹೊತ್ತಿಗೆ ಕಾವ್ಯಕೃಷಿ ಆರಂಭಿಸಿದ್ದರೂ ಶ್ರೀ ರಘುರಾಮರಾಯರು ಅದೇ ಆಗ ಪ್ರಬುದ್ಧಮಾನಕ್ಕೆ ಬರುತ್ತಲಿದ್ದ ನವ್ಯ ಮನೋಧರ್ಮ, ಶೈಲಿಗಳಿಂದ

ಪ್ರಭಾವಿತರಾದಂತೆ ಕಾಣುವುದಿಲ್ಲ. ರಸಸಂಪ್ರದಾಯದ ಗಂಭೀರ ಚಿಂತನೆಯ ಮಾರ್ಗವನ್ನು ಮಾತ್ರ ಸುರುವಿನಿಂದಲೇ ಆತ್ಮಸಾತ್ ಮಾಡಿಕೊಂಡವರಾದ್ದರಿಂದ, ಕವಿತೆ ಇವರ ಪಾಲಿಗೆ ಭಾಷೆಯಲ್ಲಿಯ ಮೋಹಕ ಆಟವಾಗಿ ಪರಿಣಮಿಸದೇ ಹೋಗಿರುವ ಸಂಗತಿಯನ್ನು ಗಮನಿಸಬಹುದು. ಈ ಕವಿ ಗ್ರಹಿಸುವ ಅನುಭವ ವಲ್ಲಿ ಅನನ್ಯತೆ ಇರದಿದ್ದರೂ ನಿರೂಪಣಾವಿಧಾನದಲ್ಲಿ ಸಾಂಪ್ರತೆ ಸಾಧ್ಯವಾಗ ದಿದ್ದರೂ ಕವಿಯ ಸುಸಂಸ್ಕೃತ ಮನಸ್ಸಿನ ಆವಿರ್ಭಾವಗಳಿಗೆ ಮಾತ್ರ ಕುಂದು ಉಂಟಾಗಿಲ್ಲವೆಂಬುವನ್ನು ಪರಿಶೀಲಿಸಿದಾಗ ನಮ್ಮ ಗಮನ, ಈ ಅಂಶದತ್ತ ಹರಿಯುತ್ತದೆ.

ತಮ್ಮ ಭಾವವಿಲಾಸದ ವೈವಿಧ್ಯಮಯ ಪ್ರದರ್ಶನಕ್ಕೆ ಸ್ವತಂತ್ರ ಧಾಟಿ-ಧೋರಣೆಗಳನ್ನು ರೂಪಿಸಿಕೊಂಡಿರುವ ಈ ಕವಿಯ ಹಲವು ಕವಿತೆಗಳ ಗುಣಾವ-ಗುಣಗಳನ್ನು ಹೀಗೆ ವಿಸ್ತರಿಸಬಹುದಾಗಿದೆ:

'ಮಿಂಚು ಸಂಜಿನ ಚಂಚಲೆಗೆ', 'ನೆಲದ ಕರೆ', 'ನಾನು ಮತ್ತು ಬಾನು'— ಇವು ಕವಿಪ್ರಕೃತಿಯಲ್ಲಿ ಕಂಡ ಹೊಸನೋಟವನ್ನು ಸಾಧಾರಣ ಮಟ್ಟದಲ್ಲಿ ನಿರೂಪಿಸುವ ಪದ್ಯಗಳು. ಭಾಷೆಯ ಅಡೆತಡೆಯಿಲ್ಲದ, ಭಾವ ಶ್ರೀಮಂತಿಕೆಗೆ ತಕ್ಕ ಮಾತುಗಳು ಮಾತ್ರ ಇಲ್ಲಿ ಹೆಣೆಯಲ್ಪಟ್ಟಿವೆ. ಪ್ರಕೃತಿ ಯಲ್ಲೂ ಒಲವನ್ನರಸುವ ಕವಿಪ್ರಕೃತಿಯು ಸಾಂಪ್ರದಾಯಕವಾದದ್ದೆಂಬುವನ್ನು ಲಕ್ಷಿಸಿದಾಗ, ಮನುಷ್ಯ ಸಂಬಂಧದ ಬಗ್ಗೆ ಬೈಕಂಪಾಡಿಯವರು ಬರೆಯುವ ಪದ್ಯಗಳು, ಅವರ ಅಂತರಂಗವು ಸೂಕ್ಷ್ಮತ್ವವನ್ನು ಇನ್ನಷ್ಟು ನವುರಾಗಿ ತೋರ ಬಲ್ಲವೆಂಬ ಆಸೆ ಹುಟ್ಟುತ್ತದೆ.

ಕಾವ್ಯರಚನೆಯ ತೀರ ಆರಂಭಕಾಲದಲ್ಲಿ ಬರೆಯಲ್ಪಟ್ಟ 'ಕೆಳೆಯನಿಗೆ', 'ಕರೆ', 'ಮಗು'—ಈ ಕವನಗಳಲ್ಲಿ ಕವಿಯ ಭಾವ-ವಿಚಾರಗಳು ಭಾಷೆಯ ತಕ್ಕ ಸ್ಪಂದನವಿಲ್ಲದೆ ತಮ್ಮ ಆಶಯದಲ್ಲಿ ವಿಫಲಗೊಂಡಿದ್ದನ್ನು ಕಾಣುತ್ತೇವೆ. ಸುಭಗತೆ, ಸರಳತೆ ಇದ್ದರೂ ಅತಿಯಾದ ಭಾವುಕತೆಯ ಪ್ರದರ್ಶನದಿಂದ ಇಂಥ ಕವಿತೆಗಳಿಗೆ ಒಂದು ಹಂತದಲ್ಲಿ ಪರಿಮಿತಾವಸ್ಥೆ ದೊರಕಿಬಿಡುತ್ತವೆ.

'ನಿನ್ನ ಮೆಚ್ಚುಗೆಯ ಕಿರುನಗೆಯೊಂದನು ಹೊರತು | ಹೆಚ್ಚೇನು ಬೇಕು ನನಗೆ?' ಹಾಗೂ 'ಇಲ್ಲ ಇಲ್ಲ, ಕ್ಷಣ ನಿಲ್ಲಲಾರೆ ಇದೊ ಹೊರಟೆನೀಗ ಕೆಳೆಯ | ಎಲ್ಲಿಗೆಂಬ ಆ ಗೊಡವೆ ಸಲ್ಲ ನಂಬಿರುವೆ ಬಾಳ ಸೆಲೆಯ'—ಎಂಬ ಸಾಲುಗಳಲ್ಲಿ ಕವಿಯ ಭಾವಮಿತಿಯಿಂದಾಗಿ ಬೋಳೆತನದ ತೀರ್ಮಾನಗಳು ವ್ಯಕ್ತವಾಗು ತ್ತವೆ. ವಿಷಣ್ಣತೆಯ ನೋವನ್ನು ನಾಟಕೀಯವಾಗಿ ನಿರೂಪಿಸಬಹುದಾದ ಸಾಧ್ಯತೆ ಯನ್ನು ಕವಿ ಇಂಥಲ್ಲಿ ಕಳೆದುಕೊಳ್ಳುತ್ತಾನೆ. 'ನೀವು ಏನೇ ಹೇಳಿ' ಕವಿತೆಯ ಶೀರ್ಷಿಕೆಯು ವಸ್ತುವಿನ ಆಶಯದಷ್ಟೇ ಸಾಂಕೇತಿಕವಾಗಬಹುದಿತ್ತು.

'ನೀ ಬರುಪಿಯೆಂದು', 'ನಮ್ಮ ಒಲವು', 'ನನ್ನವಳು'—ಪ್ರೇಮ ಕವನಗಳು. ನಿರೀಕ್ಷಣೆ, ಕಾತುರ, ಸಂತೃಪ್ತಭಾವಗಳು ಇಲ್ಲಿ ರಮ್ಯನಾದದ ಮೂಲಕ ಹೊರಹೊಮ್ಮಿವೆ. 'ನಮ್ಮ ಒಲವು' ಸೂತ್ರೀಕೃತ ಪದ್ಯವಾಗಿ ಪರಿಣಮಿಸಿದೆ. ಈ ಕವಿಯ ಅಂತರ್ಮುಖೀ ವ್ಯಕ್ತಿತ್ವದ ನಿಲುವುಗಳು 'ನಾವಿಕನಿಗೆ' ಪದ್ಯದಲ್ಲಿ ಪ್ರಬುದ್ಧವಾಗಿ ವ್ಯಕ್ತವಾಗಿವೆ.

'ಅಭಿಸಾರಿಕೆ' ರವೀಂದ್ರರ ಭಾವದುನ್ಮೀಲನ ಧಾಟಿಯಿಂದ ಪ್ರೇರಿತವಾದ ಪದ್ಯದಂತಿದೆ. ಲಾಲಿತ್ಯಪೂರ್ಣ ಲಯಗಾರಿಕೆಯಿಂದ ಇನ್ನೂ ಸೊಗಸಾಗಬಹುದಾಗಿದ್ದ ಈ ಕವಿತೆ, ಸಂಸ್ಕೃತದ ಕ್ಲಿಷ್ಟ ಪದಪ್ರಯೋಗದಿಂದ ತುಸು ಒರಟಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ 'ಎಲ್ಲಿ', 'ಜಾಡು'ವಿನಂತಹ ಪದ್ಯಗಳು ಹಾಡಿನ ಗುಣದಿಂದ ಆಕರ್ಷಿಸುತ್ತವೆ. ಕವಿಯ ದರ್ಶನಶಕ್ತಿಯನ್ನು ಸಾರ್ಥಕವಾಗಿ ಪ್ರದರ್ಶಿಸಬಹುದಾಗಿದ್ದ 'ಹೂ-ಬೆಳಕು' ಕವಿತೆ ಭಾಷೆಯ ದುಂದುಗಾರಿಕೆಯಿಂದಾಗಿ ತನ್ನ ಆಶಯದಿಂದ ದೂರ ನಿಲ್ಲುತ್ತದೆ. ಅತಿಯಾದ ಮಾತುಗಾರಿಕೆಯಿಂದಾಗಿ 'ಪಯಣಿಗನು ಕೇಳಿದ್ದು' ಕೂಡ ಸಡಿಲವಾಗಿದೆ. ಓದುಗನ ಮನ ಸೂರೆಗೊಳ್ಳಬಲ್ಲ ಜೋಡುಸಾಲಿನ ರಚನೆಗಳು ಲಘುವಾದ ಭಾವವಿಲಾಸದಿಂದ ಕೂಡಿವೆ.

ಬೈಕಂಪಾಡಿಯವರ ತೀರ ಇತ್ತೀಚಿನ ಪದ್ಯಗಳನ್ನು ಗಮನಿಸಿದಾಗ ಸಮ್ಮಿಶ್ರ ಬಗೆಯ ಬೆಳವಣಿಗೆಯು ಕಾಣಸಿಗುತ್ತದೆ. 'ನಮ್ಮೂರ ಶಾಲೆ'. 'ರಿಕ್ತ', 'ನನ್ನ ಪಯಣ'— ಇವು ಮುಖ್ಯವೆಂದು ತೋರುವ ರಚನೆಗಳು. ವಿರಳವಾದ ವರ್ಣನೆಯಿಂದ, ಸೊಗಸಾಗಿ ವಿಡಂಬಿಸಬಲ್ಲ ಕಾವ್ಯಪ್ರತಿಭೆಯನ್ನು 'ನಮ್ಮೂರ ಶಾಲೆ'ಯಲ್ಲಿ ಗುರುತಿಸಬಹುದು. ಆದರೆ ಪರಸ್ಪರ ವಿರುದ್ಧವೆನಿಸುವ ಹೇಳಿಕೆಗಳಿಂದ (ಆಭಾಸದ ಉದ್ದೇಶವೇ ವ್ಯಂಗ್ಯವೆ?) ಕವಿಯ ವ್ಯಂಗ್ಯ ದೃಷ್ಟಿಯು ಅಸ್ಪಷ್ಟ ಹಾಗೂ ಗೊಂದಲದ್ದಾಗುತ್ತದೆ. ಅನಿಸಿಕೆಯಲ್ಲಿ ವಟ್ಟತೆಯಿಂದಾಗಿ 'ರಿಕ್ತ' ಹಾಗೂ 'ನನ್ನ ಪಯಣ' ಕವಿತೆಗಳು ಬೈಕಂಪಾಡಿಯವರ ನಾಳಿನ ಬೆಳವಣಿಗೆಯನ್ನು ಭರವಸೆಯಿಂದ ನಿರೀಕ್ಷಿಸುವಂತೆ ಮಾಡುತ್ತವೆ.

ಭಾವವಿಸ್ತರಣೆಯಲ್ಲಿ ಬೆಡಗಿದ್ದರೂ ಕವಿತೆಯ ಮೂಲಕ ತನ್ನನ್ನು ಆಳವಾಗಿ, ತಾತ್ತ್ವಿಕವಾಗಿ ಶೋಧಿಸಿಕೊಳ್ಳುವ ಸೃಜನಶೀಲ ಹೋರಾಟವು ಬೈಕಂಪಾಡಿಯವರ ಉತ್ತಮವೆನ್ನಬಹುದಾದ ಪದ್ಯದಲ್ಲಿಯೂ ಕಾಣಸಿಗುವುದಿಲ್ಲ. ಆದರೆ ಈ ದಿಸೆಯಲ್ಲಿ ಅವರು ನಿಷ್ಠೆಯಿಂದ ಕಾರ್ಯಪ್ರವೃತ್ತರಾಗಬಲ್ಲರೆನ್ನುವುದಕ್ಕೆ—

……………

ಬಿಸಿಲ ನೆಳಲನು ಮಂಜಿಗಿಳಿಸಿ ಚಿತ್ತದ ಸುತ್ತ
ಹೊತ್ತು ಮೆತ್ತುವ ಹಿಮವನುದುರಿಸುತ್ತ
ಬಾಳುದ್ದ ನನ್ನ ಪಯಣ;
ಅನಿಮೇಷ ಸಾಕ್ಷಿ ನಕ್ಷತ್ರ ಭ್ರಮಣ.

ಎಂಬ ಧೋರಣೆಯು ಭರವಸೆ ಹುಟ್ಟಿಸುತ್ತದೆ. ಆದರೆ,

ಬೇಲಿ ಬಿಟ್ಟಷ್ಟೆ ನೋಡುವುದೆ ನನ್ನ ಹದನ', 'ಬೇಡ ನನಗೆ
ಮುಸುಕಿನೀ ಮಂತ್ರತಂತ್ರದ ಮೋಡಿ', 'ಬರಿದೆ ಕಾದಿರುತ್ತೇನೆ
ತೆಪ್ಪಗೆ ತೆರವಾಗಿ ಕೂತು ಹೊಸಿಲಲ್ಲಿ. ಬರಲಿ ತಾನಾಗಿ, ಜೀವ
ಜೀವನದ ಸಹಜ ಮಿಡಿತಕ್ಕೆ ತೆರೆಯುತ್ತ ಸತತ
ನೈಜ ನಿಷ್ಕೃತಿಯ ಪಥ ತಾನ ಲಯ ಸಂಗೀತ……

ಎಂಬ ಧ್ವನಿ-ಧೋರಣೆಗಳು ಈ ಕವಿಯನ್ನು ಎಲ್ಲಿ ನಿಷ್ಕ್ರಿಯಗೊಳಿಸುತ್ತವೆಯೋ ಎಂಬ ಅನುಮಾನಕ್ಕೆ ಆಸ್ಪದವೀಯುವಂತಿವೆ. ಜೀವನಾನುಭವಗಳ ಶೋಧನೆಯಲ್ಲಿ ಈ ಕವಿ, ಉದಾಸೀನತೆ ತೋರಲಾರರೆಂದೂ ಆ ಮೂಲಕ ತಮ್ಮ ಕಾವ್ಯಸೃಷ್ಟಿಯ ಸಹಜ ಬೆಳವಣಿಗೆಗೆ ತಾವೇ ಮಾರಕಲಾಗರಾರರೆಂದೂ ಈಗ ಹಾರೈಸಬೇಕಷ್ಟೆ.

ಕವಿ ಸು. ರಂ. ಎಕ್ಕುಂಡಿಯವರ ಸಹೃದಯಪೂರ್ವಕ ಮುನ್ನುಡಿ, ಅಂದವಾದ ಮುದ್ರಣ, ಒಪ್ಪವಾದ ಮುಖಪುಟ—ಇವು 'ನನ್ನ ಪಯಣ'ದ ಆಕರ್ಷಕ ಅಂಶಗಳು.

ಗಿರಿಯ ಪರಂಜ್ಯೋತಿ : (ಕವನಸಂಕಲನ) ಎಸ್. ಎಸ್. ಕೋತಿನ
ಅಪೂರ್ವ ಪ್ರಕಾಶನ, ಚಿಕ್ಕೋಡಿ ೧೯೭೩. ಬೆಲೆ : ೩ ರೂಪಾಯಿ. ಪುಟ : ೧೨ + ೭೦

ಎಸ್. ಎಸ್. ಕೋತಿನ ಅವರ 'ಗಿರಿಯ ಪರಂಜ್ಯೋತಿ'ಯು ಅಕ್ಕ ಮಹಾದೇವಿಯ ಸಾದ್ಯಂತ ಜೀವನವನ್ನು ತ್ರಿಪದಿ ಛಂದೋರೂಪದಲ್ಲಿ ನಿರೂಪಿಸುವ ಚಾರಿತ್ರಿಕಕಾವ್ಯವಾಗಿದೆ. ಈ ವರೆಗೆ ಈ ಕವಿಯ ಬಿಡಿ ಕವಿತಾರಚನೆಗಳು ಎಲ್ಲಿಯೂ ಪ್ರಕಟಗೊಂಡಿಲ್ಲ; ಆದರೆ ಅವರು ಭಾವಗೀತೆಯಂತಹ ಲಘುರಚನೆಗಳಲ್ಲಿ, ಅದೂ ಜಾನಪದ ಪುಸ್ಕಾರಿನ ವಿಶಿಷ್ಟ ಧಾಟಿ-ಧ್ವನಿಗಳಲ್ಲಿ-ತಕ್ಕಮಟ್ಟಿಗೆ ಕಾವ್ಯಸೃಷ್ಟಿಯಲ್ಲಿ ತೊಡಗಿ ಅದರ ಸಾಧ್ಯತೆಗಳನ್ನು ಮನಗಂಡಂತೆ ತೋರುತ್ತದೆ. ಕೋತಿನರು ತುಂಬ ಆಶಾವಾದಿಗಳು; ಪ್ರಯತ್ನಶೀಲರು. ಏಕೆಂದರೆ ಕವಿ

ಯಾಗಿ ಕಾವ್ಯಲೋಕವನ್ನು ಒಂದು ಅಖಂಡ (ಗಾತ್ರದಲ್ಲಿ ಚಿಕ್ಕದಾದರೂ) ಕಾವ್ಯಕೃತಿಯ ಮೂಲಕ ಅವರು ಪ್ರವೇಶಿಸುತ್ತಿದ್ದಾರೆ. ಹಾಗೆ ಪ್ರವೇಶಿಸುವ ಮುನ್ನ ತಮ್ಮ ಕವಿತಾಶಕ್ತಿಗಿರುವ ಪರಿಮಿತಿಗಳನ್ನವರು ಸ್ಪಷ್ಟವಾಗಿ ಕಂಡು ಕೊಂಡಿರುವುದನ್ನು ಲಕ್ಷಿಸಿದಾಗ ಈ ಕವಿಯ ಪ್ರಾಮಾಣಿಕತೆಯ ಬಗ್ಗೆ ಮೆಚ್ಚು ಗೆಯೂ ಸಾಹಿತ್ಯನಿಷ್ಠೆಯ ಬಗೆಗೆ ಕುತೂಹಲವೂ ಮೂಡುತ್ತದೆ.

'ಗಿರಿಯ ಪರಂಜ್ಯೋತಿ'ಯ ವಸ್ತು ಹಾಗೂ ಆವರಣ ಇವೆರಡೂ ತೀರ ಸಾಂಪ್ರದಾಯಿಕ ಮೂಲದಿಂದ ಆಯ್ದುಕೊಂಡವುಗಳು. ಕನ್ನಡ ಸಾಹಿತ್ಯೇತಿಹಾಸ ದಲ್ಲಿ ಈಗಾಗಲೇ ಹರಿಹರ, ಚಾಮರಸ, ಬಸವಾಂಕರಂತಹ ಕವಿಗಳಿಂದಲೂ ಹೊಸಗನ್ನಡದ ಗದ್ಯಕಾರರಿಂದಲೂ ಮಹದೇವಿಯಕ್ಕನ ಜೀವನಚರಿತ್ರೆ ಹಾಗೂ ಸಾಧನೆಗಳು ಕಾವ್ಯ, ಕಾದಂಬರಿ, ನಾಟಕ ರೂಪಗಳಲ್ಲಿ ಬೆಳಕಿಗೆಬಂದಿವೆ. ಅಕ್ಕನ ವಚನಗಳ ಮೂಲಕವೂ ಅವಳ ವ್ಯಕ್ತಿತ್ವ ಸ್ಫುಟಗೊಂಡಿದೆ. ಹೀಗೆ ಸಾಹಿತ್ಯ ದಲ್ಲಿ ಜನಮನದಲ್ಲಿ ಹಾಸುಹೊಕ್ಕಾಗಿ ಪ್ರಚುರಗೊಂಡಿರುವ ಕಥಾವಸ್ತುವನ್ನು ಕೋತಿನರು ತಮ್ಮ ಕಾವ್ಯಸೃಷ್ಟಿಗಾಗಿ ಆಯ್ದುಕೊಂಡಾಗ ಒಂದು ಮಹತ್ವದ ಸಮಸ್ಯೆ ಅವರನ್ನು ಕಾಡಿರಬೇಕು: ಜನಪ್ರಿಯವೂ ತಾತ್ತ್ವಿಕವೂ ತೀರ ಸ್ಪಷ್ಟ (ಧ್ವನ್ಯಾಂತರದ ಮೌಲ್ಯ ಕಳೆದುಕೊಂಡ)ವೂ ಆಗಿರುವ ಇಂಥ (ಕಥಾ) ವಸ್ತುವಿ ನಲ್ಲಿ ಕವಿಯಾಗಿ ತಾನು ಕಾಣಬೇಕಾದ ಹೊಸದರ್ಶನ ಯಾವುದು? ಯಾವ ಹೊಸನಿಟ್ಟಿನ ಆವಿಷ್ಕಾರದಿಂದ ತನ್ನ ಕವಿತೆ ಅನನ್ಯವಾಗಬಲ್ಲದು? ಎಂದು. ಸೃಜನಶೀಲನೂ ತನ್ನ ಕಾವ್ಯಾಭಿವ್ಯಕ್ತಿಯ ಅಭಿನವತೆಗಾಗಿ ಕಾಳಜಿ ಹೊಂದಿರು ವವನೂ ಆದ ಕವಿಗೆ ಇಂಥ ಸಮಸ್ಯೆ ಸ್ವಾಭಾವಿಕ. ಕೋತಿನರು ಕಾವ್ಯ ಸೃಷ್ಟಿಯ ಈ ಆತಂಕವನ್ನು ತಮ್ಮ ಪ್ರತಿಭೆಯ ಮಿತಿಯಲ್ಲಿಯೇ ಪರಿಹರಿಸಿ ಕೊಳ್ಳಲು ಜನಪದಶೈಲಿ, ಸಿದ್ಧ ಜನಪದ ಛಂದಸ್ಸನ್ನು ಆಶ್ರಯಿಸಿದ್ದು, ಅವರ ಜಾಣತನವನ್ನು ಜೊತೆಗೆ ಒಂದುಬಗೆಯ ಸೃಷ್ಟ್ಯಾತ್ಮಕ ಸೋಲನ್ನು ಎತ್ತಿ ತೋರಿಸುವ ಸಂಗತಿಯಾಗಿದೆ.

ಕೋತಿನರ ಕಾವ್ಯಾಭಿವ್ಯಕ್ತಿಯ ಈ ಅಂಶದತ್ತ ನನ್ನ ಗಮನ ಹರಿ ಯಲು ಕಾರಣವಿಷ್ಟೆ: ಕವಿ ತನ್ನ ಪ್ರತಿಯೊಂದು ರಚನೆಯ ಮೂಲಕವೂ ನೂತನವಾದುದನ್ನು ನೂತನ ರೀತಿಯಲ್ಲಿಯೇ ಸೃಷ್ಟಿಸುವುದಕ್ಕಾಗಿ ಹವಣಿಸು ತ್ತಿರುತ್ತಾನೆ. ಈ 'ಅನನ್ಯ ಪರತಂತ್ರ'ದ ಫಲವು ಅನುಭವ (ದರ್ಶನ) ಹಾಗೂ ಅನುಭವವು ಧರಿಸಿದ ರೂಪ (ಛಂದಸ್ಸು) ಎರಡಕ್ಕೂ ಅನ್ವಯಿಸುತ್ತದೆ. ಕವಿ, ಇಂಥ ಅನನ್ಯತೆ ಸಾಧಿಸುವಲ್ಲಿ ಸೋತಿರಬಹುದು; ಆದರೆ ತನ್ನ ಪ್ರತಿಭೆಗೆ ಮಾತ್ರವೇ ಗೋಚರವಾದ, ಸಾಧ್ಯವಾದ ಸೃಷ್ಟಿಗಾಗಿ ತಾನು ಹವಣಿಸಿದೆನಲ್ಲ ಎಂಬ

ಆತ್ಮತೃಪ್ತಿಯಾದರೂ ಆಗಿರುತ್ತವೆ; ಆ ಮೂಲಕ ಕಾವ್ಯಸಂಪ್ರದಾಯದ ಮರು ಹುಟ್ಟಿನ ಪ್ರಕ್ರಿಯೆಯೂ ಸಾಧ್ಯವಾಗುತ್ತದೆ.

ಈ ಕವಿಯ ಭಾವೀ ಪ್ರಯತ್ನಕ್ಕೂ ಬೆಳವಣಿಗೆಗೂ ಕೇವಲ ವಿಮರ್ಶಾತ್ಮಕ ತೋರುಬೆರಳಾಗಬಹುದಾದ ಮೇಲಿನ ಈ ಮಾತುಗಳನ್ನುಳಿದು, ನಾವು 'ಗಿರಿಯ ಪರಂಜ್ಯೋತಿ'ಯನ್ನು ಈಗಿರುವ ಅವಸ್ಥೆಯಲ್ಲೇ ಪರಿಶೀಲಿಸಿದಾಗ ಹಲವು ಸದ್ಗುಣಗಳು ಇಲ್ಲಿ ಕಾಣಸಿಗುತ್ತವೆ.

ಒಟ್ಟು ಆರು (ಷಟ್‌ಸ್ಥಲ ಕಲ್ಪನೆಯ ಪ್ರಭಾವವಿರಬೇಕು) ಸಂಧಿಗಳಲ್ಲಿ ವಿಸ್ತೃತವಾಗಿರುವ ಈ ಕಥನಕಾವ್ಯವು ಸಾಂಪ್ರದಾಯಿಕ ಧಾಟಿಯಲ್ಲಿಯೇ ಆರಂಭವಾಗಿದೆ. ದೇವತಾಸ್ತುತಿ, ಪೂರ್ವಕವಿಸ್ಮರಣೆಗಳಲ್ಲಿ ಹೆಚ್ಚು ಕಾಲಕಳೆಯದೆ, ನಾಡಿನ ವರ್ಣನೆಗೆ ಕವಿ ತೊಡಗುತ್ತಾನೆ. ಅಕ್ಕನ ಜೀವನ ವೃತ್ತಾಂತಕ್ಕೆ ತಕ್ಕುದಾದ ಸಾಂಸ್ಕೃತಿಕ ಹಿನ್ನೆಲೆಯನ್ನು ರೂಪುಗೊಳಿಸುತ್ತಾನೆ.

ಎರಡನೆಯ ಸಂಧಿಯಲ್ಲಿ ನಮ್ಮ ನಾಡಿನ ಪ್ರಾಕೃತಿಕ, ಸಾಂಸ್ಕೃತಿಕ ಬದುಕಿನ ಚಟುವಟಿಕೆಗಳು ಶಬ್ದಪ್ರತಿಮೆಗಳ ರೂಪದಲ್ಲಿ ಕಣ್ಣೆದುರು ಸುಳಿಯುತ್ತವೆ. ಗಿರಿಜೆಯ ಪಾತ್ರವಂತೂ ಟೀಕೆ ಹಾಗೂ ಸ್ತುತಿಗಳ ಹಿತವಾದ ಹೆಣಿಕೆಯಿಂದ ನಾಟಕೀಯವಾಗಿ ರೂಪುಗೊಂಡಿದೆ. ಕವಿಯ ನಾಟಕೀಯಪ್ರಜ್ಞೆಗೆ ಮೂರನೆಯ ಸಂಧಿಯಲ್ಲಿಯ ಮೆರವಣಿಗೆಯ ಸನ್ನಿವೇಶವನ್ನು ಗಮನಿಸಬೇಕು. ಹದಿನಾರರ ಹರೆಯದ ಅಕ್ಕಮಹಾದೇವಿಯನ್ನು ಕಂಡನಂತರ, ಕೌಶಿಕ ರಾಜನಲ್ಲಿ ಉಂಟಾದ ಭಾವಪ್ರಚೋದನೆ ತೀವ್ರತರವಾದುದು :

ಹರೆಯದ ಆ ಹೆಣ್ಣ ಮೆರೆಯುವುದು ಹೇಗಯ್ಯ
ಕರಗ್ಯಾಳೊ ಕಣ್ಣ ಮನದೊಳಗೆ | ಬ್ರಹ್ಮಯ್ಯ
ಕೊರಗಿ ಮರಣವನು ಅಪ್ಪುವೆನು ||

ಪಾತ್ರಗಳ ಮನಸ್ಸನ್ನು ಹೊಕ್ಕು ಭಾವನಾ ತುಡಿತವನ್ನೂ ತೀವ್ರತೆಯನ್ನೂ ಹೊರಗಿಕ್ಕುವ ಹವಣಿಕೆಯು ಈ ಕವಿಯಿಂದ ಅಪ್ರಯತ್ನಪೂರ್ವಕ ಸಾಧಿತವಾಗಿದೆ. ಅಕ್ಕನ ವಚನಗಳನ್ನೂ ವೀರಶೈವ ಧರ್ಮ–ಆಚರಣೆಯ ತತ್ವಗಳನ್ನೂ ತ್ರಿಪದಿಯ ಮಿತಿಗೆ ಸಾಂದ್ರೀಕರಿಸಿ, ಅಳವಡಿಸಿಕೊಳ್ಳುವ ಪ್ರಯತ್ನ ಸಫಲವಾಗಿದೆ (ಉದಾ., ೧–೨೩; ೨–೪೫; ೨–೩೮; ೬–೭ ಮತ್ತು ೮ ಇತ್ಯಾದಿ).

ಕೋತಿನರ ವರ್ಣಕಶಕ್ತಿ ಅಚ್ಚರಿಗೊಳಿಸುವಷ್ಟು ವೈವಿಧ್ಯವಾಗಿದೆ. ಜನಪದ ನುಡಿಯ ಲಯ, ಶಬ್ದಸಂಪತ್ತಿಯನ್ನು ಬೇರುಸಹಿತ ದಕ್ಕಿಸಿಕೊಂಡ ಇವರ ಪ್ರತಿಭೆ ಯಾವ ಸಂದರ್ಭದಲ್ಲಿಯೂ ಕವಿತೆಯನ್ನು ರಸಹೀನವಾಗಗೊಡುವುದಿಲ್ಲ. ಕೆಲವೆಡೆ ಸಂಸ್ಕೃತದ ಕೃತಕತೆ ಅನಿವಾರ್ಯವಾಗಿ ತಲೆಹಾಕುವು

ದುಂಟು. ಆದರೆ ಹೆಚ್ಚು ಮಟ್ಟಿಗೆ ಇವರ ಜನಪದಪ್ರಜ್ಞೆ ಹಾಗೂ ಅನುಭವಗಳು ಕಥನಕ್ರಿಯೆಗೆ ಗಾಢತೆಯನ್ನು ಒದಗಿಸುವದರೊಂದಿಗೆ ಸ್ವಾಭಾವಿಕ ವಾತಾವರಣ ನಿರ್ಮಾಣಕ್ಕೆ ಸಹಾಯವಾಗುತ್ತವೆ. ಇಂಥ ಅನುಕೂಲತೆ ಲಭಿಸಿರುವುದರಿಂದಲೇ ಕೇವಲ 'ಇನ್ನೊಂದು ಕತೆ'ಯಾಗಿ, 'ಹಾಡಾ'ಗಿ ಸಾಮಾನ್ಯ ಎಣಿಕೆಗೆ ಗುರಿಯಾಗ ಬಹುದಾಗಿದ್ದ ಕೃತಿಯು ಮರುಹುಟ್ಟಿನಲ್ಲಿಯೂ ತನ್ನ ವೈಶಿಷ್ಟ್ಯವನ್ನು, ಸಾರ್ಥ ಕತೆಯನ್ನು ತೋರಿಸುವಷ್ಟು ಜೀವಂತವಾಗಿದೆ.

ತ್ರಿಪದಿಯ ಗಣಯೋಜನೆಗೆ ಸರಿಹೊಂದುವ, ಜನಪದಕ್ಕೆ ತೀರ ಹತ್ತಿರವಾದ ಪದಪ್ರಯೋಗದಲ್ಲಿ ಕೋತಿನರಿಗೆ ತುಂಬ ಶ್ರಮವಿದೆ. ಆದಿಪ್ರಾಸದ ನಿಯತಿ ಯನ್ನೂ ತದ್ಭವರೂಪಗಳನ್ನು ಅತ್ಯಂತ ಸಹಜವಾಗಿ, ಸೊಗಸಾಗಿ ಸಮ್ಮಿಳಿತ ಗೊಳಿಸಿದ್ದಾರೆ. ಈ ಕವಿಯ ಭಾಷಾಬಳಕೆ ಎಷ್ಟು ಸ್ವಾಭಾವಿಕವಾದುದೆಂದರೆ— ಯಮಕಗಳ ಸಹಜ ವರ್ತನೆಯಲ್ಲಿ ಕಾಣಬಹುದು (ಉದಾ: ೧-೮ ರಲ್ಲಿ 'ಬತ್ತದ'; ೩-೮೪ ರಲ್ಲಿ 'ಅರಸು' ಪದಗಳು). ಕತೆ, ತತ್ತ್ವಗಳನ್ನು ಅತ್ಯಂತ ಪ್ರಜ್ಞಾ ಪೂರ್ವಕ ರಕ್ತಗತಮಾಡಿಕೊಂಡಿರುವುದರಿಂದ, ಜನಪದ ವಾಹನದ ಮೇಲೆ ನಡೆ ಯುವ ಈ ಕಾವ್ಯ ಮೆರವಣಿಗೆಯು ಅತ್ಯಂತ ಅಭೂತಪೂರ್ವವಾಗಿ ಪರಿಣಮಿ ಸುತ್ತದೆ.

"....... ಇಂಥ ಪ್ರಯತ್ನಕ್ಕೆ ಅದೆಷ್ಟರಮಟ್ಟಿಗೆ ವ್ಯಕ್ತಿತ್ವದ ಜೋಡು ಬೇಕಾಗುತ್ತವೆ ಎನ್ನುವುದರ ಅರಿವೂ ನನಗಿದೆ" (ನನ್ನ ಮಾತು) ಎಂಬ ಕವಿಯ ಎಚ್ಚರ ಮನನೀಯವಾಗಿದೆ. ಕಾವ್ಯದ ಬಗೆಗಿನ ಅವರ ಈ ತಿಳುವಳಿಕೆ ಬಹುಶಃ ಅಷ್ಟೊಂದು ಪ್ರಚುರವಲ್ಲದ, ಕಾವ್ಯವಾಣಿ ಇನ್ನೂ ಮಾರ್ಪಡದ ಕಥಾವಸ್ತುವನ್ನು ಬಳಸಿ, ಜಾನಪದ ಧಾಟಿಯಲ್ಲೇ ಆಗಲೊಲ್ಲದೇಕೆ ಕವಿತೆ ಮಾಡುವ ಪ್ರಯತ್ನಕ್ಕೆ ಅನ್ವಯಿಸುವದಾದರೆ ಹೆಚ್ಚು ಪ್ರಾಮಾಣಿಕವಾದೀತು; ಕಾವ್ಯಶಕ್ತಿಗೆ ನಿಜವಾದ ಸವಾಲಾಗಿ ಪರಿಣಮಿಸೀತು.

ಕೋತಿನರು ಸದ್ಯ ತಮ್ಮ ಬಳಿಯಲ್ಲಿ ನಿಧಿಯಂತಿರುವ ಭಾಷಾಶಕ್ತಿ, ಕಲ್ಪಕ ಶಕ್ತಿ ಹಾಗೂ ಬದುಕಿನ ಬಗೆಗಿನ ವ್ಯಾವಹಾರಿಕ ಕಾಳಜಿಗಳಿಂದ ಹೆಚ್ಚು ಮಹತ್ವಾ ಕಾಂಕ್ಷೀ ಕೃತಿರಚನೆಗೆ ತೊಡಗಲೆಂದು ಹಾರೈಸುತ್ತೇನೆ.

●

ಎಸ್. ಜಿ. ಬಿದರಕುಂದಿ

ಸಾದರಸ್ವೀಕಾರ

೧ **ಕವಿಗುರು ಜಚನಿ :**

ಸಂ : ಸಂಗಮೇಶ ಹಂಡಿಗಿ. ಪ್ರ : ಸಂಗಮ ಸಾಹಿತ್ಯಸದನ, ತೆಲಗಿ.
ಬೆಲೆ : ೬ ರೂಪಾಯಿ. ಪುಟ : xxxii + ೧೧೫

೨ **ಸುಶೀಲ ಕಿರಣ :**

ಎಂ. ಎಂ. ಕನಕೇರಿ. ಪ್ರ : ಸುಶೀಲ ಪ್ರಕಾಶನ, ಹುಬ್ಬಳ್ಳಿ-೨೦.
ಬೆಲೆ : ೨-೫೦ ರೂಪಾಯಿ. ಪುಟ : viii + ೫೬

೩ **ಅಕ್ವೇರಿ ಅವರ್ ವಿೂನು :**

ಮಲ್ಲಿಕಾರ್ಜುನ ಹಿರೇಮಠ. ಪ್ರ : ತಾರಾ ಗ್ರಂಥ ಪ್ರಕಾಶನ, ಧಾರವಾಡ.
ಬೆಲೆ : ೩ ರೂಪಾಯಿ. ಪುಟ : viii + ೬೨

೪ **ಕನ್ನಡ ಕವಿಗಳು :**

ಭೀಮರಾವ ಚಿಟಗುಪ್ಪಿ. ಪ್ರ : ದ್ವೈಪಾಯನ ಟ್ರಸ್ಟ, ಮುಂಬಯಿ-೫೭.
ಬೆಲೆ : ೫ ರೂಪಾಯಿ. ಪುಟ : ii + ೧೪೯

೫ **ಕನಕ ದರ್ಶನ :**

ವೆಂಕಟ್ರಾಯ ಆನಂದ ಶೆಣೈ. ಪ್ರ : ದ್ವೈಪಾಯನ ಟ್ರಸ್ಟ, ಮುಂಬಯಿ-೫೭.
ಬೆಲೆ : ೪ ರೂಪಾಯಿ. ಪುಟ : ೪ + ೧೪೦

೬ **ಸರ್ ವಿಲಿಯಮ್ ಜೋನ್ಸ್ :**

ಚಿದಂಬರ ಕುಲಕರ್ಣಿ. ಪ್ರ : ದ್ವೈಪಾಯನ ಟ್ರಸ್ಟ, ಮುಂಬಯಿ-೫೭.
ಬೆಲೆ : ೪ ರೂಪಾಯಿ. ಪುಟ : ೧೮೯

೭ **ಕೀರ್ತನಾಮೃತ :**

ಸಂ : ಪ್ರಿ. ಸಚ್ಚಿದಾನಂದ ಶರ್ಮ. ಪ್ರ : ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು.
ಬೆಲೆ : ೧ ರೂಪಾಯಿ. ಪುಟ : ೨೭

೮ **ಹೃದಯಗನ್ನಡಿ :**

ಪಿ. ಮುನಿಕುಮಾರ. ಪ್ರ : ಬಸವ ಸಮಿತಿ, ಸಿಂದಗಿ.
ಬೆಲೆ : ೩ ರೂಪಾಯಿ. ಪುಟ : ೧೩೫

೯ **ರಾಗಿಣಿ :**

ನಾರಾಯಣರಾವ ತಾಳಿಕೋಟ. ಪ್ರ : ರವೀಂದ್ರ ಪ್ರಕಾಶನ, ರಾಯಚೂರ.
ಬೆಲೆ : ೨ ರೂಪಾಯಿ. ಪುಟ : xv + ೭೯

೧೦ **ಮೋಹ-ಮುದ್ಗರ :**

ಅನು : ನಾರಾಯಣರಾವ ತಾಳಿಕೋಟ. ಪ್ರ : ರವೀಂದ್ರ ಪ್ರಕಾಶನ, ರಾಯಚೂರ.
ಬೆಲೆ : ೧ ರೂಪಾಯಿ. ಪುಟ : vii + ೧೯

ಪತ್ರಿಕೆಗಳು

ಕನ್ನಡ ನುಡಿ
ಅಭಿರುಚಿ
ಮತ್ಸ್ಯಲೋಕ
ರಾಷ್ಟ್ರೋತ್ಥಾನ ವಾರ್ತಾ

ಸಂಪಾದಕೀಯ

ಡಿ. ಲಿಟ್ ಗೌರವ ಪದವಿ :

ಭಾರತೀಯ ವಿಶ್ವವಿದ್ಯಾಲಯಗಳು ಮೇಧಾವಿ ವ್ಯಕ್ತಿಗಳಿಗೆ ಡಿ. ಲಿಟ್. ಗೌರವಪದವಿ ನೀಡುವ ಒಂದು ಯೋಗ್ಯ ಪರಂಪರೆಯನ್ನಿಟ್ಟುಕೊಂಡಿವೆ. ಈ ಪರಂಪರೆಯ ಪಥದಲ್ಲಿ ಮುನ್ನಡೆಯುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯ, ಈ ವರ್ಷದ ಪದವೀದಾನಸಮಾರಂಭ ಪ್ರಸಂಗದಲ್ಲಿ ಮಾನ್ಯ ಶ್ರೀ ಬಿ. ಡಿ. ಜತ್ತಿ, ಬೆಟಗೇರಿ ಕೃಷ್ಣಶರ್ಮ, ಶ್ರೀ ವೈ. ನಾಗೇಶಶಾಸ್ತ್ರಿ, ಶ್ರೀ ಮಲ್ಲಿಕಾರ್ಜುನ ಮನ್ಸೂರ ಅವರಿಗೆ ಇಂಥ ಗೌರವಪದವಿಯನ್ನು ದಯಪಾಲಿಸಿದೆ.

ಮಾನ್ಯ ಶ್ರೀ ಬಿ. ಡಿ. ಜತ್ತಿ ಅವರು ಕನ್ನಡಿಗರ ಮೂಲಗುಣಗಳಾದ ದೈವಭಕ್ತಿ ಮತ್ತು ಕಾರ್ಯಶಕ್ತಿಗಳ ಸಾಕಾರವ್ಯಕ್ತಿಗಳು. ಹಳ್ಳಿಯೊಂದರ ಪಂಚಾಯತ ಸದಸ್ಯರಾಗಿ ಏರುತ್ತ ನಡೆದು ಉಪರಾಷ್ಟ್ರಪತಿಪೀಠವೇರಿದ ಅಪೂರ್ವ ವ್ಯಕ್ತಿತ್ವ ಅವರದು. ತಮ್ಮ ಜೀವನದುದ್ದಕ್ಕೂ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕಕ್ಷೇತ್ರಗಳಿಗೆ ಸಲ್ಲಿಸಿದ ಅಪಾರ ಸೇವೆಯನ್ನು ಗುರುತಿಸಿ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ ಪದವಿ ನೀಡಿದೆ.

ಶ್ರೀ ಬೆಟಗೇರಿ ಕೃಷ್ಣಶರ್ಮರು ಕಷ್ಟಕಾಲದಲ್ಲಿ ಕನ್ನಡವನ್ನು ಬದುಕಿಸಿದವರಲ್ಲಿ ಒಬ್ಬರು. ಅವರ ಕನ್ನಡಪ್ರೇಮ ಅನುಪಮವಾದುದು. ಕವಿಗಳಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಸಂಸ್ಕೃತಿಯ ಆರಾಧಕರಾಗಿ ಸಲ್ಲಿಸಿದ ಸೇವೆಯನ್ನು ಮನ್ನಿಸಿ ಅವರಿಗೆ ಗೌರವ ಡಾಕ್ಟರೇಟ ಪದವಿಯನ್ನು ನೀಡಿತು, ಕರ್ನಾಟಕ ವಿಶ್ವವಿದ್ಯಾಲಯ.

ಶ್ರೀ ವೈ. ನಾಗೇಶಶಾಸ್ತ್ರಿಗಳು ಧರ್ಮ ಮತ್ತು ಕಾವ್ಯಧರ್ಮಗಳ ಸಂಗಮ ಸ್ವರೂಪರು. ಕನ್ನಡದ ಪುರಾಣಸಾಹಿತ್ಯ ಮತ್ತು ಶಾಸ್ತ್ರಸಾಹಿತ್ಯಗಳ ಪರಂಪರೆಯಲ್ಲಿ ಅವರಿಗೆ ವಿಶೇಷ ಸ್ಥಾನವಿದೆ. ಶಿವಾನುಭವಸೂತ್ರ ಮೊದಲಾದ ಕೃತಿಗಳನ್ನು ಸಂಪಾದಿಸಿ, ಗವಿಸಿದ್ಧೇಶ್ವರ ಪುರಾಣ ಮೊದಲಾದ ಕೃತಿಗಳನ್ನು ರಚಿಸಿದ ಅವರು ಸಾಮಾನ್ಯರ ಪ್ರಜ್ಞೆಯನ್ನು ದೈವೀಮುಖ ಮಾಡಿದವರಲ್ಲಿ ಒಬ್ಬರು. ಕರ್ನಾಟಕ ವಿಶ್ವವಿದ್ಯಾಲಯ ನೀಡಿದ ಗೌರವ ಡಾಕ್ಟರೇಟ ಪದವಿ ಅವರ ಈ ಸಾಧನೆಗೆ ತಕ್ಕ ಪುರಸ್ಕಾರವಾಗಿದೆ.

ಶ್ರೀ ಮಲ್ಲಿಕಾರ್ಜುನ ಮನ್ಸೂರ, ಅಖಿಲಭಾರತ ಮಟ್ಟದ ವಿರಳ ಸಂಗೀತಜ್ಞರಲ್ಲಿ ಒಬ್ಬರು. ಒಕ್ಕಲಿಗರ ಮಗನಾಗಿ ಹುಟ್ಟಿ, ನಾಟಕ ಕಂಪನಿಗಳಲ್ಲಿ ಬೆಳೆದು, ಸಂಗೀತದಲ್ಲಿ ಅವರು ಸಾಧಿಸಿದ ಲೋಕೋತ್ತರಸಿದ್ಧಿ ಒಂದು ಪವಾಡವೇ ಸರಿ. ಇವರಿಗೆ ಗೌರವ ಡಾಕ್ಟರೇಟ ಪದವಿ ನೀಡುವುದರ ಮೂಲಕ ವಿಶ್ವವಿದ್ಯಾಲಯ ತನ್ನ ಗೌರವವನ್ನು ಹೆಚ್ಚಿಸಿಕೊಂಡಿದೆ.

ಈ ಮೇಧಾವಿ ಚತುರ್ಥರಿಗೆ ಭಾರತಿ ಹೃತ್ಪೂರ್ವಕ ಶುಭಾಶಯುಗಳನ್ನು ಹೇಳುತ್ತದೆ.

ಶ್ರೀ ಅಡಿಗರಿಗೆ ಪ್ರಶಸ್ತಿ ಗೌರವ :

ನವ್ಯಕಾವ್ಯದ ಯುಗಪ್ರವರ್ತಕರಲ್ಲೊಬ್ಬರಾದ ಶ್ರೀ ಗೋಪಾಲಕೃಷ್ಣ ಅಡಿಗರು ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ಅದಕ್ಕಿಂತ ಶ್ರೇಷ್ಠ ಸಾಹಿತಿಗಳಾಗಿ ಕರ್ನಾಟಕಕ್ಕೆ ಸಲ್ಲಿಸಿದ ಸೇವೆ ಸಣ್ಣದೇನಲ್ಲ. ತಾವೂ ಬೆಳೆದು ಹತ್ತಾರುಜನ ಕವಿಗಳನ್ನು ಬೆಳೆಸಿ, ಸಾಹಿತ್ಯದಲ್ಲಿ ಕ್ರಾಂತಿಕಾರಕ ಬೀಜ ಬಿತ್ತಿದ ಶ್ರೇಯಸ್ಸು ಅವರದು. ಈ ಎಲ್ಲ ಸಾಧನೆಗಳ ಹಿನ್ನೆಲೆಯನ್ನು ಗಮನಿಸಿ ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಅವರ 'ವರ್ಧಮಾನ' ಕವನ ಸಂಕಲನಕ್ಕೆ ಪ್ರಶಸ್ತಿ ನೀಡಿದುದು, ಈ ವರ್ಷ ಕನ್ನಡಕ್ಕೆ ಸಂದ ದೊಡ್ಡ ಗೌರವ. ಈ ಸಂತೋಷದಲ್ಲಿ ಪಾಲುಗಾರ-ಳಾಗುವುದರ ಮೂಲಕ ಭಾರತಿ ಅವರಿಗೆ ಅಭಿವಂದನೆಗಳನ್ನು ಹೇಳುತ್ತದೆ.

ಈ ಸಂಚಿಕೆಯ ಲೇಖಕರು

೧ **ಶ್ರೀ ಸು. ರುದ್ರಮೂರ್ತಿ ಶಾಸ್ತ್ರೀ :**
ಕನ್ನಡ ಅಧ್ಯಾಪಕರು, ರೇಣುಕಾಚಾರ್ಯ ಸಂಜೆ ವಾಣಿಜ್ಯ ಕಾಲೇಜು, ಬೆಂಗಳೂರು-೯

೨ **ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟ :**
ರೀಡರ್, ಸೇಂಟ್ ಅ್ಯಲೊಯ್ಸಿಯಸ್ ಕಾಲೇಜು, ಮಂಗಳೂರು-೩

೩ **ಶ್ರೀ ಚೆನ್ನವೀರ ಕಣವಿ :**
ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕ. ವಿ. ವಿ., ಧಾರವಾಡ

೪ **ಶ್ರೀ ಎಚ್. ಸೀತಾರಾಮಾಚಾರ್ಯ :**
ಕನ್ನಡ ಅಧ್ಯಾಪಕರು, ಗೋವಿಂದದಾಸ ಕಾಲೇಜು, ಸುರತ್ಕಲ್

೫ **ಶ್ರೀ ಹೊ. ಮ. ಪಂಡಿತಾರಾಧ್ಯ :**
ವಕೀಲರು. 167, ಕೆಂಪೇಗೌಡನಗರ ಗವಿಪುರಂ ಮಾರ್ಗ, ಬೆಂಗಳೂರು-೧೯

೬ **ಶ್ರೀ ಬಿ. ಬಿ. ಮಹೀಶವಾಡಿ :**
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ., ಧಾರವಾಡ

೭ **ಶ್ರೀ ಬಿ. ಎಂ. ತೆಳಗಡಿ :**
ಕನ್ನಡ ಅಧ್ಯಾಪಕರು, ವಿಜಯ ಮಹಾಂತೇಶ ಕಲಾ ಮತ್ತು ವಿಜ್ಞಾನ ಕಾಲೇಜು, ಇಲಕಲ್ಲ

೮ **ಶ್ರೀ ಕೆ. ಎಚ್. ಬಿಜಾಪುರ :**
ಕನ್ನಡ ಅಧ್ಯಾಪಕರು, ವಿಜಯ ಮಹಾಂತೇಶ ಕಲಾ ಮತ್ತು ವಿಜ್ಞಾನ ಕಾಲೇಜು, ಇಲಕಲ್ಲ

೯ **ಶ್ರೀ ಎನ್. ಪ್ರಕಾಶ :**
ಜ್ಯೂನಿಯರ ಇಂಜನೀಯರ, ಕೆ. ಎಸ್. ಈ. ಬಿ. ರಾಯಚೂರು

೧೦ **ಡಾ. ಎಂ. ಚಿದಾನಂದಮೂರ್ತಿ :**
ರೀಡರ್, ಕನ್ನಡ ಅಧ್ಯಯನಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೧ **ಶ್ರೀ ಎನ್. ಪ್ರಭುಸ್ವಾಮಿ :**
ಕನ್ನಡ ಅಧ್ಯಾಪಕರು, ಲಾಲಬಹಾದ್ದೂರ ಶಾಸ್ತ್ರೀ ಕಾಲೇಜು, ಸಾಗರ

೧೨ **ಶ್ರೀ ಪ್ರಭುರಾಜ ಅರಣಕಲ್ :**
ಅಂಚೆ : ಮರಗುತ್ತಿ, ಮಾರ್ಗ : ಕಮಲಾಪುರ, ಜಿಲ್ಲೆ : ಕಲಬುರ್ಗಿ

೧೩ **ಶ್ರೀ ಕೆ. ಬಿ. ವಸಂತಮಾಧವ :**
ಇತಿಹಾಸ ಅಧ್ಯಾಪಕರು, ವಿಜಯಾ ಕಾಲೇಜು, ಮುಲ್ಕಿ. ದಕ್ಷಿಣ ಕನ್ನಡ ಜಿಲ್ಲೆ

೧೪ **ಶ್ರೀ ಸತೀಶ ಕುಲಕರ್ಣಿ :**
ಮಾಗಳೆಗಲ್ಲಿ, ಖಾನಾಪುರ, ಜಿಲ್ಲೆ : ಬೆಳಗಾವಿ

೧೫ **ಕುಂ. ಹೇಮಲತಾ ಪದಕಿ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ., ಧಾರವಾಡ

೧೬ **ಡಾ. ಸುಂದರ :**
ರೀಡರ್, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ,
ಕ.ವಿ.ವಿ., ಧಾರವಾಡ

೧೭ **ಶ್ರೀ ಬಸವರಾಜ ಮುಲಶೆಟ್ಟಿ :**
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ

೧೮ **ಶ್ರೀ ಗಣೇಶ ಕಾಯ್ಕಿಣಿ :**
ಗೋಕರ್ಣ, ಉತ್ತರ ಕನ್ನಡ ಜಿಲ್ಲೆ.

೧೯ **ಡಾ. ಎಂ. ಎಂ. ಕಲಬುರ್ಗಿ :**
ರೀಡರ್, ಕನ್ನಡ ಅಧ್ಯಯನಪೀಠ, ಕ. ವಿ. ವಿ., ಧಾರವಾಡ

೨೦ **ಶ್ರೀ ಪಿ. ವಿ. ಪರಬ್ರಹ್ಮಶಾಸ್ತ್ರಿ :**
ಉಪನಿರ್ದೇಶಕರು ಶಾಸನಶಾಸ್ತ್ರ, ಪ್ರಾಚ್ಯಶಾಸ್ತ್ರ ಮತ್ತು ವಸ್ತು ಸಂಗ್ರಹಾಲಯ
ವಿಭಾಗ, ಹೈದ್ರಾಬಾದ–೧

೨೧ **ಶ್ರೀ ವಿಲಿಯಂ ಮಾಡ್ತ :**
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ., ಧಾರವಾಡ

೨೨ **ಡಾ. ಎಸ್. ಶೆಟ್ಟರ್ :**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕ. ವಿ. ವಿ., ಧಾರವಾಡ

೨೩ **ಶ್ರೀ ಎಸ್. ರಾಜಶೇಖರ :**
ಇತಿಹಾಸ ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರವಿಭಾಗ ವಿಭಾಗ,
ಕ. ವಿ. ವಿ., ಧಾರವಾಡ

೨೪ **ಶ್ರೀ ಎಸ್. ಶಿವಣ್ಣ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

೨೫ **ಶ್ರೀ ಎಸ್. ಜಿ. ಬಿದರಕುಂದಿ :**
ಕನ್ನಡ ಅಧ್ಯಾಪಕರು, ಕಾಮರ್ಸ ಕಾಲೇಜು, ಗದಗ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

ನರಗುಂದದ ಇತಿಹಾಸ —ಎಸ್. ಎಲ್. ಶಾಂತಕುಮಾರಿ
ಆಚಣ್ಣಕವಿಯ ವರ್ಧಮಾನಪುರಾಣ —ಬಿ. ಬಿ. ಮಹೀಶವಾಡಿ
ಕನ್ನಡದಲ್ಲಿ ತ್ರಿಪದಿ ಸಾಹಿತ್ಯ —ಎಸ್. ಎಸ್. ಕೋತಿನ
ಕನ್ನಡಸಾಹಿತ್ಯದಲ್ಲಿ ಮರಂತಸೃಷ್ಟಿ —ಎಚ್. ಜಿ. ಲೋಕಪುರ
ದ್ರಾವಿಡ ಭಾಷೆಗಳು —ಸಂಗಮೇಶ ಸವದತ್ತಿಮಠ
ಪೋಲಿಯೋ ಮೈಲೈಟಿಸ್ —ಸ. ಜ. ನಾಗಲೋಟಿಮಠ
ಕಾರ್ಮಿಕರ ಸಮಸ್ಯೆಗಳು —ಎಸ್. ಜಿ. ಕರಭಂಟನಾಳ
ಅನುಭಾವಿ ಕವಿ ಕಡಕೋಳ ಮಡಿವಾಳಪ್ಪ —ಲಿಂಗಣ್ಣ ಸತ್ಯಂಪೇಟೆ
ಅಣಬೆಗಳು —ಎಂ. ಎಸ್. ಎಸ್. ರಾವ
ಕಿವಿ, ಮೂಗು, ಗಂಟಲಿನ ಸಾಮಾನ್ಯ ರೋಗಗಳು—ಎಂ. ವ್ಹಿ. ವೆಂಕಟೇಶಮೂರ್ತಿ
ಸ್ಥಳಕ ಗಳಗಂಡ —ಡಿ. ಎಸ್. ಶಂಕರ

ಇತರ ಪ್ರಕಟನೆಗಳು :

ಕನ್ನಡ ರಂಗಭೂಮಿ; ಅಂದು, ಇಂದು
ಸಾಮಾಜಿಕ ಪರಿವರ್ತನೆ
ಜನಪದ ಸಾಹಿತ್ಯದರ್ಶನ —ಸಂ. ಡಾ॥ ಆರ್. ಸಿ. ಹಿರೇಮಠ
ಹೊಳೆಯ ಹಾಡು —ಸಂ. ಡಾ॥ ಎಂ. ಎಸ್. ಸುಂಕಾಪುರ
ಮುಂಗಾರು ಮಡಗಳು —ಸಂ. ಡಾ॥ ಎಂ. ಎಸ್. ಸುಂಕಾಪುರ

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು (ಪಠ್ಯಪುಸ್ತಕ ನಿರ್ದೇಶನಾಲಯದ ಪ್ರಕಟನೆಗಳನ್ನು ಹೊರತುಪಡಿಸಿ) ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಬಿ. ಎ., ಬಿ. ಎಸ್‌ಸಿ., ಬಿ. ಕಾಮ್. ಭಾಗ ೧, ೨ ಮತ್ತು ೩ ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :
೧೦೦ ಕ್ಕೆ ೧೫ ರಂತೆ

ರೂ. ೨೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :
೧೦೦ ಕ್ಕೆ ೨೦ ರಂತೆ

ಇತರ ಎಲ್ಲ ಪ್ರಕಟನೆಗಳು (ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ರೂ.ಗಳಿಂದ೫೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ:
೧೦೦ ಕ್ಕೆ ೨೫ ರಂತೆ

೫೦೦೦ ರೂ. ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :
೧೦೦ ಕ್ಕೆ ೩೩⅓ ರಂತೆ

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ್ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ೩೩% ದಂತೆ ಕಮೀಶನ್ ಕೊಡಲಾಗುವುದು.

*　*　*　*

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವುದು.
(ಹಣವನ್ನು ಮನಿ ಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು
ಪ್ರಸಾರಾಂಗ ವಿಸ್ತರಣ ಹಾಗು ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩